ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶನಿವಾರ, 21 ಮಾರ್ಚ್ 2026
ಸಂಪುಟ 15, ಸಂಚಿಕೆ 361, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ಸನಾತನ ಧರ್ಮಕ್ಕೆ ಅವಮಾನ: ಬಿಜೆಪಿ ಕಿಡಿ | ೦೭
ಆಫ್ಘಾನ್‌ಗೆ ಭಾರತದಿಂದ ನೆರವು | ೦೭
ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಾಧನೆ | ೦೩

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅಶ್ವಿನಿ

ದಿನದ ಮಾತು

ವಿದ್ಯೆ ಎಂಬ ಗುಪ್ತ ಧನವು ಪ್ರಳಯ ಕಾಲದಲ್ಲೂ ನಾಶವಾಗುವುದಿಲ್ಲ.

▲ ನೀತಿಶತಕ

ನೀವು ವಿನಾ ಕಾರಣ ಮಾತನಾಡುತ್ತೀರಾ?

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ದಶಾವತಾರಿ, ಯಕ್ಷಗುರು ಗೋವಿಂದ ಭಟ್ ಇನ್ನಿಲ್ಲ



• **ತೀರ್ಥಹಳ್ಳಿ:** 'ನಡೆದಾಡುವ ವಿಶ್ವಕೋಶ', 'ದಶಾವತಾರಿ', 'ಯಕ್ಷಗುರು' ಎಂದೇ ಯಕ್ಷಗಾನ ಕ್ಷೇತ್ರದಲ್ಲಿ ಖ್ಯಾತರಾಗಿದ್ದ ಸೂರಿಕುಮೇರಿ ಕೆ. ಗೋವಿಂದ ಭಟ್ (90) ಹೆದ್ದೂರಿನ ಸಮೀಪದ ಸಂತೆಕೊಪ್ಪದಲ್ಲಿ ಅವರ ಮಗನ ಮನೆಯಲ್ಲಿ ಶುಕ್ರವಾರ ವಿಧಿವಶರಾಗಿದ್ದಾರೆ. ಅಂತಿಮ ಕ್ರಿಯೆಯನ್ನು ಶನಿವಾರ ಹೆದ್ದೂರು ಸಂತೆಕೊಪ್ಪದಲ್ಲಿ ನಡೆಸಲಾಗುವುದು ಎಂದು ಕುಟುಂಬ ಮೂಲಗಳಿಂದ ತಿಳಿದು ಬಂದಿದೆ. ಶ್ರೀಕ್ಷೇತ್ರ ಧರ್ಮಸ್ಥಳ ಮೇಳವೊಂದರಲ್ಲಿಯೇ ಸುಮಾರು 50 ವರ್ಷಗಳ ಕಾಲ ತಿರುಗಾಟ ನಡೆಸಿದ್ದ ಇವರು ಕೆಲವು ವರ್ಷಗಳ ಹಿಂದೆ ವಯೋಸಹಜದ ಕಾರಣ ಮೇಳದಿಂದ ನಿವೃತ್ತರಾಗಿದ್ದರು.

➡ ಪುಟ ೪

ಇಂಧನ ಘಟಕಗಳ ಮೇಲೆ ಪರಸ್ಪರ ದಾಳಿ, ಜಾಗತಿಕ ಆತಂಕ

ಅನಿಲ ಪೂರೈಕೆ ಬಾಧಿತ



• **ದುಬೈ/ಹೊಸದಿಲ್ಲಿ:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಮೂರನೇ ವಾರವೂ ಮುಂದುವರಿದಿದ್ದು, ಪ್ರಮುಖ ಇಂಧನ ಘಟಕಗಳನ್ನು ಗುರಿಯಾಗಿಸಿ ಪರಸ್ಪರ ದಾಳಿಗಳು ನಡೆಯುತ್ತಿದ್ದು, ಜಾಗತಿಕ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ. ಮಧ್ಯಪ್ರಾಚ್ಯ ಯುದ್ಧದಿಂದ ಆಮದು ಮೇಲೆಮಾರಕ ಪರಿಣಾಮ ಬಿದ್ದಿದ್ದು, ಎಲ್‌ಪಿಜಿ ಪೂರೈಕೆ ಕಳವಳಕಾರಿ ಎಂದು ಕೇಂದ್ರ ಸರ್ಕಾರ ಹೇಳಿದೆ.ಹೊಸದಿಲ್ಲಿಯಲ್ಲಿ ಶುಕ್ರವಾರ ನಡೆದ ದೈನಂದಿನ ಮಾಹಿತಿ ನೀಡುವ ಸಭೆಯಲ್ಲಿ ಪೆಟ್ರೋಲಿಯಂ ಕಾರ್ಯದರ್ಶಿ ಸುಜಾತಾ ಶರ್ಮಾ ಅವರು, ಸರಬರಾಜು ಸಾಮಾನ್ಯವಾಗಿದ್ದರೂ ಬೇಡಿಕೆ ಏರಿಕೆಯಿಂದ ಪರಿಸ್ಥಿತಿ ಚಿಂತಾ ಜನಕವಾಗಿದೆ ಎಂದರು. ಗ್ರಾಹಕರು ಸಾಧ್ಯವಾದಲ್ಲಿ ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ) ಬಳಕೆಗೆ ಆದ್ಯತೆ ನೀಡ ಬೇಕು ಎಂದು ಮನವಿ ಮಾಡಿದರು. ಒತ್ತಡ ಕಡಿಮೆ ಮಾಡಲು 13,700ಕ್ಕೂ ಹೆಚ್ಚು ಪಿಎನ್‌ಜಿ ಸಂಪರ್ಕಗಳನ್ನು ನೀಡಲಾಗಿದೆ.

➡ ಪುಟ ೪



6 ಭಾರತೀಯರ ಬಲಿ

ಮಧ್ಯಪ್ರಾಚ್ಯ ಯುದ್ಧದ ವಿವಿಧ ಘಟನೆಗಳಲ್ಲಿ ಆರು ಭಾರತೀಯರು ಮೃತಪಟ್ಟಿದ್ದು, ಇನ್ನೊಬ್ಬರು ಕಾಣೆಯಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶುಕ್ರವಾರ ತಿಳಿಸಿದೆ.

ಜಾಗತಿಕ ಆರ್ಥಿಕತೆಗೆ ದೊಡ್ಡ ಹೊಡೆತ

ಗಲ್ಫ್ ಪ್ರದೇಶದ ಇಂಧನ ತಾಣಗಳ ಮೇಲೆ ದಾಳಿ ಮತ್ತು ಹಾರ್ಮುಜ್ ಜಲಸಂಧಿಯಲ್ಲಿ ಸಾಗಣೆಗೆ ಅಡಚಣೆ ಉಂಟಾಗಿರುವುದು ಜಾಗತಿಕ ಇಂಧನ ಸಂಕಷ್ಟದ ಭೀತಿಯನ್ನು ಹೆಚ್ಚಿಸಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ.47 ಏರಿಕೆಯಾಗಿ 107ಕ್ಕೆ ತಲುಪಿದ್ದು, ಇಂಧನ ಮತ್ತು ಆಹಾರ ದರಗಳು ವಿಶ್ವದಾದ್ಯಂತ ಏರಿಕೆಯಾಗುತ್ತಿವೆ. ಹೀಲಿಯಂ ಮತ್ತು ಸಲ್ಫರ್ ಮುಂತಾದ ಪ್ರಮುಖ ಮೂಲ ವಸ್ತುಗಳ ಸರಬರಾಜು ಅಡಚಣೆಗೆ ಒಳಗಾಗಿದ್ದು, ಸರಕು ಸರಪಳಿಯಲ್ಲಿ ಮತ್ತಷ್ಟು ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ.

ಪ್ರವಾಸಿ ತಾಣಗಳು ಇರಾನ್ ಗುರಿ

ಪ್ರವಾಸಿ ತಾಣಗಳೂ ಶತ್ರುಗಳಿಗೆ ಸುರಕ್ಷಿತವಾಗಿರುವುದಿಲ್ಲ ಎಂದು ಇರಾನ್ ಸೇನಾ ವಕ್ತಾರ ಜನರಲ್ ಅಬೋಲ್ಫಝಲ್ ಶೆಕಾರ್ಚಿ ಎಚ್ಚರಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ನೌಕಾಪಡೆ ಮತ್ತು ವಾಯುಪಡೆಯು ಕುಸಿದಿದೆ ಎಂದು ಹೇಳಿದ್ದರೆ, ಇರಾನ್ ಅದನ್ನು ತಳ್ಳಿಹಾಕಿದೆ. ಕ್ರಾಂತಿಕಾರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನಾಇನಿ, 'ಯುದ್ಧದ ನಡುವೆಯೂ ಕ್ಷಿಪಣಿ ಉತ್ಪಾದನೆ ನಡೆಯುತ್ತಿದೆ; ಸಂಗ್ರಹದಲ್ಲಿ ಸಮಸ್ಯೆ ಇಲ್ಲ' ಎಂದಿದ್ದಾರೆ. ಆದರೆ ಅವರ ಹೇಳಿಕೆಯ ಕೆಲವೇ ಗಂಟೆಗಳ ನಂತರ ಅವರು ವಾಯುದಾಳಿಯಲ್ಲಿ ಮೃತಪಟ್ಟಿದ್ದಾರೆ. ಜತೆಗೆ ಬಸಿಜ್ ಫೋರ್ಸ್‌ನ ಇಂಟೆಲಿಜೆನ್ಸ್ ಡೈರೆಕ್ಟರೇಟ್ ಮುಖ್ಯಸ್ಥ ಇಸ್ಮೈಲ್ ಅಹಮದಿ ಕೂಡಾ ಮೃತಪಟ್ಟಿದ್ದಾರೆ. ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಶತ್ರುಗಳ ಭದ್ರತೆಯನ್ನು ಕಿತ್ತುಕೊಳ್ಳಬೇಕು ಎಂದು ಹೇಳಿದ್ದಾರೆ.

ಮತ್ತಷ್ಟು ನೌಕೆ ರವಾನೆ

ಇರಾನ್ ಕೇಂದ್ರೀಕೃತ ಯುದ್ಧ ಸನ್ನಿವೇಶ ಉಲ್ಬಣಿಸುತ್ತಿರುವ ನಡುವೆಯೇ ಅಮೆರಿಕ ಮಧ್ಯಪ್ರಾಚ್ಯದಲ್ಲಿ ತನ್ನ ಸೈನಿಕ ಹಾಜರಾತಿಯನ್ನು ಮತ್ತಷ್ಟು ಬಲಪಡಿಸಿದೆ. ಮೂರು ಹೆಚ್ಚುವರಿ ಯುದ್ಧನೌಕೆಗಳೊಂದಿಗೆ ಸುಮಾರು 2,500ಕ್ಕೂ ಹೆಚ್ಚು ಮೆರೈನ್ಸ್‌ನ್ನು ಪ್ರದೇಶದತ್ತ ಕಳುಹಿಸಿರುವುದು ಪಶ್ಚಿಮ ಏಷ್ಯಾದ ಉದ್ವಿಗ್ನತೆಯನ್ನು ಇನ್ನಷ್ಟು ಗಂಭೀರಗೊಳಿಸಿದೆ. ಅಮೆರಿಕದ ಯುಎಸ್‌ಎಸ್ ಬಾಕ್ಸರ್ ಸೇರಿ ಇನ್ನೆರಡು ಅಂಭಿಬಿಯಸ್ ಅಸಾಲ್ಟ್ ಶಿಪ್‌ಗಳು ಸ್ಯಾನ್ ಡಿಯಾಗೋದಿಂದ ಹೊರಟಿದ್ದು, 11ನೇ ಮೆರೈನ್ ಎಕ್ಸ್‌ಪಿಡಿಶನರಿ ಯುನಿಟ್‌ನ ಸೈನಿಕರೂ ಈ ದಳದ ಭಾಗವಾಗಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳು ದೃಢಪಡಿಸಿದ್ದಾರೆ.

ಗಲ್ಫ್ ದೇಶಗಳ ಮೇಲೆ ದಾಳಿ

ಕುವೈತ್, ಕತಾರ್ ಸೇರಿದಂತೆ ಗಲ್ಫ್ ದೇಶಗಳಲ್ಲಿರುವ ರಿಫೈನರಿ ಘಟಕಗಳನ್ನೂ ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ. ಕತಾರ್‌ನ ಮಿನಾ ಅಲ್-ಅಹ್ಮದಿ ರಿಫೈನರಿ ಮೇಲೆ ಎರಡು ಹಂತದ ದಾಳಿ ನಡೆಸಲಾಗಿದೆ. ಕುವೈತ್‌ನ ಪ್ರಮುಖ ತೈಲ ರಿಫೈನರಿ ಮೇಲೆ ಡ್ರೋನ್ ದಾಳಿ ನಡೆಸಿದ್ದು ಬೆಂಕಿ ಕಾಣಿಸಿಕೊಂಡಿದೆ. ಬಹ್ರೇನ್ ಮತ್ತು ಸೌದಿ ಅರೇಬಿಯಾದಲ್ಲಿಯೂ ದಾಳಿಗಳ ಪ್ರಯತ್ನ ನಡೆದಿದೆ. ದುಬೈನಲ್ಲಿ ಈದ್-ಉಲ್-ಫಿತ್ರ್ ಸಂದರ್ಭದಲ್ಲಿ ಸ್ಫೋಟಗಳು ಕೇಳಿಬಂದಿದ್ದು, ಕ್ಷಿಪಣಿಗಳನ್ನು ಧ್ವಂಸ ಮಾಡಲಾಗಿದೆ. ಟೆಹ್ರಾನ್ ಮತ್ತು ಜೆರುಸಲೇಮ್‌ನಲ್ಲಿಯೂ ಸ್ಫೋಟಗಳು ವರದಿಯಾಗಿವೆ. ಇನ್ನೊಂದೆಡೆ ಇಸ್ರೇಲ್, ಲೆಬನಾನ್ ಮತ್ತು ಸಿರಿಯಾದಲ್ಲಿಯೂ ದಾಳಿ ವಿಸ್ತರಿಸಿದೆ.

ಬಹ್ರೈನ್ ಕಿಂಗ್ ಜತೆ ಮೋದಿ ಮಾತುಕತೆ

• ಪುಟ ೪

ಪ್ರೀಮಿಯಂ ತೈಲ ದರ ಏರಿಕೆ

• ಪುಟ ೪

ಮೂಡದ ಒಮ್ಮತ | ಹೈಕಮಾಂಡ್ ಪ್ರವೇಶ

ದಾವಣಗೆರೆ ದಕ್ಷಿಣ ಕಾಂಗ್ರೆಸ್ ಕಗ್ಗಂಟು



"ದಾವಣಗೆರೆಯಲ್ಲಿ ಶಾಮನೂರು ಕುಟುಂಬ ಟಿಕೆಟ್ ಕೇಳುತ್ತಿದೆ. ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ಕುಟುಂಬಕ್ಕೆ ಟಿಕೆಟ್ ಕೊಡುತ್ತಿಲ್ಲವೇ? ಹಾಗೆಯೇ ಇಲ್ಲಿಯೂ ತಮ್ಮ ಕುಟುಂಬಕ್ಕೆ ಕೊಡಬೇಕು ಎಂದು ಹೇಳುತ್ತಿದೆ. ಅತ್ತ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದರಲ್ಲಿ ತಪ್ಪೇನಿಲ್ಲ. ಆದರೆ, ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ.

■ **ಎಂ.ಬಿ.ಪಾಟೀಲ್,** ಸಚಿವ

• **ಬೆಂಗಳೂರು:** ಎರಡು ವಿಧಾನಸಭಾ ಕ್ಷೇತ್ರಗಳ ಪೈಕಿ ಬಾಗಲಕೋಟೆಗೆ ಅಭ್ಯರ್ಥಿ ಆಯ್ಕೆ ಬಹುತೇಕ ಅಂತಿಮವಾಗಿದ್ದರೂ, ದಾವಣಗೆರೆ ದಕ್ಷಿಣ ಮಾತ್ರ ನಾಯಕರು ಪಟ್ಟು ಸಡಿಲಿಸದ ಹಿನ್ನೆಲೆಯಲ್ಲಿ ಖುದ್ದು ರಾಜ್ಯ ಉಸ್ತುವಾರಿಯ ಮಧ್ಯಪ್ರವೇಶದ ನಂತರವೂ ಕಗ್ಗಂಟಾಗಿಯೇ ಉಳಿದಿದೆ. ಪರಿಣಾಮ ಈ ವಿಚಾರ ಈಗ ಹೈಕಮಾಂಡ್ ಅಂಗಳಕ್ಕೆ ಹೋಗಿದ್ದು, ಎರಡು ದಿನಗಳಲ್ಲಿ ಅಂತಿಮಗೊಳ್ಳುವ ಸಾಧ್ಯತೆ ಇದೆ.

ಅಭ್ಯರ್ಥಿಗಳ ಆಯ್ಕೆ ವಿಚಾರಕ್ಕಾಗಿಯೇ ಶುಕ್ರವಾರ ನಗರಕ್ಕೆ ಆಗಮಿಸಿದ್ದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಪಕ್ಷದ ಪ್ರಬಲ ಆಕಾಂಕ್ಷಿಗಳು ಹಾಗೂ ವೀರಶೈವ-ಲಿಂಗಾಯತ, ಅಲ್ಪಸಂಖ್ಯಾತ ಸೇರಿದಂತೆ ನಾಯಕರೊಂದಿಗೆ ಹಲವು ಸುತ್ತಿನ ಮಾತುಕತೆ ನಡೆಸಿದರು. ಆದಾಗ್ಯೂ ಒಮ್ಮತ ಮೂಡಲಿಲ್ಲ ಎಂದು ಮೂಲಗಳು ತಿಳಿಸಿವೆ. ಮಧ್ಯಾಹ್ನ ನೇರವಾಗಿ ಹೋಟೆಲ್ ತಾಜ್ ವೆಸ್ಟ್‌ಎಂಡ್ ಬಂದಿಳಿದ ಸುರ್ಜೇವಾಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಒಂದು ಸುತ್ತಿನ ಸಭೆ ನಡೆಸಿದರು.

➡ ಪುಟ ೪

ಬಿಜೆಪಿಯಿಂದ ವೀರಣ್ಣ ಚರಂತಿಮಠ ನಾಮಪತ್ರ

• **ಬಾಗಲಕೋಟೆ:** ಶಾಸಕ ಎಚ್.ವೈ. ಮೇಟಿ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ನಡೆಯುತ್ತಿರುವ ಉಪ ಚುನಾವಣೆಯಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದು, ಪಕ್ಷದ ಮುಖಂಡ ವೀರಣ್ಣ ಚರಂತಿಮಠ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ. ಪತ್ನಿ ರಾಜೇಶ್ವರಿ ಅವರೊಂದಿಗೆ ತಹಶೀಲ್ದಾರ ಕಚೇರಿಗೆ ಆಗಮಿಸಿದ ವೀರಣ್ಣ ಚರಂತಿಮಠ ಅವರು ಚುನಾವಣಾ ಅಧಿಕಾರಿ ಸಂತೋಷ್ ಜಗಲಾಸರ್ ಅವರಿಗೆ ನಾಮಪತ್ರ ಸಲ್ಲಿಸಿದರು. ಶುಭ ಮುಹೂರ್ತದ ಹಿನ್ನೆಲೆಯಲ್ಲಿ ನಾಮಪತ್ರ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು.

➡ ಪುಟ ೪

2 ಕ್ಷೇತ್ರಗಳ ಅಭಿಪ್ರಾಯ ಸಂಗ್ರಹಿಸಿದ್ದೇವೆ: ಡಿಸಿಎಂ

• ಪುಟ ೪

ಅಯೋಧ್ಯೆ ಧೂಳನ್ನು ಸ್ಪರ್ಶಿಸಿದ್ದು ಸೌಭಾಗ್ಯ

• **ಅಯೋಧ್ಯೆ:** ಪ್ರಭು ಶ್ರೀರಾಮ ಜನಿಸಿದ ನಗರವಾದ ಅಯೋಧ್ಯೆಯ ಪವಿತ್ರ ಧೂಳನ್ನು ಸ್ಪರ್ಶಿಸಿದ್ದು ನನ್ನ ಪರಮ ಸೌಭಾಗ್ಯವೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಶ್ರೀರಾಮ ಯಂತ್ರ ಸ್ಥಾಪನೆ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಹೇಳಿಕೆ

ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರದ ದ್ವಿತೀಯ ಮಹಡಿಯಲ್ಲಿ ರಾಮ ಯಂತ್ರ ಸ್ಥಾಪನೆಯ ಕಾರ್ಯಕ್ರಮಕ್ಕೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, 2083ರ ಸಂವತ್ಸರದ ಆರಂಭ ಮತ್ತು ನವರಾತ್ರಿಯ ಮೊದಲ ದಿನವಾದ ಚೈತ್ರ ಶುಕ್ಲ ಪ್ರತಿಪದದಂದು ಭಗ ವಂತನ ದರ್ಶನ ನಿಜಕ್ಕೂ ಅವಿಸ್ಮರಣೀಯ ಎಂದು ಹೇಳಿದರು. ಭಾರತವು ಸಮಗ್ರವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದು ಹೇಳಿದ ಮುರ್ಮು ಅವರು, ಪ್ರಭು ಶ್ರೀರಾಮನ ಆಶೀರ್ವಾದದಿಂದ ಭಾರತ ತನ್ನ ಗುರಿಗಳನ್ನು 2047ರವೇಳೆಗೆ ತಲುಪುವುದು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಮ ರಾಜ್ಯದ ಆದರ್ಶವು ಆರ್ಥಿಕ ಸಮೃದ್ಧಿ ಮತ್ತು ಸಾಮಾಜಿಕ ಸಾಮರಸ್ಯದ ಅತ್ಯುನ್ನತ ಮಾನದಂಡಗಳನ್ನು ಒಳಗೊಂಡಿದೆ.

➡ ಪುಟ ೪

ಸಂಘರ್ಷಕ್ಕೆ ಸ್ವಾರ್ಥ ಕಾರಣ: ಡಾ. ಭಾಗ್ವತ್

• **ನಾಗಪುರ:** ಸ್ವಾರ್ಥಪೂರಿತ ಹಿತಾಸಕ್ತಿಗಳು ಮತ್ತು ಪ್ರಾಬಲ್ಯ ಮೆರೆಯುವ ದುರ್ಬಯಕೆಯೇ ಇಂದು ವಿಶ್ವದಲ್ಲಿ ಕಂಡುಬರುತ್ತಿರುವ ಸಂಘರ್ಷಗಳಿಗೆ ಮೂಲ ಕಾರಣವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಶುಕ್ರವಾರ ಹೇಳಿದ್ದು, ಏಕತೆ, ಅನುಶಾಸನ ಮತ್ತು ಧರ್ಮ ಅನುಸರಣೆಯಿಂದ ಮಾತ್ರವೇ ಶಾಶ್ವತ ಶಾಂತಿ ಸಾಧಿಸಲು ಸಾಧ್ಯ ಎಂದಿದ್ದಾರೆ. ಅವರು ನಾಗಪುರದಲ್ಲಿ ವಿಶ್ವ ಹಿಂದು ಪರಿಷತ್ತಿನ ವಿದರ್ಭ ಪ್ರಾಂತ ಕಾರ್ಯಾಲಯಕ್ಕೆ ಶಿಲಾನ್ಯಾಸಗೈದು ಮಾತನಾಡಿದರು. ಕಳೆದ 2000 ವರ್ಷಗಳಿಂದ ಜಗತ್ತು ವಿವಿಧ ವಿಚಾರಗಳೊಂದಿಗೆ ಪ್ರಯೋಗಗಳನ್ನು ನಡೆಸಿಯೂ ಸಂಘರ್ಷ ಪರಿಹಾರದಲ್ಲಿ ಅತ್ಯಲ್ಪ ಯಶಸ್ಸು ಮಾತ್ರವೇ ಲಭಿಸಿದೆ ಎಂಬುದರತ್ತ ಅವರು ಬೊಟ್ಟು ಮಾಡಿದರು. ಮತೀಯ ಅಸಹಿಷ್ಣುತೆ, ಬಲ ವಂತದ ಮತಾಂತರಗಳು, ಪಾರಮ್ಯದ ವಿಚಾರಗಳು, ಮೇಲರಿಮೆ ಮತ್ತು ಕೀಳರಿಮೆಗಳು ಈಗಲೂ ಅಸ್ತಿತ್ವದಲ್ಲಿರುವುದನ್ನು ಎತ್ತಿತೋರಿದರು.

ಏಕತೆ, ಅನುಶಾಸನ, ಧರ್ಮದ ಅನುಸರಣೆಯಿಂದ ಶಾಶ್ವತ ಶಾಂತಿ: ಭಾಗ್ವತ್

➡ ಪುಟ ೪

ಕಿರುಸುದ್ದಿ

ಪ್ರಶಸ್ತಿ ಪ್ರದಾನ ನಾಳೆ



◆**ಧಾರವಾಡ:** ಮಾನವಿಯ ವಿದ್ಯಾಧರೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ನೀಡುವ ಪಂ.ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಯುವ ಪ್ರಶಸ್ತಿಗೆ ಬೆಂಗಳೂರಿನ ಗಾಯಕ ಕೌಶಿಕ್ ಐತಾಳ್ ಆಯ್ಕೆಯಾಗಿದ್ದಾರೆ ಎಂದು ಟ್ರಸ್ಟ್ ಅಧ್ಯಕ್ಷ ಬಸವರಾಜ ವಂದಲಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ.22ರ ಬೆಳಗ್ಗೆ 10ಕ್ಕೆ ಆಲೂರು ವೆಂಕಟರಾವ್ ಭವನದಲ್ಲಿ ಪಂ.ಪಂಚಾಕ್ಷರಿ ಗವಾಯಿ 135ನೇ ಜಯಂತಿ ಮತ್ತು ಸಂಗೀತ ಉತ್ಸವಕ್ಕೆ ಕಲಾವಿದ ರಾಚಯ್ಯ ಹಿರೇಮಠ, ಶಕ್ತಿ ಪಾಟೀಲ ಉದ್ಘಾಟಿಸಲಿದ್ದಾರೆ ಎಂದರು. ಹೈದರಾಬಾದ್‌ನ ರುದ್ರೇಶ ಭಜಂತ್ರಿ ಶಹನಾಯಿ ವಾದನ ಮತ್ತು ಆರಣ್ಯ ಕುಮಾರ ಸಿತಾರ್ ವಾದನ, ಕಲಬುರಗಿಯ ರವಿಕಿರಣ್ ನಾಕೋಡ್ ತಬಲಾ ಸೋಲೋ, ಬೆಳಗಾವಿ ಪಂ.ಆಕಾಶ, ಐಶ್ವರ್ಯ ದೇಸಾಯಿ ಗಾಯನ ಪ್ರಸ್ತುತಪಡಿಸುವುದಾಗಿ ಹೇಳಿದರು. ಮಲ್ಲಿಕಾರ್ಜುನ ಶ್ರೀಗಳ ಸಾನ್ನಿಧ್ಯದಲ್ಲಿ ಸಂಜೆ 6ಕ್ಕೆ ನಡೆಯುವ ಸಮಾರಂಭದಲ್ಲಿ ರೂ.25 ಸಾವಿರ ನಗದು ಒಳಗೊಂಡ ಪಂ.ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಯುವ ಪ್ರಶಸ್ತಿ ಕೌಶಿಕ್ ಐತಾಳ್ ಅವರಿಗೆ ಪಂ. ವೆಂಕಟೇಶಕುಮಾರ ಪ್ರದಾನಿಸಲಿದ್ದಾರೆ ಎಂದರು. ಗಾಯಕ ವಿರೂಪಾಕ್ಷಯ್ಯ ವಂದಲಿ ಅಧ್ಯಕ್ಷತೆ ವಹಿಸಲಿದ್ದು, ಖ್ಯಾತ ಗಾಯಕರಾದ ಶಾಂತಾರಾಮ ಹೆಗಡೆ, ಉದಯ ದೇಸಾಯಿ ಪಾಲ್ಗೊಳ್ಳಲಿದ್ದಾರೆ ಎಂದರು. ಕಲಾವಿದರಾದ ರಾಘವ ಕಮ್ಮಾರ, ವಿಜಯಕುಮಾರ ಸುತಾರ ಇದ್ದರು.

ಅಡ್ಡಪಲ್ಲಕ್ಕಿ ಮಹೋತ್ಸವ

◆**ಕುಂದಗೋಳ:** ತಾಲೂಕಿನ ಶಿರೂರ ಗ್ರಾಮದಲ್ಲಿ ಮಾ.21ರಿಂದ 22ರ ವರೆಗೆ ಕಾಶಿ ಜಗದ್ಗುರುಗಳ ಇಷ್ಟಲಿಂಗ ಪೂಜೆ, ಜನಜಾಗೃತಿ ಧರ್ಮಸಭೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿವೆ. ಮಾ.21 ರಂದು ಸಂಜೆ 4ಗಂಟೆಗೆ ಕಾಶಿ ಪೀಠದ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಡ್ಡಪಲ್ಲಕ್ಕಿ ಮಹೋತ್ಸವ, ಸಂಜೆ 7 ಗಂಟೆಗೆ ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಜನಜಾಗೃತಿ ಧರ್ಮಸಭೆ ಜರುಗಲಿದೆ. ಮಾ.22ರಂದು ಗ್ರಾಮದಲ್ಲಿನ ಕುಂದಗೋಳ ಪಂಚಗ್ರಹ ಹಿರೇಮಠದ ಶಾಖಾಮಠದಲ್ಲಿ ಬೆಳಗ್ಗೆ 7ಗಂಟೆಗೆ ಕಾಶಿ ಪೀಠದ ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಇಷ್ಟಲಿಂಗ ಮಹಾಪೂಜೆ, ಅಯ್ಯಾಚಾರ, ಸಹಸ್ರ ಚಂದ್ರದರ್ಶನ ಕಾರ್ಯಕ್ರಮ ಹಾಗೂ ಧರ್ಮಸಭೆ ಜರುಗಲಿದೆ. ಕಾಶಿ ಪೀಠದ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಕುಂದಗೋಳ ಪಂಚಗ್ರಹ ಹಿರೇಮಠದ ಶಿತಿಕಂಠೇಶ್ವರ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಮುಳ್ಳೊಳ್ಳಿ ವಿರಕ್ತಮಠದ ಶಿವಯೋಗಿ ಸ್ವಾಮೀಜಿ, ಕುಂದಗೋಳ ಕಲ್ಯಾಣಪುರದ ಅಭಿನವ ಬಸವಣ್ಣಜ್ಜನವರು, ಸಂಶಿ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ, ಕುಂದಗೋಳ ಶಿವಾನಂದ ಮಠದ ಶಿವಾನಂದ ಸ್ವಾಮೀಜಿ, ಕಮಡೊಳ್ಳಿ ಲೋಚನೇಶ್ವರ ವಿರಕ್ತಮಠದ ರಾಚೋಟೇಶ್ವರ ದೇವರು, ಹಾಸನ ಜಿಲ್ಲೆಯ ಸದಾಶಿವ ಶಿವಾಚಾರ್ಯ ಸ್ವಾಮೀಜಿ, ಸಂಶಿ ವಿರಕ್ತಮಠದ ಚನ್ನಬಸವದೇವ ಸ್ವಾಮೀಜಿ ಸಮ್ಮುಖ ವಹಿಸುವರು ಎಂದು ಶಿರೂರ ಗ್ರಾಮದ ಸದ್ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಾ.23ಕ್ಕೆ ಗ್ರಾಹಕರ ಸಭೆ

◆**ಧಾರವಾಡ:** ಹೆಸ್ಕಾಂ ಶಹರ ಉಪವಿಭಾಗ-2ರ ಕಚೇರಿಯಲ್ಲಿ ಗ್ರಾಹಕರ ಕುಂದು-ಕೊರತೆ ಸಭೆ ಮಾ.23ರಂದು ಮಧ್ಯಾಹ್ನ 3ಕ್ಕೆ ವಿಜಯಾ ರಸ್ತೆಯ ಶಹರ ಉಪ ವಿಭಾಗ-2ರ ಕಚೇರಿಯಲ್ಲಿ ಕರೆಯಲಾಗಿದೆ ಎಂದು ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಪ್ರಕಟಣೆ ತಿಳಿಸಿದ್ದಾರೆ.

ನಿಧನಸುದ್ದಿ

ದತ್ತಾತ್ರೇಯ ಜೋಶಿ



◆**ಕಲಘಟಗಿ:** ಪಟ್ಟಣದ ಜೋಶಿ ಗಲ್ಲಿ ನಿವಾಸಿ, ಮಹಾಲಕ್ಷ್ಮೀ ದೇವಸ್ಥಾನದ ಪ್ರಧಾನ ಅರ್ಚಕ ವೇ. ಮೂ. ದತ್ತಾತ್ರೇಯ ಜೋಶಿ (76) ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗ ಅಗಲಿದ್ದಾರೆ.

ಫಕೀರಪ್ಪ ಚೂರಿ




◆**ಕುಂದಗೋಳ:** ಪಟ್ಟಣದ ಅಂಬೇಡ್ಕರ್ ನಗರದ ನಿವಾಸಿ ಸ್ಥಳೀಯ ಪಟ್ಟಣ ಪಂಚಾಯಿತಿ ನೌಕರ ಹಾಗೂ ಪೌರ ನೌಕರರ ಸಂಘದ ಅಧ್ಯಕ್ಷ ಫಕೀರಪ್ಪ ಮ.ಚೂರಿ(59) ಬುಧವಾರ ನಿಧನರಾದರು. ಮೃತರು ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಹನುಮಂತಾಚಾರ ವಾಯಿಕರ



◆**ಹುಬ್ಬಳ್ಳಿ:** ಸಂತೋಷ ನಗರದ ನಿವಾಸಿ, ಹೆಸ್ಕಾಂನ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರ ಹನುಮಂತಾಚಾರ ವಾಯಿಕರ(77) ನಿಧನ ಹೊಂದಿದರು. ಮೃತರು ಪತ್ನಿ, ಮೂವರು ಪುತ್ರರು, ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯು ಗುರುವಾರ ಸಂಜೆ ಕೇಶವಾಪುರದ ರುದ್ರಭೂಮಿಯಲ್ಲಿ ಜರುಗಿತು.



ಹುಬ್ಬಳ್ಳಿ: ಹೊಸ ವರ್ಷ ಯುಗಾದಿ ಹಬ್ಬ ಅಂಗವಾಗಿ ಹುಬ್ಬಳ್ಳಿ ಉಣಕಲ್‌ನ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಸೂರ್ಯನ ರಶ್ಮಿ ಕಿರಣ ಈಶ್ವರ ಲಿಂಗಕ್ಕೆ ಸ್ಪರ್ಶಿಸುವುದನ್ನು ನೋಡಿ ಕಣ್ತುಂಬಿಕೊಂಡರು.

ಮಾ.23ಕ್ಕೆ ಬೃಹತ್ ರಕ್ತದಾನ ಶಿಬಿರ

◆**ಧಾರವಾಡ:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪನೆ ನೂರನೇ ವರ್ಷದ ಅಂಗವಾಗಿ ಸೇವಾ ಭಾರತಿ ಟ್ರಸ್ಟ್ ಹಾಗೂ ರಾಷ್ಟ್ರೋತ್ಥಾನ ರಕ್ತನಿಧಿ ಆಶ್ರಯದಲ್ಲಿ ಬೃಹತ್ ರಕ್ತದಾನ ಶಿಬಿರ ಮಾ.23ರಂದು ನಗರದ ಲಿಂಗಾಯತ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸೇವಾ ಭಾರತಿ ಟ್ರಸ್ಟಿ ಮಂಜುನಾಥ ಮಕ್ಕಳಗೇರಿ, ಅಂದು ಬೆಳಗ್ಗೆ 6ರಿಂದ ಸಂಜೆ 7ರವರೆಗೆ ನಯಾನಗರದ ಅಭಿನವ ಸಿದ್ಧಲಿಂಗ ಶ್ರೀಗಳ ಸಾನ್ನಿಧ್ಯದಲ್ಲಿ ರಕ್ತದಾನ ಶಿಬಿರ ನಡೆಯಲಿದೆ ಎಂದು ಮಾಹಿತಿ ನೀಡಿದರು.

ರಕ್ತದ ಕೊರತೆಯಿಂದ ಮೃತಪಡುವವರ ಸಂಖ್ಯೆ ಹೆಚ್ಚುತ್ತಿದೆ. ಭವಿಷ್ಯದಲ್ಲಿ ರಕ್ತದ ಕೊರತೆಯೂ ಸಂಭವಿಸಿದಂತೆ ಹಾಗೂ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಲು ಈ ಶಿಬಿರ ಹಮ್ಮಿಕೊಳ್ಳಲಾಗಿದ್ದು ವೈದ್ಯರು, ಸಮಾಜ ಸೇವಕರು ಪಾಲ್ಗೊಳ್ಳುವುದಾಗಿ ತಿಳಿಸಿದರು.

ಓರ್ವ ವ್ಯಕ್ತಿ ರಕ್ತದಾನ ಮಾಡುವುದರಿಂದ ಮೂವರ ಜೀವ ಉಳಿಸಬಹುದಾಗಿದೆ. ರಕ್ತದಾನದಿಂದ ಬಿಪಿ, ಶುಗರ್ ಸೇರಿದಂತೆ ದೇಹದ ಸಾಕಷ್ಟು ಕಾಯಿಲೆಗಳು ಕೂಡ ನಿಯಂತ್ರಿಸಬಹುದು. ಆದ್ದರಿಂದ ಪ್ರತಿಯೊಬ್ಬರೂ ರಕ್ತದಾನ ಮಾಡಬೇಕು ಎಂದರು.

ಶಿಬಿರದಲ್ಲಿ 2500ಕ್ಕೂ ಅಧಿಕ ಜನರು ಪಾಲ್ಗೊಂಡು, ರಕ್ತದಾನ ಮಾಡುವರು. ಇದಲ್ಲದೇ ಭವಿಷ್ಯದಲ್ಲಿ ಯಾರಿಗಾದರೂ ರಕ್ತದ ಅವಶ್ಯಕತೆ ಇದ್ದರೆ ಅಥವಾ ರಕ್ತದಾನಿಗಳು ತಕ್ಷಣವೇ ಸೇವಾ ಭಾರತಿ ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಚೇತನ, ಹನುಮಂತ ಗೌಡ, ಶಿವಕುಮಾರ, ಗೋಪಾಲ ಇದ್ದರು.



ಅಣ್ಣಿಗೇರಿ: ಯುಗಾದಿ ಹಬ್ಬದ ಪ್ರಯುಕ್ತ ಭಾರತೀಯ ಕಿಸಾನ್ ಸಂಘ ಅಣ್ಣಿಗೇರಿ ತಾಲೂಕು ಘಟಕದ ವತಿಯಿಂದ ಅಣ್ಣಿಗೇರಿಯ ಆರಾಧ್ಯ ದೈವ ಅಮೃತೇಶ್ವರ ದೇವಸ್ಥಾನಕ್ಕೆ ಆಗಮಿಸಿದ ಭಕ್ತರಿಗೆ ಬೇವು ಬೆಲ್ಲವನ್ನು ವಿತರಿಸಿ ಹೊಸ ವರ್ಷವನ್ನು ಆಚರಿಸಲಾಯಿತು. ಷಣ್ಮುಖ ಗುರಿಕಾರ್, ಡಿ.ಬಿ. ನರಗುಂದ, ರವಿರಾಜ್ ವಿರ್ನೆಕರ್, ಭೀಮಪ್ಪ ಜಂತ್ಲಿ, ಡಿ.ಬಿ. ಉಣಕಲ್ಲ, ಮಲ್ಲೇಪ್ಪ ಹಕ್ಕರಿಕಿ, ಸೋಮಶೇಖರ್ ಹಿರೇಮಠ್ ಸೇರಿದಂತೆ ಇತರರಿದ್ದರು.

ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ | ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ

ಮಳೆಹಾನಿ ಜಂಟಿ ಸಮೀಕ್ಷೆ ಕೈಗೊಳ್ಳಿ



◆**ಧಾರವಾಡ:** ಜಿಲ್ಲೆಯಲ್ಲಿ ಸುರಿದ ಆಲಿಕಲ್ಲು ಮಳೆಯಿಂದ ಕಲಘಟಗಿ, ನವಲಗುಂದ ಮತ್ತು ಹುಬ್ಬಳ್ಳಿ ತಾಲೂಕಿನಲ್ಲಿ ಜಾನುವಾರು, ಮನೆ ಹಾಗೂ ಬೆಳೆಹಾನಿ ಸಂಭವಿಸಿದ ವರದಿಯಾಗಿದ್ದು, ಜಂಟಿ ಸಮೀಕ್ಷೆ ನಡೆಸಲು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಭವನದಲ್ಲಿ ಶುಕ್ರವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ವಿವಿಧ ಇಲಾಖೆಗಳ ಸಭೆ ನಡೆಸಿದ ಅವರು, ಹಾನಿಯ ಕುರಿತು ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸುವಂತೆ ಸೂಚಿಸಿದರು.

2015ರ ಮಾರ್ಚ್‌ನಲ್ಲಿ ಮಳೆ ಸುರಿದಿತ್ತು. 11 ವರ್ಷಗಳ ಬಳಿಕ ಮಾರ್ಚ್‌ನಲ್ಲೇ ಆಲಿಕಲ್ಲು ಮಳೆ ಸುರಿದಿದೆ. ಕಲಘಟಗಿ ತಾಲೂಕಿನ ಮಾಚಾಪೂರ ಸುತ್ತಮುತ್ತ ಮನೆ, ಜಾನುವಾರು ಹಾಗೂ ಬೆಳೆಹಾನಿ ನಡೆದ ಬಗ್ಗೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಬೆಳೆಹಾನಿ, ಮನೆಹಾನಿ, ಜಾನುವಾರು ಹಾನಿ ಹಾಗೂ ಯಾವುದೇ ಜೀವಹಾನಿಯ ಕುರಿತು ಕಂದಾಯ, ಕೃಷಿ, ತೋಟಗಾರಿಕೆ, ಪಂಚಾಯತ್ ರಾಜ್ಯ ಇಲಾಖೆಗಳು ಜಂಟಿ ಸಮೀಕ್ಷೆ ಕೈಗೊಂಡು, ಶೀಘ್ರವೇ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಲು ಆದೇಶ ಮಾಡಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಾಲಂ ಹುಸೇನ್, ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಕೆ.ಸಿ. ಬದ್ರಣ್ಣವರ ಮತ್ತು ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಅಂತರವಳ್ಳಿ ಇದ್ದರು.

ಮೊಬೈಲ್ ಸ್ವಿಚ್ ಆನ್ ಇರಲಿ

ಜಿಲ್ಲಾ, ತಾಲೂಕು, ಹೋಬಳಿ, ಗ್ರಾಮ ಮಟ್ಟದ ಎಲ್ಲ ಹಂತದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಗಲು-ರಾತ್ರಿ ಮೊಬೈಲ್ ಸ್ವಿಚ್ ಆಫ್ ಮಾಡದಂತೆ ಆದೇಶಿಸಿದ ಡಿಸಿ ಸ್ನೇಹಲ್, ಸಾರ್ವಜನಿಕರ ಕರೆಗಳಿಗೆ ತಕ್ಷಣವೇ ಸ್ಪಂದಿಸಬೇಕು. ಸ್ವತಃ ನಾನೇ ಅನಿರೀಕ್ಷಿತ ಕರೆ ಮಾಡುತ್ತೇನೆ. ಕರೆ ಸ್ವೀಕರಿಸದಿದ್ದರೆ ಅಥವಾ ಸ್ವಿಚ್ ಮಾಡಿದ್ದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು, ಸಿಬ್ಬಂದಿಗೆ ಎಚ್ಚರಿಕೆ ನೀಡಿದರು.

ಕಲಘಟಗಿಯಲ್ಲಿ ಅಂದಾಜು 205 ಎಕರೆ ಮಾವು, 450 ಎಕರೆ ಬಾಳೆ ಹಾಗೂ ತರಕಾರಿ ಬೆಳೆಗಳು ಹಾನಿಯಾಗಿದೆ. ಹವಾಮಾನ ಬೆಳೆ-ವಿಮೆ ಮಾಡಿದ ರೈತರಿಗೆ ಪರಿಹಾರವೂ ದೊರಕುವಂತೆ ವಿಮಾ ಕಂಪನಿ ಪ್ರತಿನಿಧಿಗಳು ಮಾಡಬೇಕು.
■ ಸ್ನೇಹಲ್ ಆರ್., ಜಿಲ್ಲಾಧಿಕಾರಿ

ಹವಾಮಾನ ಇಲಾಖೆ ಮುನ್ಸೂಚನೆ
- ಮಾ.21ರಂದು ಕೂಡ ಜಿಲ್ಲೆಯಲ್ಲಿ ಮಳೆ, ಗುಡುಗು, ಸಿಡಿಲು ಹಾಗೂ ಮಿಂಚು ಬರುವ ಸಾಧ್ಯತೆ
- ಎಲ್ಲ ಹಂತದ ಅಧಿಕಾರಿಗಳು ಈ ಬಗ್ಗೆ ಮುನ್ನೆಚ್ಚರಿಕೆ ವಹಿಸಲಿ

ಜಾನುವಾರು ಜೀವಹಾನಿ
ಸಿಡಿಲು ಬಡಿದ ಧಾರವಾಡ ತಾಲೂಕಿನ ಹಳೇತೆಗೂರಿನಲ್ಲಿ ಎಮ್ಮೆ, ನವಲಗುಂದ ತಾಲೂಕಿನ ದಾಟ್ನಾಳದಲ್ಲಿ ಎಮ್ಮೆ, ತಿರ್ಲಾಪುರದಲ್ಲಿ 32 ಮೇಕೆ ಹಾಗೂ ಕುರಿ, ಹುಬ್ಬಳ್ಳಿ ತಾಲೂಕಿನ ಗೋಕುಲ್‌ನಲ್ಲು ಕುದುರೆ, ಕಲಘಟಗಿ ತಾಲೂಕು ಮಾಚಾಪುರದಲ್ಲಿ ಎರಡು ಕರು ಮೃತಪಟ್ಟ ಬಗ್ಗೆ ವರದಿಯಾಗಿದ್ದು, ಈ ಬಗ್ಗೆ ಪರಿಶೀಲಿಸಿ ಪರಿಹಾರ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಆದೇಶಿಸಿದರು.

ವಿರೂಪಾಕ್ಷೇಶ್ವರ ಜಾತ್ರೆ: ಲವಣಗಿರಿ ಉತ್ಸವ

◆**ಉಪ್ಪಿನಬೆಟಗೇರಿ:** ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಲವಣಗಿರಿ ಉತ್ಸವದಲ್ಲಿ ನಂದಿಕೇಶ್ವರ ಪಂಡಿತ ವೀರೇಶ್ವರ ಶಾಸ್ತ್ರಿಗಳು ಐದನೇ ದಿನದ ಪ್ರವಚನದಲ್ಲಿ ಬರುವ ಉರಿಲಿಂಗ ಪೆದ್ದಿ ಕಾಳವ್ವೆ ಜೀವನ ಚರಿತ್ರೆ ಹೇಳಿದರು.

ನಾಡಿನ ವ್ಯಕ್ತಿಗಳ ಆತ್ಮ ಕಲ್ಯಾಣ ಆಗಬೇಕು ಎಂಬ ದೃಷ್ಟಿಯಿಂದ ತಮ್ಮ ಅಂಕ ಡೊಂಕಗಳನ್ನು ತಿದ್ದಿಕೊಳ್ಳಲು ಕಲ್ಯಾಣ ಅನಾಭಾವ ಮಂಟಪದಲ್ಲಿ ಬಸವಾದಿ ಶರಣರು ಚಿಂತನೆ ನಡೆಸಿದ್ದರು. ಈ ಸಮಾಜದಲ್ಲಿ ಸಜ್ಜನರು ಇದ್ದಾರೆ ದುರ್ಜನರೂ ಇದ್ದಾರೆ. ನಮ್ಮ ಮನಸ್ಸು ಯಾವಾಗಲೂ ಒಳ್ಳೆಯವರ ಸಂಘ ಮಾಡಬೇಕು. ಅಂದಿನ ಯುಗದಲ್ಲಿ ಕಳ್ಳರು ಕೂಡಾ ಸಮರ್ಥ ಗುರುವಿನ ಉಪದೇಶದಿಂದ ಇಷ್ಟ ಲಿಂಗ ದೀಕ್ಷೆ ಪಡೆದು ನಿತ್ಯ ಕಾಯಕದೊಂದಿಗೆ ಜಂಗಮ ದಾಸೋಹ ಮಾಡಿ ಸಮಾಜದಲ್ಲಿ ಶರಣ ಆಗಿದ್ದಾರೆ ಎಂದರು.

ಮುಮ್ಮಿಗಟ್ಟಿ ಶಿವಯೋಗಿ ಆಶ್ರಮದ ಬಸವಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ಕಲ್ಯಾಣ ಅನುಭಾವ ಮಂಟಪದ ಪವಿತ್ರ ಕಾರ್ಯದಲ್ಲಿ ಬಸವ ಪುರಾಣವನ್ನು ನಾಡು ನಾಡಿಗೆ ಶ್ರೀಗಳು ಬಿತ್ತರಿಸುವ ಕಾರ್ಯ ಮಾಡಿದ್ದಾರೆ ಎಂದು ಗರಗ ಉತ್ತರಾಧಿಕಾರಿ ಆತ್ಮಾರಾಮ ಸ್ವಾಮೀಜಿ ಹೇಳಿದರು.

ಕೆ.ಎನ್.ಬುದ್ನಿ ಅಧ್ಯಕ್ಷತೆ ವಹಿಸಿದ್ದರು. ಧಾರವಾಡದ ಖ್ಯಾತ ಡಾ. ಎಸ್. ಆರ್.ರಾಮನಗೌಡರ, ನಿವೃತ್ತ ಬೆಳಗಾವಿ ಕೆಎಲ್ ಇ ಸಂಸ್ಥೆಯ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ನಾಯ್ಕರ ಮಾತನಾಡಿದರು. ಖ್ಯಾತ ಉದ್ಯಮಿ ಮಂಜುನಾಥ ಮಕ್ಕಳಗೇರಿ, ವಿಶ್ವ ಹಿಂದೂ ಪರಿಷತ್ ಜಿಲ್ಲಾ ಉಪಾಧ್ಯಕ್ಷ ಬಸವರಾಜ ಕೌಜಲಗಿ, ಮಹೇಶ ಹೆಬ್ಬಳ್ಳಿ ಗಂಗಾಧರ ಅಳಗವಾಡಿ, ಪಿ.ಎಫ್. ಪಾಟೀಲ, ಸುರೇಶ ಪಟ್ಟಣಶೆಟ್ಟಿ, ಎನ್ .ಬಿ. ಗೋಳಣ್ಣವರ, ಡಿ.ಎಸ್. ಬೆಳ್ಳಿಗಟ್ಟಿ, ಸುರೇಶ ಹೆಗ್ಗೇರಿ, ನ್ಯಾಯವಾದಿ ಎಸ್.ಎಲ್. ಕೊರಿಶೆಟ್ಟರ್ ಹಾಗೂ ದೊಡವಾಡ, ಹಾರೋಬೆಳವಡಿ, ಕಲ್ಲೇ, ಗ್ರಾಮದ ಹಿರಿಯರನ್ನು ಶ್ರೀಗಳು ಸನ್ಮಾನಿಸಿದರು. ವೀರ ರಾಣಿ ಕಿತ್ತೂರು ಚನ್ನಮ್ಮ ಸ್ತ್ರೀ ಶಕ್ತಿ ಸಂಘ ವತಿಯಿಂದ ಪ್ರಸಾದ ಸೇವೆ ನಡೆಯಿತು.





ಉಪ್ಪಿನಬೆಟಗೇರಿ: ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ನಿಮಿತ್ತವಾಗಿ ಮೂರುಸಾವಿರ ವಿರಕ್ತಮಠದಲ್ಲಿ ಶುಕ್ರವಾರ ಅಮ್ಮಿನಭಾವಿ ಪಂಚಗೃಹ ಹಿರೇಮಠದ ಡಾ.ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ಹಾಗೂ ಶ್ರೀಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ ಸಾನ್ನಿಧ್ಯದಲ್ಲಿ ಷಟಸ್ಥಲ ಧ್ವಜಾರೋಹಣ ನೆರವೇರಿಸಿ ಅಲ್ಲಮಪ್ರಭು ದೇವರ ಜಯಂತಿ ಆಚರಿಸಲಾಯಿತು. ಮಂಜುನಾಥ ಸಂಕಣ್ಣವರ, ಕೆ.ಎನ್ ಬುದ್ನಿ, ಸಾತವೀರಪ್ಪ ಬೀಡಿ,ಎಸ್.ಕೆ.ಕೊಡಿ,ಚನಬಸಪ್ಪ ಲಗಮಣ್ಣವರ, ಚಂದ್ರಶೇಖರ ಬರಬರಿ ಇದ್ದರು.

ಕಾಖಂಡಕಿ ಶ್ರೀ ಮಹಿಪತಿದಾಸರು ಚಿತ್ರ ಪ್ರದರ್ಶನ

◆**ಹುಬ್ಬಳ್ಳಿ:** ಕಾಖಂಡಕಿ ಶ್ರೀ ಮಹಿಪತಿದಾಸರು ಎಂಬ ಚಲಚಿತ್ರದ ತಾಂತ್ರಿಕ ಪ್ರದರ್ಶನವು ಮಾ.21ರಂದು ಸಂಜೆ 6.30ಕ್ಕೆ ನಗರದ ಲಕ್ಷ್ಮೀ ಪ್ಲೆಡ್‌ನಲ್ಲಿ ಕಾಣಲಿದೆ ಎಂದು ನಿರ್ದೇಶಕ ಮಧೂಸೂದನ ಹವಾಲ್ದಾರ ಹಾಗೂ ಡಾ. ಶ್ರೀನಿವಾಸ ಜೋಶಿ ಹೇಳಿದರು. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 17ನೇ ಶತಮಾನದ ಮಧ್ಯ ಭಾಗದಲ್ಲಿ ಬಿಜಾಪುರ ಜಿಲ್ಲೆಯ ಕಾಖಂಡಕಿ ಗ್ರಾಮದಲ್ಲಿ ಬಾಳಿ ಬದುಕಿದ ಶ್ರೀ ಮಹಿಪತಿದಾಸರು, ಕರ್ನಾಟಕ ಹರಿದಾಸ ಸಾಹಿತ್ಯದ ಆಕಾಶದಲ್ಲಿ ಧ್ರುವ ತಾರೆಯಾಗಿದ್ದಾರೆ. ವಿಶ್ವದ ಶ್ರೇಷ್ಠ ಅನಜಭಾವ ಕವಿಗಳು, ಅವರ ಸುಮಾರು ಸಾವಿರಕ್ಕಿಂತ ಅಧಿಕ ಕೀರ್ತನೆಗಳು ಪ್ರಕಟವಾಗಿವೆ. ಅಂತವರ ಕುರಿತು ಕಾಖಂಡಕಿ ಶ್ರೀ ಮಹಿಪತಿದಾಸರು ಎಂಬ ಚಲನಚಿತ್ರ ಸಿದ್ಧಪಡಿಸಲಾಗಿದ್ದು, ಶೀಘ್ರ ಬಿಡುಗಡೆಯಾಗಲಿದೆ. ಅದಕ್ಕು ಮುನ್ನ ತಾಂತ್ರಿಕ ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು, ಉಚಿತ ಪ್ರವೇಶವಿದೆ ಎಂದರು. ಡಾ. ಶ್ರೀನಿವಾಸ ಜೋಶಿ ಮಾತನಾಡಿ, ಚಿತ್ರದಲ್ಲಿ 10 ಹಾಡುಗಳಿವೆ. 2 ಗಂಟೆ 30 ನಿಮಿಷಗಳು ಚಿತ್ರವಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಉದ್ಘಾಟಿಸಲಿದ್ದಾರೆ. ಪದ್ಮಶ್ರೀ ಪುರಸ್ಕೃತ ಡಾ.ಎಂ.ಎಂ.ಜೋಶಿ ಅಧ್ಯಕ್ಷತೆ ವಹಿಸಲಿದ್ದಾರೆ. ಕಾಖಂಡಕಿ ಅವರು, ಮುಸ್ಲಿಂ ಧರ್ಮದ ಆದಿಲಶಾಹಿ ರಾಜ್ಯದಲ್ಲಿ ವಿತ್ತ ಸಚಿವರಾಗಿ ಕೆಲಸ ಮಾಡುತ್ತಾ ಆಧ್ಯಾತ್ಮಿಕ ಜೀವನದತ್ತ ಆಕರ್ಷಿತರಾಗಿ ತಮ್ಮ ಹುದ್ದೆಯನ್ನು ತ್ಯಜಿಸಿ ಹರಿದಾಸರಾದರು. ಮಹಿಪತಿ ಅಂಕಿತದಲ್ಲಿ ಕೀರ್ತನೆ ರಚಿಸಿದರು. ಉರ್ದು, ದಖಣಿ, ಕನ್ನಡ, ಮರಾಠಿ ಹಾಗೂ ತೆಲಗು ಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಡಾ.ಕೃಷ್ಣ ಕೋಲ್ಹಾರಕುಲಕರ್ಣಿ ಅವರ ಕಥೆ ಚಲನಚಿತ್ರಕ್ಕೆ ಅಳವಡಿಸಿಕೊಳ್ಳಲಾಗಿದೆ. ಮುಖ್ಯಪಾತ್ರದಲ್ಲಿ ವಿಜಯಾನಂದ ಮಾಡಿದ್ದಾರೆ. ಇದೊಂದು ಭಾವೈಕ್ಯತೆಸಾರುವ ಚಲನಚಿತ್ರವಾಗಿದೆ ಎಂದರು. ವಿಷ್ಣುತೀರ್ಥ ಕಲ್ಲೂರಕರ್, ರಾಘು ಹರಿದಾಸ ಇದ್ದರು.

ಉಪಾಧ್ಯಕ್ಷರಾಗಿ ಆಯ್ಕೆ



◆**ಹುಬ್ಬಳ್ಳಿ:** ಬಿಜೆಪಿ ಹು-ಧಾ ಮಹಾನಗರ ಜಿಲ್ಲಾ ಯುವ ಮೋರ್ಚಾ ಪದಾಧಿಕಾರಿಗಳನ್ನು ಜಿಲ್ಲಾ ಮೋರ್ಚಾ ಅಧ್ಯಕ್ಷ ಪ್ರೀತಮ್ ಅರಕೇರಿ ಅವರು ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ಅವರ ಮಾರ್ಗದರ್ಶನದಲ್ಲಿ ಆಯ್ಕೆ ಮಾಡಿದ್ದಾರೆ.

ಉಪಾಧ್ಯಕ್ಷರಾಗಿ ವೆಂಕಟೇಶ ಕಾಟವೆ, ಮುತ್ತು ಬೆನ್ನೂರ, ನಿಂಗಪ್ಪ ಮನಗುಂಡಿ, ಪವನ ಹಳ್ಯಾಳ, ಶಿವು ಕೊತಬಾಳ, ನಾಗರಾಜ ಕಲಗುದ್ರಿ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿ ಶಿವು ಜಾಕೋಜಿ, ಸಂಜು ಹೊಸಕೋಟೆ, ಪ್ರೀಜ ಶರ್ಮಾ, ಸಂಜಯ ಘಾಟಗೆ, ಈಶ್ವರಗೌಡ ಸಿದ್ಧಾಪೂರ, ಪ್ರಸಾದ ಕರನಂದಿ, ಮಹೇಶ ಶೆರೆಗಾರ, ಗಣೇಶ ಉಳ್ಳಾಗಡ್ಡಿ, ಕೋಶಾಧ್ಯಕ್ಷ ಅಕ್ಷಯ ಚೂಗ್, ಸಾಮಾಜಿಕ ಜಾಲತಾಣ ಪ್ರಮುಖ ವಿನಾಯಕ ಗೊಂದಳಿ, ಸಾಮಾಜಿಕ ಜಾಲತಾಣ ಸಹ ಪ್ರಮುಖ ಈರಣ್ಣಾ ಕುಡಿಗಿ, ಮಾಧ್ಯಮ ಪ್ರಮುಖ ರವಿಕಿರಣ ವಾಘಮೋರೆ ಆಯ್ಕೆಯಾಗಿದ್ದಾರೆ.

ಅಕ್ವಾಟಿಕ್ ಥೆರಪಿ ಕಾರ್ಯಾಗಾರಕ್ಕೆ ಚಾಲನೆ

◆**ಧಾರವಾಡ:** ಸಮೀಪದ ಸತ್ತೂರಿನ ಶ್ರೀ ಮಂಜುನಾಥೇಶ್ವರ ವಿಶ್ವವಿದ್ಯಾಲಯದ ಫಿಸಿಯೋಥೆರಪಿ ಕಾಲೇಜಿನಲ್ಲಿ ಶುಕ್ರವಾರ ಅಕ್ವಾಟಿಕ್ ಥೆರಪಿ ಬಗ್ಗೆ ಎರಡು ದಿನದ ಕಾರ್ಯಾಗಾರಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಉದ್ಘಾಟಿಸಿದ ಎಸ್‌ಡಿಎಂ ವಿವಿ ಉಪಕುಲಪತಿ ಡಾ.ನಿಜಂನಕುಮಾರ್, ಸೈದ್ಧಾಂತಿಕ ಜ್ಞಾನವು ಪ್ರಾಯೋಗಿಕ ಅನುಭವದ ನಡುವಿನ ಅಂತರ ಕಡಿಮೆ ಮಾಡಲಿದೆ ಎಂದು ಮಾಹಿತಿ ನೀಡಿದರು. ಶಿಬಿರಾರ್ಥಿಗಳ ಜಲಚಿಕಿತ್ಸೆ ತಂತ್ರಗಳು, ರೋಗಿಗಳ ಆರೈಕೆ ತಂತ್ರಗಳು ಹಾಗೂ ಜಲ ಪುನರ್ವಸತಿಯಲ್ಲಿನ ಇತ್ತೀಚಿನ ಪ್ರಗತಿಗಳ ಬಗ್ಗೆ ಅಮೂಲ್ಯ ಒಳನೋಟ ಪಡೆಯುತ್ತಾರೆ ಎಂದರು. ವಿವಿಧ ರೋಗಿಗಳ ಸಮಸ್ಯೆಗಳನ್ನು ಚರ್ಚಿಸಲಾಯಿತು. ಪದ್ಮಲತಾ ನಿರಂಜನ, ಪ್ರಾಧ್ಯಾಪಕ ಡಾ.ಸೂರಜ್ ಶುಕ್ಲಾ, ಡಾ. ಸಂಜಯ್ ಪರ್ಮಾರ್, ಡಾ.ಶರ್ಮಿಳಾ ದುಧಾನಿ ಇದ್ದರು.





ಕಲಘಟಗಿ: ತಾಲೂಕಿನ ಬೀರವಳ್ಳಿ ಗ್ರಾಮದ ಪಿಎಂಶ್ರೀ ಸರ್ಕಾರಿ ಪ್ರೌಢ ಶಾಲೆಯಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಆದಂತಹ ಬ್ಯಾಂಕ್ ಆಫ್ ಬರೋಡ ಕಲಘಟಗಿ ಸಹಾಯಕ ವ್ಯವಸ್ಥಾಪಕ ಭಗವಾನ ಅವರು ಪ್ರಸಕ್ತ ಸಾಲಿನ ವೃತ್ತಿ ಮಾರ್ಗದರ್ಶನ ಚಟುವಟಿಕೆಯನ್ನು ನಿರ್ವಹಣೆ ನಿಮಿತ್ತ ಮಕ್ಕಳಿಗೆ ಬ್ಯಾಂಕ್ ಪ್ರಕ್ರಿಯೆಗಳು ಹಾಗೂ ಹತ್ತು ಹಲವು ಹಣಕಾಸಿನ ಮಾಹಿತಿಗಳು ಉಳಿತಾಯ ಖಾತೆಗಳ ಬಳಕೆ ನಿರ್ವಹಣೆ ಕುರಿತು ಮಕ್ಕಳಿಗೆ ತಿಳಿಸಿದರು.



ಉಪ್ಪಿನಬೆಟಗೇರಿ: ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ನಿಮಿತ್ತವಾಗಿ ಮೂರುಸಾವಿರ ವಿರಕ್ತಮಠದಲ್ಲಿ ಶುಕ್ರವಾರ ಅಮ್ಮಿನಭಾವಿ ಪಂಚಗೃಹ ಹಿರೇಮಠದ ಡಾ.ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ಹಾಗೂ ಶ್ರೀಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ ಸಾನ್ನಿಧ್ಯದಲ್ಲಿ ಷಟಸ್ಥಲ ಧ್ವಜಾರೋಹಣ ನೆರವೇರಿಸಿ ಅಲ್ಲಮಪ್ರಭು ದೇವರ ಜಯಂತಿ ಆಚರಿಸಲಾಯಿತು. ಮಂಜುನಾಥ ಸಂಕಣ್ಣವರ, ಕೆ.ಎನ್ ಬುದ್ನಿ, ಸಾತವೀರಪ್ಪ ಬೀಡಿ,ಎಸ್.ಕೆ.ಕೊಡಿ, ಚನಬಸಪ್ಪ ಲಗಮಣ್ಣವರ, ಚಂದ್ರಶೇಖರ ಬರಬರಿ ಇದ್ದರು.

ವಿಶೇಷ ಅನುದಾನಕ್ಕೆ ಪ್ರಯತ್ನ: ಶಾಸಕ ಮಹೇಶ ಟೆಂಗಿನಕಾಯಿ



◆**ಹುಬ್ಬಳ್ಳಿ:** ಇತ್ತೀಚೆಗೆ ಹಿಂದು ದೇವಸ್ಥಾನಗಳಿಗೆ ಅನುದಾನ ಸಿಗುವುದು ಬಹಳ ವಿರಳವಾಗಿದೆ. ಅನ್ಯಕೋಮಿನ ಧಾರ್ಮಿಕ ಕೇಂದ್ರಗಳಿಗೆ ನೀಡುತ್ತಿರುವುದು ಸಾಮಾನ್ಯ. ಸರ್ಕಾರ ಗಮನ ಸೆಳೆದು ಸೆಂಟ್ರಲ್ ಕ್ಷೇತ್ರಕ್ಕೆ ವಿಶೇಷ ಅನುದಾನ ತರುವ ಪ್ರಯತ್ನ ಮಾಡಿದ್ದೇನೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

ನಗರದ ಪ್ರವಾಸ ಮಂದಿರದಲ್ಲಿ ಸೆಂಟ್ರಲ್ ಕ್ಷೇತ್ರದ 20 ಹಿಂದೂ ದೇವಸ್ಥಾನದ ಧರ್ಮದರ್ಶಿಗಳು ಪದಾಧಿಕಾರಿಗಳೊಂದಿಗೆ ಸಭೆ ನಡೆದಿ ಮಾತನಾಡಿದ ಅವರು, ಸೆಂಟ್ರಲ್ ಕ್ಷೇತ್ರದ 20 ದೇವಸ್ಥಾನಗಳಿಗೆ ತಲಾ 5 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು ಎಂದರು.

ದೇವಸ್ಥಾನಗಳ ಸಣ್ಣ-ಪುಟ್ಟ ಕೆಲಸಗಳನ್ನು ಮಾಡಿಸಲು ಅನುಕಲ ಆಗಲಿದೆ. ಪ್ರಥಮ ಹಂತದಲ್ಲಿ ದೇವಸ್ಥಾನದ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಮುಂದಿನ ದಿನಗಳಲ್ಲಿ ಮತ್ತೆ ಇನ್ನುಳಿದ ದೇವಸ್ಥಾನಗಳಿಗೆ ಅನುದಾನ ಮಂಜೂರು ಮಾಡಿಸಲಾಗುವುದು ಎಂದರು.

ಪಾಲಿಕೆ ಸದಸ್ಯ ವೀರಣ್ಣ ಸವಡಿ ಮಾತನಾಡಿ, ಸೆಂಟ್ರಲ್ ಕ್ಷೇತ್ರದಲ್ಲಿ ಹಿಂದೆಂದೂ ದೇವಸ್ಥಾನ ಅಭಿವೃದ್ಧಿಗೆ ಅನುದಾನ ಬಂದಿದಿಲ್ಲ, ಶಾಸಕ ಮಹೇಶ ಟೆಂಗಿನಕಾಯಿ ಅವರು ದೊಡ್ಡ ಹೆಜ್ಜೆ ಇಟ್ಟಿದ್ದು, ಜನರು ಮೆಚ್ಚುವಂತದ್ದು ಎಂದರು. ಮುಖಂಡ ಎ.ಸಿ.ಗೋಪಾಲ್ ಮಾತನಾಡಿ, ಸೆಂಟ್ರಲ್ ಕ್ಷೇತ್ರದ ಹಿಂದು ದೇವಸ್ಥಾನಗಳಿಗೆ ಅನುದಾನ ಬಿಡುಗಡೆಯಾಗಿದ್ದು, ಇತಿಹಾಸವಾಗಿದೆ ಎಂದರು. ಬಿಜೆಪಿ ಮುಖಂಡ ಸಿದ್ದು ಮೊಗಲಿ ಶೆಟ್ಟರ್ ಮಾತನಾಡಿ, ಹಿಂದೆ ರಾಜ್ಯದಲ್ಲಿ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ದೇವಸ್ಥಾನಗಳಿಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದು ಇತಿಹಾಸ. ಆದರೆ ಈ ಕ್ಷೇತ್ರದಲ್ಲಿ ಟೆಂಗಿನಕಾಯಿ ಅವರು ಕ್ಷೇತ್ರದ ದೇವಸ್ಥಾನಗಳಿಗೆ ತಮ್ಮ ಅನುದಾನದಲ್ಲಿ ಹಣವನ್ನು ಬಿಡುಗಡೆ ಮಾಡಿದ್ದು ಶ್ಲಾಘನೀಯ ಎಂದರು.

ಉಪ ಮಹಾಪೌರ ಸಂತೋಷ ಚೌವ್ಹಾಣ, ಸಂಭಾಜಿ ಕಲಾಲ್, ಮುಜರಾಯಿ ಇಲಾಖೆಯ ಸುನಿಲ್ ಮಂಚನಕೊಪ್ಪ, ಪಾಲಿಕೆಯ ಸದಸ್ಯ ಮಲ್ಲಿಕಾರ್ಜುನ್ ಗುಂಡೂರ್, ಉಮೇಶ್ ಕೌಜಗೇರಿ, ರವಿ ನಾಯಕ, ಈಶ್ವರ ಗೌಡ ಪಾಟೀಲ್ ಮೊದಲಾದವರಿದ್ದರು.


ಯುಗಾದಿ: ಅದ್ಧೂರಿ ಶೋಭಾಯಾತ್ರೆ

◆**ನವಲಗುಂದ:** ವರ್ಷದ ಮೊದಲನೇ ಹಬ್ಬವಾದ ಯುಗಾದಿ ಹಬ್ಬವನ್ನು ಯುಗಾದಿ ಉತ್ಸವ ಸಮಿತಿ ಸಡಗರ ಸಂಭ್ರಮದಿಂದ ಭಾರತ ಮಾತೆಯ ಸ್ತಬ್ಧ ಚಿತ್ರ ಮೆರವಣಿಗೆ ಮೂಲಕ ಭವ್ಯ ಶೋಭಾಯಾತ್ರೆ ಅದ್ಧೂರಿಯಾಗಿ ಜರುಗಿತು.

ನಗರದ ಗಣಪತಿ ದೇವಸ್ಥಾನದ ಮುಂಭಾಗ ಗೋಮಾತೆಗೆ ಪೂಜೆ ಸಲ್ಲಿಸಿ ಯುಗಾದಿ ಉತ್ಸವ ಶೋಭಾಯಾತ್ರೆಗೆ ಶಾಸಕ ಎನ್. ಎಚ್.ಕೋನರೆಡ್ಡಿ ಚಾಲನೆ ನೀಡಿ (ಯುಗಾದಿ ಹಬ್ಬದ) ನಾಡಿನ ಸಮಸ್ತ ಜನತೆಗೆ ನೂತನ ಪರಾಭವನಾಮ ಸಂವತ್ಸರದ ಶುಭಾಶಯಗಳನ್ನು ತಿಳಿಸಿದರು. ನಂತರ ಗಾಂಧಿ ಮಾರುಕಟ್ಟೆ, ಕಳ್ಳಿಮಠ, ಲಿಂಗರಾಜ ವೃತ್ತ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೆರವಣಿಗೆ ಉದ್ದಕ್ಕೂ ಯುವಕರ ತಂಡ ಡಿಜೆಯೊಂದಿಗೆ ಕುಣಿದು ಕುಪ್ಪಳಿಸಿದರು. ಮಾಜಿ ಸಚಿವ ಶಂಕರಪಾಟೀಲ ಮುನೇನಕೊಪ್ಪ, ವಿನೋದ ಅಸೂಟಿ, ದೇವರಾಜ ದಾಢಿಬಾಯಿ ಸೇರಿದಂತೆ ಯುವಕರು, ಮಹಿಳೆಯರು, ಗಣ್ಯರಿದ್ದರು.



ಕಲ್ಮೇಶ್ವರ ದೇವಸ್ಥಾನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ



◆**ನವಲಗುಂದ:** ರೈತರ ಬಹುದಿನದ ಬೇಡಿಕೆಯಾದ ನವಲಗುಂದ ನಗರದ ಕಲ್ಮೇಶ್ವರ ದೇವಸ್ಥಾನಕ್ಕೆ 25 ಲಕ್ಷ ರೂ. ಅನುದಾನದಲ್ಲಿ ನೂತನ ದೇವಸ್ಥಾನ ಕಟ್ಟಡ ನಿರ್ಮಾಣ ಕಾಮಗಾರಿಗೆ ರೈತರು ಹಾಗೂ ಹಿರಿಯರೊಂದಿಗೆ ಭೂಮಿಪೂಜೆ ನೆರವೇರಿಸುತ್ತಿರುವುದು ರೈತರ ನಾಡಿನಲ್ಲಿ ಹೆಮ್ಮೆಯ ವಿಷಯ ಎಂದು ಶಾಸಕ ಎನ್. ಹೆಚ್. ಕೋನರಡ್ಡಿ ಹೇಳಿದರು.

ಅವರು ನಗರದ ಗುಡ್ಡದಕೇರಿ ಓಣಿಯಲ್ಲಿ ನೂತನ ಕಲ್ಮೇಶ್ವರ ದೇವಸ್ಥಾನ ಕಟ್ಟಡ ಕಾಮಗಾರಿಯ ಭೂಮಿಪೂಜೆ ನೆರವೇರಿಸಿದ ಮಾತನಾಡಿದ ಅವರು, ನಗರದಲ್ಲಿರುವ ಏಕೈಕ ಈಶ್ವರ ದೇವರ ಎದುರಿಗೆ ಜೋಡು ಬಸವಣ್ಣ ಮೂರ್ತಿ ಇರುವ ದೇವಸ್ಥಾನದಲ್ಲಿ ರೈತರು ಬಹಳ ದಿನಗಳಿಂದ ಸುಗ್ಗಿ ಹಾಗೂ ಬಿತ್ತನೆ ಮಾಡಲು ಪೂಜೆ ಸಲ್ಲಿಸಿಯೇ ಪ್ರಾರಂಭಿಸುತ್ತಿರುವುದು ರೈತರ ವಾಡಿಕೆಯಾಗಿದೆ. ಇದರ ಹತ್ತಿರ ಇರುವ ಹಿಂದೆ ಜಕಣಾಚಾರಿ ಅವರು ನಿರ್ಮಿಸಿದಿ ಹಳೇಯ ವೆಂಕಟೇಶ್ವರ ದೇವಸ್ಥಾನ ಇದ್ದು ಪ್ರತಿ ವರ್ಷ ವಿವಿಧ ಜಾತ್ರಾ ಕಾರ್ಯಕ್ರಮಗಳನ್ನು ನಡೆಸಿದ್ದರು. ಭೂಮಿಪೂಜೆ ನೆರವೇರಿಸುವ ಸಂದರ್ಭದಲ್ಲಿ ಶ್ರೀಗಳ ಹಾಗೂ ಶಾಸಕರ ಎದುರುಗಡೆ ರೈತರೇ 4 ಲಕ್ಷ ರೂ. ದೇಣಿಗೆ ನೀಡಿದ್ದು ದೇವಸ್ಥಾನದ ವಿಶೇಷತೆಗೆ ಕಾರಣವಾಯಿತು ಎಂದರು.

ನವಲಗುಂದ ಅಜಾತ ನಾಗಲಿಂಸ್ವಾಮಿ ಮಠದ ವೀರೇಂದ್ರ ಸ್ವಾಮೀಜಿ, ಪಂಚಗ್ರಹ ಹಿರೇಮಠದ ಉತ್ತರಾಧಿಕಾರಿ ಗುರುಬಸವ ದೇವರು, ಹಿರಿಯರಾದ ಪರಪ್ಪ ನಿಂಗಪ್ಪ ಹಂಚಿನಾಳ, ಜೀವನ ಪವಾರ, ಬಸಪ್ಪ ಹಂಚಿನಾಳ, ಗುರುಸಿದ್ದಪ್ಪ ಕಟ್ಟಿ, ಮಲ್ಲಪ್ಪ ಹಂಚಿನಾಳ, ಶಿವಪ್ಪ ಕಟ್ಟಿ, ಮಲ್ಲಪ್ಪ ಮಣ್ಣೂರ, ಗೋವಿಂದಪ್ಪ ಸಾಲಿ, ವೆಂಕಟೇಶ ಗೊಲ್ಲರ, ಪರಶುರಾಮ ಗೊಲ್ಲರ, ಆಕಾಶ ಹಂಚಿನಾಳ, ಬಸವರಾಜ ಕಟ್ಟಿ, ಲಕ್ಷ್ಮಣ ಹಳ್ಳದ, ಶಿವಣ್ಣ ಹುಬ್ಬಳ್ಳಿ (ಶಿರಗುಪ್ಪಿ), ದೇವೇಂದ್ರಪ್ಪ ಹಳ್ಳದ, ಸಂತೋಷಗೌಡ ಪಾಟೀಲ, ಮೊದೀನಸಾಬ ಶಿರೂರ, ಅಲ್ಲಾಸಾಬ ಕಲ್ಲಕುಟ್ರಿ, ರವಿ ಪಾಠಕ, ಉಸ್ಮಾನ ಬಬರ್ಚಿ, ನಾಗರಾಜ ಹರಿವಾಳದ, ರಾಮಪ್ಪ ಭೋವಿ ಸೇರಿದಂತೆ ಮುಂತಾದವರಿದ್ದರು.

ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಡಲಿ ಪೆಟ್ಟು: ವಿಜಯೇಂದ್ರ

ಕಲಬುರಗಿ: ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯತಿ ಚುನಾವಣೆ ನಡೆಸದಿರುವುದು ಪಂಚಾಯತ್ ರಾಜ್ ವ್ಯವಸ್ಥೆಗೆ ರಾಜ್ಯ ಸರ್ಕಾರ ನೀಡುತ್ತಿರುವ ಕೊಡಲಿ ಪೆಟ್ಟು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರದಿಂದ ಬರಬೇಕಿದ್ದ ಸುಮಾರು 14 ರಿಂದ 15 ಸಾವಿರ ಕೋಟಿ ರೂಪಾಯಿ ಅನುದಾನ ಕೈ ತಪ್ಪಿದೆ. ರಾಜ್ಯ ಸರ್ಕಾರದ ಈ ಧೋರಣೆಯೇ ಹಿನ್ನಡೆಗೆ ಮುಖ್ಯ ಕಾರಣ ಎಂದರು. ಬಾಗಲಕೋಟೆ ಹಾಗೂ ದಾವಣಗೆರೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿದರು. ಕಳೆದ ಆರು-ಎಂಟು ತಿಂಗಳಿಂದ ರಾಜ್ಯ ಸರ್ಕಾರದಲ್ಲಿ ಅಸ್ಥಿರತೆ ಹಾಗೂ ಕುರ್ಚಿ ಕಿತ್ತಾಟ ಮುಂದುವರಿದಿದ್ದು, ಇದರಿಂದ ಆಡಳಿತದ ಮೇಲೆ ಪರಿಣಾಮ ಬಿದ್ದಿದೆ ಎಂದು ಆರೋಪಿಸಿದರು.

ಕಲ್ಯಾಣ ಕರ್ನಾಟಕ ಸಚಿವ ಪ್ರಿಯಾಂಕ್ ಖರ್ಗೆ ಅವರ ಮೇಲ್ವಿಚಾರಣೆಯಲ್ಲಿದ್ದರೂ ಕಲಬುರಗಿ ಸೇರಿದಂತೆ ಈ ಭಾಗದಲ್ಲಿ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಂಡುಬರುತ್ತಿಲ್ಲ. ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಟೀಕೆ ಮಾಡುವುದಕ್ಕಿಂತ ಸ್ಥಳೀಯ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಸಚಿವ ಖರ್ಗೆಗೆ ಸಲಹೆ ನೀಡಿದರು.



> ರಾಜ್ಯ ಸರ್ಕಾರದ ಆಂತರಿಕ ಕಲಹವು ಈಗ ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪಿದೆ. ಬಜೆಟ್ ಅಧಿವೇಶನದಲ್ಲಿ ಆಡಳಿತ ಪಕ್ಷದ ಶಾಸಕರೇ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಈಗ ಎಲ್ಲರ ಮುಂದಿರುವ ಪ್ರಶ್ನೆ ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದೇ ಆಗಿದೆ.
>
> ■ ಬಿ.ವೈ.ವಿಜಯೇಂದ್ರ, ರಾಜ್ಯಾಧ್ಯಕ್ಷ, ಬಿಜೆಪಿ



ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರಬೆಟ್ಟದಲ್ಲಿ ಶುಕ್ರವಾರ ನಡೆದ ಯುಗಾದಿ ಜಾತ್ರಾ ಮಹೋತ್ಸವದಲ್ಲಿ ಸೇರಿದ್ದ ಅಪಾರ ಜನಸ್ತೋಮ.

ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಮಹತ್ಸಾಧನೆ

ಬೆಂಗಳೂರು/ಹೊಸದಿಲ್ಲಿ: ಸೌರಶಕ್ತಿ, ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಭಾರತ ಮೂರನೇ ಅತಿದೊಡ್ಡ ರಾಷ್ಟ್ರವಾಗಿ ನಿಂತಿದ್ದು, ಊಹಿಸಲು ಅಸಾಧ್ಯ ಎನ್ನುವಂತೆ



ಅಗಾಧ ಸಾಧನೆಗೈದಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ವಿಯೊನ್ ವತಿಯಿಂದ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ, 2030ರ ವೇಳೆಗೆ 500 ಜಿಡಬ್ಲ್ಯೂ ನವೀಕರಿಸಬಹುದಾದ ಇಂಧನ ಗುರಿಯತ್ತ ಸಾಗಿರುವ ಭಾರತದ ಶುದ್ಧ ಇಂಧನ ಪ್ರಯಾಣ ಅಭೂತಪೂರ್ವ ವೇಗ ಪಡೆಯುತ್ತಿದೆ ಎಂದರು. ಭಾರತದ ಮಾಡ್ಯೂಲ್ ಮತ್ತು ಉತ್ಪಾದನಾ ಸಾಮರ್ಥ್ಯವು ಗಮನಾರ್ಹವಾಗಿ ವಿಸ್ತರಿಸಿದ್ದು, ದೇಶೀಯ ಸಾಮರ್ಥ್ಯಗಳನ್ನು ಬಲಪಡಿಸುತ್ತಿದೆ. ವಿತರಿಸಿದ ನವೀಕರಿಸಬಹುದಾದ ಇಂಧನ ಕೇವಲ 35 ಜಿಡಬ್ಲ್ಯೂ ತಲುಪಿದ್ದು, 55 ಲಕ್ಷ ವಿಕೇಂದ್ರೀಕೃತ ಸ್ಥಾಪನೆಗಳಿಂದ ನಡೆಸಲ್ಪಡುತ್ತದೆ, ಇದರಲ್ಲಿ 31 ಲಕ್ಷ ಮನೆಗಳು ಸೇರಿವೆ ಎಂದು ವಿವರಿಸಿದರು. ಪಿಎಂ ಸೂರ್ಯಘರ್ ಮತ್ತು ಪಿಎಂ ಕುಸುಮ್ ಅಡಿಯಲ್ಲಿ 23 ಲಕ್ಷ ಸೌರಶಕ್ತಿ ನೀರಾವರಿ ಪಂಪ್‌ಗಳಾಗಿ ಪರಿವರ್ತನೆಗೊಂಡಿವೆ. 25 ವರ್ಷಗಳ ಹಿಂದೆ ಪ್ರತಿ ಯೂನಿಟ್ ವಿದ್ಯುತ್‌ಗೆ ಸುಮಾರು 20 ರೂ.ವೆಚ್ಚವಾಗುತ್ತಿತ್ತು. ಆದರೀಗ ಕೇವಲ 2.15 ರೂ. ಲಭ್ಯವಾಗುತ್ತಿದೆ. ಸಂಗ್ರಹಣೆ ವೆಚ್ಚ ಸೇರಿ ಸುಮಾರು 2.80 ರೂ. ಆಗಿದೆ. ಸೌರ, ಪವನ ಮತ್ತು ಬ್ಯಾಟರಿ ಸಂಯೋಜಿತವಾಗಿ ಪ್ರತಿ ಯೂನಿಟ್‌ಗೆ ಸುಮಾರು 4ರೂ. ತಲುಪುತ್ತಿದ್ದು, ಇದು ಉಷ್ಣ ವಿದ್ಯುತ್‌ಗೆ ಹೋಲಿಸಿದರೆ ಗಮನಾರ್ಹವಾಗಿ ಕಡಿಮೆಯಾಗಿದೆ ಎಂದರು.

ಭಾರತ ಪಳೆಯುಳಿಕೆಯೇತರ ಇಂಧನ ಪರಿವರ್ತನೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದೆ. ಹಸಿರು ಜಲಜನಕ ವೆಚ್ಚ 279 ರೂ. ಕೆಜಿಗೆ ಇಳಿದರೆ, ಹಸಿರು ಅಮೋನಿಯಾ ಬೆಲೆ ಸುಮಾರು 45.70 ರೂ.ಕೆಜಿಗೆ ತಲುಪಿದ್ದು, ಇದು ವಿಶ್ವದಲ್ಲೇ ಅತ್ಯಂತ ಕಡಿಮೆಯಾಗಿದ್ದು, ಸುಸ್ಥಿರ ಕೈಗಾರಿಕಾ ಬಳಕೆಗೆ ಹೊಸ ಪಥವನ್ನು ಸೃಷ್ಟಿಸಿದೆ ಎಂದು ಪ್ರತಿಪಾದಿಸಿದರು.


ಕಿರುಸುದ್ದಿ

ಬಾಗಲಕೋಟೆ ಉಪ ಚುನಾವಣೆ ನಾಮಪತ್ರ ಸಲ್ಲಿಸಿದ ಚರಂತಿಮಠ



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ ಶುಕ್ರವಾರ 5 ಅಭ್ಯರ್ಥಿಗಳಿಂದ ಒಟ್ಟು 7 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಪಕ್ಷೇತರ ಅಭ್ಯರ್ಥಿಯಾಗಿ ಆನಂದ ಜಕಾತಿ, ಬ್ಲೂ ಇಂಡಿಯಾ ಪಾರ್ಟಿಯಿಂದ ತಳವಾರ ಶಿವಕುಮಾರ ತಲಾ 2 ನಾಮಪತ್ರ ಸಲ್ಲಿಸಿದರೆ, ಉತ್ತಮ ಪ್ರಜಾಕೀಯ ಪಕ್ಷದಿಂದ ಅಂತೋಷ ಸವ್ವಾಸೆ, ಭಾರತೀಯ ಜನತಾ ಪಕ್ಷದಿಂದ ವೀರಭದ್ರಯ್ಯ ಚರಂತಿಮಠ, ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ದಿಂದ ಗೋವಿಂದರಾಜ ಟಿ. ಬಳ್ಳಾರಿ ತಲಾ ಒಂದು ನಾಮಪತ್ರ ಸೇರಿ ಒಟ್ಟು 7 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ತಿಳಿಸಿದ್ದಾರೆ.

ಕಾಫಿ ತೋಟಕ್ಕೆ ಬೀಟಮ್ಮ ಗ್ಯಾಂಗ್ ಲಗ್ಗೆ



ಚಿಕ್ಕಮಗಳೂರು: ರೈತರ ನಿದ್ದೆಗೆಡಿಸಿದ್ದ ಕಾಡಾನೆ ಬೀಟಮ್ಮ ಹಿಂಡು ಮತ್ತೆ ಕಾಫಿ ತೋಟಗಳಿಗೆ ಲಗ್ಗೆ ಇಟ್ಟಿದೆ. ಇದರಿಂದ ರೈತರ ಆತಂಕ ಮತ್ತಷ್ಟು ಹೆಚ್ಚಿದೆ. ಅರಣ್ಯ ಇಲಾಖೆಯ ಕಾಲರ್ ಐಡಿ ಅಳವಡಿಸಲಾದ ಬೀಟಮ್ಮ ಮರಿಗಳಲ್ಲದೆ ಸೇರಿದಂತೆ ಐದಾರು ಆನೆಗಳೊಂದಿಗೆ ಕಾಫಿ ತೋಟಗಳಲ್ಲಿ ಸಂಚರಿಸುತ್ತಿದ್ದು, ಜನರು ಮನೆಯಿಂದ ಹೊರಬರಲು ಭಯಪಡುತ್ತಿದ್ದಾರೆ. ಬೀಟಮ್ಮ ಗ್ಯಾಂಗ್ ಮರಿಗಳನ್ನು ಕಾಳಜಿಯಿಂದ ಜತೆಯಲ್ಲಿ ಕರೆದೊಯ್ಯುವ ಅಪರೂಪದ ದೃಶ್ಯ ಅರಣ್ಯ ಇಲಾಖೆ ಡ್ರೋನ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಮೂಡಿಗೆರೆ ತಾಲೂಕಿನ ಜಿ.ಹೊಸಳ್ಳಿ-ಕಸ್ಕೆಬೈಲು ಗ್ರಾಮದಲ್ಲಿ ಆನೆಗಳು ಮರಿಗಳ ಜತೆ ಜಾಗರೂಕತೆಯಿಂದ ಸಂಚರಿಸುತ್ತಿರುವ ದೃಶ್ಯ ಸೆರೆಸಿಕ್ಕಿದೆ.

ಮಾ.22ಕ್ಕೆ ಈ ಹೊತ್ತಿಗೆ ಹೊನಲು ಕಾರ್ಯಕ್ರಮ

ಬೆಂಗಳೂರು: ಈ ಹೊತ್ತಿಗೆ ವತಿಯಿಂದ ಮಾ.22ರಂದು ಬೆಳಗ್ಗೆ 10 ಗಂಟೆಗೆ ಜೆಪಿ ನಗರದಲ್ಲಿರುವ ಕಪ್ಪಣ್ಣ ಅಂಗಳದಲ್ಲಿ ಈ ಹೊತ್ತಿಗೆಯ 13ನೇ ವಾರ್ಷಿಕೋತ್ಸವ ಹೊನಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಚಿತ್ರದುರ್ಗದ ಡಾ.ತಾರಿಣಿ ಶುಭದಾಯಿನಿ ಅವರಿಗೆ ಕಾವ್ಯ ಪ್ರಶಸ್ತಿ ವಿಜೇತೆ ಹಾಗೂ ಕಾರ್ಕಳದ ಎಂ ಮನೋಹರ ಪೈ ಅವರಿಗೆ ಕಥಾಪ್ರಶಸ್ತಿ ನೀಡಿ ಗೌರವಿಸಲಾಗುವುದು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಆರ್ ಸುನಂದಮ್ಮ ಪ್ರಶಸ್ತಿ ಪ್ರದಾನ ಮಾಡಲಿದ್ದು, ಇದೇ ಸಂದರ್ಭದಲ್ಲಿ ಪ್ರಶಸ್ತಿ ವಿಜೇತ ಕೃತಿಗಳ ಲೋಕಾರ್ಪಣೆಯಾಗಲಿದೆ.

ಪರಮ ವೈಭವ ಸ್ಥಿತಿಗಾಗಿ ಶ್ರಮಿಸೋಣ: ದಕ್ಷಿಣ ಪ್ರಾಂತ ಪ್ರಚಾರಕ ಗುರುಪ್ರಸಾದ್

ಆರೆಸ್ಸೆಸ್ ಅತಿ ಪ್ರಬಲ ಶಕ್ತಿ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ನೂರು ವರ್ಷಗಳ ಸಾರ್ಥಕ ಪಯಣದಲ್ಲಿ ಅನೇಕ ವಿರೋಧ ಮತ್ತು ಅಪಪ್ರಚಾರಗಳ ನಡುವೆಯೂ ಆರ್‌ಎಸ್‌ಎಸ್ ಇಂದು ಸಮಾಜದಲ್ಲಿ ಅತ್ಯಂತ ಪ್ರಬಲ ಶಕ್ತಿಯಾಗಿ ಬೆಳೆದು ನಿಂತಿದೆ ಎಂದು ದಕ್ಷಿಣ ಪ್ರಾಂತ ಪ್ರಚಾರಕ ಗುರುಪ್ರಸಾದ್ ಹೇಳಿದರು.

ಬಸವನಗುಡಿಯ ಮರಾಠಾ ಹಾಸ್ಟೆಲ್ ಮೈದಾನದಲ್ಲಿ ನಡೆದ ಆರ್‌ಎಸ್‌ಎಸ್‌ನ ಬೆಂಗಳೂರು ದಕ್ಷಿಣ ವಿಭಾಗದ ಯುಗಾದಿ ಉತ್ಸವದಲ್ಲಿ ಮಾತನಾಡಿದ ಅವರು, ನಿರಂತರವಾಗಿ ಸಾಗುತ್ತಿರು(ಚರೈವೇತಿ ಚರೈವೇತಿ) ಎಂಬ ಮಂತ್ರದಂತೆ ಆರ್‌ಎಸ್‌ಎಸ್ ಕಾರ್ಯಕರ್ತರು ಯಾವುದೇ ವಿಶ್ರಾಂತಿ ಇಲ್ಲದೆ ರಾಷ್ಟ್ರದ ಪರಮ ವೈಭವ ಸ್ಥಿತಿಗಾಗಿ ಶ್ರಮಿಸಬೇಕು. ನಮ್ಮ ಮನೆಗಳೇ ಸಮಾಜಕ್ಕೆ ಮಾದರಿಯಾಗುವಂತೆ ನಡೆದುಕೊಳ್ಳೋಣ. ಆರ್‌ಎಸ್‌ಎಸ್‌ನ ಆರು ಪ್ರಮುಖ ಉತ್ಸವಗಳಲ್ಲಿ ಯುಗಾದಿಯೂ ಒಂದಾಗಿದ್ದು, ಇದು ಪ್ರಕೃತಿಯ ಹೊಸ ಚಿಗುರಿನಂತೆ ಸಂಘದ ಕಾರ್ಯಕ್ಕೂ ಹೊಸ ಚೈತನ್ಯ ತುಂಬುತ್ತದೆ. ಸಂಘವು ವ್ಯಕ್ತಿಗಿಂತ ವಿಚಾರಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡುತ್ತಾ ಬಂದಿದ್ದು, ಭಗವಾಧ್ವಜವನ್ನೇ ಗುರುವಾಗಿ ಸ್ವೀಕರಿಸಿರುವುದು ಸಂಘದ ವಿಶಿಷ್ಟ ಪರಂಪರೆಯಾಗಿದೆ. ವ್ಯಕ್ತಿಗಳು ಶಾಶ್ವತವಲ್ಲ, ಆದರೆ ತತ್ವ, ವಿಚಾರಗಳು ಶಾಶ್ವತ ಎಂಬ ದೂರದೃಷ್ಟಿಯ ಫಲವಾಗಿ ಇಂದು ಸಂಘವು ಐದನೇ ತಲೆಮಾರಿನ ಕಾರ್ಯಕರ್ತರನ್ನು ಸಜ್ಜುಗೊಳಿಸಿದೆ ಎಂದು ತಿಳಿಸಿದರು.

ಮುಕ್ತವಾಗಿ ಸಂಘ ಸ್ವೀಕಾರ: ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದ ಗುರಿಯನ್ನು ಹೊಂದಿರುವ ಪ್ರಕ್ರಿಯೆಯು ನಿತ್ಯ ಶಾಖೆಗಳ ಮೂಲಕ ನಿರಂತರವಾಗಿ ನಡೆಯುತ್ತಿದೆ. ಇತ್ತೀಚಿನ ಹಿಂದು ಸಮ್ಮೇಳನ ಮತ್ತು ಮನೆ-ಮನೆ ಸಂಪರ್ಕ ಅಭಿಯಾನಗಳ ಮೂಲಕ ಸಮಾಜವು ಸಂಘದೊಂದಿಗೆ ಅಭೂತಪೂರ್ವವಾಗಿ ಕೈಜೋಡಿಸುತ್ತಿದೆ. ಪಂಚ ಪರಿವರ್ತನೆ ವಿಚಾರಗಳನ್ನು ಸಮಾಜವು ಮುಕ್ತವಾಗಿ ಸ್ವೀಕರಿಸುತ್ತಿದೆ.

ಕೇವಲ ಸ್ವಯಂಸೇವಕರಷ್ಟೇ ಅಲ್ಲದೆ, ಮಾತೃಶಕ್ತಿ ಮತ್ತು ಯುವಶಕ್ತಿಯೂ ಹೆಚ್ಚಿನ ಸಂಖ್ಯೆಯಲ್ಲಿ ಸಂಘದ ಈ ಕಾರ್ಯಗಳಿಗೆ ಬೆಂಬಲ ನೀಡುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಅಷ್ಟೇ ಅಲ್ಲದೆ, ಪರಿಸರ ಸಂರಕ್ಷಣೆ ಮತ್ತು ಗೋಸೇವೆಯಂತಹ ಗತಿವಿಧಿಗಳ ಮೂಲಕ ವಿವಿಧ ಎನ್‌ಜಿಒಗಳು ಹಾಗೂ ಸಮಾಜದ ಬೇರೆ ಬೇರೆ ಸ್ತರದ ಜನರು ಸಂಘದೊಂದಿಗೆ ಸಹಭಾಗಿತ್ವ ಹೊಂದುತ್ತಿದ್ದಾರೆ ಎಂದು ಗುರುಪ್ರಸಾದ್ ತಿಳಿಸಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ಮಹಾನಗರ ಸಂಘಚಾಲಕ ಮಿಲಿಂದ್ ಗೋಖಲೆ, ವಿಭಾಗ ಸಂಘಚಾಲಕ ಹರೀಶ್ ಉಪಸ್ಥಿತರಿದ್ದರು.



ಸೆ.20ರಿಂದ ಶಾಖಾ ವಿಸ್ತಾರ ಸಪ್ತಾಹ

ಸಂಘದ ಶತಮಾನೋತ್ಸವ ಅಂಗವಾಗಿ ಸೆಪ್ಟೆಂಬರ್ 20ರಿಂದ 27ರವರೆಗೆ ಶಾಖಾ ವಿಸ್ತಾರ ಸಪ್ತಾಹ ಆಯೋಜಿಸಲು ನಿರ್ಧರಿಸಲಾಗಿದ್ದು, ಬೆಂಗಳೂರಿನ ಪ್ರತಿ ಉಪವಸತಿಗಳಲ್ಲಿ ಹೊಸ ಶಾಖೆ ಆರಂಭಿಸುವ ಗುರಿ ಹೊಂದಲಾಗಿದೆ. ಈ ಸಪ್ತಾಹದ ಮೂಲಕ ಸಂಘದ ಶಕ್ತಿಯನ್ನು ವಿಸ್ತರಿಸಲು ಪ್ರತಿಯೊಬ್ಬ ಕಾರ್ಯಕರ್ತನು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಗುರುಪ್ರಸಾದ್ ಕರೆನೀಡಿದರು.

ಪ್ರಾಥಮಿಕ, ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಶೂ, ಸಾಕ್ಸ್

ಬೆಂಗಳೂರು: 2026-27ನೇ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಉಚಿತವಾಗಿ ಶೂ ಮತ್ತು ಸಾಕ್ಸ್ ವಿತರಿಸಲು ಸರ್ಕಾರ ಆದೇಶಿಸಿದೆ.



ಈ ಯೋಜನೆಗೆ ಒಟ್ಟು 104 ಕೋಟಿ ರೂ. ಮೊತ್ತವನ್ನು ಮೀಸಲಿಡಲಾಗಿದ್ದು, ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಪ್ರತಿ ವಿದ್ಯಾರ್ಥಿಗೂ ಅತ್ಯುತ್ತಮ ಗುಣಮಟ್ಟದ 1 ಜತೆ ಕಪ್ಪು ಬಣ್ಣದ ಶೂ ಹಾಗೂ 2 ಜತೆ ಬಿಳಿ ಬಣ್ಣದ ಸಾಕ್ಸ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ. 2026-27ನೇ ಶೈಕ್ಷಣಿಕ ವರ್ಷದ ಜೂನ್ ತಿಂಗಳಿನಲ್ಲಿ ಆರಂಭವಾದ ಕೂಡಲೇ ವಿದ್ಯಾರ್ಥಿಗಳಿಗೆ ಶೂ-ಸಾಕ್ಸ್‌ಗಳನ್ನು ವಿತರಿಸುವ ಗುರಿಯನ್ನು ಶಾಲಾ ಶಿಕ್ಷಣ ಇಲಾಖೆ ಹೊಂದಿದೆ.

ಪ್ರತಿ ತರಗತಿಗೆ ನಿರ್ದಿಷ್ಟಪಡಿಸಿದ ಅಳತೆಯ ಶೂ ಮತ್ತು ಸಾಕ್ಸ್‌ಗಳನ್ನು ಪ್ರತಿ ತರಗತಿಯ ವಿದ್ಯಾರ್ಥಿಗಳಿಗೆ ಸರಬರಾಜುದಾರರಿಂದ ಪಡೆಯಲಾಗುವುದು. ಅಳತೆಯ ಯಾವುದೇ ವ್ಯತ್ಯಾಸಗಳಿದ್ದಲ್ಲಿ ಶೇ.5ರಷ್ಟು ಹೆಚ್ಚುವರಿ ದಾಸ್ತಾನನ್ನು ಪ್ರತಿ ತಾಲೂಕು ಹಂತದಲ್ಲಿ ಇಟ್ಟುಕೊಂಡು ಸರಿಯಾದ ಶೂ ಮತ್ತು ಸಾಕ್ಸ್‌ಗಳನ್ನು 30 ದಿನಗಳಲ್ಲಿ ವಿತರಿಸಲಾಗುವುದು ಎಂದು ತಿಳಿಸಿ, ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಅಂದಾಜು 36.56 ಲಕ್ಷ ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್ ಖರೀದಿಸಿ ವಿರಣೆ ಮಾಡುವ ಸಂಬಂಧ ಕೇಂದ್ರೀಕೃತವಾಗಿ ಅಥವಾ ಪ್ರತಿ ವಿಭಾಗಕ್ಕೆ ಪ್ರತ್ಯೇಕವಾಗಿ ಕೆಟಿಪಿಪಿ ಕಾಯ್ದೆ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳಂತೆ ಟೆಂಡರ್ ಮೂಲಕ ಶೂ ಮತ್ತು ಸಾಕ್ಸ್‌ಗಳ ವಿತರಣೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಅಧಿಕ ಮಳೆಯಾಗುವ ಉತ್ತರ ಕನ್ನಡ, ಶಿರಸಿ, ಶಿವಮೊಗ್ಗ, ಉಡುಪಿ ಮತ್ತು ದ.ಕನ್ನಡ ಜಿಲ್ಲೆಗಳ ಶಾಲೆಗಳಲ್ಲಿನ ಎಸ್‌ಡಿಎಂಸಿಗಳು ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಶೂಗಳ ಬದಲು ಪಾದರಕ್ಷೆ ಸರಬರಾಜು ಮಾಡಲು ಕೋರಿದ್ದಾರೆ.

ತರಗತಿವಾರು ವೆಚ್ಚ

(ವಿದ್ಯಾರ್ಥಿಗಳ ವಯೋಮಾನಕ್ಕೆ ಅನುಗುಣ ಶೂ, ಸಾಕ್ಸ್ ಬೆಲೆ ನಿಗದಿ)

- 1 ರಿಂದ 5ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 265 ರೂ.
- 6 ರಿಂದ 8ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 295 ರೂ.
- 9 ರಿಂದ 10ನೇ ತರಗತಿ: ಪ್ರತಿ ವಿದ್ಯಾರ್ಥಿಗೆ 325 ರೂ.

ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜ್ ಭರವಸೆ

ಜೂನ್ ವೇಳೆಗೆ ಟಿಬಿ ಡ್ಯಾಂ ಕ್ರಸ್ಟ್ ಗೇಟ್

ವಿಜಯನಗರ/ಕೊಪ್ಪಳ: ಜೂನ್‌ನಲ್ಲಿ ಆರಂಭಗೊಳ್ಳುವ ಮುಂಗಾರಿಗೂ ಮುನ್ನವೇ ತುಂಗಭದ್ರಾ ಅಣೆಕಟ್ಟೆಯ ಎಲ್ಲ 33 ಕ್ರಸ್ಟ್ ಗೇಟ್‌ಗಳ ಬದಲಾವಣೆ ಕಾರ್ಯ ಪೂರ್ಣಗೊಳ್ಳಲಿದೆ. ಜತೆಗೆ ಹೊಸ ಲಿಂಕ್ ಚೈನ್ ಕೂಡ ಅವಳಡಿಸಲಾಗವುದು. ಈ ಹಿನ್ನೆಲೆಯಲ್ಲಿ ಕೆಳ ಭಾಗದ ರೈತರು ಯಾವುದೇ ಕಾರಣಕ್ಕೂ ಆತಂಕಪಡುವ ಅಗತ್ಯವಿಲ್ಲ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ್ ರೈತರಿಗೆ ಭರವಸೆ ನೀಡಿದ್ದಾರೆ.

ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯಕ್ಕೆ ಶುಕ್ರವಾರ ಭೇಟಿ ನೀಡಿ ಹೊಸ ಕ್ರಸ್ಟ್ ಗೇಟ್‌ಗಳ ಬದಲಾವಣೆ ಕಾರ್ಯವನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ತುಂಗಭದ್ರಾ ಜಲಾಶಯದ 33 ಗೇಟ್‌ಗಳ ಪೈಕಿ ಹೊಸದಾಗಿ 18 ಕ್ರಸ್ಟ್ ಗೇಟ್‌ಗಳನ್ನು ಅಳವಡಿಸಿ ಪರೀಕ್ಷಿಸಲಾಗಿದೆ. ಎಲ್ಲವೂ ಸುಗಮವಾಗಿ ಕಾರ್ಯನಿರ್ವಹಿಸುತ್ತಿವೆ. 5 ಪ್ರಗತಿಯಲ್ಲಿದ್ದು, ಮಾರ್ಚ್ ಅಂತ್ಯದೊಳಗೆ 23 ಪೂರ್ಣಗೊಳ್ಳುತ್ತವೆ. ಏಪ್ರಿಲ್ ಅಂತ್ಯದೊಳಗೆ ಇನ್ನುಳಿದ 10 ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸಲಾಗುವುದು. ಅವುಗಳನ್ನು ಸ್ಥಳದಲ್ಲೇ ನಿರ್ಮಿಸಿ ಅಳವಡಿಸಲು ತಂತ್ರಜ್ಞರು ಉದ್ದೇಶಿಸಿದ್ದಾರೆ. ಕ್ರಸ್ಟ್ ಗೇಟ್‌ಗಳ ಲಿಂಕ್ ಚೈನ್‌ಗಳು ಹಳೆಯದಾಗಿದ್ದು, ತುಕ್ಕು ಹಿಡಿದಿವೆ. ಅವುಗಳನ್ನೂ ಬದಲಿಸಬೇಕೆಂಬ ಜಲಾಶಯ ಸುರಕ್ಷತಾ ಪ್ರಾಧಿಕಾರದ ತಜ್ಞರ ಅಭಿಪ್ರಾಯದಂತೆ ಹೊಸ ಸರಪಳಿ ಅಳವಡಿಸಲು 4.5 ಕೋಟಿ ರೂ. ಮೊತ್ತದಲ್ಲಿ ಚೆನ್ನೈ ಮೂಲದ ಕಂಪನಿಗೆ ಟೆಂಡರ್ ನೀಡಲಾಗಿದೆ. ಮೇ ಅಂತ್ಯದೊಳಗೆ ಹೊಸ ಸರಪಳಿಯನ್ನೂ ಅಳವಡಿಸಲಾಗುತ್ತದೆ. ನಿರೀಕ್ಷೆಯಂತೆ ಮುಂಗಾರು ಚುರುಕು ಪಡೆಯುವುದರೊಳಗೆ ಜಲಾಶಯದ ಕ್ರಸ್ಟ್ ಗೇಟ್‌ಗಳ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಸಮಾನಾಂತರ ಡ್ಯಾಂ

ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವುದರಿಂದ ಕೊಪ್ಪಳ ಜಿಲ್ಲೆ ನವಿಲೆ ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಬಗ್ಗೆ ಈಗಾಗಲೇ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದೆ. ಆದರೆ, ಟಿಬಿ ಡ್ಯಾಂ ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣಕ್ಕೆ ಸಂಬಂಧಿಸಿದ್ದರಿಂದ ಆಯಾ ರಾಜ್ಯಗಳ ಅನುಮತಿ ಬೇಕು. ಈ ಕುರಿತಂತೆ ಆಂಧ್ರದ ನೀರಾವರಿ ಸಚಿವರನ್ನು ಅಮರಾವತಿಯಲ್ಲಿ ಭೇಟಿ ಮಾಡಿ, ಮನವರಿಕೆ ಮಾಡಿಕೊಟ್ಟಿದ್ದೇವೆ. ಎರಡು ಮೂರು ತಿಂಗಳಲ್ಲಿ ವ್ಯಾಜ್ಯ ಮುಗಿಯುವ ಮುನ್ಸೂಚನೆಯಿದ್ದು, ಆದಷ್ಟು ಬೇಗ ನವಿಲೆ ಜಲಾಶಯ ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಗುವುದು. ಅದರಂತೆ ಮಾನವಿ ತಾಲೂಕಿನ ಚೀಕಲಪರವಿ ಬ್ರಿಜ್ಡ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾಗಿದ್ದು, ಇಂತಹದ್ದೇ ತಾಂತ್ರಿಕ ಸಮಸ್ಯೆ ಅಡ್ಡಿಯಾಗಿದೆ. ಆದಷ್ಟು ಬೇಗ ಅದನ್ನೂ ಸಾಕಾರಗೊಳಿಸಲು ಯತ್ನಿಸಲಾಗುತ್ತದೆ ಎಂದು ಸಚಿವ ಎನ್.ಎಸ್.ಬೋಸರಾಜ್ ವಿವರಿಸಿದರು.

ಹುಳಿಯಾರು ಠಾಣೆಯಲ್ಲಿ ಲಾಕಪ್ ಸಾವು

ತುಮಕೂರು: ಇಸ್ಪೀಟ್ ಆಡುತ್ತಿದ್ದಾರೆಂದು ವಶಕ್ಕೆ ಪಡೆದಿದ್ದ ವ್ಯಕ್ತಿ ಜಿಲ್ಲೆಯ ಹುಳಿಯಾರು ಪೊಲೀಸ್ ಠಾಣೆಯಲ್ಲೇ ವಿಚಾರಣಾಧೀನ ಕೈದಿಯೊಬ್ಬರು ಮೃತಪಟ್ಟಿದ್ದು, ಪೊಲೀಸರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಕುಟುಂಬಸ್ಥರು, ಗ್ರಾಮಸ್ಥರು, ಸಾರ್ವಜನಿಕರು ಠಾಣೆ ಮುಂದೆ ಶವವಿಟ್ಟು ಪ್ರತಿಭಟನೆ ನಡೆಸಿ ತನಿಖೆಗೆ ಆಗ್ರಹಿಸಿದ್ದಾರೆ. ಯಳನಾಡು ಗ್ರಾಮದ ಕಾಂತರಾಜು (45) ಮೃತಪಟ್ಟ ವ್ಯಕ್ತಿ. ಈ ಸಂಬಂಧ ಗ್ರಾಮಸ್ಥರು ಹುಳಿಯಾರು ಪೊಲೀಸ್ ಠಾಣೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು. ತೀವ್ರ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್, ಮಾಜಿ ಸಚಿವ ಮಾಧುಸ್ವಾಮಿ, ಮಾಜಿ ಶಾಸಕ ಕಿರಣ್ ಕುಮಾರ್ ಠಾಣೆಗೆ ಆಗಮಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಯಳನಾಡು ಗ್ರಾಮದಲ್ಲಿ ಇಸ್ಪೀಟ್ ಆಡುತ್ತಿದ್ದಾರೆಂಬ ಖಚಿತ ಮಾಹಿತಿಯ ಮೇರೆಗೆ ಹುಳಿಯಾರು ಪೊಲೀಸರು ದಾಳಿ ನಡೆಸಿದ್ದರು. ದಾಳಿ ವೇಳೆ ಕಾಂತರಾಜು(45)ಸೇರಿದಂತೆ ಐದು ಜನರನ್ನು ವಶಕ್ಕೆ ಪಡೆದ ಪೊಲೀಸರು ಖಾಸಗಿ ವಾಹನದಲ್ಲಿ ಠಾಣೆಗೆ ಕರೆತಂದಿದ್ದರು. ಆದರೆ, ಠಾಣೆಗೆ ಬಂದ ಕೆಲವೇ ಸಮಯದಲ್ಲಿ ಕಾಂತರಾಜು ಸಾವನ್ನಪ್ಪಿದ್ದಾರೆ. ಎಎಸ್‌ಐ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಕುಡಿಯಲು ನೀರು ಕೊಡದೆ, ತೀವ್ರವಾಗಿ ಹಲ್ಲೆ ಮಾಡಿ, ಹೆದರಿಸಿ ಭಯ ಮೂಡಿಸಿರುವುದರಿಂದ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರು ಮತ್ತು ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿ ಸಾವಿಗೆ ಕಾರಣವಾಗಿರುವ ಎಎಸ್‌ಐ, ಪೊಲೀಸ್ ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದರು.

ಎಸ್ಪಿ ಭರವಸೆ ಬಳಿಕ ಪ್ರತಿಭಟನೆ ಅಂತ್ಯ: ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಹುಳಿಯಾರು ಠಾಣೆಗೆ ಭೇಟಿ ನೀಡಿ ಆಕ್ರೋಶಗೊಂಡಿದ್ದ ಗ್ರಾಮಸ್ಥರು ಮತ್ತು ಮೃತನ ಕುಟುಂಬಸ್ಥರೊಂದಿಗೆ ಮಾತುಕತೆ ನಡೆಸಿದರು. ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು. ಒಂದು ವೇಳೆ ಪೊಲೀಸರ ತಪ್ಪು ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಎಸ್ಪಿ ಅವರ ಭರವಸೆಯ ನಂತರ ಗ್ರಾಮಸ್ಥರು ಪ್ರತಿಭಟನೆಯನ್ನು ಕೈಬಿಟ್ಟರು. ಬಳಿಕ ಮೃತದೇಹವನ್ನು ತುಮಕೂರು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಮರಣೋತ್ತರ ಪರೀಕ್ಷೆಗಾಗಿ ರವಾನಿಸಲಾಗಿದೆ. ಪರೀಕ್ಷೆಯ ನಂತರ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಹೃದಯಾಘಾತದಿಂದ ಸಾವು?: ಪ್ರಾಥಮಿಕ ಮಾಹಿತಿ ಪ್ರಕಾರ, ಠಾಣೆಗೆ ಕರೆತಂದ ಬಳಿಕ ಕಾಂತರಾಜು ಅವರಿಗೆ ಪೊಲೀಸರ ಭಯದಿಂದಾಗಿ ತೀವ್ರ ಹೃದಯಾಘಾತವಾಗಿದೆ ಎನ್ನಲಾಗಿದೆ. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರವಷ್ಟೇ ಸಾವಿಗೆ ನಿಖರ ಕಾರಣ ತಿಳಿಯಲಿದೆ.

ಠಾಣೆಗೆ ಬೀಗ ಹಾಕಿ ಆಕ್ರೋಶ: ಕಾಂತರಾಜು ಪೊಲೀಸರ ದೌರ್ಜನ್ಯದಿಂದಲೇ ಸಾವನ್ನಪ್ಪಿದ್ದಾರೆಂದು ಆರೋಪಿಸಿ ನೂರಾರು ಗ್ರಾಮಸ್ಥರು, ಹುಳಿಯಾರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಬೀಗ ಹಾಕಿದ್ದಲ್ಲದೆ, ಮೃತದೇಹವನ್ನು ಠಾಣೆಯ ಒಳಗೇ ಇಟ್ಟುಕೊಂಡು, ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಟ್ಟು ಹಿಡಿದರು. ಪರಿಸ್ಥಿತಿ ಕೈಮೀರುತ್ತಿದ್ದಂತೆ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಯಿತು.

ಸಿಐಡಿ ತನಿಖೆಗೆ ಆದೇಶ

ಹುಳಿಯಾರು ಪೊಲೀಸ್ ಠಾಣೆಯಲ್ಲಿ ವ್ಯಕ್ತಿ ಮೃತಪಟ್ಟಿರುವ ಘಟನೆಗೆ ಸಂಬಂಧಿಸಿದಂತೆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗುವುದು. ಪೊಲೀಸ್ ಅಧಿಕಾರಿಗಳು ಕರ್ತವ್ಯಲೋಪವೆಸಗಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹಸಚಿವ ಪರಮೇಶ್ವರ್ ತಿಳಿಸಿದ್ದಾರೆ.

ಜ್ಞಾನ ಭಾರತಿ ಪ್ರಕಾಶನದ 8ನೇ ಪುಸ್ತಕ | ಕನ್ನಡ, ಮರಾಠಿಯಲ್ಲಿ ಲಭ್ಯ

ಕಾಫಿಟೇಬಲ್ ಪುಸ್ತಕ ಲೋಕಾರ್ಪಣೆ ಇಂದು

ಬೆಳಗಾವಿ: ವಿಕ್ರಮ ವಾರಪತ್ರಿಕೆಯ ಲಾಂಛನದಲ್ಲಿ ನಮ್ಮ ನೆಲದ ಹೆಮ್ಮೆಯ ಪುತ್ರ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ರೋಮಾಂಚಕ, ಸ್ಫೂರ್ತಿದಾಯಕ ಬದುಕು ಮತ್ತು ಸಾಧನೆಗಳ ಕುರಿತಾಗಿ ಶತಾವತಾರ ವಿಶೇಷ ಕಾಫಿ ಟೇಬಲ್ ಪುಸ್ತಕ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಹೊರ ತರಲಾಗಿದ್ದು, ಈ ಪುಸ್ತಕವು ಶನಿವಾರ (ಮಾ.21) ಸಂಜೆ 5.30ಕ್ಕೆ ಕೆಎಲ್‌ಇಯ ಡಾ. ಬಿ.ಎಸ್.ಜಿರಗೆ ಸಭಾಭವನದಲ್ಲಿ ಬಿಡುಗಡೆ ಆಗಲಿದೆ.

ಈ ಸಮಾರಂಭದಲ್ಲಿ ಬೆಂಗಳೂರಿನ ಗವಿಪುರಂನ ಶ್ರೀ ಗೋಸಾಯಿ ಮಹಾ ಸಂಸ್ಥಾನ ಮಠದ ಪ.ಪೂ. ಜಗದ್ಗುರು ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಮಾಜಿ ಸಂಸದ ಪ್ರಭಾಕರ ಕೋರೆ ಆಗಮಿಸಲಿದ್ದಾರೆ. ಪ್ರಧಾನ ಭಾಷಣವನ್ನು ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಮಂಗೇಶ್ ಭೇಂಡೆ ಮಾಡಲಿದ್ದಾರೆ. ಆರ್‌ಎಸ್‌ಎಸ್ ಕರ್ನಾಟಕ ಉತ್ತರದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕ ನುಡಿ ಆಡುವರು. ಆರ್‌ಎಸ್‌ಎಸ್ ಅಖಿಲ ಭಾರತೀಯ ಸಹ ವ್ಯವಸ್ಥಾ ಪ್ರಮುಖರಾದ ಅನಿಲ್ ಓಕ್ ಪಾಲ್ಗೊಳ್ಳುವರು. ಜ್ಞಾನ ಭಾರತಿ ಪ್ರಕಾಶನ ಲಿಮಿಟೆಡ್ನ ನಿರ್ದೇಶಕ ನಿರ್ಮಲ್ ಕುಮಾರ್ ಸುರಾನಾ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಇದು ಸಂಸ್ಥೆಯ ಎಂಟನೇ ಕಾಫಿ ಟೇಬಲ್ ಪುಸ್ತಕ, ಈ ಸರಣಿಯಲ್ಲಿ ಇದುವರೆಗೆ ವಿಜಯ ನಗರ ಸಾಮ್ರಾಜ್ಯ, ಬಂಜಾರಾ ಸಮುದಾಯ, ಡಾ. ಬಿ ಆರ್ ಅಂಬೇಡ್ಕರ, ಮೈಸೂರು ಒಡೆಯರು, ಮಲೆನಾಡಿನ ಅರಸರು, ಕಿತ್ತೂರು ಕರ್ನಾಟಕ, ಮತ್ತು ಕಲ್ಯಾಣ ಕರ್ನಾಟಕ ಕುರಿತು ವಿಶೇಷ ಪುಸ್ತಕಗಳನ್ನು ಹೊರತರಲಾಗಿದೆ.

ಇದೀಗ ಬರುತ್ತಿರುವ ಛತ್ರಪತಿ ಶಿವಾಜಿ ಮಹಾರಾಜರ ಕುರಿತ ಈ ಪುಸ್ತಕ ನಿಶ್ಚಿತವಾಗಿಯೂ ನಮ್ಮ ಇದು ವರೆಗಿನ ಅತ್ಯಂತ ಪ್ರತಿಷ್ಠಿತ, ಸಮಗ್ರ ಗ್ರಂಥಗಳಲ್ಲೊಂದು. ಮರಾಠಿ ಭಾಷೆಯಲ್ಲಿ ನಮ್ಮ ಮೊತ್ತ ಮೊದಲ ಪ್ರಯತ್ನ ಕೂಡ. ಕರ್ನಾಟಕ ಮತ್ತು ಮಹಾರಾಷ್ಟ್ರದ ಪ್ರಖ್ಯಾತ ವಿದ್ವಾಂಸರು ಹಾಗೂ ಇತಿಹಾಸ ತಜ್ಞರು ಆಳವಾದ ಅಧ್ಯಯನ ಮತ್ತು ಆಕರ್ಷಕ ಶೈಲಿಯಿಂದ ಬರೆದಿರುವ ಮಹತ್ತರ ಲೇಖನಗಳ ಗುಚ್ಛ ಇದರಲ್ಲಿದೆ. ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿ ಲಭ್ಯವಿರುವ ಇದರಲ್ಲಿ ಮಹಾರಾಜರ ಬಗ್ಗೆ ಐತಿಹಾಸಿಕ ಪುರಾವೆಗಳು ಹಾಗೂ ಚಿತ್ತಾಕರ್ಷಕ ಚಿತ್ರ ಗಳೊಂದಿಗೆ ಕಟ್ಟಿಕೊಡಲಾಗಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಪಿ.ಎಸ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

- ಛತ್ರಪತಿ ಶಿವಾಜಿ ಮಹಾರಾಜರ ಪುಸ್ತಕ
- ರೋಮಾಂಚಕ, ಸ್ಫೂರ್ತಿದಾಯಕ ಬದುಕಿನ ಚಿತ್ರಣ
- ವಿಕ್ರಮ ವಾರಪತ್ರಿಕೆ ಲಾಂಛನದಲ್ಲಿ ಪ್ರಕಟಣೆ

ಶಾಮನೂರು ಕುಟುಂಬ, ಮುಸ್ಲಿಂ ಸಮುದಾಯ ಪಟ್ಟು | ಸಾದಿಕ್ ಪೈಲ್ವಾನ್ ನಾಮಪತ್ರ ಸಲ್ಲಿಕೆ

ದಾವಣಗೆರೆಯಲ್ಲಿ ಬಗೆಹರಿಯದ ಕೈ ಟಿಕೆಟ್ ಗೊಂದಲ

ಅರ್ಪಿತ್ ಎನ್.ಜೆ.

ದಾವಣಗೆರೆ: ಟಿಕೆಟ್ ಘೋಷಣೆಗೂ ಮುನ್ನವೇ ದಾವಣಗೆರೆ ದಕ್ಷಿಣ ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥ ಶಾಮನೂರು, ಅಲ್ಪಸಂಖ್ಯಾತ ಸಮುದಾಯದ ಕಾಂಗ್ರೆಸ್ ಮುಖಂಡ ಸಾದಿಕ್ ಪೈಲ್ವಾನ್ ಅವರು ನಾಮಪತ್ರ ಸಲ್ಲಿಸಿರುವುದರಿಂದ ಕಾಂಗ್ರೆಸ್ ಟಿಕೆಟ್‌ನ ಒಳಬೇಗುದಿ ಬಹಿರಂಗವಾಗಿದೆ.

ಸಮರ್ಥ ನಾಮಪತ್ರ ಸಲ್ಲಿಸುವ ಮೂಲಕ ಕ್ಷೇತ್ರ ಬಿಟ್ಟುಕೊಡುವ ಪ್ರಮೇಯವೇ ಇಲ್ಲವೆಂಬ ಸಂದೇಶ ರವಾನಿಸಿದರೆ, ಮತ್ತೊಂದೆಡೆ ಅಲ್ಪಸಂಖ್ಯಾತ ಸಮುದಾಯದ ಸಾದಿಕ್ ನಮಗೆ ಜಮೀರ್ ಸಾಥ್ ನೀಡುತ್ತಾರೆ ಎನ್ನುವ ಮೂಲಕ ತಮ್ಮ ಸಮಾಜ ಸಚಿವರ ಮೂಲಕ ಟಿಕೆಟ್‌ಗಾಗಿ ಪ್ರಯತ್ನ ಮುಂದುವರಿಸಿದೆ ಎಂಬ ಸ್ಪಷ್ಟನೆ ನೀಡಿದ್ದಾರೆ. ಎರಡೂ ಸಮುದಾಯಗಳ ನಡೆಯಿಂದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಪಾರುಪತ್ಯ ಸಾಧಿಸಿಕೊಂಡು ಬಂದಿದ್ದ ಆಡಳಿತಾರೂಢ ಕಾಂಗ್ರೆಸ್‌ಗೆ ಇದು ಬಿಸಿತುಪ್ಪದಂತಾಗಿದೆ.



ಸಾದಿಕ್



ಸಮರ್ಥ

ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ಸುರ್ಜೇವಾಲ ಅವರ ಸಭೆಯ ಪೂರ್ವದಲ್ಲಿ ನಾಮಪತ್ರ ಸಲ್ಲಿಕೆಯ ಬೆಳವಣಿಗೆ ನಡೆದಿರುವುದು ತೀವ್ರ ಕುತೂಹಲ ಮೂಡಿಸಿದೆ. ಕಾಂಗ್ರೆಸ್ ಕಟ್ಟಿರುವುದೇ ಅಪ್ಪಾಜಿ ಶಾಮನೂರು ಶಿವಶಂಕರಪ್ಪನವರು ಎಂಬ ಸಮರ್ಥ ಶಾಮನೂರು ಅವರ ಹೇಳಿಕೆ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ನಮ್ಮನ್ನು ಪರಿಗಣಿಸದಿದ್ದರೆ ಕ್ಷೇತ್ರ ಕಳೆದುಕೊಳ್ಳುವಿರಿ ಎಂಬ ಪರೋಕ್ಷ ಎಚ್ಚರಿಕೆಯ ಸಂದೇಶವನ್ನು ಹೈಕಮಾಂಡ್‌ಗೆ ರವಾನಿಸಿದಂತಿದೆ.

ಹಾಲಿ ಶಾಸಕ ನಿಧನ ಹೊಂದಿದರೆ ಅವರ ಕುಟುಂಬಕ್ಕೆ ಸ್ಪರ್ಧಿಸುವ ಅವಕಾಶ ನೀಡಿ ಅನುಕಂಪದಿಂದ ಗೆಲುವು ಸಾಧಿಸುವ ಲೆಕ್ಕಾಚಾರ ಸ್ವಾಭಾವಿಕ. ಆದರೆ ಶಾಮನೂರು ಶಿವಶಂಕರಪ್ಪ ಅವರ ವಿಚಾರ ಭಿನ್ನ. ಏಕೆಂದರೆ ಶಾಮನೂರು ಪ್ರಬಲ ವೀರಶೈವ ಲಿಂಗಾಯತ ಸಮುದಾಯದ ಅಗ್ರಗಣ್ಯರು, ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾಗಿದ್ದವರು. ಇಲ್ಲಿ ಅನುಕಂಪಕ್ಕಿಂತ ಶಾಮನೂರು ಸಾಹುಕಾರ್ ಎಂಬ ಹೆಸರೇ ಒಂದು ಮತ ಬ್ಯಾಂಕ್. ಹಾಗಾಗಿ ಕುಟುಂಬಕ್ಕೆ ಟಿಕೆಟ್ ನಿರಾಕರಿಸಲು ಕಾರಣ ಹುಡುಕಿದರೂ ಕಾಂಗ್ರೆಸ್‌ಗೆ ಸಿಗುತ್ತಿಲ್ಲ.

ಟಿಕೆಟ್‌ಗೆ ಬಿಗಿ ಪಟ್ಟು: ಇನ್ನೊಂದೆಡೆ ಕ್ಷೇತ್ರದಲ್ಲಿ ಅತಿಹೆಚ್ಚು ಮತದಾರರ ಸಂಖ್ಯೆ ಹೊಂದಿರುವ ಮುಸ್ಲಿಂ ಸಮುದಾಯ ಟಿಕೆಟ್‌ಗೆ ಬೇಡಿಕೆ ಸಲ್ಲಿಸಿ ಬಿಗಿ ಪಟ್ಟು ಹಿಡಿದಿದ್ದಾರೆ. ಅಲ್ಪಸಂಖ್ಯಾತರೂ ತಮ್ಮ ಸಮಾಜದ ಸಚಿವರ ಮೂಲಕ ಹೈಕಮಾಂಡ್ ಮೇಲೆ ಒತ್ತಡ ಹೇರುತ್ತಿದ್ದಾರೆ. ಸಮುದಾಯದ ಪರ ಟಿಕೆಟ್ ಕೇಳುವುದರಲ್ಲಿ ತಪ್ಪೇನು ಎಂಬ ಮಂತ್ರಿ ಜಮೀರ್ ಅವರ ಮಾತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರನ್ನು ಕೆರಳಿಸಿತ್ತು.

ನೋಟಾ ಎಚ್ಚರಿಕೆ: ಮತ್ತೊಂದು ಕಡೆ ಎಸ್.ಎಸ್. ಮಲ್ಲಿಕಾರ್ಜುನ ಅವರ ಹೊರಗಿನವರಿಗೆ ಇಲ್ಲೇನು ಕೆಲಸ ಎಂಬ ಹೇಳಿಕೆ ಅಲ್ಪಸಂಖ್ಯಾತರು ಮಂಡಿಸಿದ್ದ ಟಿಕೆಟ್ ಬೇಡಿಕೆಯ ಪ್ರಬಲತೆ ಹೆಚ್ಚಿಸಿದೆ. ಮುಸ್ಲಿಂ ಸಮುದಾಯ ಕೂಡ ಶತಾಯಗತಾಯ ಟಿಕೆಟ್ ಪಡೆದುಕೊಳ್ಳುವ ಪ್ರತಿಜ್ಞೆ ಮಾಡಿ ಟಿಕೆಟ್ ಸಿಗದಿದ್ದರೆ ನೋಟಾ ಅಭಿಯಾನ ಮಾಡುವುದಾಗಿ ಕಾಂಗ್ರೆಸ್‌ಗೆ ಎಚ್ಚರಿಕೆ ರವಾನಿಸಿದೆ. ಈ ಎಲ್ಲಾ ಬೆಳವಣಿಗೆಗಳು ಸಚಿವದ್ವಯರಿಗೆ ಪ್ರತಿಷ್ಠೆಯ ವಿಚಾರವಾಗಿ ಮಾರ್ಪಟ್ಟಿದೆ. ಹೀಗಾಗಿ ಯಾರಿಗೆ ಅವಕಾಶ ಕೊಟ್ಟರೂ ಭಿನ್ನಾಭಿಪ್ರಾಯ ಏರ್ಪಟ್ಟು ಜೇನುಗೂಡಿಗೆ ಕಲ್ಲೆಸೆದಂತಾಗುವುದು ಸದ್ಯದ ಕಾಂಗ್ರೆಸ್ ಪರಿಸ್ಥಿತಿ.

ದಾಖಲಾತಿ ಆಂದೋಲನ ಯಶಸ್ಸಿಗೆ ಸಚಿವರ ಸೂಚನೆ

•**ಬೆಂಗಳೂರು:** ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಆಂದೋಲನವನ್ನು ಯಶಸ್ವಿಯಾಗಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪತ್ರ ಬರೆದು ಮನವಿ ಮಾಡಿದ್ದಾರೆ.



ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಸರ್ಕಾರವು ಮಹತ್ವದ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಪ್ರಮುಖವಾಗಿ ಮೂಲ ಸೌಕರ್ಯ, ಶಿಕ್ಷಕರ ನೇಮಕಾತಿ, ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ, ನಮ್ಮ ಶಾಲೆ ನಮ್ಮ ಜವಾಬ್ದಾರಿ, ಪಾಲಕರ ಸಭೆ ಸೇರಿದಂತೆ ಇನ್ನಿತರ ಕಾರ್ಯಕ್ರಮಜಾರಿಹಾಗೂಸೌಲಭ್ಯ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಮಗುವು ಶಿಕ್ಷಣದಿಂದ ವಂಚಿತವಾಗದಂತೆ ಜಿಲ್ಲೆಯಾದ್ಯಂತ ವ್ಯವಸ್ಥಿತವಾಗಿ ದಾಖಲಾತಿ ಆಂದೋಲನ ಕೈಗೊಳ್ಳುವಂತೆ ಸಚಿವರು ಸೂಚಿಸಿದ್ದಾರೆ. ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು ಮತ್ತು ಹಳೆಯ ವಿದ್ಯಾರ್ಥಿಗಳ ಸಹಕಾರದೊಂದಿಗೆ ಮನೆ ಮನೆಗೆ ಭೇಟಿ ನೀಡಿ, ದಾಖಲಾತಿಗೆ ಮನವೊಲಿಸಬೇಕು, ಹಳೆಯ ವಿದ್ಯಾರ್ಥಿಗಳ ವಾಟ್ಸಾಪ್ ಗ್ರೂಪ್ಗಳ ಮೂಲಕ ಶಾಲಾಬಿವೃದ್ಧಿ ಮತ್ತು ದಾಖಲಾತಿ ಹೆಚ್ಚಿಸುವಲ್ಲಿ ಅವರ ನೆರವು ಪಡೆಯಬೇಕು ಎಂದು ಅವರು ಸಲಹೆ ನೀಡಿದ್ದಾರೆ.

» ಡಿಸಿ, ಜಿಪಂ ಸಿಇಒಗಳಿಗೆ ಮಧು ಬಂಗಾರಪ್ಪ ಪತ್ರ

ದಶಾವತಾರಿ, ಯಕ್ಷಗುರು ಗೋವಿಂದ ಭಟ್ ಇನ್ನಿಲ್ಲ

ಪುಟ ೧➔ ತೆಂಕುತಿಟ್ಟು ಯಕ್ಷಗಾನ ಇದುವರೆಗೆ ಕಂಡ ಸರ್ವಶ್ರೇಷ್ಠ ಕಲಾವಿದ. ತೆಂಕು, ಬಡಗು ಎರಡೂ ತಿಟ್ಟುಗಳಲ್ಲಿ ಯಾವುದೇ ಪಾತ್ರವನ್ನಾದರೂ ಲೀಲಾಜಾಲವಾಗಿ ಮಾಡಬಲ್ಲವರಾಗಿದ್ದರು. ಅನಿವಾರ್ಯ ಸ್ಥಿತಿಯಲ್ಲಿ ಭಾಗವತ, ಚೆಂಡೆಗಾರ, ಮದ್ದಳೆಗಾರನಾಗಿಯೂ ಹಿಮ್ಮೇಳದಲ್ಲಿ ಕೆಲಸ ನಿಭಾಯಿಸಿದ್ದರು. ಮೇಳದ ಮ್ಯಾನೇಜರ್ ಇಲ್ಲದ ಕಾಲದಲ್ಲಿ ಮ್ಯಾನೇಜರ್ ಆಗಿಯೂ ಕಾರ್ಯವಹಿಸಿದ್ದರು. ಅವರೊಬ್ಬ ಸರ್ವಾಂಗೀಣ ಪರಿಪೂರ್ಣ ಕಲಾವಿದ. ನಾಯಕ, ಪ್ರತಿನಾಯಕ, ರಕ್ಕಸ, ರಕ್ಕಸಿ, ಹಾಸ್ಯ, ಮಂತ್ರಿ, ಪುಂಡುವೇಷ ಹೀಗೆ ಎಲ್ಲ ವೇಷಗಳನ್ನು ಲೀಲಾಜಾಲವಾಗಿ ನಿಭಾಯಿಸಿದ್ದ ಯಕ್ಷರಂಗದ ಸವ್ಯಸಾಚಿ.



1951ರಲ್ಲಿ ಯಕ್ಷಗಾನ ಮೇಳಕ್ಕೆ ಸೇರ್ಪಡೆಗೊಂಡು ಸುಮಾರು70 ವರ್ಷಗಳ ಕಾಲ ಧರ್ಮಸ್ಥಳ, ಮೂಲ್ಕಿ, ಕೂಡ್ಲು, ಸುರತ್ಕಲ್ (ಕೆಳಗಿನ ಮಾರಿಗುಡಿ) ಇರಾ ಸೋಮನಾಥೇಶ್ವರ ಮೇಳಗಳಲ್ಲಿ ತಿರುಗಾಟ ನಡೆಸಿದ್ದಾರೆ. ಕೌರವ, ರಕ್ತಬೀಜ, ಇಂದ್ರಜಿತು, ಮಾಗಧ, ಕರ್ಣ, ಅತಿಕಾಯ ನರಕಾಸುರ, ತಾಮ್ರಾಕ್ಷ , ಹಿರಣ್ಯಕಶಿಪು, ದೇವೇಂದ್ರ, ಅರ್ಜುನ , ಹನುಮಂತ, ಭೀಷ್ಮ , ಬಾಹುಬಲಿ, ವಿಶ್ವಾಮಿತ್ರ ಅವರಿಗೆ ಹೆಸರು ತಂದು ಕೊಟ್ಟ ಪಾತ್ರಗಳಾಗಿವೆ.

ಅಪೂರ್ವ ವಾಗ್ವೈಖರಿ, ಛಂದೋಬದ್ಧವಾದ ಮಾತಿನ ಜತೆಗೆ ನೃತ್ಯದಲ್ಲೂ ಪ್ರಾವೀಣ್ಯ ಪಡೆದಿದ್ದರು. ಅವರಿಗೆ 2008ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2016ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ ಪುರಸ್ಕಾರ, ಕರ್ನಾಟಕ ಜಾನಪದ ಅಕಾಡೆಮಿ ಸಾಧನಾ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಗೌರವ ಸಮ್ಮಾನಗಳು ದೊರೆತಿವೆ. ಗೋವಿಂದ ಭಟ್ಟರು ಜನಿಸಿದ್ದು 1940ರ ಮಾರ್ಚ್ 22ರಂದು. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವಿಟ್ಲದ ಬಳಿಯ ಕೋಡಪದವು ಕುಕ್ಕೆಮನೆಯಲ್ಲಿ. ಅವರದು ಕಡು ಬಡತನದ ಕುಟುಂಬವಾಗಿತ್ತು. ಲಕ್ಷ್ಮೀ ಅಮ್ಮ ಮತ್ತು ಕಿನಿಲ ಶಂಕರನಾರಾಯಣ ಭಟ್ಟರ ಐವರು ಮಕ್ಕಳಲ್ಲಿ ಗೋವಿಂದ ಭಟ್ಟರು ಮೂರನೆಯವರು. ಗೋವಿಂದ ಭಟ್ಟರ ಬಾಲ್ಯದ ಬದುಕು ವಸ್ತುಶಃ ಕಣ್ಣೀರ ಕತೆಯಾಗಿತ್ತು.

ಕುಣಿತ ಆವಿಷ್ಕಾರ: ಏಕತಾಳಕ್ಕೆ ದಾಖಲೆಯ 24 ಕುಣಿತಗಳನ್ನು ಆವಿಷ್ಕರಿಸಿದ್ದಾರೆ. 7ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ ಪಡೆದಿರುವ ಗೋವಿಂದ ಭಟ್ಟರು ಬಳಿಕ ಯಕ್ಷಗಾನದತ್ತ ಒಲವು ಬೆಳೆಸಿಕೊಂಡರು. ಕುರಿಯ ವಿಠಲ ಶಾಸ್ತ್ರಿ, ಪರಮಶಿವನ್, ಮಾಧವ ಮೆನನ್, ರಾಜನ್ ಅಯ್ಯರ್ ಅವರಲ್ಲಿ ಯಕ್ಷಗಾನ ನೃತ್ಯ ಅಭ್ಯಸಿಸಿದರು. ಗೋವಿಂದ ಭಟ್ಟರಿಗೆ ಮೂವರು ಮಕ್ಕಳು, ಮೂವರು ಸೊಸೆಯಂದಿರು ಮತ್ತು ಮೂವರು ಮೊಮ್ಮಕ್ಕಳಿದ್ದಾರೆ. ಮಣಿ ಮೇಖಲೆ, ಕನಕ ರೇಖೆ, ಕಾವೇರಿ ಮಹಾತ್ಮೆ, ಮೂರುವರೆ ವಜ್ರಗಳು ರಾಜಶೇಖರ ವಿಲಾಸ, ಮಹಾವೀರ ಸಾಮ್ರಾಟ ಅಶೋಕ, ನಹುಷೇಂದ್ರ ಎಂಬ ಏಳು ಯಕ್ಷ ಪ್ರಸಂಗಗಳನ್ನು ಬರೆದಿದ್ದಾರೆ. ಜಪಾನ್, ಅಬುದಾಬಿ, ಬಹ್ರೈನ್, ದುಬೈಗಳಲ್ಲಿ ಯಕ್ಷಗಾನ ಪ್ರದರ್ಶಿಸಿದ್ದಾರೆ. ದಿಲ್ಲಿಯಲ್ಲಿ ರಾಷ್ಟ್ರಪತಿ ಎದುರು ಯಕ್ಷಗಾನ ಪ್ರದರ್ಶಿಸಿದ್ದರು. ಡಾ.ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ ವತಿಯಿಂದ ಗೋವಿಂದ ಭಟ್ಟರ ಜೀವನ ಚರಿತ್ರೆ ಯಕ್ಷೋಪಾಸನೆ ಮತ್ತು ಅಭಿನಂದನಾ ಗ್ರಂಥ ಸವ್ಯಸಾಚಿ ಪ್ರಕಟಿಸಲಾಗಿದೆ.

ಕಾರಂತರೂ ಅಚ್ಚರಿಪಟ್ಟಿದ್ದರು

1985ರಲ್ಲಿ ಉಡುಪಿಯಲ್ಲಿ ಡಾ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಯಕ್ಷಗಾನ ಪ್ರಾತ್ಯಕ್ಷಿಕೆಯಲ್ಲಿ ಗೋವಿಂದ ಭಟ್ಟರು ಮತ್ತು ವಿಶ್ವೇಶ್ವರ ಭಟ್ಟರು ತೆಂಕುತಿಟ್ಟಿನ ಆವಿಷ್ಕಾರಿಕ ನೃತ್ಯ ವೈವಿಧ್ಯವನ್ನು ಪ್ರದರ್ಶಿಸಿದ್ದರು. ಶಿವರಾಮ ಕಾರಂತರು ತೆಂಕುತಿಟ್ಟಿನಲ್ಲಿ ಇಷ್ಟೂ ನರ್ತನ ವೈವಿಧ್ಯ ಇದೆಯೇ ಎಂದು ಅಚ್ಚರಿ ಪಟ್ಟು ಮೆಚ್ಚುಗೆ ವ್ಯಕ್ತ ಪಡಿಸಿದ್ದರು.

ಡಿಜಿಪಿ ರಾಮಚಂದ್ರರಾವ್ ವಿಡಿಯೋ ನಕಲಿಯಲ್ಲ

•**ಬೆಂಗಳೂರು:** ಸಮವಸ್ತ್ರದಲ್ಲಿಯೇ ಕಚೇರಿಯಲ್ಲಿ ಮಹಿಳೆಯರೊಂದಿಗೆ ಅನುಚಿತವಾಗಿ ವರ್ತಿಸಿ ವಿವಾದ ಕ್ಕೀಡಾಗಿದ್ದ ಅಮಾನತುಗೊಂಡಿರುವ ಡಿಜಿಪಿ ಕೆ.ರಾಮ ಚಂದ್ರ ರಾವ್ ಅವರಿಗೆ ಸಂಕಷ್ಟ ಎದುರಾಗಿದೆ. ವೈರಲ್ ಆಗಿದ್ದ ವಿಡಿಯೋಗಳು ಸಂಪೂರ್ಣ ಅಸಲಿ ಎಂದು ವಿಧಿ ವಿಜ್ಞಾನ ಪ್ರಯೋಗಾಲಯ ದೃಢಪಡಿಸಿದ್ದು, ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದೆ. ಎಡಿಜಿಪಿ ಆರ್. ಹಿತೇಂದ್ರ ನೇತೃತ್ವದ ನಾಲ್ವರು ಐಪಿಎಸ್ ಅಧಿಕಾರಿಗಳ ತನಿಖಾ ತಂಡ 100 ಪುಟಗಳ ವರದಿ ಸಲ್ಲಿಸಿದೆ.

ಈ ದೃಶ್ಯಗಳು 2016–17ರಲ್ಲಿ ರಾಮಚಂದ್ರ ರಾವ್ ಅವರು ಬೆಳಗಾವಿ ವಲಯದ ಐಜಿಪಿ ಆಗಿದ್ದ ಅವಧಿಯಲ್ಲಿ ಚಿತ್ರೀಕರಿಸಲ್ಪಟ್ಟಿವೆ. ಈ ಪೈಕಿ ಒಬ್ಬ ಮಹಿಳೆಯೇ ತನ್ನ ಮೊಬೈಲ್‌ನಲ್ಲಿ ಈ ದೃಶ್ಯಗಳನ್ನು ಉದ್ದೇಶಪೂರ್ವಕವಾಗಿ ಸೆರೆಹಿಡಿದಿದ್ದರು ಎಂಬ ಅಂಶವೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈ ಮಧ್ಯೆ ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆ ರಾಮಚಂದ್ರ ರಾವ್ ಅವರಿಗೆ ನೋಟಿಸ್ ಜಾರಿ ಮಾಡಿದ್ದು, ಇಲಾಖಾ ತನಿಖೆ ಆರಂಭಿಸಿದೆ. ಮೇ31ರಂದು ರಾವ್ ನಿವೃತ್ತಿಯಾಗಲಿದ್ದರೂ, ಈ ಗಂಭೀರ ಪ್ರಕರಣದ ಹಿನ್ನೆಲೆಯಲ್ಲಿ ಅವರ ಪಿಂಚಣಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯುವ ಸಾಧ್ಯತೆ ಹೆಚ್ಚಾಗಿದೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◈ ದೇವೇಗೌಡರ ಡೇಟಿಂಗ್ ಆದುದು ನನ್ನೊಂದಿಗೆ, ಆದರೆ ಅವರು ಮದುವೆಯಾದುದು ಮೋದಿಯೊಂದಿಗೆ
- ಖರ್ಗೆಯವರ ಹಾಸ್ಯ
- ಡೇಟಿಂಗ್ ಅಂದರೆ ಚೀಟಿಂಗ್ ಅಂತ ಈಗಲಾದರೂ ಗೊತ್ತಾಯಿತಾ?

ದಿನ ಭವಿಷ್ಯ

ಮೇಷ ನಿಮಗೆ ಒದಗಿ ಬರುವ ಅವಕಾಶ ಚೆನ್ನಾಗಿ ಬಳಸಿಕೊಳ್ಳಿ. ದೀರ್ಘಾವಧಿ ಯೋಜನೆ ಪೂರ್ಣ ಆಗಲಿದೆ. ನಿಮ್ಮ ನಿರ್ಧಾರಕ್ಕೆ ಸಂಗಾತಿ ಬೆಂಬಲ.

ವೃಷಭ ಕಠಿಣ ಪರಿಶ್ರಮದ ಫಲ ಸಿಗಲಿದೆ. ಉದ್ಯೋಗ ಹುಡುಕುವವರಿಗೆ ಶುಭಸುದ್ದಿ. ಕೌಟುಂಬಿಕ ಉದ್ವಿಗ್ನತೆ ನಿವಾರಣೆ. ಹೂಡಿಕೆಯಿಂದ ಲಾಭ.

ಮಿಥುನ ನಿಮ್ಮ ನಡೆನುಡಿ ಎಲ್ಲರ ಗಮನ ಸೆಳೆಯಲಿದೆ. ವೃತ್ತಿಯಲ್ಲಿ ಸಫಲತೆ. ಪ್ರೀತಿಯ ವಿಷಯದಲ್ಲಿ ನಿರಾಶೆ ಉಂಟಾದೀತು. ದೇಹಾಲಸ್ಯ ಸಂಭವ.

ಕಟಕ ಆಪ್ತರ ಜತೆ ಭಿನ್ನಾಭಿಪ್ರಾಯ ಸಂಭವ. ಎದುರಾಡಬೇಡಿ. ಸಹನೆ ಕಾಯ್ದುಕೊಳ್ಳಿ. ಹಣದ ಹರಿವಿಗೆ ತಡೆ ಒದಗೀತು. ಖರ್ಚು ಕಡಿಮೆ ಮಾಡಿ.

ಸಿಂಹ ತೃಪ್ತಿಕರ ಬೆಳವಣಿಗೆ. ಸಂಘಟಿತ ಕಾರ್ಯದಲ್ಲಿ ಸಫಲತೆ. ಕೊಟ್ಟ ಹಣ ಮರಳಿ ಸಿಗಲಿದೆ. ಪ್ರೀತಿಪಾತ್ರರ ಜತೆ ಕಾಲಕ್ಷೇಪ.

ಕನ್ಯಾ ನಿಮ್ಮಿಷ್ಟದವರ ಪ್ರೀತಿ ಗಳಿಸುವ ಯತ್ನ ಸಫಲ. ಹಾಗೆಂದು ನಿಮ್ಮ ಗುರಿ ಮರೆಯಬೇಡಿ. ಅತ್ತವೂ ಗಮನ ಕೊಡಿ. ಬಂಧುಗಳ ಕಿರಿಕಿರಿ ಎದುರಿಸುವಿರಿ.

ತುಲಾ ನಡೆನುಡಿಯಿಂದ ಎಲ್ಲರ ಆಕರ್ಷಣೆಯ ಕೇಂದ್ರವಾಗುವಿರಿ. ಖಾಸಗಿ ಮತ್ತು ವೃತ್ತಿ ಬದುಕು ತೃಪ್ತಿಕರ. ಅಜೀರ್ಣದ ಸಮಸ್ಯೆ ಹೊಟ್ಟೆ ಕೆಡಿಸೀತು.

ವೃಶ್ಚಿಕ ಅನಗತ್ಯ ವಸ್ತು ಖರೀದಿಯಿಂದ ಧನವ್ಯಯ. ಬಿಕ್ಕಟ್ಟಿಗೆ ಸಂಬಂಧಿಸಿ ಯುಕ್ತ ಸಲಹೆ ಬಂದರೆ ಸ್ವೀಕರಿಸಿ. ಹಠ ಸ್ವಭಾವ ತೋರದಿರಿ.

ಧನು ಅಧಿಕ ಕೆಲಸದಿಂದ ಆರೋಗ್ಯ ಕೆಡಬಹುದು. ಆದಾಯದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪೂರಕ ಬೆಳವಣಿಗೆ. ನಿಮ್ಮ ಮಾತಿಗೆ ಬೆಲೆ ಸಿಗಲಿದೆ.

ಮಕರ ಕೆಲಸದಲ್ಲಿ ಹೆಚ್ಚು ಪರಿಶ್ರಮ ಬೇಕಾಗುವುದು. ಹಣ ಹೂಡಿಕೆಯಿಂದ ಲಾಭ ಸಿಗಲಿದೆ. ಕೇಡು ಬಯಸುವವರ ಕುರಿತಂತೆ ಒಂದು ಕಣ್ಣಿಡಿ.

ಕುಂಭ ಎಲ್ಲರ ಜತೆಗಿನ ಸಂಬಂಧ ಚೆನ್ನಾಗಿಡಿ. ಕೆಡುಕು ಮಾತು ಬಿಡಿ. ಸಂಗಾತಿ ಜತೆಗೆ ಸಾಮರಸ್ಯ ಕಾಯ್ದುಕೊಳ್ಳಿ. ಮಕ್ಕಳ ಸಾಧನೆಯಿಂದ ತೃಪ್ತಿ.

ಮೀನ ನಿಮ್ಮ ಸಿಡುಕುತನ ಸಂಬಂಧ ಹಾಳು ಮಾಡೀತು. ಕೆಲವರು ನಿಮ್ಮ ಒಳ್ಳೆತನ ದುರುಪಯೋಗ ಮಾಡುವರು. ಖರೀದಿ ಉತ್ಸಾಹ, ಧನವ್ಯಯ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 7,0,4,1

ಹೆಣ್ಣೆಂದು ತಂದೆಯಿಂದಲೇ ಹಸುಗೂಸಿನ ಹತ್ಯೆ

•**ಬೆಳಗಾವಿ:** ಹೆಣ್ಣುಮಗು ಎನ್ನುವ ಕಾರಣಕ್ಕೆ 15 ದಿನದ ಹಿಂದೆ ಜನಸಿದ್ದ ಹಸುಗೂಸಿಗೆ ವಿಷವುಣಿಸಿ ಕೊಲೆ ಮಾಡಿದ್ದ ತಂದೆಯನ್ನು ಇದೀಗ ಪೊಲೀಸರು ಬಂಧಿಸಿದ್ದಾರೆ. ಭೀಮರಾಯ ಬಂಧಿತ ಆರೋಪಿ. ತಾಲೂಕಿನ ಉಕ್ಕಡ ಗ್ರಾಮದಲ್ಲಿ ಕಳೆದ 15 ದಿನಗಳ ಹಿಂದಷ್ಟೇ ಜನಿಸಿದ್ದ ಹಸುಗೂಸು ಏಕಾಏಕಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ಕೈಗೊಂಡಾಗ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಹೆತ್ತ ತಂದೆಯೇ ಹೆಣ್ಣುಮಗು ಎಂಬ ಕಾರಣಕ್ಕೆ ವಿಷವುಣಿಸಿ ಕೊಲೆ ಮಾಡಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ. ಮಗುವಿನ ಸಾವಿಗೆ ತಂದೆಯೇ ಕಾರಣ ಎಂದು ಕುಟುಂಬಸ್ಥರೇ ಆರೋಪ ಮಾಡಿದ್ದರು.

ಕೂಲಿ ಕೆಲಸ ಮಾಡಿಕೊಂಡಿದ್ದ ಭೀಮರಾಯಗೆ ಗಂಡು ಮಕ್ಕಳೆಂದರೆ ಹುಚ್ಚು, ಆದರೆ 15 ದಿನದ ಹಿಂದೆ ಹೆಣ್ಣು ಮಗು ಆಗಿದ್ದಕ್ಕೆ ನೊಂದುಕೊಂಡಿದ್ದರು. ಪತ್ನಿ ತವರು ಮನೆಗೆ ಬಂದಿದ್ದ ಭೀಮರಾಯ ಮಗು ನೋಡಿ ವಾಪಸ್ ಹೋಗಿದ್ದರು. ಅವರು ಅತ್ತ ಹೋಗ್ತಿದ್ದಂತೆ ಮಗು ಅಸ್ವಸ್ಥಗೊಂಡಿತ್ತು. ಕೂಡಲೇ ಬೆಳಗಾವಿ ಬಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅಷ್ಟರಲ್ಲಿ ಮಗು ಮೃತಪಟ್ಟಿತ್ತು. ಹತ್ತಿ ಬೆಳೆಗೆ ಸಿಂಪಡಣೆ ಮಾಡುವ ಔಷಧಿಯನ್ನು ಮಗುವಿಗೆ ಉಣಿಸಲಾಗಿದೆ ಎಂಬ ಅನುಮಾನ ವ್ಯಕ್ತವಾಗಿತ್ತು. ಮಗುವನ್ನ ಬಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ಶಿಫ್ಟ್ ಮಾಡಿ, ಮರಣೋತ್ತರ ಪರೀಕ್ಷೆ ಬಳಿಕವೇ ಮಗುವಿನ ಸಾವಿನ ನಿಖರ ಕಾರಣ ಬಹಿರಂಗವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದರು. ಸ್ಥಳಕ್ಕೆ ಡಿಸಿಪಿ ನಾರಾಯಣ್ ಭರಮನಿ, ಬೆಳಗಾವಿ ಗ್ರಾಮೀಣ ಎಸಿಪಿ ಹಾಗೂ ಕಾಕತಿ ಸಿಪಿಐ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಆರೋಪಿ ಭೀಮರಾಯನನ್ನು ಕಾಕತಿ ಪೊಲೀಸರು ಬಂಧಿಸಿದ್ದಾರೆ.

ವರಿಷ್ಠರಿಂದಲೇ ಅಭ್ಯರ್ಥಿ ಅಂತಿಮ ಆಯ್ಕೆ | ಟಿಕೆಟ್‌ಗೆ ಪೈಪೋಟಿ ಸಹಜ

ಪಕ್ಷದಲ್ಲಿ ಒತ್ತಡಕ್ಕಿಲ್ಲ ಅವಕಾಶ

•**ಬೆಂಗಳೂರು:** ಕಾಂಗ್ರೆಸ್‌ಗೆಯಾರೂಒತ್ತಡಹೇರಲು ಆಗುವುದಿಲ್ಲ, ಬ್ಲಾಕ್‌ಮೇಲ್ ಮಾಡಲೂ ಆಗುವುದಿಲ್ಲ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಶಾಮನೂರು ಕುಟುಂಬವೂ ಕೇಳುತ್ತಿದೆ. ಹಾಗೆಯೇ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದು ತಪ್ಪೇನಲ್ಲ, ಆದರೆ, ಯಾರೂ ಒತ್ತಡ ಹಾಕಲು ಬರುವುದಿಲ್ಲ, ಬ್ಲ್ಯಾಕ್‌ಮೇಲ್ ಮಾಡಲಿಕ್ಕೂ ಆಗದು ಎಂದು ಹೇಳಿದರು. ಈಗಾಗಲೇ ನಾಮಪತ್ರ ಕೂಡ ಸಲ್ಲಿಸಿದ್ದಾರಲ್ಲ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಯಾರೋ ಮುಹೂರ್ತ ಹೇಳಿರುತ್ತಾರೆ. ಅದಕ್ಕಾಗಿ ನಾಮಪತ್ರ ಸಲ್ಲಿಸಿರುತ್ತಾರೆ. ಅದು ಸಹಜ ಕೂಡ. ನಾವೂ ಕೆಲವು ಸಲ ಹಾಗೆ ಸಲ್ಲಿಸಿದ್ದುಂಟು. ಅದೆಲ್ಲವೂ ಇದ್ದೇ ಇರುತ್ತದೆ ಎಂದು ಸಮಜಾಯಿಷಿ ನೀಡಿದರು.

ದಾವಣಗೆರೆ ಟಿಕೆಟ್ ಗೊಂದಲ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಎಂ.ಬಿ.ಪಾಟೀಲ್, ಶಾಮನೂರು ಕುಟುಂಬ ಟಿಕೆಟ್ ಕೇಳುತ್ತಿದೆ. ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ಕುಟುಂಬಕ್ಕೆ ಟಿಕೆಟ್ ಕೊಡುತ್ತಿಲ್ಲವೇ? ಹಾಗೆಯೇ ಇಲ್ಲಿಯೂ ತಮ್ಮ ಕುಟುಂಬಕ್ಕೆ ಕೊಡಬೇಕು ಎಂದು ಹೇಳುತ್ತಿದೆ. ಅತ್ತ ಅಲ್ಪಸಂಖ್ಯಾತ ಸಮುದಾಯವೂ ಬೇಡಿಕೆ ಇಟ್ಟಿದೆ. ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಅದರಲ್ಲಿ ತಪ್ಪೇನಿಲ್ಲ, ಆದರೆ, ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ ಎಂದರು.

ಸಂಸದರ ಸಭೆ ದಿನಾಂಕ ಮರುನಿಗದಿ: ಮಂಗಳವಾರ ಹೊಸದಿಲ್ಲಿಯಲ್ಲಿ ನಡೆದ ರಾಜ್ಯದ ನೀರಾವರಿ ಯೋಜನೆಗಳ ಕುರಿತು ಪ್ರತಿಕ್ರಿಯಿಸಿದ ಎಂ.ಬಿ. ಪಾಟೀಲ್, ಬೇರೆ ಬೇರೆ ರಾಜ್ಯಗಳ ಚುನಾವಣೆಗಳು ನಡೆಯುತ್ತಿವೆ. ಈ ಹಂತದಲ್ಲಿ ಸಭೆ ನಡೆಸಿ, ಸರ್ವಪಕ್ಷ ನಿಯೋಗ ಪ್ರಧಾನಿ ಭೇಟಿ ಮಾಡುವುದರಿಂದ ಮುಜುಗರ ಆಗಬಹುದು ಎಂದು ಬೇರೆ ದಿನಾಂಕ ನಿಗದಿ ಮಾಡಲು ಕೇಳಿದರು. ಚುನಾವಣೆ ಮುಗಿದ ಬಳಿಕ ಮತ್ತೆ ದಿನಾಂಕ ನಿಗದಿ ಆಗಲಿದೆ. ಆಗ ರಾಜ್ಯದ ಸಂಸದರ ಜತೆ ಚರ್ಚಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಆಲಮಟ್ಟಿ ಯೋಜನೆ ಎತ್ತರ ವಿಚಾರಕ್ಕೆ ಪ್ರತಿಕ್ರಿಯಿಸಿದ ಪಾಟೀಲ್, ಕೃಷ್ಣಾನ್ಯಾಯಾಧಿಕರಣದ ತೀರ್ಪಿನ ಪ್ರಕಾರ 173 ಟಿಎಂಸಿ ನೀರು ನಮಗೆ ಸಿಕ್ಕಿದೆ. ಅದಕ್ಕಾಗಿ ಆಲಮಟ್ಟಿ ಜಲಾಶಯ ಎತ್ತರ ಹೆಚ್ಚಿಸಬೇಕು. ಹತ್ತು ವರ್ಷವಾದರೂ ಅಧಿಸೂಚನೆ ಆಗಿರಲಿಲ್ಲ. ಈ ಯೋಜನೆಗಾಗಿ ಅಗತ್ಯ ಭೂಸ್ವಾಧೀನಕ್ಕೆ ಯಾವುದೇ ಅಡೆತಡೆ ಇಲ್ಲ, ನಮ್ಮ ಸ್ವಂತ ರಿಸ್ಕ್ ಮೇಲೆ ಸ್ವಾಧೀನ ಪ್ರಕ್ರಿಯೆ ನಡೆಸಲಾಗುತ್ತಿದೆ. ನೆರೆಯ ಆಂಧ್ರಪ್ರದೇಶ ತಕರಾರು ಸಲ್ಲಿಸಿದರೂ, ಅದು ಗಣನೆಗೆ ಬರುವುದಿಲ್ಲ ಎಂದು ಹೇಳಿದರು.

2ನೇ ಏರ್‌ಪೋರ್ಟ್‌ಗೆ ಟೆಂಡರ್: ಎಂ.ಬಿ. ಪಾಟೀಲ



ರಾಜ್ಯದಲ್ಲಿ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಕರೆದಿದ್ದೇವೆ. ಅದರಲ್ಲಿ ನಾಲ್ಕು ಸಂಸ್ಥೆಯವರು ಭಾಗವಹಿಸಿದ್ದಾರೆ ಎಂದು ಮೂಲಸೌಕರ್ಯ ಸಚಿವ ಎಂ.ಬಿ. ಪಾಟೀಲ ತಿಳಿಸಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟೆಂಡನರ್‌ನಲ್ಲಿ ನಾಲ್ಕು ಸಂಸ್ಥೆಯವರು ಭಾಗಿಯಾಗಿದ್ದು, ಮೂರು ಸ್ಥಳ ನೋಡಿಕೊಂಡು ಹೋಗಿದ್ದಾರೆ. ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಿಗದಿತ ಸಮಯ ಇರುತ್ತದೆ. ಆ ಸಮಯ ಮುಗಿದ ಬಳಿಕ ವರದಿ ಬರಲಿದೆ. ನಂತರ ಮುಂದಿನ ಹೆಜ್ಜೆ ಇಡಲಿದ್ದೇವೆ ಎಂದರು.

ಗೆಲ್ಲುವ ಅಭ್ಯರ್ಥಿಗೆ ಟಿಕೆಟ್: ಡಾ.ಜಿ. ಪರಮೇಶ್ವರ

•**ಬೆಂಗಳೂರು:** ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಈಚೆಗೆ ಅಗಲಿದ ಮಾಜಿ ಶಾಸಕರಿಬ್ಬರ ಕುಟುಂಬಗಳಿಂದ ಟಿಕೆಟ್‌ಗಾಗಿ ಬೇಡಿಕೆ ಇದೆ. ಆದರೆ, ಅಂತಿಮವಾಗಿ ಗೆಲ್ಲುವ ಅಭ್ಯರ್ಥಿಯನ್ನು ಪಕ್ಷ ಆಯ್ಕೆ ಮಾಡುತ್ತದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿಕೆಟ್ ಘೋಷಣೆ ಕಷ್ಟ ಏನಿಲ್ಲ, ಗೆಲ್ಲಲೇಬೇಕಾದಂತಹ ಅಭ್ಯರ್ಥಿ ಆಯ್ಕೆಗಾಗಿ ಚರ್ಚೆ ಮಾಡುತ್ತಿದ್ದಾರೆ. ಯಾರಿಗೆ ಟಿಕೆಟ್ ನೀಡಿದರೆ ಸೂಕ್ತ ಎಂಬುದನ್ನು ಎಲ್ಲ ದೃಷ್ಟಿಯಿಂದ ನೋಡುತ್ತಿದ್ದಾರೆ. ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ. ಮೇಟಿ ಎರಡೂ ಕುಟುಂಬಗಳಿಂದಲೂ ಬೇಡಿಕೆ ಇದೆ. ಅದು ಸಹಜ ಎಂದು ಹೇಳಿದರು. ವಿಶೇಷವಾಗಿ ದಾವಣಗೆರೆಯಲ್ಲಿ ಒಂದು ಕಡೆ ಹೆಚ್ಚು ಅಲ್ಪಸಂಖ್ಯಾತರಿದ್ದಾರೆ. ಮತ್ತೊಂದು ಕಡೆ ಲಿಂಗಾಯತರೂ ಇದ್ದಾರೆ. ಎರಡೂ ಕಡೆ ನೋಡುತ್ತಿದ್ದಾರೆ. ಇನ್ನು ಬಾಗಲಕೋಟೆಯಲ್ಲಿ ಮೇಟಿ ಅವರ ಮಗನಿಗೆ ಕೊಡಬೇಕು. ಆದರೆ, ಬಹಳ ಜನ ಆಕಾಂಕ್ಷಿಗಳಿದ್ದಾರೆ. ಅಂತಿಮವಾಗಿ ಪಕ್ಷ ತೀರ್ಮಾನ ಮಾಡಲಿದೆ ಎಂದರು.



ಅನಿಲ ಪೂರೈಕೆ ಬಾಧಿತ

ಪುಟ ೧➔ ಆನ್‌ಲೈನ್ ಬುಕ್ಕಿಂಗ್ ಪ್ರಮಾಣ 93%ಕ್ಕೆ ಏರಿಕೆಯಾಗಿದೆ ಮತ್ತು ಗುರುವಾರ ಸುಮಾರು 55 ಲಕ್ಷ ರೀಫಿಲ್ ವಿನಂತಿಗಳು ಬಂದಿವೆ. ಪ್ಯಾನಿಕ್ ಬುಕ್ಕಿಂಗ್ ಕಡಿಮೆಯಾದರೂ ಬೇಡಿಕೆ ಇನ್ನೂ ಹೆಚ್ಚಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಒಂದು ವಾರದಲ್ಲಿ 11,300 ಟನ್ ವಾಣಿಜ್ಯ ಎಲ್‌ಪಿಜಿ ವಿತರಿಸಲಾಗಿದೆ. ರಾಜ್ಯಗಳಿಗೆ ಸಂಗ್ರಹಣೆ ತಡೆಯಲು ಕಟ್ಟುನಿಟ್ಟಿನ ಮೇಲ್ವಿಚಾರಣೆ ಕೈಗೊಳ್ಳಲು ಕೇಂದ್ರ ಸರ್ಕಾರ ಸೂಚಿಸಿದೆ. ಬಂದರುಗಳಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ಸರಕು ಸರಬರಾಜು ಸುಗಮವಾಗಿದೆ. ಮಧ್ಯ ಪ್ರಾಚ್ಯದ ಪರಿಸ್ಥಿತಿಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಒಮಾನ್ ಮತ್ತು ಫ್ರಾನ್ಸ್ ನಾಯಕರೊಂದಿಗೆ ಚರ್ಚೆ ನಡೆಸಿದ್ದಾರೆ.

ಪ್ರೀಮಿಯಂ ತೈಲ ದರ ಏರಿಕೆ

ಭಾರತದಲ್ಲಿ ಪ್ರೀಮಿಯಂ ಪೆಟ್ರೋಲ್ ಬೆಲೆ ಶುಕ್ರವಾರದಿಂದ ಲೀಟರ್‌ಗೆ ಗರಿಷ್ಠ 2 ರೂ. 35 ಪೈಸೆಯವರೆಗೆ ಏರಿಕೆಯಾಗಿದೆ. ಆದರೆ, ಸಾಮಾನ್ಯ ಪೆಟ್ರೋಲ್ ದರ ಯಥಾಸ್ಥಿತಿಯಲ್ಲಿ ಮುಂದುವರಿದಿದೆ. ಬಿಪಿಸಿಎಲ್‌ನ ಸ್ಪೀಡ್, ಎಚ್‌ಪಿಸಿಎಲ್‌ನ ಪವರ್, ಐಒಸಿಎಲ್‌ನ ಎಕ್ಸ್‌ಪಿ95 ಪೆಟ್ರೋಲ್ ಬೆಲೆಗಳು ಲೀಟರ್‌ಗೆ 2.09 ರೂ.ನಿಂದ 2.35 ರೂ.ವರೆಗೆ ಹೆಚ್ಚಳ ಕಂಡಿವೆ. ಎಚ್‌ಪಿಸಿಎಲ್, ಐಒಸಿಎಲ್ ಮತ್ತು ಬಿಪಿಸಿಎಲ್ ಇತರ ತೈಲ ಮಾರಾಟ ಕಂಪನಿಗಳು, ಪವರ್ ಪೆಟ್ರೋಲ್, ಎಕ್ಸ್‌ಪಿ95 ಮತ್ತು ಸ್ಪೀಡ್ ಪೆಟ್ರೋಲ್ ಹೈ-ಆಕ್ಟೇನ್ ಇಂಧನಗಳ ಬೆಲೆಯನ್ನು ಹೆಚ್ಚಿಸಿವೆ. ಇರಾನ್ ಯುದ್ಧದ ಹಿನ್ನೆಲೆ ಜಾಗತಿಕ ಕಚ್ಚಾ ತೈಲದ ಬೆಲೆ ಏರಿಕೆಯಿಂದ, ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವೆಚ್ಚವನ್ನು ಕಂಪನಿ ಗಳು ಹೆಚ್ಚಿಸುತ್ತಿರುವುದರಿಂದ ಈ ಏರಿಕೆ ಮಾಡಲಾಗಿದೆ.

ಬಹ್ರೈನ್ ಕಿಂಗ್ ಜತೆ ಮೋದಿ ಮಾತುಕತೆ

ಪಶ್ಚಿಮ ಏಷ್ಯಾದಲ್ಲಿ ತೀವ್ರಗೊಳ್ಳುತ್ತಿರುವ ಸಂಘರ್ಷದ ನಡುವೆ, ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಬಹ್ರೈನ್ ನ ರಾಜ ಹಮದ್ ಬಿನ್ ಇಸಾ ಅಲ್ ಖಲೀಫಾ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿ, ಪ್ರದೇಶದ ಇಂಧನ ಮತ್ತು ನಾಗರಿಕ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ತೀವ್ರವಾಗಿ ಖಂಡಿಸಿದರು. ಈ ವೇಳೆ ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಯನ್ನು ವಿವರವಾಗಿ ಚರ್ಚಿಸಿದರು. ಈ ಸಂದರ್ಭ, ಇಂಧನ ಹಾಗೂ ನಾಗರಿಕ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳು ಜಾಗತಿಕ ಮಟ್ಟದಲ್ಲಿ ಆಹಾರ, ಇಂಧನ ಮತ್ತು ರಸಗೊಬ್ಬರ ಭದ್ರತೆಗೆ ದುಷ್ಪರಿಣಾಮ ಬೀರುತ್ತವೆ ಎಂದು ಅವರು ಎಚ್ಚರಿಸಿದರು. ಇದೇ ವೇಳೆ, ಸಮುದ್ರ ಮಾರ್ಗಗಳ ಸ್ವಾತಂತ್ರ್ಯ ಮತ್ತು ಸಾಗಣೆ ವ್ಯವಸ್ಥೆಯ ನಿರಂತರತೆ ಅತ್ಯಂತ ಮುಖ್ಯ ಎಂದು ಪ್ರಧಾನಿ ಪುನರುಚ್ಚರಿಸಿದರು. ಇದಕ್ಕೆ ಜೊತೆಗೆ, ಬಹ್ರೈನ್‌ನ ಭಾರತೀಯ ಸಮುದಾಯದ ಕಲ್ಯಾಣಕ್ಕಾಗಿ ನೀಡುತ್ತಿರುವ ನಿರಂತರ ಬೆಂಬಲಕ್ಕೆ ಮೋದಿ ಅವರು ರಾಜನಿಗೆ ಧನ್ಯವಾದಗಳನ್ನು ತಿಳಿಸಿದರು.



ತಟಸ್ಥ ನೀತಿ ಜವಾಬ್ದಾರಿ ನಡೆ

•**ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಇಸ್ರೇಲ್-ಅಮೆರಿಕ ಮತ್ತು ಇರಾನ್ ನಡುವಿನ ಉದ್ವಿಗ್ನತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಯಾವುದೇ ಪಕ್ಷದ ಪರವಾಗಿಲ್ಲದೆ ತಟಸ್ಥ ನಿಲುವನ್ನು ಅನುಸರಿಸುತ್ತಿರುವುದು ರಾಜಕೀಯ ಚರ್ಚೆಗೆ ಕಾರಣವಾಗಿದೆ. ಕೆಲ ವಿರೋಧ ಪಕ್ಷಗಳು ಇದನ್ನು ಟೀಕಿಸುತ್ತಿದ್ದರೂ, ಕಾಂಗ್ರೆಸ್ ಸಂಸದರಾದ ಶಶಿ ತರೂರ್ ಮತ್ತು ಮನೀಶ್ ತಿವಾರಿ ಕೇಂದ್ರ ಸರ್ಕಾರದ ಕ್ರಮವನ್ನು ಸಮರ್ಥಿಸಿದ್ದಾರೆ. ಕೇಂದ್ರದ ಈ ನಿಲುವು ಪ್ರಬುದ್ಧ ಮತ್ತು ಜವಾಬ್ದಾರಿಯುತ ಕಾರ್ಯತಂತ್ರದ ಸೂಚಕ ಎಂದು ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಮೌನವನ್ನು ತಪ್ಪಾಗಿ ಅರ್ಥೈಸಬಾರದು ಎಂದು ತಿರುವನಂತಪುರಂ ನ ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ. ಅಂತೆಯೇ, ಯುದ್ಧವನ್ನು ಅಂತಾರಾಷ್ಟ್ರೀಯ ಕಾನೂನಿನಲ್ಲಿ ಸಮರ್ಥಿಸಲು ಸಾಧ್ಯವಿಲ್ಲ ಮತ್ತು ಇದು ಸಾರ್ವಭೌಮತ್ವದ ತತ್ವಗಳಿಗೆ ವಿರುದ್ಧವಾಗಿದೆ. ಆದರೆ, ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಭಾರತ ತಾಳ್ಮೆ ತೋರಿಸುತ್ತಿರುವುದು ಕಾರ್ಯತಂತ್ರದ ವಿವೇಕವನ್ನು ತೋರಿಸುತ್ತದೆ ಎಂದರು.

ಮಾತ್ರವಲ್ಲದೇ, ಭಾರತದ ಮೌನವು ಯುದ್ಧಕ್ಕೆ ಬೆಂಬಲವಲ್ಲ ಅಥವಾ ದುರ್ಬಲತೆಗೂ ಸಂಕೇತವಲ್ಲ, ಬದಲಾಗಿ ದೇಶದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡ ತೀರ್ಮಾನ ಎಂದು ಶಶಿ ತರೂರ್ ಹೇಳಿದ್ದಾರೆ. ಚಂಡೀಗಢದ ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಕೂಡ ಇದೇ ನಿಲುವನ್ನು ಪ್ರತಿಪಾದಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಒಂದೇ ಒಂದು ಸಂಘರ್ಷವಲ್ಲ, ಹಲವು ಮಟ್ಟದ ಉದ್ವಿಗ್ನತೆಗಳು ನಡೆಯುತ್ತಿವೆ ಎಂದು ಅವರು ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಭಾರತ ನೇರವಾಗಿ ತೊಡಗಿಕೊಳ್ಳದಿರುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟರು.

ವಿಭಿನ್ನ ಅಭಿಪ್ರಾಯಗಳ ನಡುವೆ ಕೆಲವರ ಬೆಂಬಲ

ಮಧ್ಯಪ್ರಾಚ್ಯ ಯುದ್ಧ ಸಂಬಂಧ ಕೇಂದ್ರ ಸರ್ಕಾರದ ನಿಲುವುಗಳ ಬಗ್ಗೆ ಕಾಂಗ್ರೆಸ್ ನೊಳಗೆ ಭಿನ್ನ ಅಭಿಪ್ರಾಯಗಳಿದ್ದರೂ, ಆ ಪಕ್ಷದ ಕೆಲವು ಸಂಸದರು ಕೇಂದ್ರ ಸರ್ಕಾರದ ತಟಸ್ಥ ನಿಲುವಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಜಾಗತಿಕ ಉದ್ವಿಗ್ನ ಪರಿಸ್ಥಿತಿಯಲ್ಲಿ ಭಾರತ ತನ್ನ ಕಾರ್ಯತಂತ್ರದ ಸ್ವಾಯತ್ತತೆಯನ್ನು ಉಳಿಸಿಕೊಂಡು, ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸುವ ದಿಸೆಯಲ್ಲಿ ನಡೆದುಕೊಳ್ಳುತ್ತಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಅಯೋಧ್ಯೆ ಧೂಳನ್ನು ಸ್ಪರ್ಶಿಸಿದ್ದು ಸೌಭಾಗ್ಯ

ಪುಟ ೧➔ ನಮ್ಮ ದೇಶದ ಪುನರುಜ್ಜೀವನವು ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಯಾಮಗಳಲ್ಲಿ ನಡೆ ಯುತ್ತಿದೆ, ನಾಗರಿಕರು ಏಕತೆಯ ಮನೋಭಾವದಿಂದ ಮುಂದು ವರಿಯಬೇಕು ಎಂದು ಮುರ್ಮು ಹೇಳಿದರು. ಶ್ರೀರಾಮನ ಮೇಲಿನ ಭಕ್ತಿಯ ಪವಿತ್ರ ಬಂಧದಿಂದ ಒಗ್ಗೂಡಿ, ಎಲ್ಲರು ಒಂದು ಎಂಬ ಭಾವನೆಯನ್ನು ಅಳವಡಿಸಿಕೊಂಡು, ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮ ಮುಕ್ತಾಯವಾದ ನಂತರ ರಾಷ್ಟ್ರಪತಿ ಮುರ್ಮು ಅವರು, ಸಪ್ತ ಮಂದಿರಗಳ ದರ್ಶನ ಪಡೆದು ಅಯೋಧ್ಯೆಯಿಂದ ನಿರ್ಗಮಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಮಾತಾ ಅಮೃತಾನಂದಮಯಿ, ಉತ್ತರ ಪ್ರದೇಶದ ರಾಜ್ಯಪಾಲೆ ಆನಂದಿಬೆನ್ ಪಟೇಲ್, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಸುರೇಶ್ ಭಯ್ಯಾಜಿ ಜೋಶಿ ಇದ್ದರು. ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಕೋಶಾಧ್ಯಕ್ಷ ಗೋವಿಂದ ದೇವಗಿರಿ ಮಹಾರಾಜ, ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನಕಾರ್ಯದರ್ಶಿ ಚಂಪತ್ ರಾಯ್, ಗೋಪಾಲ ಹಾಗೂ ಇತರ ಪ್ರಮುಖ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಯೋಧ್ಯೆ ಪವಿತ್ರ: ಯೋಗಿ

ಸರಯೂ ತಾಯಿ ತನ್ನ ಶುದ್ಧ ನೀರಿನಿಂದ ಇಡೀ ಪ್ರದೇಶದ ಜತೆಗೆ ಆಯೋಧ್ಯಾ ಧಾಮವನ್ನು ಪವಿತ್ರಗೊಳಿಸುತ್ತಿದ್ದಾಳೆ ಎಂದು ಉ. ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಹೇಳಿದರು. ರಾಮರಾಜ್ಯದ ಅನುಭವವನ್ನು ಉಲ್ಲೇಖಿಸಿದ ಅವರು, ಪ್ರಪಂಚದಾದ್ಯಂತ ಯುದ್ಧಗಳು ನಡೆಯುತ್ತಿದ್ದರೂ, ನಾವು ಶ್ರೀರಾಮ ಯಂತ್ರದ ಸ್ಥಾಪನೆಯಲ್ಲಿ ಭಾಗವಹಿಸುತ್ತಿದ್ದೇವೆ ಎಂದರು. ಮೋದಿಯವರ ನಾಯಕತ್ವ ಮತ್ತು ಮಾರ್ಗದರ್ಶನದಲ್ಲಿ ಶ್ರೀ ರಾಮ ಜನ್ಮಭೂಮಿ ದೇವಾಲಯ ನಿರ್ಮಾಣಕ್ಕಾಗಿ ಭೂಮಿ ಪೂಜೆ ಕಾರ್ಯಕ್ರಮ, ಶ್ರೀ ರಾಮಲಲಾ ಪ್ರಾಣ ಪ್ರತಿಷ್ಠೆ, ರಾಮ ಪರಿವಾರದ ಪವಿತ್ರ ವಿಗ್ರಹ ಸ್ಥಾಪನೆ, ಧ್ವಜಾರೋಹಣ ಮತ್ತು ಶ್ರೀ ರಾಮ ಯಂತ್ರದ ಸ್ಥಾಪನೆಯು ಸನಾತನ ಧರ್ಮದ ಪ್ರತಿಯೊಬ್ಬ ಅನುಯಾಯಿ, ನಿಜವಾದ ಭಾರತೀಯನನ್ನು ಸಂತೋಷಗೊಳಿಸಿದೆ ಎಂದರು.

ನೀರಾನೆ ದಾಳಿಗೆ ಪಶುವೈದ್ಯೆ ಸಮೀಕ್ಷಾ ರೆಡ್ಡಿ ಸಾವು

•**ಶಿವಮೊಗ್ಗ:** ಸಮೀಪದ ತ್ಯಾವರೆಕೊಪ್ಪದ ಹುಲಿ–ಸಿಂಹಧಾಮದಲ್ಲಿ ಗರ್ಭಿಣಿ ನೀರಾನೆ ಪರೀಕ್ಷಿಸಲು ತೆರಳಿದ್ದ ತರಬೇತಿ ನಿರತ ಪಶುವೈದ್ಯೆಯೊಬ್ಬರು ನೀರಾನೆ ದಾಳಿಗೆ ಬಲಿಯಾಗಿದ್ದಾರೆ. ಬೆಂಗಳೂರು ಪಶುವೈದ್ಯ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದ ಡಾ.ಸಮೀಕ್ಷಾ ರೆಡ್ಡಿ (27) ಮೃತಪಟ್ಟವರು. ನೀರಾನೆ ದಾಳಿಯಿಂದ ತೀವ್ರ ಗಾಯಗೊಂಡ ಸಮೀಕ್ಷಾ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ವೈದ್ಯೆ ಸಾವು ಹಲವು ಅನುಮಾನಗಳಿಗೆ ಕಾರಣವಾಗಿದ್ದು, ಈ ಕುರಿತು ತನಿಖೆ ನಡೆಸುವಂತೆ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ, ಆದೇಶಿಸಿದ್ದಾರೆ.

ಮೂಲತಃ ಬೆಂಗಳೂರಿನ ಬನ್ನೇರುಘಟ್ಟ ನಿವಾಸಿಯಾಗಿದ್ದ ಸಮೀಕ್ಷಾ ಅವರು, ಕಳೆದ ಫೆಬ್ರವರಿಯಲ್ಲಿ ಪಶು ವೈದ್ಯಾಧಿಕಾರಿಯಾಗಿ ಆಯ್ಕೆಯಾಗಿ ಮೃಗಾಲಯದ ಪಶುವೈದ್ಯರಿಂದ ತರಬೇತಿ ಪಡೆಯುತ್ತಿದ್ದರು. ಮಾ.19ರಂದು ರಾತ್ರಿ 10.30ಕ್ಕೆ ಮೃಗಾಲಯದ ಆಸ್ಪತ್ರೆಗೆ ತೆರಳಿ ಸನ್‌ಕೊನ್ಯೂರ್ ಪಕ್ಷಿಗೆ ಫಾಲೊ ಅಪ್ ಚಿಕಿತ್ಸೆ ನೀಡಿದ್ದರು. ನಂತರ ರಾತ್ರಿ 11.45ಕ್ಕೆ ಥರ್ಮಲ್ ಕ್ಯಾಮೆರಾ ಬಳಸಿ ಗರ್ಭಿಣಿ ನೀರಾನೆ(ಹಿಪ್ಪೊಪೊಟಮಸ್) ತಾಪಮಾನ ಪರೀಕ್ಷಿಸುವ ವೇಳೆ ಈ ದಾಳಿ ನಡೆದಿದೆ. ಕೂಡಲೇ ಅವರನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶುಕ್ರವಾರ ಬೆಳಗ್ಗೆ 6.30ಕ್ಕೆ ಮೃತಪಟ್ಟಿದ್ದಾರೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ನಿರ್ದೇಶಕ ಅಮರಾಕ್ಷರ ತಿಳಿಸಿದ್ದಾರೆ.

ದಾವಣಗೆರೆ ದಕ್ಷಿಣ ಕಾಂಗ್ರೆಸ್ ಕಗ್ಗಂಟು

ಪುಟ ೧➔ ಈ ವೇಳೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೂ ಬುಲಾವ್ ನೀಡಲಾಗಿತ್ತು. ಅದರಂತೆ ಮಲ್ಲಿಕಾರ್ಜುನ್ ಅವರು ಈಶ್ವರ್ ಖಂಡ್ರೆ ಜತೆಗೆ ಸುರ್ಜೇವಾಲ ಅವರನ್ನು ಭೇಟಿ ಮಾತುಕತೆ ನಡೆಸಿದರು. ಈ ವೇಳೆ ದಾವಣಗೆರೆಯಲ್ಲಿ ಕಾಂಗ್ರೆಸ್ ನೆಲೆ ಕಂಡುಕೊಳ್ಳುವಲ್ಲಿ ತಮ್ಮ ತಂದೆಯ ಶ್ರಮ ಇದೆ. ಕುಟುಂಬಕ್ಕೇ ಟಿಕೆಟ್ ನೀಡಬೇಕು. ಈಗಾಗಲೇ ಪುತ್ರ ಸಮರ್ಥ್ ನಾಮಪತ್ರ ಸಲ್ಲಿಸಿದ್ದಾರೆ. ಅನುಕಂಪ, ಸಮುದಾಯದ ಬೆಂಬಲ ಸೇರಿದಂತೆ ಎಲ್ಲವೂ ಕೆಲಸ ಮಾಡಲಿದೆ ಮಲ್ಲಿಕಾರ್ಜುನ್ ಸಮರ್ಥನೆಗಳನ್ನು ನೀಡಿದರು ಎನ್ನಲಾಗಿದೆ.

ಇಲ್ಲಿಂದ ಕೆಪಿಸಿಸಿ ಕಚೇರಿಯಲ್ಲೂ ಹಲವು ಸುತ್ತಿನ ಮಾತುಕತೆ ನಡೆಯಿತು. ಅಲ್ಲಿ ಸುರ್ಜೇವಾಲ, ಡಿ.ಕೆ. ಶಿವಕುಮಾರ್, ಎರಡೂ ಕ್ಷೇತ್ರಗಳ ಉಸ್ತುವಾರಿ ಸಮಿತಿಗಳ ಸಂಚಾಲಕರಾದ ಮಂಜುನಾಥ ಭಂಡಾರಿ ಮತ್ತು ವಸಂತ್ ಕುಮಾರ್, ಸಚಿವರು, ಪ್ರಮುಖ ಮುಖಂಡರೊಂದಿಗೆ ಸಮಾಲೋಚನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಪಕ್ಷದ ಸ್ಥಳೀಯ ಮುಖಂಡರು ನೀಡಿದ ವರದಿಯ ಅವಲೋಕನ, ನಾಯಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ಖರ್ಗೆ ಭೇಟಿ ಮಾಡಿದ ಅಲ್ಪಸಂಖ್ಯಾತ ಮುಖಂಡರು: ಇನ್ನು ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಬಿಗಿ ಪಟ್ಟು ಹಿಡಿದಿರುವ ಅಲ್ಪಸಂಖ್ಯಾತ ಮುಖಂಡರು, ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಸದಾಶಿವನಗರದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಸಚಿವ ಜಮೀರ್ ಅಹ್ಮದ್ ಖಾನ್ ನೇತೃತ್ವದಲ್ಲಿ ಆಗಮಿಸಿದ ಅಲ್ಪ ಸಮಖ್ಯಾತ ಮುಖಂಡರು ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನಮ್ಮ ಸಮುದಾಯದ ಒಬ್ಬರಿಗೆ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದರು.

ಬಿಜೆಪಿಯಿಂದ ವೀರಣ್ಣ ಚರಂತಿಮಠ ನಾಮಪತ್ರ

ಪುಟ ೧➔ ರಾಜ್ಯದ ಪ್ರಮುಖ ನಾಯಕರ ಸಮ್ಮುಖದಲ್ಲಿ ವೀರಣ್ಣ ಚರಂತಿಮಠ ಅವರು ಅಧಿಕೃತವಾಗಿ ಇನ್ನೊಮ್ಮೆ ನಾಮಪತ್ರ ಸಲ್ಲಿಸಲಿದ್ದಾರೆ. ಈ ಮೂಲಕ ಕ್ಷೇತ್ರದಲ್ಲಿ ಪಕ್ಷದ ಶಕ್ತಿ ಪ್ರದರ್ಶನಕ್ಕೂ ಬಿಜೆಪಿ ಸಜ್ಜಾಗಿದೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,59,260 ಮತದಾರರು ಇದ್ದು, ಇವರಲ್ಲಿ 1,26,761 ಪುರುಷರು, 1,32,476 ಮಹಿಳೆಯರು ಮತ್ತು 23 ಇತರೆ ಮತದಾರರಿದ್ದಾರೆ.

2 ಕ್ಷೇತ್ರಗಳ ಅಭಿಪ್ರಾಯ ಸಂಗ್ರಹಿಸಿದ್ದೇವೆ: ಡಿಸಿಎಂ

•**ಬೆಂಗಳೂರು:** ಉಪ ಚುನಾವಣೆಯಲ್ಲಿ ಪಕ್ಷ ಯಾರಿಗೆ ಟಿಕೆಟ್ ಕೊಟ್ಟರೂ ಒಮ್ಮತದಿಂದ ಕೆಲಸ ಮಾಡುವುದಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ನಮ್ಮ ನಾಯಕರು ಹೇಳಿದ್ದಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಕೆಪಿಸಿಸಿ ಕಚೇರಿಯಲ್ಲಿ ಸುರ್ಜೇವಾಲಾ ಜತೆಗಿನ ಸಭೆ ಬಳಿಕ ಮಾತನಾಡಿದ ಅವರು, ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಅಭ್ಯರ್ಥಿ ಆಯ್ಕೆ ಸಂಬಂಧ ಪಕ್ಷದ ಮುಖಂಡರ ಸಭೆ ನಡೆಸಿದ್ದು, ಎಲ್ಲರ ಅಭಿಪ್ರಾಯ ಸಂಗ್ರಹಿಸಲಾಗಿದೆ. ಎಲ್ಲರ ಅಭಿಪ್ರಾಯದಂತೆ ನಾವು ಹೈಕಮಾಂಡ್‌ಗೆ ನಮ್ಮ ಪಟ್ಟಿ ಕಳುಹಿಸುತ್ತೇವೆ. ಅಂತಿಮವಾಗಿ ಅವರು ತೀರ್ಮಾನ ಮಾಡಲಿದ್ದಾರೆ ಎಂದು ತಿಳಿಸಿದರು.



ಸಂಘರ್ಷಕ್ಕೆ ಸ್ವಾರ್ಥ ಕಾರಣ: ಭಾಗ್ವತ್

ಪುಟ ೧➔ ಭಾರತದ ಪ್ರಾಚೀನ ಜ್ಞಾನವು "ಎಲ್ಲರೂ ಪರಸ್ಪರ ಅವಲಂಬಿತರು ಮತ್ತು ಒಂದೇ" ಎನ್ನುತ್ತದೆ. ಈ ಸನಾತನ ಚಿಂತನೆಯಿಂದ ನಾವು ಸಂಘರ್ಷದ ಹಾದಿಯನ್ನು ಬಿಟ್ಟು ಸೌಹಾರ್ದ ಮತ್ತು ಸಹಕಾರದ ಹಾದಿಯನ್ನು ಹಿಡಿಯಬೇಕಾಗಿದೆ. ಇದೀಗ ಆಧುನಿಕ ವಿಜ್ಞಾನ ಕೂಡ ನಿಧಾನವಾಗಿ ಇದನ್ನು ಅರ್ಥ ಮಾಡಿಕೊಳ್ಳಲಾರಂಭಿಸಿದೆ ಎಂದು ಅವರು ವಿವರಿಸಿದರು.

ಧರ್ಮವು ಕೇವಲ ಗ್ರಂಥಗಳಿಗೆ ಸೀಮಿತವಾಗಿದ್ದರೆ ಸಾಲದು, ಬದಲಾಗಿ ಅದು ನಮ್ಮ ನಡವಳಿಕೆಯಲ್ಲಿ ಪ್ರತಿಫಲಿಸಬೇಕು. ಶಿಸ್ತು, ನೈತಿಕ ಮೌಲ್ಯಗಳ ಅನುಸರಣೆಗೆ ತೀವ್ರವಾದ ಅಭ್ಯಾಸಗಳು ಅಗತ್ಯವಿದೆ ಮತ್ತು ಇಂತಹ ಹಾದಿಯಲ್ಲಿ ಕೊಲವೊಮ್ಮೆ ಕಷ್ಟ-ಸವಾಲುಗಳು ಎದುರಿಸಬೇಕಾಗಿಯೂ ಬರಬಹುದು. ಭಾರತ ಮಾನವೀಯತೆಯಲ್ಲಿ ನಂಬಿಕೆ ಹೊಂದಿರುವುದು ಇದೇ ಹಿನ್ನೆಲೆಯಲ್ಲಿ, ಇತರರು ಅಸ್ತಿತ್ವಕ್ಕಾಗಿ ಹೋರಾಟ ಮತ್ತು ಶಕ್ತಿ ಇರುವವರೇ ಉಳಿಯುವುದು ಎಂಬ ತತ್ವದಲ್ಲಿ ನಂಬಿಕೆ ಹೊಂದಿರುವುದನ್ನು ಉಲ್ಲೇಖಿಸಿ, ಸಂಘರ್ಷಕ್ಕೆ ಶಕ್ತಿಯ ಈ ಸಿದ್ಧಾಂತ ಕಾರಣವಾಗುತ್ತಿದೆ. ಆದರೆ ವಿಶ್ವಕ್ಕಿಂದು ಬೇಕಾಗಿರುವುದು ಸಂಘರ್ಷವಲ್ಲ, ಬದಲಿಗೆ ಸೌಹಾರ್ದ ಎಂದು ಭಾಗ್ವತ್ ಬಲವಾಗಿ ಪ್ರತಿಪಾದಿಸಿದರು.

ಭಾರತದತ್ತ ಭರವಸೆಯ ದೃಷ್ಟಿ

ಜಾಗತಿಕ ಸಂಘರ್ಷ ಮುಂದುವರಿಯುತ್ತಿರುವಂತೆಯೇ, ಭಾರತ ಮಾತ್ರವೇ ಯುದ್ಧಗಳನ್ನು ಅಂತ್ಯಗೊಳಿಸಬಹುದು. ಯಾಕೆಂದರೆ ಇದು ಭಾರತದ ಸಹಜ ಸ್ವಭಾವ ಎಂಬ ಧ್ವನಿಗಳು ಜಗತ್ತಿನೆಲ್ಲೆಡೆಯಿಂದ ಮೂಡಿಬರುತ್ತಿದೆ. ಭಾರತೀಯರು ಮಾನವೀಯ ನಿಯಮಗಳನ್ನು ಅನುಸರಿಸಿದರೆ, ಉಳಿದ ಜಗತ್ತು ಕಾಡಿನ ನ್ಯಾಯವನ್ನು ಅನುಸರಿಸುತ್ತಿರುವ ಈ ಸಂದರ್ಭ, ಮುಗ್ಗರಿಸುತ್ತಿರುವ ಜಗತ್ತಿಗೆ ಧರ್ಮದ ಅಡಿಪಾಯವನ್ನು ಒದಗಿಸಿ ಸಮತೋಲನವನ್ನು ಪುನಸ್ಥಾಪಿಸುವ ಹೊಣೆಗಾರಿಕೆ ಭಾರತಕ್ಕಿದೆ ಎಂದು ಮೋಹನ್ ಭಾಗ್ವತ್ ದೃಢವಾಗಿ ಸಾರಿದರು.

ಚಿತ್ತಾಪುರದಲ್ಲಿ ಬಿಜೆಪಿ ಪ್ರಶಿಕ್ಷಣ ಮಹಾಭಿಯಾನ | ವಿಜಯೇಂದ್ರ ಹೇಳಿಕೆ

2028ಕ್ಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ

ಕಲಬುರಗಿ: ಪಕ್ಷವನ್ನು ಸಂಘಟನಾತ್ಮಕವಾಗಿ ಬಲಪಡಿಸುವಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿದ ಕಾರ್ಯಕರ್ತರನ್ನು ಗುರುತಿಸಿ ಮುಂದಿನ ಚುನಾವಣೆಯಲ್ಲಿ ಅವಕಾಶ ಮಾಡಿಕೊಡುವ ಕೆಲಸ ಮಾಡಲಾಗುವುದು, ಜೊತೆಗೆ ಅಂತಹ ಪ್ರಾಮಾಣಿಕ ಕಾರ್ಯಕರ್ತರ ಜೊತೆಗೆ ನಾನು ಸ್ವತಃ ಗಟ್ಟಿಯಾಗಿ ನಿಲ್ಲುತ್ತೇನೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಜಿಲ್ಲೆಯ ಚಿತ್ತಾಪುರ ತಾಲೂಕಿನ ಮಾಲಗತ್ತಿಯ ಹಿರೋಡೇಶ್ವರ ದೇವಸ್ಥಾನದಲ್ಲಿ ಪಂಡಿತ್ ದೀನದಯಾಳ್ ಉಪಾಧ್ಯಾಯ ಮಂಡಲ ಪ್ರಶಿಕ್ಷಣ ಮಹಾಭಿಯಾನದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಕ್ಷದಲ್ಲಿ ಯಾವತ್ತೂ ಸಹ ಹಣ ಒಂದೇ ಮಾನದಂಡವಾಗುವುದಿಲ್ಲ. ಪಕ್ಷವನ್ನು ಬೂತ ಮಟ್ಟದಿಂದ ಮೇಲ್ಮಟ್ಟದವರೆಗೂ ಸಂಘಟಿಸುವವರನ್ನು ಪಕ್ಷ ಖಂಡಿತವಾಗಿಯೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಾನು ಇಟ್ಟಂತಹ ಗುರಿ, ಮುಂದೆ ಇಟ್ಟಂತಹ ಹೆಜ್ಜೆ ಯಾವತ್ತೂ ಹಿಂದೆಯಿಡುವ ಮಾತೇ ಉದ್ಭವಿಸದು. ಲಕ್ಷಾಂತರ ಕಾರ್ಯಕರ್ತರ ಹೋರಾಟದ ಪರಿಶ್ರಮದಿಂದಾಗಿ ಪಕ್ಷ ರಾಜ್ಯದಲ್ಲಿ ಮತ್ತು ದೇಶದಲ್ಲಿ ತನ್ನ ಭದ್ರ ಬುನಾದಿಯನ್ನು ತಾಳಿದೆ. ಯಾವ ರೀತಿ ಕಟ್ಟಡದ ಅಡಿಪಾಯ ಕಣ್ಣಿಗೆ ಕಾಣುವುದಿಲ್ಲವೋ, ಅದೇ ನಮ್ಮ ಪಕ್ಷಕ್ಕಾಗಿ ದುಡಿದ ಅಸಂಖ್ಯಾತ ಕಾರ್ಯಕರ್ತರ ಪರಿಶ್ರಮ ಕಾಣುವುದಿಲ್ಲ. ಹೀಗಾಗಿ ಪಕ್ಷದ ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ಪಕ್ಷವನ್ನು ಬೂತ್ ಮಟ್ಟದಿಂದ ಬಲಿಷ್ಠಗೊಳಿಸಲು ನಾವೆಲ್ಲರೂ ಸಂಕಲ್ಪ ಮಾಡಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಕಾರ್ಯದರ್ಶಿ, ಶಾಸಕ ಬಸವರಾಜ ಮತ್ತಿಮಡು,ಮಾಜಿ ಸಂಸದ ಉಮೇಶ್ ಜಾಧವ್, ಕಲಬುರಗಿ ನಗರಾಧ್ಯಕ್ಷ ಚಂದು ಪಾಟೀಲ್, ಕಲಬುರಗಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಅಶೋಕ ಬಗಲಿ, ಮಾಜಿ ಶಾಸಕ ರಾಜ್ ಕುಮಾರ್ ಪಾಟೀಲ್ ತೆಲ್ಕೂರ್, ದತ್ತಾತ್ರೇಯ ಪಾಟೀಲ್ ರೇವೂರ್,ಮಾಜಿ ಸಚಿವ ಬಾಬುರಾವ್ ಚೌಹಾಣ್,ಮಾಜಿ ಎಂಎಲ್ಸಿ ಅಮರನಾಥ್ ಪಾಟೀಲ್,ಚಿತ್ತಾಪುರ ಮಂಡಲ ಅಧ್ಯಕ್ಷ ರವೀಂದ್ರ ಸಜ್ಜನಶೆಟ್ಟಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಬೆಣ್ಣೂರಕರ್, ಅವ್ವಣ್ಣ ಮ್ಯಾಕೇರಿ, ವಿಭಾಗ ಪ್ರಭಾರಿ ಶರಣಪ್ಪ ತಳವಾರ, ಮಾಜಿ ಜಿಲ್ಲಾಧ್ಯಕ್ಷ ಶಿವರಾಜ್ ಪಾಟೀಲ್ ರದ್ದೇವಾಡಗಿ, ಶಶಿಕಲಾ ಟೆಂಗಳಿ, ಶೋಭಾ ಬಾಣಿ ಸೇರಿದಂತೆ ಪಕ್ಷದ ಹಲವು ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.



ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಿತ್ತಾಪುರ ಒಳಗೊಂಡಂತೆ ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಕಮಲ ಅರಳಲಿದೆ. ಪ್ರಶಿಕ್ಷಣ ವರ್ಗ ಕೇವಲ ಚಿತ್ತಾಪುರದಲ್ಲಿ ಅಷ್ಟೇ ಅಲ್ಲ,ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯುತ್ತಿದೆ.ಇದು ನಮ್ಮ ಪಕ್ಷದ ಸಂಘಟನಾತ್ಮಕ ವ್ಯವಸ್ಥೆಗೆ ಹೆಚ್ಚಿನ ಮಹತ್ವ ನೀಡಲಿದೆ. ಹಿರಿಯರ ಮಾರ್ಗದಲ್ಲಿ,ಹೊಸಬರಿಗೆ ಜವಾಬ್ದಾರಿ ನೀಡಿ ಪಕ್ಷವನ್ನು ಬಲಪಡಿಸುವ ಮೂಲಕ ಬೂತ್ ಮಟ್ಟದಿಂದ ಪಟ್ಟವನ್ನು ಗಟ್ಟಿಗೊಳಿಸುವ ಸಂಕಲ್ಪ ಇಂದು ನಾವೆಲ್ಲರೂ ಮಾಡಬೇಕೆಂದು ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಕಾರ್ಯಕರ್ತರಿಗೆ ಕರೆ ನೀಡಿದರು.

> ರಾಜ್ಯದಲ್ಲಿ ಕಾಂಗ್ರೆಸ್ ಸರಿಯಾದ ಆಡಳಿತ ನಡೆಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಜನಸಾಮಾನ್ಯರ ಬದುಕಿಗೆ ಕೊಳ್ಳಿ ಇಟ್ಟಿದೆ.ಹೀಗಾಗಿ ಪಕ್ಷದ ಪ್ರತಿಯೊಬ್ಬರೂ ಸ್ವಾರ್ಥ ಬದಿಗಿಟ್ಟು ಪ್ರಧಾನಿ ನರೇಂದ್ರ ಮೋದಿ ಕೈ ಬಲಪಡಿಸುವ ಜೊತೆಗೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ತರುವ ಸಂಕಲ್ಪ ಮಾಡಬೇಕು. ರಾಜ್ಯದ ರೈತನ ಬದುಕಿಗೆ ಬೆಳಕಾಗುವ ದಿಕ್ಕಿನಲ್ಲಿ ಸಂಕಲ್ಪ ಮಾಡಬೇಕು.
> ■ ಬಿ.ವೈ.ವಿಜಯೇಂದ್ರ, ರಾಜ್ಯಾಧ್ಯಕ್ಷ, ಬಿಜೆಪಿ

ಹನುಮನಕೊಪ್ಪ ಗ್ರಾಮದ ಗೊಂಬೆ ಭವಿಷ್ಯ

ರಾಜ್ಯ ರಾಜಕೀಯದಲ್ಲಿ ಬದಲಾವಣೆ ಶತಸಿದ್ಧ

▸ಶ್ರೀಶೈಲ ಗೌರಿಮಠ

ದಿಗಂತ ವಿಶೇಷ

ಉಪ್ಪಿನಬೆಟಗೇರಿ: ರಾಜ್ಯ ರಾಜಕೀಯದಲ್ಲಿ ಬದಲಾವಣೆ ಶತಸಿದ್ಧ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಥಾನ ಅಭದ್ರ ಎಂದು ಧಾರವಾಡ ತಾಲೂಕು ಉಪ್ಪಿನಬೆಟಗೇರಿಯ ಹನುಮನಕೊಪ್ಪ ಗ್ರಾಮದ ವರ್ಷದ ಯುಗಾದಿ ಫಲಾಫಲದ ಮಣ್ಣಿನ ಗೊಂಬೆ ಮೂಲಕ ಭವಿಷ್ಯ ತಿಳಿದಿದೆ.

ಗ್ರಾಮದ ತುಪ್ಪರಿ ಹಳ್ಳದ ತಟದಲ್ಲಿ ಸಂಪ್ರದಾಯಬದ್ಧವಾಗಿ ಮಣ್ಣಿನಿಂದ ನಿರ್ಮಿಸಿರುವ ಗದ್ದುಗೆಯ ಮೂಲಕ ಬೊಂಬೆಗಳ ಯುಗಾದಿ ಫಲಾಫಲದ ವರ್ಷದ ಭವಿಷ್ಯದ ಮುನ್ಸೂಚನೆಯನ್ನು ಯುಗಾದಿ ಪಾಡ್ಯೆಯ ದಿನದಂದು ಗುರುವಾರ ಬೆಳಿಗ್ಗೆ ಮಣ್ಣಿನ ಬೊಂಬೆ ಭವಿಷ್ಯದ ಮೂಲಕ ತಿಳಿಯುತ್ತದೆ. ಕೇಂದ್ರದಲ್ಲಿ ಹಲವಾರು ಅಡೆತಡೆಗಳ ನಡುವೆಯೂ ಪ್ರಧಾನಿ ಕುರ್ಚಿ ಭದ್ರವಾಗಿದ್ದು, ದೇಶದಲ್ಲಿ ಆಹಾರದ ಕೊರತೆಯಾದರೂ ಜನತೆಗೆ ಯಾವುದೇ ತೊಂದರೆಯಾಗದು. ಜಗತ್ತಿನಲ್ಲಿ ಯುದ್ಧದ ಭೀತಿ ಮುಂದುವರಿಯುವುದು, ಮಳೆಗಾಲ ಅಭದ್ರವಾಗಿದ್ದು, ರೈತಾಪಿ ವರ್ಗಕ್ಕೆ ಸಂಕಷ್ಟ, ದನಕರುಗಳಿಗೆ ರೋಗಬಾಧೆ ಉಂಟಾಗುವುದು. ಕೊಬ್ಬರಿ ಮತ್ತು ಬೆಲ್ಲಕ್ಕೆ ಬೇಡಿಕೆ ಇರುವುದು. ಧವಸ ಧಾನ್ಯಗಳಿಗೆ ಬೇಡಿಕೆ ಕಡಿಮೆ ಇದ್ದು, ಈಗಿನಂತೆ ಯಥಾಸ್ಥಿತಿ ಮುಂದುವರೆಯಲಿದೆ. ಆದರೆ, ಕಾಳು ಕಡಿ ಇಟ್ಟು ಮಾರಿದರೆ ಬೇಡಿಕೆ ಬರುವುದು ಎಂದು ಬೊಂಬೆ ಭವಿಷ್ಯದಿಂದ ಕಂಡು ಬಂದಿದೆ.

ನಂದಿಯ ಪಕ್ಕ ರೈತರ ಭವಿಷ್ಯ ತಿಳಿಸುವ ಎತ್ತುಗಳ ಹಾಗೂ ರೈತನ ಉತ್ತುವ ಬಿತ್ತುವ ಬೊಂಬೆಗಳನ್ನು ನಿರ್ಮಿಸುತ್ತಾರೆ. ಹಾಗೆಯೇ 17 ಮಳೆಗಳ ಭವಿಷ್ಯ ತಿಳಿಯುವ ಸಲುವಾಗಿ 17 ಖಾಲಿಯಿರುವ ಎಕ್ಕೆ ಎಲೆಗಳನ್ನು ಎಕ್ಕೆ ಎಲೆಯಿಂದಲೇ ಮುಚ್ಚಿರುತ್ತಾರೆ. ಇದೇ ರೀತಿ ಎಕ್ಕೆ ಎಲೆಗಳಲ್ಲಿ ಮುಂಗಾರು ಬೆಳೆಗಳಾದ ಹೆಸರು, ಉದ್ದು, ಜೋಳ, ಹತ್ತಿ, ಶೇಂಗಾ ಹಾಗೂ ಹಿಂಗಾರು ಬೆಳೆಗಳಾದ ಕಡಲೆ, ಗೋಧಿ, ಜೋಳದ ಕಾಳುಗಳನ್ನು ಹಾಕಿ ಮುಚ್ಚಿರುತ್ತಾರೆ. ಪ್ರತಿ ತಿಂಗಳಂತೆ ಆಹಾರ ಧಾನ್ಯಗಳ ಧಾರಣೆ ತಿಳಿಯುವ ಸಲುವಾಗಿ ಎಲ್ಲ ಆಹಾರ ಧಾನ್ಯಗಳನ್ನು ಎಕ್ಕೆ ಎಲೆಗಳಲ್ಲಿ ಮುಚ್ಚಿ ಆ ಎಲ್ಲ ಎಲೆಗಳ ಮೇಲೆ ಮಣ್ಣಿನ ಉಂಡೆಯನ್ನು ಇಡುತ್ತಾರೆ.



ಮಣ್ಣಿನ ಗೊಂಬೆಗಳಿಂದ ಭವಿಷ್ಯ: ಯುಗಾದಿ ಪಾಡ್ಯೆಯ ದಿನ ಬೆಳಿಗ್ಗೆ 6 ಗಂಟೆಗೆ ಯುವಕರು ಹಿರಿಯರೆಲ್ಲರೂ ಸೇರಿ ಫಲ ಕಟ್ಟಿದ ಸ್ಥಳಕ್ಕೆ ಬರುತ್ತಾರೆ. ಗದ್ದುಗೆಗೆ ಪೂಜೆ ಸಲ್ಲಿಸಿ, ಕ್ರಮಬದ್ಧವಾಗಿ ಒಂದೊಂದೇ ಪರಿಶೀಲಿಸುತ್ತಾರೆ. ನಂದಿ ನಂದಿಯ ಮೇಲೆ ಕುಳಿತಿರುವ ಶಿವ, ಪಾರ್ವತಿ, ಗಣೇಶನಿಗೆ ಯಾವುದೇ ತೊಂದರೆ ಆಗಿಲ್ಲವೆಂದರೆ ಸರ್ವವೂ ಸುಖಮಯ. ನಾಲ್ಕು ದಿಕ್ಕಿಗೆ ಇರುವ ಬೊಂಬೆಗೆ ಯಾವುದೇ ಧಕ್ಕೆ ಆಗಿಲ್ಲವೆಂದರೆ ರಾಷ್ಟ್ರ ಮತ್ತು ರಾಜ್ಯ ರಾಜಕೀಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ, ಆದರೆ ಯಾವ ದಿಕ್ಕಿನಲ್ಲಿನ ಬೊಂಬೆಗೆ ತೊಂದರೆ ಆಗುತ್ತೋ ಆ ದಿಕ್ಕಿನಲ್ಲಿರುವ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಬದಲಾವಣೆ ಹಾಗೂ ರಾಜಕಾರಣಿಗಳಿಗೆ ಮತ್ತು ಗಣ್ಯ ವ್ಯಕ್ತಿಗಳಿಗೆ ತೊಂದರೆಯಾಗುವುದು ಎಂದು ತಿಳಿಯಲಾಗುವುದು.

ಎತ್ತು ಮತ್ತು ರೈತನಿಗೆ ಯಾವುದೇ ಧಕ್ಕೆ ಆಗಿದ್ದರೆ ರೈತನಿಗೆ ಮತ್ತು ದನಕರುಗಳಿಗೆ ಅಪಾಯವಿರುತ್ತದೆ. 17 ಮಳೆಗಳ ಭವಿಷ್ಯ ತಿಳಿಸುವ ಎಕ್ಕೆ ಎಲೆಗಳನ್ನು ಒಂದೊಂದೇ ತೆಗೆದಾಗ ಯಾವ ಎಲೆಯಲ್ಲಿ ನೀರಿನ ಹನಿಗಳು ಎಷ್ಟು ಬೀಳುತ್ತವೆಯೋ ಅಷ್ಟು ಆ ಮಳೆಯು ಸಮೃದ್ಧವಾಗಿ ಆಗುವುದು ಎಂಬ ನಂಬಿಕೆಯಾಗಿದೆ. ಹನುಮನಕೊಪ್ಪದ ಚಿದಂಬರ ಶಾಸ್ತ್ರಿಗಳಿಂದ 1936 ರಿಂದ ಈ ಯುಗಾದಿ ಫಲಾಫಲ ಕಟ್ಟುವ ಸಂಪ್ರದಾಯ ಬಂದಿದ್ದು, ಅಲ್ಲಿಂದ ಇಲ್ಲಿಯವರೆಗೆ ಇಲ್ಲಿನ ಫಲಾಫಲ ಮಣ್ಣಿನ ಬೊಂಬೆ ಭವಿಷ್ಯವು ಸಾಕಷ್ಟು ಸಲ ನಿಜ ಆಗಿದೆ ಎಂದು ಹಿರಿಯರಾದ ನರಸಿಂಹರಾವ ದೀಕ್ಷಿತ, ನಾಗಪ್ಪ ಹಾರೋಬೆಳವಡಿ, ಕಲ್ಲಪ್ಪ ಬೊಬ್ಬಿ, ಶಿವಾನಂದ ಹಟ್ಟಿ, ವರ್ಧಮಾನ ಅಷ್ಟಗಿ, ಬಸವರಾಜ ಬೊಬ್ಬಿ,ಅಜೀತ ಛಬ್ಬಿ,ಶೇಕಪ್ಪ ಚಾಕೋಜಿ,ಭೀಮಪ್ಪ ಹಟ್ಟಿ ಹೇಳುತ್ತಾರೆ.

ಯುವಕನ ದುರ್ಮರಣ

ರೀಲ್ಸ್‌ಗಾಗಿ ಕಾರ್–ಬೈಕ್ ಸ್ಟಂಟ್

ಹುಬ್ಬಳ್ಳಿ: ಹದಿನೈದು ವರ್ಷದ ಬಾಲಕ ರೀಲ್ಸ್ ಮಾಡಲು ಹೋಗಿ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ಶೇಜವಾಡ್ಕರ್ ಬಡಾವಣೆಯಲ್ಲಿ ನಡೆದಿದೆ. ರವಿನಗರದ ನಿವಾಸಿ, ಬಿಜೆಪಿ ಮುಖಂಡ ವೀರೇಶ ಸಂಗಳ ಅವರ ಪುತ್ರ ನಮೀಶ್ ಸಂಗಳದ ಮೃತಪಟ್ಟಿದ್ದಾನೆ. ಕಾರು ಮತ್ತು ಸ್ಕೂಟಿ ಮಧ್ಯೆ ಆ್ಯಕ್ಷನ್ ಬ್ರೇಕ್ ರೀಲ್ಸ್ ಮಾಡಲು ಹೋಗಿ ಅಪಘಾತವಾಗಿದ್ದು, ಸ್ಥಳದಲಿಯೇ ಮೃತಪಟ್ಟಿದ್ದಾರೆ. ಉತ್ತರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಡಿ ಕಾರ್ ಮತ್ತು ಎಲೆಕ್ಟ್ರಿಕಲ್ ಸ್ಕೂಟಿ ಎದುರು ಬದುರು ವೇಗವಾಗಿ ಬಂದು ತಕ್ಷಣ ಬ್ರೇಕ್ ಹಾಕುವ(ಆ್ಯಕ್ಷನ್ ಬ್ರೇಕ್ ರೀಲ್ಸ್) ವೇಳೆ, ನಿಯಂತ್ರಣ ತಪ್ಪಿ ಕಾರ್, ಸ್ಕೂಟಿಗೆ ಡಿಕ್ಕಿ ಹೊಡೆದಿದೆ. ಸ್ಕೂಟಿಯಲ್ಲಿದ್ದ ನಮೀಶ್ ಗಂಭೀರ ಗಾಯಗೊಂಡು ಮೃತಪಟ್ಟಿದ್ದಾನೆ. ಈ ಕುರಿತು ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಮಾತನಾಡಿ, ಯುವಕ ಮೈಸೂರಿನಲ್ಲಿ ಓದುತ್ತಿದ್ದ. ಒಂಬತ್ತನೇ ತರಗತಿಯ ವಾರ್ಷಿಕ ಪರೀಕ್ಷೆ ಮುಗಿಸಿಕೊಂಡು ಯುಗಾದಿ ಹಬ್ಬಕ್ಕೆಂದು ಮನೆಗೆ ಬಂದಿದ್ದ. ಅಕ್ಕಪಕ್ಕದ ಸ್ನೇಹಿತರ ಜೊತೆ ಸೇರಿ ರೀಲ್ಸ್ ಮಾಡಲು ಹೋಗಿ ಪ್ರಾಣ ಕಳೆದುಕೊಂಡಿದ್ದಾನೆ ಎಂದರು. ಪೋಷಕರು ಅಪ್ರಾಪ್ತರಿಗೆ ವಾಹನ ನೀಡುವುದು ಸರಿಯಲ್ಲ, ಪಾಲಕರಲ್ಲಿ ಜಾಗೃತಿ ಮೂಡಿಸುತ್ತಿದ್ದರೂ, ಅವರ ಗಮನಕ್ಕೆ ಬರದೆ ಕೆಲವು ಮಕ್ಕಳು ವಾಹನ ಚಲಾಯಿಸುತ್ತಿದ್ದಾರೆ. ಈ ಕುರಿತು ಮತ್ತಷ್ಟು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮಹಿಳೆ ಕೊಲೆ ಯತ್ನ: ಆರೋಪಿ ಬಂಧನ



ಬನವಾಸಿ: ಮಹಿಳೆಯ ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ ಆರೋಪಿತನನ್ನು ಬನವಾಸಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬನವಾಸಿ ಸಮೀಪದ ನರೂರು ಗ್ರಾಮದ ಕೃಷ್ಣಮೂರ್ತಿ ಹಿರಿಯಣ್ಣ ಆಚಾರಿ ಬಂಧಿತನಾಗಿದ್ದಾನೆ. ಯಡಗೊಪ್ಪ ಗ್ರಾಮದ ಹನುಮವ್ವ ಶಿವಶಂಕರ್ ಕುರುಬರ ಕಾಣೆಯಾಗಿದ್ದು, ಬಳಿಕ ನರೂರು ಗ್ರಾಮದ ಜಮೀನಿನಲ್ಲಿರುವ ಹಲಸಿನ ಮರದ ಕೆಳಗೆ ಗಾಯಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಳು. ಗಾಯಾಳುವನ್ನು ವಿಚಾರಿಸಿದಾಗ, ಅಲ್ಪಸ್ವಲ್ಪ ಮಾತನಾಡುತ್ತ ಕೃಷ್ಣಮೂರ್ತಿ ಆಚಾರಿ ಹೊಡೆದು ಗಾಯಗೊಳಿಸಿದ್ದಾನೆ ಎಂದು ತಿಳಿಸಿದ್ದಾಳೆ. ತಕ್ಷಣ ಆಕೆಯನ್ನು ನಗರದ ಪಂಡಿತ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ, ನಂತರ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಯ ಆಸ್ಪತ್ರೆಗೆ ರವಾನಿಸಲಾಗಿದೆ. ಕೊಲೆ ಮಾಡುವ ಉದ್ದೇಶದಿಂದ ಬಲವಾದ ಆಯುಧದಿಂದ ಹಲ್ಲೆ ನಡೆಸಲಾಗಿದೆ ಎಂದು ಯಡಗೊಪ್ಪದ ಸಂಜೀವ ಶಿವಶಂಕರ್ ಕುರುಬರ ಅವರು ಬನವಾಸಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಮನೆ ಗೋಡೆ ಕುಸಿದು ಮಹಿಳೆ ಸಾವು

ಮಸ್ಕಿ: ಪಟ್ಟಣದ ದೇವಾಂಗ ಮಠದ ಬಳಿ ಶುಕ್ರವಾರ ನಡೆದ ದುರಂತದಲ್ಲಿ ಮನೆ ಗೋಡೆ ಕುಸಿದು ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ. ಮೃತರನ್ನು ಈರಮ್ಮ ದಿನ್ನಿ (60) ಎಂದು ಗುರುತಿಸಲಾಗಿದೆ. ಅವರು ಮನೆಯಲ್ಲಿ ಒಬ್ಬರೇ ವಾಸವಾಗಿದ್ದರು ಎಂದು ತಿಳಿದುಬಂದಿದೆ. ಪಟ್ಟಣದಲ್ಲಿ ಬಣ್ಣದ ಹಬ್ಬ ನಡೆಯುತ್ತಿದ್ದ ಹಿನ್ನೆಲೆಯಲ್ಲಿ, ಅವರು ಮನೆ ಬಾಗಿಲು ಹಾಕಿಕೊಂಡು ಒಳಗೆ ಮಲಗಿದ್ದ ವೇಳೆ ಗೋಡೆ ಕುಸಿದಿದ್ದು ದುರಂತ ಸಂಭವಿಸಿದೆ.

ಶಿಕ್ಷಕನಿಂದ ಲೈಂಗಿಕ ದೌರ್ಜನ್ಯ

ನವಲಗುಂದ: ಸರ್ಕಾರಿ ಪ್ರಾಥಮಿಕ ಶಾಲೆಯೊಂದರ ಮುಖ್ಯಶಿಕ್ಷಕನೇ 10 ವರ್ಷದ ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಅಮಾನವೀಯ ಕೃತ್ಯ ನವಲಗುಂದ ತಾಲೂಕಿನ ಖನ್ನೂರ ಗ್ರಾಮದಲ್ಲಿ ನಡೆದಿದೆ. ಮಾರ್ಚ್ 18ರಂದು ಸಂಜೆ 4.30 ಸುಮಾರಿಗೆ ಮುಖ್ಯಶಿಕ್ಷಕ ಬಾಲಕಿಯನ್ನು ತನ್ನ ಕಚೇರಿ ಸಮೀಪದ ಕೊಠಡಿಗೆ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಶಿಕ್ಷಕನ ವರ್ತನೆಯಿಂದ ಗಾಬರಿಗೊಂಡ ಬಾಲಕಿ ತನ್ನ ಪೋಷಕರ ಬಳಿ ನಡೆದ ಘಟನೆಯನ್ನು ಹೇಳಿಕೊಂಡಿದ್ದಾಳೆ. ಈ ಸುಬಂಧ ಬಾಲಕಿಯ ತಾಯಿ ನವಲಗುಂದ ಪೊಲೀಸ್ ಠಾಣೆಗೆ ದೂರು ನೀಡಿದ್ದಾಳೆ. ಮುಖ್ಯಶಿಕ್ಷಕನ್ನು ಬಂಧಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	1352	1352
ಕಡಲೆಬೇಳೆ	6350	6450
ಕಡಲೆಕಾಳು	1710	5359
ಉದ್ದಿನಬೇಳೆ	12898	12898
ಉದ್ದಿನಕಾಳು	1999	1999
ತೆಂಗಿನಕಾಯಿ	23000	30000
ಧನಿಯಾ	11400	11935
ಒಣ ಮೆಣಸಿನಕಾಯಿ	21000	56500
ಹೆಸರುಬೇಳೆ	9000	9501
ಬಟಾಣಿ	5800	5800
ಹೆಸರುಕಾಳು	830	4370
ಬೆಲ್ಲ	2571	3800
ಜೋಳ	1899	3816
ಮೆಕ್ಕೆಜೋಳ	1200	1811
ಮಡಿಕೆ (ಮಟಕಿ)	9501	12621
ಮೆಂತ್ಯ	4000	7665
ಸಾಸುವೆ	7097	7350
ಈರುಳ್ಳಿ	500	2200
ಆಲೂಗಡ್ಡೆ	1400	1700
ಅಕ್ಕಿ	3885	5835
ಕುಸುಬೆ	4811	5020
ಸೋಯಾಬಿನ್	4677	5556
ತೊಗರಿ	3509	5721
ತೊಗರಿ ಬೇಳೆ	6300	11501
ಗೋಧಿ	1510	3419

ಸಂಪಾದಕೀಯ

ಬಿಗಡಾಯಿಸುತ್ತಿರುವ ತೈಲ ಬಿಕ್ಕಟ್ಟು

ಇರಾನ್ – ಇಸ್ರೇಲ್ – ಅಮೆರಿಕ ನಡುವಿನ ಸಮರವು ಮೂರನೇ ವಾರಕ್ಕೆ ಕಾಲಿಟ್ಟಿರುವಂತೆಯೆ ಜಾಗತಿಕ ತೈಲ ಬಿಕ್ಕಟ್ಟು ಮತ್ತು ಅಡುಗೆ ಅನಿಲ ಪೂರೈಕೆಯ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಳ್ಳುವ ಸಂಕೇತಗಳು ಕಾಣುತ್ತಿವೆಯೆ ಹೊರತು ಶಮನಗೊಳ್ಳುವಂತೆ ತೋರುತ್ತಿಲ್ಲ. ಇದೀಗ ತೈಲ ನಿಕ್ಷೇಪಗಳ ಮೇಲೆ, ತೈಲ ಸಂಗ್ರಹಾಗಾರಗಳ ಮೇಲೆ ಕೂಡಾ ಕ್ಷಿಪಣಿ ದಾಳಿ ನಡೆಯುತ್ತಿರುವುದರಿಂದಾಗಿ ತೈಲ ಬಿಕ್ಕಟ್ಟು ಇನ್ನಷ್ಟು ಬಿಗಡಾಯಿಸುತ್ತಿರುವಂತೆ ಕಾಣುತ್ತಿದೆ.



ಇರಾನಿನ ದಕ್ಷಿಣ ಪಾರ್ಸ್ ಗ್ಯಾಸ್ ಫೀಲ್ಡ್ ಮೇಲೆ ಇಸ್ರೇಲ್ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಇರಾನ್ ಕೂಡಾ ಕುವೈತ್, ಕತಾರ್, ಬಹರೇನ್, ಅಬುದಾಬಿ ತೈಲ ನಿಕ್ಷೇಪಗಳ ಮೇಲೆ, ತೈಲ ಸಂಗ್ರಹಾಗಾರಗಳ ಮೇಲೆ ನಿರಂತರ ದಾಳಿ ನಡೆಸಲಾರಂಭಿಸಿದೆ. ಈ ಗ್ಯಾಸ್ ಫೀಲ್ಡ್ ಇರಾನಿನ ಪಾಲಿಗೆ ಜೀವನಾಡಿಯಂತಿದ್ದು, ವಿದ್ಯುತ್ ಉತ್ಪಾದನೆಗೆ, ಆಂತರಿಕ ಬಳಕೆಗೆ ಅತಿ ಮುಖ್ಯವಾಗಿದೆ. ಅದರ ಮೇಲೆ ನಡೆದ ದಾಳಿಗೆ ಇರಾನ್ ಪ್ರತೀಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಕೊಲ್ಲಿಯಲ್ಲಿ ಸಮರ ಆರಂಭವಾದಾಗಿನಿಂದ ಜಾಗತಿಕ ತೈಲ ಬೆಲೆ ಏರುತ್ತಾ ಬಂದಿದ್ದು ಈಗಂತೂ ಶೇ. 47ರಷ್ಟು ಏರಿಕೆ ಕಂಡಿದೆ ಎಂಬುದಾಗಿ ಮಾರುಕಟ್ಟೆ ಮೂಲಗಳು ಹೇಳುತ್ತಿವೆ. ಪ್ರತಿ ಬ್ಯಾರೆಲ್‌ಗೆ ತೈಲ ಬೆಲೆಯು 120 ಡಾಲರ್‌ಗೂ ಮೀರಬಹುದೆಂದು ಭೀತಿ ಪಡಲಾಗಿದ್ದು ಹಾಗಾದಲ್ಲಿ ಇದು ಜಾಗತಿಕವಾಗಿ ತೈಲ ಬೆಲೆಯನ್ನು ಗಗನಕ್ಕೇರಿಸಲಿದೆ.

ಭಾರತವು ಪೆಟ್ರೋಲ್, ಡೀಸೆಲ್ ಪೂರೈಕೆಯಲ್ಲಿ ಸದ್ಯಕ್ಕೆ ದೊಡ್ಡ ಪ್ರಮಾಣದ ಬಿಕ್ಕಟ್ಟು ಎದುರಿಸದಿದ್ದರೂ ಕೊಲ್ಲಿ ಸಮರವು ದೀರ್ಘಾವಧಿಗೆ ಎಳೆಯಲ್ಪಟ್ಟಲ್ಲಿ ತಾನೂ ಬಿಕ್ಕಟ್ಟು ಎದುರಿಸಬೇಕಾದೀತು. ಈಗಾಗಲೆ ಅಡುಗೆ ಅನಿಲದ ಸಮಸ್ಯೆಯು ದೇಶವನ್ನು ಗಂಭೀರವಾಗಿ ಕಾಡತೊಡಗಿದೆ. ಇದರ ಜತೆಗೇ ಪೆಟ್ರೋಲಿಯಂ ತೈಲಗಳ ಬೆಲೆ ಏರಿಕೆಯು ಸಹಜವಾಗಿಯೇ ಇನ್ನಿತರ ವಸ್ತುಗಳ ಬೆಲೆಯೇರಿಕೆಗೆ ಕಾರಣವಾಗಿ ದೇಶದ ಆರ್ಥಿಕತೆಯ ಮೇಲೆಯೇ ಪ್ರತಿಕೂಲ ಪರಿಣಾಮ ಬೀರಬಹುದು. ಇದರಿಂದಾಗಿ ದೇಶದ ಆರ್ಥಿಕ ಪ್ರಗತಿಯ ದರವು ಕುಂಠಿತವಾಗಬಹುದು. ಭಾರತವು ತನ್ನ ಕಚ್ಚಾ ತೈಲದ ಶೇ. 85ರಷ್ಟನ್ನು ಕೊಲ್ಲಿ ರಾಷ್ಟ್ರಗಳಿಂದಲೇ ಆಮದು ಮಾಡಿಕೊಳ್ಳುತ್ತಿರುವುದರಿಂದ ಹಾಗೂ ಹೊರ್ಮುಜ್ ಜಲಸಂಧಿ ಇನ್ನೂ ಮುಕ್ತವಾಗದಿರುವುದರಿಂದ ಸಮರವು ಮುಂದುವರಿದಷ್ಟೂ ಭಾರತಕ್ಕೆ ಹಾನಿ ಹೆಚ್ಚಾದೀತು. ಭಾರತ ಸರಕಾರವು ದೇಶದಲ್ಲಿ ತೈಲ ಪೂರೈಕೆ ಮತ್ತು ಅಡುಗೆ ಅನಿಲ ಪೂರೈಕೆ ಅಭಾದಿತವಾಗಿರಲು ಸರ್ವಪ್ರಯತ್ನಗಳನ್ನು ಮಾಡುತ್ತಿದೆಯಾದರೂ, ಸಂಭವನೀಯ ಬಿಕ್ಕಟ್ಟಿನ ಪ್ರಮಾಣ ಕಡಿಮೆ ಮಾಡುವಲ್ಲಿ ನಾಗರಿಕರ ಪಾತ್ರವೂ ಮಹತ್ವದ್ದಾಗಿದೆ. ಇಂಧನದ ಮಿತಬಳಕೆಯತ್ತ ಮತ್ತು ಪರ್ಯಾಯ ಇಂಧನ ಬಳಸುವತ್ತ ಜನರು ಕೂಡಾ ಗಮನ ಹರಿಸಬೇಕಾಗಿದೆ.

ನೀವು ವಿನಾ ಕಾರಣ ಮಾತನಾಡುತ್ತೀರಾ?

ಮಾತನಾಡುವ ಕಲೆ ನಿಮ್ಮದಾದರೆ ನೀವು ಹೇಳಿದ ಭಾವನೆಗಳನ್ನೇ ಕೇಳುಗರು ಸಹಾ ಅರ್ಥ ಮಾಡಿಕೊಳ್ಳುವುದನ್ನು ನೀವು ಕಾಣುತ್ತೀರಿ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಲೂರು
poornaprajnabelur@gmail.com



ಹೌದು, ಎಲ್ಲರೂ ವಿನಾ ಕಾರಣ ಮಾತನಾಡುವುದು ಸಾಮಾನ್ಯ. ಅದರಿಂದ ಯಾವುದೇ ಪರಿಣಾಮ ಆಗುವುದಿಲ್ಲ ಎಂದು ಎಲ್ಲರೂ ಅಂದುಕೊಂಡಿದ್ದಾರೆ. ಅತಿಯಾಗಿ ಮಾತನಾಡುವುದರಿಂದ, ಅನವಶ್ಯವಾಗಿ ಮಾತನಾಡುವುದರಿಂದ, ವಿನಾ ಕಾರಣ ಮಾತನಾಡುವುದರಿಂದ ಎಲ್ಲರಿಗೂ ಕಿರಿಕಿರಿ, ಬೇಸರ, ನೋವು, ಅವಮಾನ ಹೀಗೆ ಏನೆಲ್ಲಾ ಆಗುತ್ತದೆ. ಕೆಲವರು ಅದನ್ನು ವ್ಯಕ್ತಪಡಿಸುತ್ತಾರೆ. ಕೆಲವರು ಮನದಲ್ಲೇ ಇಟ್ಟುಕೊಂಡು ನೋವನ್ನು ಅನುಭವಿಸುತ್ತಾರೆ.

ಅತಿಯಾದ ಮಾತು ನಿಮ್ಮ ಸಂಬಂಧವನ್ನು ಒಡೆಯುತ್ತದೆ. ಹಾಗೂ ದ್ವೇಷವನ್ನು ಹುಟ್ಟುಹಾಕುತ್ತದೆ. ಮಾತಿನ ತೂಕ ತಪ್ಪಿ ಗೌರವ ಹಾಳಾಗುತ್ತದೆ. ಇತರರ ದೃಷ್ಟಿಯಲ್ಲಿ ನೀವು ಹೀನರಾಗುತ್ತೀರಿ. ಜಗಳಗಳು ಸೃಷ್ಟಿಯಾಗುತ್ತವೆ. ಅನಗತ್ಯ ವಾದಗಳು, ಪರಸ್ಪರ ಅವಹೇಳನ, ಸಮಸ್ಯೆಗಳು ಉಂಟಾಗುತ್ತವೆ. ಕೆಲವೊಮ್ಮೆ ಬಾಯಿ ಚಪಲದಿಂದಾಗಿ ಅಮಾಯಕರಿಗೆ ತೊಂದರೆಯಾಗುತ್ತದೆ. ಮನೆಯವರಿಗೆ ಇರಿಸುಮುರುಸಾಗುತ್ತದೆ. ಅದರಲ್ಲೂ ಚಾಡಿಯಂತೂ ಇನ್ನೊಬ್ಬರ ಬಾಳನ್ನೇ ಹಾಳುಮಾಡಬಹುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಬೇರೆಯವರಿಗೆ ಮಾತನಾಡಲೇ ಅವಕಾಶ ಕೊಡದಂತೆ ಮಾತನಾಡುವುದು ಗೀಳಾಗಿ ಪರಿವರ್ತನೆಯಾಗುತ್ತದೆ. ಸುಳ್ಳು ಮೊದಲಿಗೆ ಇನ್ನೊಬ್ಬರ ಬಾಳನ್ನು ಹಾಳುಮಾಡುತ್ತದೆ, ಬಳಿಕ ಅವರದೇ ಬಾಳನ್ನು ನುಂಗಿ ಹಾಕಿ ಬಿಡುತ್ತದೆ. ಹೀಗೆ ಮಾತಿನ ಸಮಸ್ಯೆಗಳು ಅಂದರೆ ಅತಿಯಾದ ಮಾತು, ಅನವಶ್ಯಕ ಮಾತು, ಚಾಡಿ ಹೇಳುವುದು, ಸುಳ್ಳು ಹೇಳುವುದು, ತುಂಬಾ ವಾದ ಮಾಡುವುದು, ಮಾತಿಗೆ ಮಾತು ಬೆಳೆಸುತ್ತಾ ಪರಸ್ಪರ ಹಳಿಯುವುದು, ಬೈಯುವುದು, ತೆಗಳುವುದು, ಕೆಟ್ಟ ಶಬ್ಧಗಳ ಬಳಕೆ ಮಾಡುವುದು. ಹೀಗೆ ಇವುಗಳಿಗೆಲ್ಲಾ ಕಾರಣ ವಿಶುದ್ಧ ಚಕ್ರದ ಅಸಮತೋಲನ.

ಮಾತನಾಡುವಾಗ ಉಗ್ಗುವುದು, ತಡೆತಡೆದು ಮಾತನಾಡುವುದು, ಸಂಕೋಚ ಪಡುವುದು, ಭಯ ಪಡುವುದು, ಗಂಟಲಿನಲ್ಲಿ ಕಿಚ್ ಕಿಚ್ ಆಗುವುದು, ಕೆಮ್ಮು ಬರುವುದು, ನಾಲಿಗೆ ಹಿಡಿದಂತೆ ಆಗುವುದು, ಮನಸ್ಸಿನಲ್ಲಿ ಒಂದು ಬಾಯಲ್ಲಿ ಇನ್ನೊಂದು ಬರುವುದು, ವಿರಾಮವೇ ಇಲ್ಲದೇ ಮಾತನಾಡುತ್ತಲೇ ಇರುವುದು, ಇನ್ನೊಬ್ಬರಿಗೆ ಮಾತನಾಡಲು ಬಿಡದೇ ಅವರನ್ನು ತಿವಿದು ತಿವಿದು ಮಾತನಾಡುವುದು ಇವೂ ಸಹಾ ವಿಶುದ್ಧ ಚಕ್ರದ ಅಸಮತೋಲನದ ಗುರುತುಗಳು. ಅದನ್ನು ನಿವಾರಿಸುವುದು, ಬಿಡುವುದು, ಸರಿಪಡಿಸುವುದು ಸುಲಭವಲ್ಲ. ಕೆಲವರಿಗೆ ಮಾತನಾಡುವ ಹುಚ್ಚೇ ಹಿಡಿದಿರುತ್ತದೆ. ಅವರಿಗೆ ಇನ್ನೊಬ್ಬರ ಮಾತೇ ಬೇಕಾಗಿಲ್ಲ. ಅಂತಹವರು ಜೀವನ ಪೂರ್ತಿ ಮಾತನಾಡುತ್ತಲೇ ಇರುತ್ತಾರೆ. ನಿಲ್ಲಿಸುವುದು ಒಂದೇ ಬಾರಿ!

ನಿಧಾನವಾಗಿ, ಸ್ಪಷ್ಟವಾಗಿ ಮಾತನಾಡುವುದು ಸರಿಪಡಿಸುವ ಮೊದಲ ಹೆಜ್ಜೆ. ನೀವು ಬಳಸುವ ಭಾಷೆ ನಾಗರಿಕ ಸಮಾಜ ಮೆಚ್ಚುವಂತೆ ಇರಬೇಕು. ಸ್ವರ ತೀರಾ ಚಿಕ್ಕದಾಗಿ ಅಲ್ಲದೇ, ಅತಿ ದೊಡ್ಡದಾಗಿ ಅಲ್ಲದೇ, ಮೃದುವಾಗಿ ಮತ್ತು ನೇರವಾಗಿ ಇರಬೇಕು. ನೀವು ಮೊದಮೊದಲು ಮಾತನಾಡಿದಾಗ ಎಲ್ಲರೂ ನಿಮ್ಮ ಮುಖವನ್ನೇ ನೋಡುತ್ತಿದ್ದಾರೆ ಎನ್ನಿಸಿತ್ತಾ?! ಆಗ ನಿಮಗೆ ಭಯ ಆತಂಕಗಳು ತಾನಾಗಿಯೇ ಬರುತ್ತವೆ. ಬಳಿಕ ನೀವು ಪ್ರಖ್ಯಾತರಾಗುತ್ತಾ ಹೋದಂತೆ, ನಿಮ್ಮ ಮಾತಿಗೆ ಬೆಲೆ ಸಿಕ್ಕಿತು. ಪರಿಣಾಮ ಗಂಟಲಿನ ಅಡಚಣೆಗಳು ಕಡಿಮೆಯಾಗುವುದು ಸಹಜ. ಎಷ್ಟೇ ಮಾತನಾಡಿದರು ಒಮ್ಮೆ ನಿಮಗೆ ಎಲ್ಲಾ ತರಹದ ಸಂಮಾನಗಳು ಸಿಕ್ಕಿದವು ಎಂದಾದರೆ ನಿಮ್ಮ ಮಾತೆಲ್ಲಾ ಮಾಣಿಕ್ಯ ಎನ್ನುವವರು ಇದ್ದಾರೆ.

ನೀವು ಪ್ರತಿಯೊಂದು ಕ್ರಿಯೆಗೂ, ಮಾತಿಗೂ, ಪ್ರಶ್ನೆಗೂ, ಉತ್ತರವನ್ನು ಮಾತಿನಲ್ಲೇ ಕೊಡಬೇಕೆಂದು ಎಂದವರು ಯಾರು. ನಿಮ್ಮ ಬಾಯಿಗಿಂತಲೂ ಪ್ರಬಲವಾದ ಕಣ್ಣುಗಳಿವೆ. ದೇಹಭಾಷೆಯನ್ನು ವ್ಯಕ್ತಪಡಿಸುವ ಕೈಗಳಿವೆ. ಮುಖವಿದೆ. ಇವುಗಳೂ ಸಹಾ ಮಾತನಾಡುತ್ತವೆ! ಪ್ರತಿಕ್ರಿಯೆಯನ್ನು ನೀಡುತ್ತವೆ!! ಭಾವನೆಗಳನ್ನು ವ್ಯಕ್ತ ಪಡಿಸಬಲ್ಲವು. ನೀವು ಪ್ರಯತ್ನ ಮಾಡಬೇಕು ಅಷ್ಟೇ!

ನೀವು ಮಾತನಾಡುವುದೇ ಆದರೆ ನಿಮ್ಮ ಸ್ವರ ಸ್ಪಷ್ಟವಾಗಿರಲಿ. ಭಾಷೆ ಯಾವುದೇ ಆದರೂ ನಿಮಗೆ ಗೊತ್ತಿರಲಿ. ಸಣ್ಣ ವಾಕ್ಯಗಳನ್ನು ಮಾಡಿ. ಅಂದರೆ ಕಡಿಮೆ ಪದಗಳಿಂದ ಕೂಡಿದ ವಾಕ್ಯಗಳನ್ನು ರಚನೆ ಮಾಡಿ ಮಾತನಾಡಿ. ಒಂದು ಸಂಗತಿ ಮುಗಿಯುವುದರ ಒಳಗೆ ಮತ್ತೊಂದು ಹೇಳಬೇಡಿ. ಕ್ರಮಬದ್ಧವಾಗಿ ಒಂದರ ನಂತರ ಇನ್ನೊಂದು ಸಂಗತಿಗಳನ್ನು ಹೇಳಿ. ಎಲ್ಲವನ್ನೂ ಒಟ್ಟಿಗೇ ಒದರಬೇಡಿ. ಹೀಗೆ ಹೇಳಲು ಪೂರ್ವ ತಯಾರಿ ಬೇಕೇಬೇಕು. ನಿಮ್ಮ ಮಾತುಗಳು ಹೆಚ್ಚು ಹೊತ್ತು ಇದ್ದರೆ ಕೇಳುಗರಿಗೆ ಬೇಸರ ಬರಬಹುದು. ಅದಕ್ಕಾಗಿ ಮಧ್ಯೆ ವಿಷಯಕ್ಕೆ ಪೂರಕವಾದ ಒಂದು ಆಟ ಆಡಿಸಿ. ಅಥವಾ ಕತೆ ಹೇಳಿ. ತಮಾಷೆ ಮಾಡಿ. ಆಡುವ ಮಾತುಗಳಲ್ಲಿ ಭಾವನೆಗಳಿಗೆ ತಕ್ಕಂತಹಾ ಏರಿಳಿತಗಳು ಇರಲಿ. ರಸಗಳು ತುಂಬಿರಲಿ. ನೀವು ಆಡುವ ಮಾತಿನ ಸತ್ಯ ಮತ್ತು ನಿಮ್ಮ ದೇಹ ಭಾಷೆ ಒಂದಕ್ಕೊಂದು ಪೂರಕವಾಗಿರಲಿ. ಮಾತನಾಡುವಾಗ ನಿಮ್ಮ ಮುಖದಲ್ಲಿ ಒಂದು ಸಣ್ಣ ಕಿರುನಗು ಇದ್ದರೆ ನೀವು ಆತ್ಮವಿಶ್ವಾಸದಿಂದ ಮಾತನಾಡಲು ಸಾಧ್ಯ ಎಂದು ಒಬ್ಬ ಶಿಷ್ಯನಲ್ಲಿ ಹೇಳಿದ್ದೆ. ಒಬ್ಬ ಗೆಳೆಯನ ತಂದೆ ತೀರಿಹೋಗಿದ್ದರು. ಅವರನ್ನು ಮಾತನಾಡಿಸಲು ಹೋಗಿದ್ದೆವು. ಈ ನನ್ನ ಶಿಷ್ಯ ಬಾಯಿ ತುಂಬಾ ನಗುತ್ತಾ "ನಿಮ್ಮ ತಂದೆ ತೀರಿ ಹೋಗಿರುವುದು ಎಲ್ಲರಿಗೂ ತುಂಬಾ ದುಃಖದ ಸಂಗತಿ ಎಂದು ಪ್ರಾರಂಭಿಸಿದರು. ಅವರ ಮಕ್ಕಳಾದ ನೀವು ಅವರ ದಾರಿಯಲ್ಲೇ ನಡೆಯಿರಿ ಎಂದು ಹೇಳಿದರು" ಪಕ್ಕದಲ್ಲಿದ್ದ ನನಗೆ ಏನಪ್ಪಾ ಹೀಗೆಲ್ಲಾ ಮಾತನಾಡುತ್ತಿದ್ದಾನೆ ಎಂದುಕೊಳ್ಳುತ್ತಿರುವಂತೆ ನನ್ನ ಕಡೆಯೇ ತಿರುಗಿ, ನನ್ನ ಮಾತು ಮತ್ತು ಭಾವನೆಗಳು ಎಲ್ಲಾ ಸರಿಯಗಿದೆಯಾ ಸಾರ್ ಎಂದು ಕೇಳಿದ. ಗೆಳೆಯ ನಮ್ಮಿಬ್ಬರನ್ನೂ ಸಿಟ್ಟಿನಿಂದ ನೋಡಿ ಇನ್ನೊಬ್ಬರನ್ನು ಮಾತನಾಡಿಸಲು ಹೋದ.

ನಿಮ್ಮ ಮನದಾಳದ ಮಾತುಗಳಾದರೆ ಅವು ಯಾವತ್ತೂ ಸಹಾನುಭೂತಿಯ ಜೊತೆ ನೇರವಾಗಿ ಇರುತ್ತದೆ. ಮತ್ತು ತಪ್ಪು ಗ್ರಹಿಕೆಯಾಗದಂತೆ ಪದಗಳ ಜೋಡಣೆ ಇರುತ್ತದೆ. ಅದು ಮನದಿಂದ ಬಂದ ಕಾರಣ ಅದಕ್ಕೆ ವಾದ ಇರುವುದಿಲ್ಲ, ಪೂರಕವಾದ ಸಂಗತಿಗಳು ಇರುತ್ತವೆ. ಅಥವಾ ಮೌನದ ಜೊತೆ ಇರುತ್ತದೆ. ನೀವದನ್ನು ಕೇಳಿಸಿಕೊಳ್ಳುತ್ತೀರಿ ಮತ್ತು ತಲೆದೂಗುತ್ತೀರಿ ಅಥವಾ ನಿಮಗದನ್ನು ಅನ್ವಯಿಸಿಕೊಳ್ಳುತ್ತೀರಿ. ಅದರಲ್ಲಿ ಯಾವುದೇ ಸಂಘರ್ಷ ಇರುವುದಿಲ್ಲ.

ಮಾತನಾಡುವ ಕಲೆ ನಿಮ್ಮದಾದರೆ ನೀವು ಭಾವನೆಗಳನ್ನು ಸೂಕ್ತವಾಗಿ ವ್ಯಕ್ತ ಪಡಿಸುವುದಷ್ಟೇ ಅಲ್ಲ, ನೀವು ಹೇಳಿದ ಭಾವನೆಗಳನ್ನೇ ಕೇಳುಗರು ಸಹಾ ಅರ್ಥ ಮಾಡಿಕೊಳ್ಳುವುದನ್ನು ನೀವು ಕಾಣುತ್ತೀರಿ. ನಿಮ್ಮ ಆಲೋಚನೆಗಳೆಲ್ಲಾ ನಿರ್ದಿಷ್ಟವಾದ ಪದಗಳಾಗಿ ಬದಲಾಗುತ್ತವೆ. ಅಂದರೆ ಹೃದಯ ಮತ್ತು ಮಿದುಳು ಜೊತೆಗೂಡುತ್ತವೆ. ಪರಿಣಾಮ ನಿಮ್ಮೊಳಗೆ ಒಂದು ಶಾಂತಿ ನೆಲೆಸುತ್ತದೆ. ಸೂಕ್ತವಾಗಿ ಹೊರ ಹಾಕಿದೆ ಎನ್ನುವ ನೆಮ್ಮದಿ ಅದು.

ವೃತ್ತಿಪರ ಮಾತುಗಳು

ಸಭೆಗಳು ಮತ್ತು ಸಮಾರಂಭಗಳು ನಿಮ್ಮನ್ನು ಅಗ್ನಿದಿವ್ಯಕ್ಕೆ ಒಳಗಾಗಿಸುತ್ತವೆ. ಅಂದರೆ ನಿಮ್ಮ ಸಾಮರ್ಥ್ಯವನ್ನು ನಿರ್ಣಯ ಮಾಡುವ ವೇದಿಕೆಗಳು. ಅಲ್ಲಿ ನಿಮ್ಮ ಮಾತೇ ನಿಮ್ಮ ವ್ಯಕ್ತಿತ್ವವನ್ನು ನಿರ್ಣಯಿಸುತ್ತದೆ. ನಿಮ್ಮ ದೇಹ ಭಾಷೆ, ನಿಮ್ಮ ನಿಲುವು, ನಿಮ್ಮ ತೀರ್ಮಾನಗಳು, ನಿಮ್ಮ ದೃಷ್ಟಿಕೋನ ಇವೆಲ್ಲವೂ ಅಲ್ಲಿ ಎಲ್ಲರಿಗೂ ಕಾಣುತ್ತದೆ. ನೀವು ನೀವಾಡುವ ಮಾತಿನಿಂದ ಮಾತ್ರವಲ್ಲ, ನಿಮ್ಮ ಎಲ್ಲಾ ರೀತಿಯ ಚರ್ಯೆಗಳಿಂದ ಗುರುತಿಸಲ್ಪಡುತ್ತೀರಿ. ನಿಮಗೆ ಅಲ್ಲಿ ಯಾವುದನ್ನೂ ಮುಚ್ಚಿಡಲು ಆಗುವುದಿಲ್ಲ. ನಿಮ್ಮ ಭಯ, ಆತಂಕಗಳು, ನಿಮ್ಮ ಒರಟುತನ, ನಿಮ್ಮ ಮೃದುತ್ವ, ನಿಮ್ಮ ಆಲೋಚನಾ ರೀತಿಗಳು ಹೀಗೆ ಎಲ್ಲವೂ ನಿಮ್ಮ ವರ್ತನೆಯಿಂದಲೇ ಸಾರ್ವಜನಿಕರಿಗೆ ತಿಳಿದುಹೋಗುತ್ತದೆ. ಹೀಗಾಗಿ ನೀವು ಯಾರು, ಏನು, ಹೇಗೆ ಎನ್ನುವುದೆಲ್ಲಾ ಸಾರ್ವಜನಿಕ ಬದುಕಿನಲ್ಲಿ ಬಹಿರಂಗವಾಗುತ್ತದೆ.

ನೀವು ಮಾತನಾಡುವ ಸಭೆ ಅಥವಾ ಸಮಾರಂಭ ಯಾವುದು ಎನ್ನುವ ಅರಿವನ್ನು ಮೊದಲೇ ತಿಳಿದುಕೊಳ್ಳುವುದು ಒಳ್ಳೆಯದು. ಅದು ಬೃಹತ್ ಬಹಿರಂಗ ಸಭೆಯೋ, ಸಾಮಾನ್ಯ ಸಭೆಯೋ, ಗ್ರಾಮ ಸಭೆಯೋ ಅಥವಾ ನಿರ್ದೇಶಕರ ಸಭೆಯೋ ಹೀಗೆ ನಾನಾ ರೀತಿಯ ಸಭೆಗಳ ಕುರಿತು ನಿಮಗೆ ಮೊದಲೇ ಮಾಹಿತಿ ಇದ್ದರೆ ನೀವು ಅದಕ್ಕೆ ಬೇಕಾದ ಪೂರ್ವ ತಯಾರಿಯನ್ನು ಮಾಡಿಕೊಳ್ಳುವುದು ಸುಲಭವಾಗುತ್ತದೆ. ಸಭೆಯಲ್ಲಿ ಚರ್ಚಿಸುವ ವಿಷಯಗಳ ಅರಿವೂ ಸಹಾ ತುಂಬಾ ಮುಖ್ಯ. ಅಲ್ಲಿ ನೀವು ಯಾವ ಉದ್ದೇಶದಿಂದ ಮಾತನಾಡಲು ಹೋಗುತ್ತೀರಿ ಎನ್ನುವುದು ನಿಮಗೆ ಗೊತ್ತಿರಬೇಕು. ನೀವು ವಿರೋಧಿಗಳೋ, ಪರವಾಗಿರುವವರೋ, ಅಥವಾ ಪ್ರತಿಕ್ರಿಯಿಸುವವರೋ ಎನ್ನುವುದನ್ನು ತಿಳಿದುಕೊಂಡು ಅದಕ್ಕೆ ತಕ್ಕ ತಯಾರಿಯೂ ಸಹಾ ಅಗತ್ಯ. ಹೀಗೆ ನೀವು ಬಾಲ್ಯದಿಂದಲೇ ಕಲಿಯುತ್ತಾ ಹೋದಂತೆ ನಿಮ್ಮ ವಿಶುದ್ಧ ಚಕ್ರ ಸದಾ ಸಮತೋಲನದಲ್ಲಿ ಇರುತ್ತದೆ.

ಸಮಾರಂಭಗಳಲ್ಲಿ ನೀವು ತುಂಬಾ ವಿಶೇಷವಾಗಿ ಮಾತನಾಡಬೇಕಾಗುತ್ತದೆ. ಅದು ಮದುವೆಯೋ, ವೈಕುಂಠ ಸಮಾರಾಧನೆಯೋ, ಹೋಮ ಹವನಗಳೋ, ನವರಾತ್ರಿ ಪೂಜೆಯೋ, ಸತ್ಯನಾರಾಯಣ ಕತೆಯೋ, ವಿದ್ವದ್ ಜನರ ಸಮಾವೇಶವೋ, ಹೀಗೆ ಯಾವುದು ಸಮಾರಂಭ ಎನ್ನುವುದು ತುಂಬಾ ಮುಖ್ಯ. ಇಲ್ಲದಿದ್ದರೆ ನೀವು ಜನರ ಮಧ್ಯೆ ಕಳೆದುಹೋಗುತ್ತೀರಿ. ನೀವು ತಮಾಷೆ ಮಾಡುವುದು ಮತ್ತು ನಿಮ್ಮನ್ನೇ ನೀವು ತಮಾಷೆಗೆ ಒಳಪಡಿಸಿಕೊಳ್ಳುವುದನ್ನು ಕಲಿತಿರಬೇಕು. ಗಂಭೀರವಾದ ವಿಷಯವನ್ನು ಮಾತನಾಡುವಾಗ ಅದರ ಸಂಪೂರ್ಣ ಜ್ಞಾನವನ್ನು ಪಡೆದುಕೊಂಡಿರಬೇಕು. ಮಾಹಿತಿಗಳು ಗೊತ್ತಿರಬೇಕು. ಆಗ ನಿಮ್ಮ ಮಾತು ಮೌಲ್ಯಯುತವಾಗಿರುತ್ತದೆ.

ಆತತಾಯಿಗಳು

ಅಗ್ನಿದೋ ದಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ।
ಕ್ಷೇತ್ರಧಾರಾಹರಶ್ಚೈವ ಷಡೇತೇ ಆತತಾಯಿನಃ॥

ಬೇರೆಯವರ ಆಸ್ತಿಗೆ ಬೆಂಕಿಯಿಡುವವ, ಪರರ ಬದುಕಿಗೆ ವಿಷವನ್ನು ಇಕ್ಕುವವ, ಆಯುಧ ಹಿಡಿದ ಕೊಲೆಗಾರ, ಸಂಪತ್ತನ್ನು ಅಪಹರಿಸುವವ, ಭೂಮಿಯನ್ನು ಕಬಳಿಸುವವ ಮತ್ತು ಪರಸ್ತ್ರೀಯನ್ನು ಅಪಹರಿಸುವವ– ಈ ಆರು ಬಗೆಯ ಜನರು ಆತತಾಯಿಗಳು– ಎಂಬುದು ಶ್ಲೋಕಾರ್ಥ.

ಆತತಾಯಿಗಳು ಎಂದರೆ ಕೊಲ್ಲುವ ಪ್ರಯತ್ನವುಳ್ಳವನು, ಕೊಲ್ಲುವ ಸ್ವಭಾವದವನು, ಇತರರನ್ನು ಹಿಂಸಿಸುವವನು ಎಂದರ್ಥ. ಸ್ವಾರ್ಥಕ್ಕಾಗಿಯೋ ವಿಕ್ಷಿಪ್ತ ಆತ್ಮಸಂತೋಷಕ್ಕಾಗಿಯೋ ಬೇರೆ ಬೇರೆ ಕಾರಣಕ್ಕಾಗಿ ಪರರನ್ನು ಹಿಂಸಿಸಿ ವಿಕೃತ ಖುಷಿಯನ್ನು ಅನುಭವಿಸುವ ಮಾನಸಿಕ ಸ್ಥಿತಿ ಇವರದು. ಇವರ ಮನಸ್ಸೇ ವಿಕ್ಷಿಪ್ತ. ಯಾವೆಲ್ಲ ಕಾರಣಕ್ಕಾಗಿ ಇವರು ಈ ರೀತಿ ವರ್ತಿಸುತ್ತಾರೆ ಎಂಬುದು ಊಹಿಸುವುದು ಕಷ್ಟ. ಆದರೂ ಪ್ರಕೃತ ಶ್ಲೋಕದಲ್ಲಿ ಆತತಾಯಿಗಳ ಆರು ಅಂಶವನ್ನು ಗುರುತಿಸಿ ನೀಡಲಾಗಿದೆ.



ಬೇರೆಯವರ ಆಸ್ತಿಗೆ ಬೆಂಕಿಯಿಡುವವರು ಆತತಾಯಿಗಳು. ಇವರಿಗೆ ಇನ್ನೊಬ್ಬರ ಸಂಪತ್ತು, ಆಸ್ತಿ, ಬೆಳವಣಿಗೆ ಇವುಗಳನ್ನು ನೋಡಿ ಸಹಿಸಿಕೊಳ್ಳಲು ಆಗುವುದಿಲ್ಲ. ಇತರರು ಸಂತೋಷದಿಂದ ಬದುಕುವುದನ್ನು ನೋಡಿ ಸಹಿಸಲಾರದೇ ಅವರನ್ನು ಹಾಳು ಮಾಡುವ ಕುತ್ಸಿತ ಮಾನಸಿಕತೆ ಇವರದ್ದು. ತಾವಂತೂ ಚೆನ್ನಾಗಿ ಬದುಕರು. ಚೆನ್ನಾಗಿ ಬದುಕುವವರನ್ನು ನೋಡಿ, ಮಾರ್ಗದರ್ಶನ ಪಡೆದು ತಾವೂ ಚೆನ್ನಾಗಿ ಬದುಕಲು ಬಯಸಬೇಕು. ಇದಕ್ಕೆ ಬದಲಾಗಿ ಚೆನ್ನಾಗಿರುವವರನ್ನು ನೋಡಿ ವಿಷಕಕ್ಕುವವರು, ವಿಷವಿಕ್ಕುವವರು ಆತತಾಯಿಗಳೆನಿಸುತ್ತಾರೆ. ಇವರಲ್ಲಿ ಮಾನವೀಯತೆ, ಸಭ್ಯತೆ, ಸಜ್ಜನಿಕೆ ಎಂದೆಂದೂ ಅರಳುವುದಿಲ್ಲ.

ಆಯುಧಾದಿಗಳನ್ನು ಹಿಡಿದು ಕೊಲ್ಲಲು ಮುಂದಾಗುವವರು, ಕೊಲ್ಲುವವರು ಆತತಾಯಿಗಳು. ಇವರು ಸ್ವಾರ್ಥಿಗಳಾಗಿರಬಹುದು ಅಥವಾ ಮತಾಂಧರಾಗಿರಬಹುದು. ಇವರಿಗೆ ಸ್ವಂತದಾದ ಉದ್ದೇಶವಿರುತ್ತದೆ. ಅದನ್ನು ಸಾಧಿಸಲು ಕೊಲ್ಲುವುದಕ್ಕೂ ಹೇಸುವುದಿಲ್ಲ. ಸ್ವಾರ್ಥ ಸಾಧನೆಯ ಮುಂದೆ ಯಾವ ಸಂಬಂಧವೂ ಇರುವುದಿಲ್ಲ.

ಇನ್ನೊಂದು ಬಗೆಯ ಆತತಾಯಿಗಳು ಸಂಪತ್ತನ್ನು ಅಪಹರಿಸುವವರು. ಇವರಿಗೆ ಹೇಗಾದರೂ ಮಾಡಿ ಸಂಪತ್ತನ್ನು ಕೂಡಿಹಾಕುವ ದುರಾಸೆ ಇರುತ್ತದೆ. ಸಂಪತ್ತಿನ ಗಳಿಕೆಗಾಗಿ ಯಾವ ಮಾರ್ಗವನ್ನೂ ತುಳಿಯಬಲ್ಲರು. ಕೊಲೆ, ಸುಲಿಗೆ, ವಂಚನೆ, ಮೋಸ.. ಇದಾವ ಪ್ರಶ್ನೆಯೂ ಇರುವುದಿಲ್ಲ. ತನ್ನವರು, ಬೇರೆಯವರು, ಸಜ್ಜನರು... ಇತ್ಯಾದಿ ಯಾವ ಭಾವನೆಯೂ ಇರುವುದಿಲ್ಲ. ಪಾಪ–ಪುಣ್ಯದ ಗೊಡವೆಯೂ ಇಲ್ಲದೆ ಯೇನಕೇನ ಪ್ರಕಾರೇಣ ಹಣ ಗಳಿಸಲು ಮುಂದಾಗುವವರೂ ಆತತಾಯಿಗಳೆನಿಸುತ್ತಾರೆ.

ಆಸ್ತಿಯನ್ನು ಕಬಳಿಸುವ ಸ್ವಭಾವದವರೂ ಆತತಾಯಿಗಳೇ. ಇಂಚಿಂಚಾಗಿ ಆಸ್ತಿಯನ್ನು ಕಬಳಿಸುವವರಿದ್ದಾರೆ. ಮೋಸದಿಂದ ಆಸ್ತಿಯನ್ನು ತಮ್ಮದಾಗಿಸಿಕೊಳ್ಳುವವರಿದ್ದಾರೆ. ತಮ್ಮದಲ್ಲದ ಆಸ್ತಿಯನ್ನು ಕೊಲೆ, ಮೋಸ, ಸುಲಿಗೆ ವಂಚನೆಗಳ ಮೂಲಕ ಹೊಡೆದು ತಿನ್ನುವವರೂ ಆತತಾಯಿಗಳು. ಪರಸ್ತ್ರೀಯರನ್ನು ಅಪಹರಿಸುವವರು ಒಂದು ಬಗೆಯ ಆತತಾಯಿಗಳು. ಆಸೆ ತೋರಿಸಿ, ಉಪಕಾರ ಮಾಡುವವರಂತೆ ನಟಿಸಿ, ಪರಮ ಹಿತೈಷಿಯಂತೆ ತೋರಿಸಿಕೊಂಡು, ಆತ್ಮೀಯತೆಯ ನಾಟಕವಾಡಿ, ಪ್ರೀತಿಯ ನೆಪವೊಡ್ಡಿ ಪರಸ್ತ್ರೀಯರನ್ನು, ಹುಡುಗಿಯರನ್ನು ಅಪಹರಿಸುವವರಿದ್ದಾರೆ. 'ಬ್ಲಾಕ್‌ಮೇಲ್' ತಂತ್ರದ ಮೂಲಕ ಅಪಹರಿಸುವವರಿದ್ದಾರೆ. ಇವರು ಆತತಾಯಿಗಳಲ್ಲದೆ ಮತ್ತಾರು?

ಈ ಬಗೆಯ ಜನರೆಲ್ಲರೂ ಆತತಾಯಿಗಳೇ. ಇಂಥವರ ಬಗ್ಗೆ ನಾವು ಯಾವಾಗಲೂ ಜಾಗ್ರತವಾಗಿರಬೇಕು. ಸಮಾಜವನ್ನು ಎಚ್ಚರಗೊಳಿಸಬೇಕು. ಇದು ಲೋಕಹಿತೈಷಿಗಳ ಆದ್ಯ ಕರ್ತವ್ಯವಾಗಿದೆ.

ಸಂಘ ಶಾಖೆ – ಪುರುಷಸಿಂಹರ ನಿರ್ಮಾಣ ಕೇಂದ್ರ

ಒಳನೋಟ
• ಹೆ.ಬಾ. ಮಲ್ಯ



ಗುರೂಜೀ ಗೋಳ್ವಲ್ಕರ್ ಅವರು ಆಗಾಗ ಒಂದು ಶ್ಲೋಕವನ್ನು ಉಲ್ಲೇಖಿಸುತ್ತಿದ್ದರು –

"ನಾಭಿಷೇಕೋ ನ ಸಂಸ್ಕಾರಃ ಸಿಂಹಸ್ಯಕ್ರಿಯತೇವನೈಃ।
ವಿಕ್ರಮಾರ್ಜಿತ ಸತ್ವಸ್ಯ ಸ್ವಯಮೇವ ಮೃಗೇಂದ್ರತಾ॥

"ಸಿಂಹಕ್ಕೆ ಯಾರೋ ಬೇರೆಯವರು ರಾಜಾಭಿಷೇಕವನ್ನು, ಇತರ ಸಂಸ್ಕಾರಗಳನ್ನು ಮಾಡುವುದಿಲ್ಲ. ಅದು ತನ್ನ ಸ್ವಯಂ ಪರಾಕ್ರಮದಿಂದ ಗಳಿಸಿದ ಬಲದಿಂದ ಮೃಗರಾಜ ಎನಿಸಿಕೊಂಡಿದೆ"

ಕಾಡಿನಲ್ಲಿ ಹುಲಿ, ಚಿರತೆ, ಆನೆ, ಜಿರಾಫೆಯಂಥ ನೂರಾರು ಜಾತಿಯ ಪ್ರಾಣಿಗಳಿವೆ. ಆದರೆ ಅವುಗಳನ್ನು ಯಾರೂ ಮೃಗರಾಜ ಎನ್ನುವುದಿಲ್ಲ. ಸಿಂಹದಲ್ಲಿ ಧೈರ್ಯ, ಸಾಹಸ, ಬಲ, ಆತ್ಮವಿಶ್ವಾಸ ಮುಂತಾದ ಗುಣಗಳಿರುವುದರಿಂದ ಅದು ಕಾಡಿನ ಅನಭಿಷಕ್ತ ರಾಜ ಎನಿಸಿಕೊಂಡಿದೆ. ಮನುಷ್ಯರಲ್ಲೂ ಅಷ್ಟೇ–ಧೈರ್ಯ, ಸಾಹಸ, ಮುನ್ನುಗ್ಗುವಿಕೆಯ ಸ್ವಭಾವ, ಛಲ, ಪರಿಶ್ರಮ, ಏಕಾಂತಿಕನಿಷ್ಠೆ, ಆತ್ಮವಿಶ್ವಾಸ ಇವೇ ಮುಂತಾದ ಶ್ರೇಷ್ಠ ಗುಣಗಳಿದ್ದವನೇ ನಾಯಕನಾಗುತ್ತಾನೆ. Survival of the fittest (ಬಲಿಷ್ಠ ಮಾತ್ರ ಬದುಕಬಲ್ಲ) ಎಂಬುದು ಪಾಶ್ಚಾತ್ಯ ಡಾರ್ವಿನಿಯನ್ ಕಲ್ಪನೆ. ಆದರೆ ಭಾರತದ ಕಲ್ಪನೆಯೇ ಬೇರೆ. ಇಲ್ಲಿ ಬಲದೊಡನೆ ಧರ್ಮರಕ್ಷಣೆ, ಪ್ರಜಾಹಿತ, ದುಷ್ಟನಾಶ, ಶಿಷ್ಟರ ರಕ್ಷಣೆ ಮಾಡುವವನೇ ಶ್ರೇಷ್ಠ ಹಾಗೂ ಆದರ್ಶ ನಾಯಕ ಎನಿಸಿಕೊಳ್ಳುತ್ತಾನೆ. ಅಂಥವನೇ ಆಳಲು, ಚಕ್ರವರ್ತಿಯಾಗಲು ಅರ್ಹತೆ ಉಳ್ಳವನು ಎಂಬ ಭಾವನೆ ಇದೆ. ರಾವಣನಂತೆ ಕೇವಲ ಬಲವಿದ್ದರೆ ಸಾಲದು. ಧರ್ಮದಂತೆ ನಡೆಯುವವನಾಗಬೇಕು. ಇದು ಮಾನದಂಡ. ಅದಕ್ಕೆ ಶ್ರೀರಾಮ, ಶ್ರೀಕೃಷ್ಣ, ಛತ್ರಪತಿ ಶಿವಾಜಿ ಮುಂತಾದವರು ಅವತಾರಿ ಪುರುಷರೆನಿಸಿಕೊಂಡರು.

ಪ್ರಾಣಿಗಳು ಪ್ರಕೃತಿಗೆ ಅನುಗುಣವಾಗಿ ಜೀವಿಸುತ್ತವೆ. ಅವಕ್ಕೆ ಬುದ್ಧಿ ಕಡಿಮೆ. ಮನುಷ್ಯ ಹಾಗಲ್ಲ, ದೇವರು ಅವನಿಗೆ ಹೆಚ್ಚಿನ ಬುದ್ಧಿಶಕ್ತಿ, ವಿವೇಚನಾ ಶಕ್ತಿ, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಕೊಟ್ಟಿದ್ದಾನೆ. ಅವನಲ್ಲಿ ಭಾವನೆಗಳನ್ನು ತುಂಬಿದ್ದಾನೆ. ಈ ಎಲ್ಲಾ ಶಕ್ತಿಗಳಿರುವುದರಿಂದಲೇ ಮಾನವ, ಪ್ರಾಣಿಲೋಕದ ಮೇಲೆ ಅಧಿಪತ್ಯ ಸಾಧಿಸಿದ್ದಾನೆ. ಆನೆ, ಹುಲಿ, ಸಿಂಹಗಳನ್ನು ಪಳಗಿಸಿ ತನ್ನ ಅಂಕೆಯಲ್ಲಿರಿಸಿಕೊಳ್ಳುವ ಬುದ್ಧಿಶಕ್ತಿ, ಸಾಮರ್ಥ್ಯಗಳನ್ನು ಹೊಂದಿದ್ದಾನೆ. ಪ್ರಾಣಿಗಳಿಗೂ ಮನುಷ್ಯನಿಗೂ ಇರುವ ಮುಖ್ಯ ವ್ಯತ್ಯಾಸವೇನು?:–

ಆಹಾರನಿದ್ರಾಭಯಮೈಥುನಂ ಚ ಸಾಮಾನ್ಯಮೇತತ್ ಪಶುಭಿರ್ನರಾಣಾಮ್।
ಧರ್ಮೋಹಿತೇಷಾಮಧಿಕೋ ವಿಶೇಷೋ ಧರ್ಮೇಣಹೀನಾಃ ಪಶುಭಿಃ ಸಮಾನಾಃ॥

"ಆಹಾರ, ನಿದ್ರೆ, ಭಯ, ಲೈಂಗಿಕತೆ ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಸಮಾನ ಹಾಗೂ ಪ್ರಕೃತಿ ಸಹಜವಾದ ಸ್ವಭಾವಗಳು. ಆದರೆ ಪ್ರಾಣಿ ಮತ್ತು ಮನುಷ್ಯರಲ್ಲಿ ವ್ಯತ್ಯಾಸ ತೋರಿಸುವ ಗುಣವೆಂದರೆ ಅದು ಧರ್ಮ. ಧರ್ಮವಿಹೀನವಾದ ಮನುಷ್ಯ ಪ್ರಾಣಿಗೆ ಸಮಾನ". ಇದು ಈ ಸುಭಾಷಿತದ ಅರ್ಥ. ಮನುಷ್ಯ ಜೀವನದ ಉದ್ದೇಶ ನರನನ್ನು ನಾರಾಯಣನನ್ನಾಗಿ ರೂಪಿಸುವುದು. ಶ್ರೇಷ್ಠ ಸಂಸ್ಕಾರ ಹಾಗೂ ಶಿಕ್ಷಣದಿಂದ ಇದನ್ನು ಸಾಧಿಸಲು ಸಾಧ್ಯ. ಇಂದು ಹಿಂದುಗಳು ಧರ್ಮವನ್ನು ಮರೆಯುತ್ತಿದ್ದಾರೆ. ಆದರಿಂದಲೆ ಎಲ್ಲ ಸಮಸ್ಯೆಗಳು. ವಿಶೇಷವಾಗಿ ಮುಸ್ಲಿಂ ಭಯೋತ್ಪಾದಕರ ಹಾಗೂ ವಿದೇಶೀ ಕ್ರೈಸ್ತ ಮತಾಂತರಿ ಮಿಷನರಿಗಳ ಸಮಸ್ಯೆ. ಇವುಗಳನ್ನೆದುರಿಸಲು ಹಿಂದುಗಳನ್ನು ಪುರುಷ ಸಿಂಹರನ್ನಾಗಿ ರೂಪಿಸಬೇಕಾಗಿದೆ. ಡಾಕ್ಟರ್‌ಜೀ ಮುಂದೆ ಬರಲಿರುವ ಅಪಾಯವನ್ನು ಮನಗಂಡು ರಾ.ಸ್ವ.ಸಂಘವನ್ನು ಸ್ಥಾಪಿಸಿದರು. ದೈನಂದಿನ ಸಂಘ ಶಾಖೆಗಳೇ ಈ ಸಂಸ್ಕಾರ ಶಿಕ್ಷಣ ನೀಡುವ ಕೇಂದ್ರಗಳು. ನೂರು ವರ್ಷಗಳಲ್ಲಿ ಈ ಶಾಖಾ ಶಿಕ್ಷಣ ಅದ್ಭುತ ಫಲ ನೀಡಿದೆ. ಇನ್ನೂ ಹೆಚ್ಚಿನ ಶಕ್ತಿ, ಧೈರ್ಯ–ಸಾಹಸ, ಮುನ್ನುಗ್ಗುವ, ದುಷ್ಟರ ವಿರುದ್ಧ ಹೋರಾಡಿ ಸದೆ ಬಡಿಯುವ ಸ್ವಭಾವವನ್ನು ಹಿಂದುಗಳಲ್ಲಿ ಬೆಳೆಸಬೇಕಾಗಿದೆ. ಸ್ವಯಂಸೇವಕರು, ಕಾರ್ಯಕರ್ತರಲ್ಲಿ ಈ ಸ್ವಭಾವಗಳು ಒಂದಷ್ಟರ ಮಟ್ಟಿಗೆ ವಿಕಾಸಗೊಂಡಿವೆ. ಆದರೆ ಸಮಸ್ತ ಹಿಂದುಗಳಲ್ಲಿ ಈ ಹೋರಾಡುವ ಸ್ವಭಾವ ಬೆಳೆಸಬೇಕಾಗಿದೆ. ಸಾಮಾನ್ಯ ಹಿಂದುಗಳನ್ನೂ ಪುರುಷಸಿಂಹರನ್ನಾಗಿ ರೂಪಿಸಬೇಕಾಗಿದೆ. ಪುರಾಣಕಾಲದಲ್ಲಿ ಭಾರತ ವಿಶ್ವಗುರು ಹಾಗೂ ವಿಶ್ವವಿಜಯಿಯಾಗಿತ್ತು ಎಂಬುದನ್ನು ಕೇಳಿದ್ದೇವೆ. ಗುರುಕುಲಗಳ ಅದ್ಭುತ ಶಿಕ್ಷಣ ವ್ಯವಸ್ಥೆ ಇಂಥ ಪುರುಷಸಿಂಹರನ್ನು ರೂಪಿಸುತ್ತಿತ್ತು. ಇಂದು ಪಾಶ್ಚಾತ್ಯ ಮೆಕಾಲೆ ಶಿಕ್ಷಣ ಹಿಂದುಗಳಲ್ಲಿನ ಈ ಸಂಸ್ಕಾರಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕಿ ದಾಸ್ಯ ಮನೋಭಾವವನ್ನು ಬೆಳೆಸಿದೆ. ಮೊದಲು ಈ ಮಾನಸಿಕ ದಾಸ್ಯವನ್ನು ತೊಡೆದು ಹಾಕುವ ಅಗತ್ಯವಿದೆ.

ಮನುಷ್ಯ ಪ್ರಾಣಿಗಳನ್ನು ಅಂಕಿತದಲ್ಲಿಟ್ಟುಕೊಂಡಿದ್ದಾನೆ. ಸರ್ಕಸ್ ಸಿಂಹ ಗಳನ್ನು, ರಾಜರುಗಳು ಸಾಕಿದ ಆನೆಗಳನ್ನು ನಾವೆಲ್ಲ ನೋಡಿಯೇ ಇದ್ದೇವೆ. ಅಸಾಮಾನ್ಯ ಬಲವಿದ್ದರೂ ಬುದ್ಧಿಶಕ್ತಿ, ವಿವೇಚನಾ ಶಕ್ತಿ, ಸಂಘೀಭಾವನೆ ಇಲ್ಲದ್ದರಿಂದ ತಮಗಿಂತಲೂ ದುರ್ಬಲನಾದ ಮನುಷ್ಯನಿಂದ ಗುಲಾಮರಂತಾಗಿವೆ. ಪುಕ್ಕಟೆ ಆಹಾರ, ವಸತಿ ಸಿಕ್ಕಿದಾಗ ಅವುಗಳಲ್ಲಿ ಅಡಗಿರುವ ಧೈರ್ಯ, ಸಾಹಸ, ಶಕ್ತಿ ಕ್ರಮೇಣ ಉಡುಗಿ ಹೋಗುತ್ತವೆ. ಭಾರತದಲ್ಲಿನ ಹಿಂದುಗಳ ಪರಿಸ್ಥಿತಿ ಇದೇ ಆಗಿದೆ. ಧೈರ್ಯ, ಶಕ್ತಿ, ಸಾಹಸ, ಪರಾಕ್ರಮ, ಧರ್ಮನಿಷ್ಠೆ, ಬುದ್ಧಿಶಕ್ತಿಯಲ್ಲಿ ಹಿಂದುಗಳು ಯಾರಿಗಿಂತಲೂ ಕಡಿಮೆ ಇರಲಿಲ್ಲ. ಆದರೆ ಕ್ರಮೇಣ ಸ್ವಾರ್ಥ, ಸಂಕುಚಿತತೆ, ಜಾತಿಭೇದಗಳಿಂದ, ಅಸಂಘಟನೆಯ ಕಾರಣದಿಂದ ಹಿಂದುಗಳ ಶಕ್ತಿ ಕುಗ್ಗಿತು. ಸಾವಿರ ವರ್ಷ ವಿದೇಶೀ ಆಕ್ರಮಕರ ಗುಲಾಮಗಿರಿಯಲ್ಲಿ ಕಳೆಯಬೇಕಾಯಿತು. ಮುಂದೆ ರಾಜಕೀಯ ಸ್ವಾತಂತ್ರ್ಯ ಬಂದ ಮೇಲೂ ಈ ಗುಲಾಮೀ ಮಾನಸಿಕತೆಯ ಜನ ವಿದೇಶೀಯರ ನೀತಿಗಳನ್ನೇ ಮುಂದುವರೆಸಿಕೊಂಡು ಬಂದರು. ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸಲೇ ಇಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಉತ್ಕಟ ರಾಷ್ಟ್ರೀಯ ಭಾವನೆಯೇ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿತ್ತೆಂಬುದನ್ನು ಮರೆಯಬಾರದು. ಡಾಕ್ಟರ್‌ಜೀ ಭವಿಷ್ಯವನ್ನು ಊಹಿಸಿಯೇ ರಾಷ್ಟ್ರಭಾವನೆ ಜಾಗೃತ ಮಾಡುವ ಶಾಖಾ ಶಿಕ್ಷಣವನ್ನು ಪ್ರಾರಂಭಿಸಿದರು. ಆದ್ದರಿಂದಲೇ ಅವರನ್ನು ದ್ರಷ್ಟಾರರು ಎನ್ನುವುದು. ಹಿಂದಿನ ಗುಲಾಮೀ ಮಾನಸಿಕತೆಯ ಆಳರಸರ ಕೈಯಿಂದ 2014ರಲ್ಲಿ ರಾಜ್ಯಾಧಿಕಾರದ ಚುಕ್ಕಾಣಿ ಸಂಘ ಶಾಖೆಯ ಗರಡಿಯಲ್ಲಿ ತಯಾರಾದ ಆಳರಸರ ಕೈಗೆ ಬಂತು. ಈಗ ಗುಲಾಮರನ್ನು ತಯಾರಿಸುವ ಮೆಕಾಲೆ ಶಿಕ್ಷಣ ವ್ಯವಸ್ಥೆಯನ್ನು ಕಿತ್ತು ಹಾಕಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಆದರೆ ರಾಜ್ಯಾಧಿಕಾರ ಶಾಶ್ವತ ಎನ್ನಲಾಗದು. ಹಾಗಾಗಿ ಸಂಘ ಶಾಖೆಯಲ್ಲಿನ ಸಂಸ್ಕಾರದ ಶಿಕ್ಷಣ ಇನ್ನಷ್ಟು ಬೆಳೆಯಬೇಕು. ಅದು ಶಾಶ್ವತವಾದುದು. ಅದು ಚಂಚಲ ಮನಸ್ಸಿನ ಮತದಾರರ ಮರ್ಜಿಗೆ ಒಳಪಟ್ಟಿಲ್ಲ.

ರಾಷ್ಟ್ರೀಯ ಭಾವನೆಯ ಜಾಗರಣದ ಹಾಗೂ ಪುರುಷ ಸಿಂಹರನ್ನು ರೂಪಿಸುವ ಸಂಸ್ಕಾರದ ಶಿಕ್ಷಣವನ್ನು ಸಂಘ ಶಾಖೆ ನೀಡುತ್ತಿದೆ. ಮುಂದಿನ ದಿನಗಳಲ್ಲಿ, ಎಲ್ಲ ರಾಜ್ಯಗಳಲ್ಲಿ, ಕೇಂದ್ರದಲ್ಲಿ ಹಿಂದು ಪರ ಸರಕಾರ ಸ್ಥಾಪನೆಯಾದಾಗ ಈ ಶಾಖಾ ಶಿಕ್ಷಣ ಪ್ರತಿ ಶಾಲೆಯಲ್ಲೂ ಸಿಗುವಂತಾಗಬೇಕು. ಪ್ರತಿ ಶಾಲೆಯೂ ಸಂಘ ಶಾಖೆ ಮಾದರಿಯ ಶಿಕ್ಷಣ ನೀಡುವಂತಾಗಬೇಕು. ಮನೆ–ಮನೆಗಳಲ್ಲಿ ಈ ಶಿಕ್ಷಣ ಶಿಶುಗಳಿಗೆ, ಮಕ್ಕಳಿಗೆ ಸಿಗುವಂತಾಗಬೇಕು. ತಾಯಿಯೇ ಮೊದಲ ಗುರು, ಮನೆಯೇ ಮೊದಲ ಶಾಲೆ, ಶಾಲೆ ಹಾಗೂ ಸಮಾಜಗಳೇ ವ್ಯಾವಹಾರಿಕ ಶಿಕ್ಷಣ ನೀಡುವ ಕೇಂದ್ರಗಳಾಗಬೇಕು. ಪಾಶ್ಚಾತ್ಯ ದೇಶಗಳು ಭೋಗಭೂಮಿ. ಹಾಗಾಗಿ ಅವರದ್ದು ಭೋಗ ಪ್ರಧಾನ ಜೀವನ. ಭಾರತ ತ್ಯಾಗಭೂಮಿ– ಹಾಗಾಗಿ ಇಲ್ಲಿ ಧರ್ಮವೇ ಜೀವನದ ಆಧಾರ. ಅದಕ್ಕಾಗಿ ಧರ್ಮ–ಅರ್ಥ–ಕಾಮ–ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ಕಲ್ಪನೆ. ತ್ಯಾಗ, ಸೇವೆ, ಪರಸ್ಪರ ಪ್ರೀತಿ–ವಿಶ್ವಾಸ, ಸಹಿಷ್ಣುತಾಭಾವ ಇಲ್ಲಿನ ಸಹಜ ಗುಣ.

ಶಾಖಾ ಶಿಕ್ಷಣದ ಗುರಿಯು ದೀರ್ಘಕಾಲದ ಗುಲಾಮಿ ಮಾನಸಿಕತೆಯಿಂದ ಬಳಲುತ್ತಾ ಬದುಕುತ್ತಿದ್ದ ಹಿಂದುಗಳನ್ನು ಸಿಂಹ, ಚಿರತೆ, ವ್ಯಾಘ್ರ, ಆನೆಗಳಂತೆ ಬಲಶಾಲಿಗಳನ್ನಾಗಿ, ಬುದ್ಧಿಶಾಲಿಗಳನ್ನಾಗಿ, ಪರಾಕ್ರಮಿಗಳನ್ನಾಗಿ ಪರಿವರ್ತಿಸಬೇಕೆಂಬುದೇ ಆಗಿದೆ. ಏಕೆಂದರೆ ಮುಸ್ಲಿಂ ಆಕ್ರಮಣಕಾರರು, ಪಾಶ್ಚಾತ್ಯ ಭೋಗವಾದಿಗಳು ಮತ್ತೆ ಭಾರತವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಪಾಕಿಸ್ತಾನ, ಬಾಂಗ್ಲಾದೇಶಗಳಂಥ ಶತ್ರು ದೇಶಗಳು ಅಕ್ಕಪಕ್ಕದಲ್ಲಿ ಇದ್ದೇ ಇವೆ. ಅಮೆರಿಕದ ಜಾರ್ಜ್ ಸೊರೋಸ್‌ನಂಥವರು, ವಿದೇಶೀ ಕ್ರೈಸ್ತ ಮಿಷನರಿಗಳು ಭಾರತದಲ್ಲಿ ಅಸಂತೋಷ ನಿರ್ಮಾಣ ಮಾಡುವ ಪ್ರಯತ್ನ ನಡೆಸುತ್ತಿದ್ದಾರೆ. ದೇಶದ ಒಳಗೇ ಅವರ ಹಸ್ತಕರಾದ ಹಿತಶತ್ರುಗಳಿದ್ದಾರೆ. ಮುಸ್ಲಿಂ ಭಯೋತ್ಪಾದಕರ ಒಳನುಸುಳುವಿಕೆ, ಭಯೋತ್ಪಾದಕ ದಾಳಿಗಳು ನಡೆಯುತ್ತಲೇ ಇವೆ. ಇವೆಲ್ಲವನ್ನೂ ಒಟ್ಟಾಗಿ ಎದುರಿಸಿ ಗೆಲ್ಲಬೇಕಾದರೆ ಬಲವಾದ ಸಾಮಾಜಿಕ ಶಕ್ತಿಯನ್ನು ಕಟ್ಟಿ ನಿಲ್ಲಿಸುವ ಅವಶ್ಯಕತೆ ಇದೆ. ತ್ಯಾಗ–ಬಲಿದಾನಗಳಿಗೆ ಸಿದ್ಧವಾದ ತರುಣ ಪೀಳಿಗೆಯನ್ನು ರೂಪಿಸುವ ಆವಶ್ಯಕತೆ ಇದೆ. ಭಾರತ ಭೂಮಿಯ ಮೇಲೆ ಭಾರತ ಮಾತೆಯ ಹಾಗೂ ಭಗವಂತನ ಅಪಾರ ಕೃಪೆ ಇದೆ. ಅವನ ಅನುಗ್ರಹ ಭಾರತದ ಮೇಲೆ ವಿಶೇಷವಾಗಿ ಇದೆ. ಹಿಂದುಗಳನ್ನು ಈ ಅನುಗ್ರಹಕ್ಕೆ ಯೋಗ್ಯರನ್ನಾಗಿ ರೂಪಿಸಬೇಕಾಗಿದೆ. ಅದಕ್ಕಾಗಿ ಪುರುಷ ಸಿಂಹರನ್ನು ನಿರ್ಮಾಣ ಮಾಡುವ ಅಗತ್ಯವಿದೆ. ಭಾರತ, ಸನಾತನ ಧರ್ಮಕ್ಕೆ ಅಳಿವಿಲ್ಲ. ಅದು ಅವಿನಾಶಿ. ಭಾರತದಲ್ಲಿ ಮಾತ್ರ ಪರಮಾತ್ಮ ಶಿಷ್ಟ ರಕ್ಷಣೆ–ದುಷ್ಟಶಿಕ್ಷಣಕ್ಕಾಗಿ 10 ಬಾರಿ ಅವತಾರ ತಾಳಿದ್ದಾನೆ. ಹಾಗಂತ ಪರಮಾತ್ಮ ಸ್ವತಃ ಏನೂ ಮಾಡುವುದಿಲ್ಲ. ನಾವು ಪ್ರಯತ್ನ ಮಾಡಬೇಕು. ಆಗ ಅವನು ನಮ್ಮಿಂದಲೇ ಮಾಡಿಸುತ್ತಾನೆ. ಅವನು ಗೆಲ್ಲಲು ಅನುಗ್ರಹ ನೀಡುತ್ತಾನೆ.

'ಬಳಿಕುಂಟೆ'ಯಿಂದ 'ಮಿನಿ ಇರಾನ್'ವರೆಗೆ: ಅಲಿಪುರದ ಬದಲಾವಣೆಯ ಕತೆ

• ಉತ್ಕರ್ಷ್ ಕೆ. ಎಸ್

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಅಲಿಪುರ ಗ್ರಾಮವು ಕೆಲವು ದಿನಗಳ ಹಿಂದೆ ರಾಜ್ಯದ ಸಾಮಾಜಿಕ ಹಾಗೂ ರಾಜಕೀಯ ಚರ್ಚೆಯ ಕೇಂದ್ರಬಿಂದುವಾಯಿತು. ಒಂದು ಕಾಲದಲ್ಲಿ 'ಬಳಿಕುಂಟೆ' ಅಥವಾ 'ಬೆಳ್ಳಿಕುಂಟೆ' ಎಂದು ಕರೆಯಲ್ಪಡುತ್ತಿದ್ದ ಈ ಗ್ರಾಮವು ಕಾಲಕ್ರಮೇಣ 'ಅಲಿಪುರ' ಎಂಬ ಹೆಸರಿನಿಂದ ಪರಿಚಿತವಾಯಿತು. ಇತಿಹಾಸದಲ್ಲಿ ವಲಸೆ ಮತ್ತು ಜನಸಂಖ್ಯೆಯ ಬದಲಾವಣೆ ಗಳಿಂದ ಈ ಪ್ರದೇಶದ ಸಾಮಾಜಿಕ ರಚನೆ ಸಂಪೂರ್ಣವಾಗಿ ಬದಲಾಗಿದೆ. ಇಂದು ಅಲಿಪುರ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮುಸ್ಲಿಂ ಸಮುದಾಯದ ಪ್ರಾಬಲ್ಯ ಸ್ಪಷ್ಟವಾಗಿ ಕಂಡುಬರುತ್ತದೆ.

ಒಂದು ಕಾಲದಲ್ಲಿ ಸಾಮಾನ್ಯ ಕೃಷಿ ಆಧಾರಿತ ಗ್ರಾಮವಾಗಿದ್ದ ಬಳಿಕುಂಟೆ, ನಿಧಾನವಾಗಿ ವಿಭಿನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಗುರುತನ್ನು ಪಡೆದುಕೊಂಡಿದೆ. ಗೌರಿಬಿದನೂರು ಭಾಗದ ಕೆಲವು ಗ್ರಾಮಗಳಲ್ಲಿ ಜನಸಂಖ್ಯಾ ಸಮತೋಲನ ಬದಲಾಗಿರುವುದು ಸ್ಥಳೀಯ ಜನರಲ್ಲಿ ಚರ್ಚೆಗೆ ಕಾರಣವಾಗಿದೆ. ಅಲಿಪುರ ಗ್ರಾಮದಲ್ಲಿ ಇಂದು ಬಹುಪಾಲು ಜನರು ಶಿಯಾ ಮುಸ್ಲಿಂ ಸಮುದಾಯಕ್ಕೆ ಸೇರಿದ್ದಾರೆ. ಈ ಸಮುದಾಯದ ಪ್ರಭಾವವು ಸುತ್ತಮುತ್ತಲಿನ ಪ್ರದೇಶಗಳ ಮೇಲೂ ಕಂಡುಬರುತ್ತಿದೆ ಎಂಬ ಮಾತು ಸ್ಥಳೀಯವಾಗಿ ಕೇಳಿಬರುತ್ತಿದೆ. ಈ ಗ್ರಾಮವನ್ನು ಕೆಲವರು 'ಮಿನಿ ಇರಾನ್' ಎಂದು ಕರೆಯುವ ಮಟ್ಟಕ್ಕೆ ಇರಾನ್ ದೇಶದೊಂದಿಗೆ ಇಲ್ಲಿ ಗಾಢ ನಂಟು ನಿರ್ಮಾಣವಾಗಿದೆ. ಹಲವಾರು ಕುಟುಂಬಗಳು ಇರಾನ್ ದೇಶದೊಂದಿಗೆ ಧಾರ್ಮಿಕ, ಶೈಕ್ಷಣಿಕ ಹಾಗೂ ವ್ಯಾಪಾರಿಕ ಸಂಬಂಧ ಹೊಂದಿರುವುದಾಗಿ ಹೇಳಲಾಗುತ್ತದೆ. ಅಲಿಪುರದ ಹಲವಾರು ಯುವಕರು ಧಾರ್ಮಿಕ ಶಿಕ್ಷಣಕ್ಕಾಗಿ ಇರಾನ್‌ಗೆ ತೆರಳುವುದು ಸಾಮಾನ್ಯ ಸಂಗತಿಯಾಗಿರುವುದೂ ಗಮನಾರ್ಹವಾಗಿದೆ. ಈ ಸಂಬಂಧ ಇನ್ನಷ್ಟು ಗಟ್ಟಿಯಾಗಲು ಕಾರಣವಾದ ಘಟನೆ ಎಂದರೆ ಇರಾನ್‌ನ ಧಾರ್ಮಿಕ ನಾಯಕ ಆಯತೊಲ್ಲಾ ಅಲಿ ಖಮೇನಿಯ ಅಲಿಪುರ ಭೇಟಿ. 1986ರಲ್ಲಿ ಅವರು ಈ ಗ್ರಾಮಕ್ಕೆ ಭೇಟಿ ನೀಡಿ ಸಂಪರ್ಕ ಬೆಳೆಸಿದ್ದರು. ಆ ಭೇಟಿಯ ನಂತರ ಅಲಿಪುರ ಮತ್ತು ಇರಾನ್ ನಡುವಿನ ಸಂಬಂಧ ಮತ್ತಷ್ಟು ಗಟ್ಟಿಯಾಯಿತು. ಅಲ್ಲದೆ ಈ ಗ್ರಾಮದಲ್ಲಿ ಖಮೇನಿಯವರ ಹೆಸರಿನೊಂದಿಗೆ ಸಂಬಂಧಿಸಿದ ಆಸ್ಪತ್ರೆ ಮತ್ತು ಕೆಲವು ಸಂಸ್ಥೆಗಳು ಸ್ಥಾಪನೆಯಾಗಿದ್ದು ಆ ಸಂಬಂಧದ ಸಂಕೇತಗಳಾಗಿ ಇಂದಿಗೂ ಉಳಿದಿವೆ.

ಇತ್ತೀಚೆಗೆ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯ ಘಟನೆಗಳ ಹಿನ್ನೆಲೆಯಲ್ಲಿ ಅಲಿಪುರ ಗ್ರಾಮದಲ್ಲಿ ನಡೆದ ಪ್ರತಿಭಟನೆಗಳು ಜಾಗತಿಕ ಮಟ್ಟದಲ್ಲಿ ಆಶ್ಚರ್ಯ ಮತ್ತು ಚಿಂತೆಯನ್ನು ಹುಟ್ಟುಹಾಕಿವೆ. ಸಾವಿರಾರು ಜನರು ಕಪ್ಪು ಧ್ವಜಗಳೊಂದಿಗೆ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿರುವುದು ಗಮನ ಸೆಳೆದಿದೆ. ಭಾರತದಲ್ಲಿರುವ ಒಂದು ಗ್ರಾಮವು ವಿದೇಶಿ ರಾಜಕೀಯ ಘಟನೆಗಳ ಬಗ್ಗೆ ಇಷ್ಟೊಂದು ತೀವ್ರ ಪ್ರತಿಕ್ರಿಯೆ ನೀಡುವುದು ಸರಿಯೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇದೇ ಜನರು ಭಾರತದ ರಾಷ್ಟ್ರೀಯ ದುರಂತದ ಕ್ಷಣಗಳಲ್ಲಿ ಎಲ್ಲಿದ್ದರು? ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರ ಬಗ್ಗೆ ಇದೇ ಮಟ್ಟದ ಕಾಳಜಿ ಮತ್ತು ಪ್ರತಿಕ್ರಿಯೆ ಏಕೆ ಕಾಣಿಸಲಿಲ್ಲ? ಇದು ಕೇವಲ ಎರಡು ಘಟನೆಗಳ ವಿಚಾರವಲ್ಲ. ಕಾಶ್ಮೀರದಲ್ಲಿ ಪಂಡಿತರ ಹತ್ಯೆಗಳು ನಡೆದಾಗ, ದೇಶದ ಸೈನಿಕರು ಗಡಿಯಲ್ಲೇ ಉಗ್ರರ ವಿರುದ್ಧ ಹೋರಾಡಿ ಪ್ರಾಣ ತ್ಯಾಗ ಮಾಡಿದಾಗ ಅಥವಾ ಭಾರತವನ್ನು ಗುರಿಯಾಗಿಸಿ ನಡೆಯುವ ಉಗ್ರ ದಾಳಿಗಳ ಸಮಯದಲ್ಲಿ ಇದೇ ರೀತಿಯ ಭಾವನಾತ್ಮಕ ಪ್ರತಿಕ್ರಿಯೆ ಕಾಣಿಸಿಕೊಂಡಿದ್ದರೆ ಅದು ದೇಶಭಕ್ತಿಯ ನಿಜವಾದ ಉದಾಹರಣೆಯಾಗುತ್ತಿತ್ತು. ಆದರೆ ದೂರದ ದೇಶದ ನಾಯಕನಿಗಾಗಿ ಭಾವೋದ್ರೇಕ ತೋರಿಸಿ, ತನ್ನದೇ ದೇಶದ ನೋವಿನ ಕ್ಷಣಗಳಲ್ಲಿ ಮೌನವಾಗಿರುವುದು ಅನೇಕ ಜನರಲ್ಲಿ ಅಸಮಾಧಾನ ಮತ್ತು ಅನುಮಾನ ಹುಟ್ಟಿಸುವುದು ಸಹಜ.

ಭಾರತದಲ್ಲಿ ಬದುಕುತ್ತಿರುವ ಪ್ರತಿಯೊಬ್ಬ ನಾಗರಿಕನಿಗೂ ಧಾರ್ಮಿಕ ನಂಬಿಕೆಗಳ ಸ್ವಾತಂತ್ರ್ಯ ಇದೆ. ಆದರೆ ಅವರಿಗಿಂತ ದೊಡ್ಡದು ರಾಷ್ಟ್ರಭಾವನೆ. ದೇಶದ ಭದ್ರತೆ, ಸೈನಿಕರ ತ್ಯಾಗ ಮತ್ತು ರಾಷ್ಟ್ರೀಯ ಗೌರವವೇ ಮೊದಲ ಆದ್ಯತೆಯಾಗಬೇಕು. ವಿದೇಶಿ ನಾಯಕರಿಗಾಗಿ ಬೀದಿಗೆ ಇಳಿಯುವಷ್ಟು ಉತ್ಸಾಹ ಇದ್ದರೆ, ದೇಶದ ಸೈನಿಕರಿಗಾಗಿ, ದುಃಖದ ಕ್ಷಣಗಳಿಗಾಗಿ ಮತ್ತು ಉಗ್ರವಾದದ ವಿರುದ್ಧವೂ ಅದೇ ಶಕ್ತಿಯಿಂದ ಧ್ವನಿ ಎತ್ತುವುದು ಅತ್ಯವಶ್ಯಕ. ವಿದೇಶಿ ರಾಜಕೀಯ ಅಥವಾ ಧಾರ್ಮಿಕ ಪ್ರಭಾವವು ಸ್ಥಳೀಯ ಸಮಾಜದ ಮೇಲೆ ಅತಿಯಾಗಿ ಪರಿಣಾಮ ಬೀರುವಂತಾಗುವುದು ಆರೋಗ್ಯಕರ ಬೆಳವಣಿಗೆ ಎಂದು ಹೇಳಲಾಗುವುದಿಲ್ಲ. ಈ ಲೇಖಕ ಸುಮಾರು ಮೂರು ತಿಂಗಳುಗಳ ಕಾಲ ಅಲಿಪುರ ಗ್ರಾಮದಲ್ಲೇ ವಾಸಿಸಿ ಅಲ್ಲಿನ ಸಾಮಾಜಿಕ ವಾತಾವರಣವನ್ನು ಸಮೀಪದಿಂದ ಗಮನಿಸಿದ್ದೇನೆ. ಆ ಅವಧಿಯಲ್ಲಿ ಸ್ಪಷ್ಟವಾಗಿ ಕಂಡ ಒಂದು ಸಂಗತಿ ಎಂದರೆ, ಅಲಿಪುರದ ಜನಸಂಖ್ಯಾ ಬದಲಾವಣೆಗಳು ಮತ್ತು ಅದರ ಪರಿಣಾಮವಾಗಿ ರೂಪುಗೊಂಡ ಸಾಮಾಜಿಕ ಪ್ರಭಾವವು ಸುತ್ತಮುತ್ತಲಿನ ಅನೇಕ ಹಳ್ಳಿಗಳಲ್ಲಿರುವ ಹಿಂದು ಸಮುದಾಯದ ಸ್ಥಿತಿಗೆ ಗಂಭೀರ ಪರಿಣಾಮ ಬೀರಿದೆ ಎಂಬುದು. ಹಲವೆಡೆ ಹಿಂದು ಕುಟುಂಬಗಳು ತಮ್ಮ ಹಿಂದಿನ ಸಾಮಾಜಿಕ ಪ್ರಭಾವವನ್ನು ಕಳೆದುಕೊಳ್ಳುತ್ತಿರುವ ಭಾವನೆ ವ್ಯಕ್ತಪಡಿಸುತ್ತಿರುವುದು ಕೇಳಿಬರುತ್ತದೆ.

ಇದೇ ಸಂದರ್ಭದಲ್ಲಿ ಅಲಿಪುರದಲ್ಲಿ ಕಂಡುಬರುವ ದೊಡ್ಡ ಕಟ್ಟಡಗಳು, ವಿಶಾಲ ಆಸ್ತಿಗಳು, ಅಲ್ಲಿರುವ ಹೆಲಿಪ್ಯಾಡ್ ಎಂಬ ಮೂಲಸೌಕರ್ಯಗಳು ಮತ್ತು ದೊಡ್ಡ ಮಟ್ಟದಲ್ಲಿ ನಡೆಯುತ್ತಿರುವ ವ್ಯಾಪಾರ ಚಟುವಟಿಕೆಗಳು ಹಲವರಲ್ಲಿ ಪ್ರಶ್ನೆಗಳನ್ನು ಹುಟ್ಟುಹಾಕುತ್ತಿವೆ. ವಿಶೇಷವಾಗಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ದೊಡ್ಡ ವ್ಯವಹಾರ ಜಾಲಗಳು ಮತ್ತು ಆರ್ಥಿಕ ಚಟುವಟಿಕೆಗಳು ಎಲ್ಲಿಂದ ಹಣಕಾಸು ಬೆಂಬಲ ಪಡೆಯುತ್ತಿವೆ ಎಂಬ ಪ್ರಶ್ನೆ ಸ್ಥಳೀಯ ಮಟ್ಟದಲ್ಲಿ ಚರ್ಚೆಯಾಗುತ್ತಿವೆ. ಒಂದು ಗ್ರಾಮ ಅಭಿವೃದ್ಧಿಯಾಗುವುದು ಸಹಜವಾದ ಸಂಗತಿ. ಆದರೆ ಆ ಅಭಿವೃದ್ಧಿಯ ಹಿಂದಿರುವ ಹಣಕಾಸಿನ ಮೂಲಗಳು ಪಾರದರ್ಶಕವಾಗಿರಬೇಕು ಎಂಬುದೂ ಮುಖ್ಯವಾಗುತ್ತದೆ.

ಪ್ರವಾಸಿ ತಾಣಗಳೇ ಟಾರ್ಗೆಟ್

» ಇರಾನ್‌ನಿಂದ ಅಮೆರಿಕ ಮಿತ್ರ ದೇಶಗಳಿಗೆ ಎಚ್ಚರಿಕೆ
» ಮೂರು ವಾರಗಳ ಬಳಿಕವೂ ಸೋಲದ ಇರಾನ್
» ಕ್ಷಿಪಣಿ ನಿರ್ಮಾಣ, ದಾಳಿ ನಿರಂತರ, ಗಲ್ಫ್ ದೇಶಗಳ ಮೇಲೆ ದಾಳಿ



ದುಬೈ: ಅಮೆರಿಕಾ-ಇಸ್ರೇಲ್ ದಾಳಿಗಳು ಆರಂಭವಾಗಿ ಮೂರು ವಾರಗಳು ಕಳೆದರೂ ಇರಾನ್ ತನ್ನ ದಾಳಿಯ ಸಾಮರ್ಥ್ಯ ಕಡಿಮೆಯಾಗಿಲ್ಲ ಎಂದು ತೋರಿಸಿದ್ದು, ವಿಶ್ವದ ಪ್ರವಾಸಿ ಹಾಗೂ ಮನರಂಜನಾ ತಾಣಗಳನ್ನು ಗುರಿಯಾಗಿಸಿ ದಾಳಿ ಮಾಡುತ್ತೇವೆ ಎಂದು ಗಂಭೀರ ಬೆದರಿಕೆ ಹಾಕಿದೆ. ಇದೇ ವೇಳೆ ಯುದ್ಧ ಪರಿಸ್ಥಿತಿಯಲ್ಲಿಯೂ ಕ್ಷಿಪಣಿಗಳ ನಿರ್ಮಾಣ ಮುಂದುವರಿದಿದೆ ಎಂದು ಘೋಷಿಸಿದ್ದು, ಮಧ್ಯಪ್ರಾಚ್ಯದ ಸಂಘರ್ಷವು ಜಾಗತಿಕ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

ಇರಾನ್, ಇಸ್ರೇಲ್ ಹಾಗೂ ಗಲ್ಫ್ ಅರಬ್ ರಾಷ್ಟಗಳ ಇಂಧನ ತಾಣಗಳ ಮೇಲೆ ದಾಳಿಗಳನ್ನು ಮುಂದುವರೆಸಿದೆ. ಮುಸ್ಲಿಂ ಸಮುದಾಯದ ಪವಿತ್ರ ದಿನಗಳಲ್ಲಿಯೇ ಈ ದಾಳಿಗಳು ನಡೆದಿದ್ದು, ಪರ್ಷಿಯನ್ ಹೊಸ ವರ್ಷ ನವ್ರೋಜ್ ಆಚರಣೆ ಈ ಬಾರಿ ಮಂಕಾಗಿದೆ.

ಫೆ. 28ರಿಂದ ಆರಂಭವಾದ ಯುದ್ಧದಲ್ಲಿ ಇರಾನ್‌ನ ಅಣು, ಶಸ್ತ್ರಾಸ್ತ್ರ ಮತ್ತು ಇಂಧನ ತಾಣಗಳಿಗೆ ಎಷ್ಟು ಹಾನಿಯಾಗಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ, ದೇಶದ ಆಡಳಿತದ ಮೇಲಿನ ನಿಯಂತ್ರಣದ ವಿಷಯವೂ ಅನಿಶ್ಚಿತವಾಗಿದೆ. ಆದರೂ ಇರಾನ್ ಇನ್ನೂ ದಾಳಿ ನಡೆಸಿ ತೈಲ ಸರಬರಾಜನ್ನು ಅಸ್ತವ್ಯಸ್ತಗೊಳಿಸುವ ಮೂಲಕ ಜಾಗತಿಕ ಆರ್ಥಿಕತೆಗೆ ಹೊಡೆತ ನೀಡುತ್ತಿದೆ.

ಅಮೆರಿಕಾ ಮತ್ತು ಇಸ್ರೇಲ್ ಯುದ್ಧದ ಉದ್ದೇಶವಾಗಿ ಇರಾನ್ ಆಡಳಿತವನ್ನು ಉರುಳಿಸುವುದು ಅಥವಾ ಅದರ ಅಣು ಹಾಗೂ ಕ್ಷಿಪಣಿ ಕಾರ್ಯಕ್ರಮಗಳನ್ನು ನಾಶಪಡಿಸುವುದನ್ನು ಹೇಳುತ್ತಿದ್ದರೂ, ಇದುವರೆಗೆ ಯಾವುದೇ ಬಂಡಾಯದ ಲಕ್ಷಣಗಳು ಕಾಣಿಸಿಕೊಂಡಿಲ್ಲ, ಯುದ್ಧದ ಅಂತ್ಯ ಹೇಗಿರಬಹುದು ಎಂಬುದೂ ಸ್ಪಷ್ಟವಾಗಿಲ್ಲ.

ಇರಾನ್ ಸೇನಾ ವಕ್ತಾರ ಜನರಲ್ ಅಬೋಲ್ಫಝ್ಲ್ ಶೆಕಾರ್ಚಿ, ಪ್ರವಾಸಿ ತಾಣಗಳೂ ಶತ್ರುಗಳಿಗೆ ಸುರಕ್ಷಿತವಾಗಿರುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ನೌಕಾಪಡೆ ಮತ್ತು ವಾಯುಪಡೆಯು ಕುಸಿದಿದೆ ಎಂದು ಹೇಳಿದ್ದರೆ, ಇರಾನ್ ಅದನ್ನು ತಳ್ಳಿಹಾಕಿದೆ. ಕ್ರಾಂತಿಕಾರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನಾಇನಿ, 'ಯುದ್ಧದ ನಡುವೆಯೂ ಕ್ಷಿಪಣಿ ಉತ್ಪಾದನೆ ನಡೆಯುತ್ತಿದೆ; ಸಂಗ್ರಹದಲ್ಲಿ ಸಮಸ್ಯೆ ಇಲ್ಲ' ಎಂದಿದ್ದಾರೆ. ಆದರೆ ಅವರ ಹೇಳಿಕೆಯ ಕೆಲವೇ ಗಂಟೆಗಳ ನಂತರ ಅವರು ವಾಯುದಾಳಿಯಲ್ಲಿ ಮೃತಪಟ್ಟಿದ್ದಾರೆ. ಹೊಸ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ, ಶತ್ರುಗಳ ಭದ್ರತೆಯನ್ನು ಕಿತ್ತುಕೊಳ್ಳಬೇಕು ಎಂದು ಹೇಳಿದ್ದಾರೆ.

ನ್ಯಾಟೋ ಮಿತ್ರರು ಹೇಡಿಗಳು: ಟ್ರಂಪ್

ಇರಾನ್ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿಯನ್ನು ವಶಪಡಿಸಿಕೊಳ್ಳಲು ತನ್ನ ಮನವಿಯಂತೆ ಯುದ್ಧನೌಕೆಗಳನ್ನು ಕಳುಹಿಸಲು ಒಪ್ಪದ ನ್ಯಾಟೋ ಮಿತ್ರ ರಾಷ್ಟಗಳನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಡಿಗಳೆಂದು ಟೀಕಿಸಿದ್ದಾರೆ. ಅಮೆರಿಕ ಇಲ್ಲದಿದ್ದರೆ, ನ್ಯಾಟೋ ಕೇವಲ ಕಾಗದದ ಹುಲಿ ಅಷ್ಟೇ! ಪರಮಾಣು ಶಕ್ತಿಯುಳ್ಳ ಇರಾನ್ ತಡೆಗಟ್ಟಲು ಯುದ್ಧ ಮಾಡೋಣವೆಂದರೆ ನ್ಯಾಟೋ ರಾಷ್ಟಗಳು ಸಿದ್ಧವಿಲ್ಲ. ಹಾರ್ಮುಜ್ ಜಲಸಂಧಿ ತೆರೆಯಲು ನೆರವಾಗುತ್ತಿಲ್ಲ. ಆದರೆ ಯುದ್ಧದಿಂದ ತೈಲ ಬೆಲೆ ಏರಿಕೆಯಾಗಿದೆ ಎಂದು ದೂರುತ್ತಿವೆ. ಅಪಾಯ ಎದುರಿಸಲು ಸಿದ್ಧರಿಲ್ಲದೆ ಸುಲಭ ಮಾರ್ಗ ಹಿಡಿದಿವೆ. ನ್ಯಾಟೋ ಮಿತ್ರ ರಾಷ್ಟಗಳು ಹೇಡಿಗಳು, ನಾವು ನೆನಪಿನಲ್ಲಿ ಇಡುತ್ತೇವೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

1 ಕೋಟಿ ಡಾಲರ್‌ನ ಎಫ್-35ಗೆ ಹಾನಿ?

ಅಮೆರಿಕದ ಸೇನೆಯ ಬೆನ್ನೆಲುಬೆಂದೇ ಕರೆಯಲ್ಪಡುವ 1 ಕೋಟಿ ಡಾಲರ್ ಮೌಲ್ಯದ ಎಫ್-35 ಲೈಟ್ನಿಂಗ್-2 ಯುದ್ಧ ವಿಮಾನಕ್ಕೆ ಹಾನಿ ಮಾಡಿರುವುದಾಗಿ ಇರಾನ್ ಸೇನೆ ಹೇಳಿಕೊಂಡಿದೆ. ಇರಾನ್ ವಾಯುಪ್ರದೇಶದೊಳಗೆ ಬಂದ ಎಫ್-35 ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ಇರಾನ್ ಹೇಳಿದೆ. ಹಾನಿಗೊಳಗಾದ ಎಫ್-35 ಅಮೆರಿಕ ಸೇನಾನೆಲೆಯಲ್ಲಿ ಸುರಕ್ಷಿತ ಲ್ಯಾಂಡಿಂಗ್ ನಡೆಸಿದ್ದು, ಪೈಲೆಟ್ ಸುರಕ್ಷಿತವಾಗಿದ್ದಾರೆ ಎಂದು ವರದಿಯಾಗಿದೆ. ಎಫ್-35 ಮೇಲೆ ಶತ್ರು ದಾಳಿಯಿಂದ ಬೆಂಕಿ ಕಾಣಿಸಿಕೊಂಡಿದ್ದು ಇದೇ ಮೊದಲು, ಅದರ ರಾಡಾರ್, ಸೆನ್ಸಾರ್ ಒಳಗೊಂಡ ಅತ್ಯಾಧುನಿಕ ವಿನ್ಯಾಸದಿಂದಾಗಿ ಎಫ್-35 ಮೇಲೆ ದಾಳಿ ನಡೆಸುವುದೇ ಕಷ್ಟವೆಂದು ಪರಿಗಣಿಸಲಾಗುತ್ತದೆ.

16.5 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ

ಇರಾನ್‌ನೊಂದಿಗಿನ ಯುದ್ಧವು ತೀವ್ರಗೊಳ್ಳುತ್ತಿದ್ದಂತೆ ತಮ್ಮ ರಕ್ಷಣಾ ಸಾಮರ್ಥ್ಯ ಬಲಪಡಿಸಲು ಯುಎಸ್‌ಸ್ಟೇಟ್ ಡಿಪಾರ್ಟ್ಮೆಂಟ್ ಗಲ್ಫ್ ಮಿತ್ರರಾಷ್ಟಗಳಿಗೆ 16.5 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ ನೀಡಿದೆ ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ಸುಮಾರು 7 ಶತಕೋಟಿ ಡಾಲರ್ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಸಹ ಟ್ರಂಪ್ ಆಡಳಿತವು ಅನುಮೋದಿಸಿದೆ. ಪ್ರಾದೇಶಿಕ ಇಂಧನ ಮೂಲಸೌಕರ್ಯಕ್ಕೆ ಹಾನಿಯನ್ನುಂಟುಮಾಡಿರುವ ಇರಾನಿನ ಪ್ರಚೋದನೆ ಗಳಿಂದಾಗಿ ಕಾಂಗ್ರೆಸ್ಸಿನ ಪ್ರಮಾಣಿತ ಪರಿಶೀಲನಾ ಅವಧಿಗೂ ಕಾಯದೇ, ಈ ಒಪ್ಪಂದಗಳನ್ನು ತ್ವರಿತಗೊಳಿಸಲು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ತುರ್ತು ವಿನಾಯಿತಿಗಳನ್ನು ನೀಡಿದರು.

11 ಗಲ್ಫ್ ವಾಯುಪ್ರದೇಶಕ್ಕೆ ಪ್ರವೇಶಿಸದಂತೆ ಡಿಜಿಸಿಎ ಸೂಚನೆ

ಯುದ್ಧದಿಂದಾಗಿ ಕೊಲ್ಲಿ ಪ್ರದೇಶದಾದ್ಯಂತ ವಿಮಾನ ಕಾರ್ಯಾಚರಣೆ ಭಾರೀ ಪ್ರಮಾಣದಲ್ಲಿ ಅಡ್ಡಿಪಡಿಸಿದೆ. ಈ ಹಿನ್ನಲೆ, ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ವಿಮಾನಯಾನ ಸಂಸ್ಥೆಗಳಿಗೆ 11 ಗಲ್ಫ್ ವಾಯುಪ್ರದೇಶಗಳಿಗೆ ತೆರಳದಿರಲು ಸೂಚಿಸಿದೆ. ಈ ಹಿಂದೆ, ಪಶ್ಚಿಮ ಏಷ್ಯಾದ ಪರಿಸ್ಥಿತಿಯು ಸಾಮಾನ್ಯ ವಿಮಾನ ಮಾರ್ಗಗಳಿಗೆ ಅಡ್ಡಿಪಡಿಸುವುದನ್ನು ಮುಂದುವರೆಸಿದ್ದರಿಂದ ವಾಯುಯಾನ ನಿಯಂತ್ರಕವು ಏರ್ ಇಂಡಿಯಾಗೆ ಸಿಬ್ಬಂದಿ ಕರ್ತವ್ಯದ ನಿಯಮಗಳ ಮೇಲೆ ತಾತ್ಕಾಲಿಕ ಪರಿಹಾರ ನೀಡಿತ್ತು. ಪ್ರಸ್ತುತ ಇರಾನಿನ ಮತ್ತು ಇರಾಕ್ ವಾಯುಪ್ರದೇಶಕ್ಕೆ ನಿರ್ಬಂಧಿಸಿರುವುದರಿಂದ, ವಿಮಾನಯಾನ ಸಂಸ್ಥೆ ತನ್ನ ವಿಮಾನಗಳನ್ನು ದೀರ್ಘ ಮಾರ್ಗಗಳಲ್ಲಿ ತಿರುಗಿಸಬೇಕಾಯಿತು. ಇದರಿಂದ ವಿಮಾನ ಹಾರಾಟದ ಸಮಯ ಕೂಡ ವಿಸ್ತಾರವಾಗಿತ್ತು.

ಕುವೈತ್ ತೈಲ ಘಟಕಗಳ ಮೇಲೆ ಇರಾನ್ ದಾಳಿ

ಕುವೈತ್‌ನ ಅತಿ ದೊಡ್ಡ ತೈಲ ಸಂಸ್ಕರಣಾಗಾರದ ಮೇಲೆ ಸತತ ಎರಡನೇ ದಿನ ಇರಾನ್ ಡ್ರೋನ್ ದಾಳಿ ನಡೆಸಿದೆ. ಗಲ್ಫ್ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುತ್ತಿರುವ ಇರಾನ್, ಶುಕ್ರವಾರ ಬೆಳಗ್ಗೆ ಮಿನಾ ಅಲ್-ಅಹ್ಮದಿ ತೈಲ ಸಂಸ್ಕರಣಾ ಘಟಕದ ಮೇಲೆ ಡ್ರೋನ್ ದಾಳಿ ನಡೆಸಿದೆ. ಪ್ರತಿ ದಿನ 7,30,000 ಬ್ಯಾರೆಲ್ ಕಚ್ಚಾ ತೈಲವನ್ನು ಶುದ್ಧೀಕರಿಸುವ ಘಟಕ ಇದಾಗಿದೆ. ಯಾವುದೇ ಹಾನಿಯಾಗಿಲ್ಲ ಎಂದು ಕುವೈತ್ ಹೇಳಿದೆ.

ಎಂಇಎ ಖಂಡನೆ

ಗಲ್ಫ್ ರಾಷ್ಟಗಳ ಇಂಧನ ಮೂಲಸೌಕರ್ಯಗಳ ಮೇಲೆ ಇರಾನ್ ನಡೆಸಿದ ದಾಳಿಯನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಗುರುವಾರ ಖಂಡಿಸಿದ್ದು, ಇಂತಹ ದಾಳಿಗಳು ತಕ್ಷಣ ನಿಲ್ಲಬೇಕೆಂದು ಆಗ್ರಹಿಸಿದ್ದಾರೆ. ಯುದ್ಧ ಸಂಘರ್ಷದಲ್ಲಿ ನಾಗರಿಕ ಮೂಲಸೌಕರ್ಯ, ಅದರಲ್ಲೂ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಬಾರದೆಂದು ಭಾರತ ಹಿಂದೆಯೇ ಕರೆ ನೀಡಿತ್ತು. ಇಂತಹ ದಾಳಿಗಳಿಂದ ಈಗಾಗಲೇ ಅಸ್ಥಿರವಾದ ಜಾಗತಿಕ ಇಂಧನ ಪೂರೈಕೆ ಇನ್ನಷ್ಟು ಅಸ್ಥಿರಗೊಳ್ಳಲಿದೆ. ಇದು ಸ್ವೀಕಾರಾರ್ಹವಲ್ಲ ಎಂದು ಜೈಸ್ವಾಲ್ ಹೇಳಿದ್ದಾರೆ.

ಗಲ್ಫ್ ಮೇಲಿನ ದಾಳಿಗೆ ಮೋದಿ ಖಂಡನೆ

ಹೊಸದಿಲ್ಲಿ: ಗಲ್ಫ್ ರಾಷ್ಟಗಳ ಇಂಧನ ಮೂಲಸೌಕರ್ಯಗಳ ಮೇಲಿನ ಇರಾನ್ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ. ಕತಾರ್, ಫ್ರಾನ್ಸ್, ಜೋರ್ಡನ್, ಒಮನ್ ಹಾಗೂ ಮಲೇಷ್ಯಾ ನಾಯಕರ ಜತೆ ಮಧ್ಯಪ್ರಾಚ್ಯ ಯುದ್ಧ ಕುರಿತು ಚರ್ಚೆ ನಡೆಸಿದ ಪ್ರಧಾನಿ ಮೋದಿ, ಪ್ರದೇಶದಲ್ಲಿ ಯುದ್ಧ ತೀವ್ರತೆ ಹೆಚ್ಚುತ್ತಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಸಂಘರ್ಷ ಶಮನಗೊಳಿಸುವ ನಿಟ್ಟಿನಲ್ಲಿ, ಪ್ರದೇಶದ ತೈಲ ಮೂಲಸೌಕರ್ಯಗಳ ಮೇಲಿನ ದಾಳಿಗಳನ್ನು ಪ್ರಧಾನಿ ಮೋದಿ ಬಲವಾಗಿ ಖಂಡಿಸಿದರು.

ಕತಾರ್ ಶೇಖ್ ತಮೀಮ್ ಬಿನ್ ಹಮದ್ ಬಿನ್ ಖಲೀಫಾ ಅಲ್ ಥಾನಿ, ಜೋರ್ಡನ್ ರಾಜ ಎರಡನೇ ಅಬ್ದುಲ್ಲಾ, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್, ಒಮನ್ ಸುಲ್ತಾನ್ ಹೈಥಮ್ ಬಿನ್ ತಾರಿಕ್ ಅಲ್ ಸಯೀದ್ ಮತ್ತು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂರೊಂದಿಗೆ ಪ್ರತ್ಯೇಕ ದೂರವಾಣಿ ಕರೆಗಳಲ್ಲಿ ಮಾತನಾಡಿದ ಮೋದಿ, ಮಧ್ಯಪ್ರಾಚ್ಯದಲ್ಲಿ ಶಾಂತಿ, ಭದ್ರತೆ ಮತ್ತು ಸ್ಥಿರತೆ ನೆಲೆಗೊಳಿಸಲು ಸಂವಾದ ಮತ್ತು ರಾಜತಾಂತ್ರಿಕತೆಯ ಮಹತ್ವವನ್ನು ಅವರು ಒತ್ತಿ ಹೇಳಿದ್ದಾರೆ. ಅಲ್ಲದೆ, ಹಾರ್ಮುಜ್ ಜಲಸಂಧಿ ಮೂಲಕ ಸುರಕ್ಷಿತ ಮತ್ತು ಮುಕ್ತ ನೌಕಾ ಸಂಚಾರದ ಅಗತ್ಯವನ್ನೂ ಉಲ್ಲೇಖಿಸಿದ್ದಾರೆ.

ನನ್ನ ಸಹೋದರ ಕತಾರ್‌ನ ಶೇಖ್ ತಮೀಮ್ ಬಿನ್ ಹಮದ್‌ರೊಂದಿಗೆ ಮಾತನಾಡಿ, ಅವರಿಗೆ ಮತ್ತು ಕತಾರ್ ಜನತೆಗೆ ಹೃತ್ಪೂರ್ವಕ ಈದ್ ಶುಭಾಶಯಗಳನ್ನು ತಿಳಿಸಿದೆ ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಕತಾರ್ ಜತೆಗಿನ ಭಾರತದ ಐಕ್ಯತೆಯನ್ನು ಮೋದಿ ಪುನರುಚ್ಚರಿಸಿದ್ದಾರೆ.

ಜೋರ್ಡನ್‌ನ ರಾಜ ಎರಡನೇ ಅಬ್ದುಲ್ಲಾರನ್ನು ಸಹ ಸಹೋದರ ಎಂದು ಕರೆದ ಮೋದಿ, ಅವರಿಗೆ ಮುಂಗಡ ಈದ್ ಶುಭಾಶಯಗಳನ್ನು ತಿಳಿಸಿದರು. ಭಾರತ ಮತ್ತು ಜೋರ್ಡನ್ ಸರಕುಗಳ ಮತ್ತು ನಿರ್ಬಂಧರಹಿತ ತೈಲ ಸಾಗಣೆಗೆ ಬೆಂಬಲ ನೀಡುತ್ತವೆ. ಪ್ರದೇಶದಲ್ಲಿ ಸಿಲುಕಿದ್ದ ಭಾರತೀಯರನ್ನು ಸುರಕ್ಷಿತವಾಗಿ ಮರಳಿಸಲು ಜೋರ್ಡನ್ ಮಾಡಿದ ಪ್ರಯತ್ನಗಳನ್ನು ಮೋದಿ ಶ್ಲಾಘಿಸಿದ್ದಾರೆ.

» ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ಸರಿಯಲ್ಲ
» ಪಶ್ಚಿಮ ಏಷ್ಯಾ ರಾಷ್ಟಗಳ ನಾಯಕರೊಂದಿಗೆ ಮಾತುಕತೆ
» ಶಾಂತಿ, ಭದ್ರತೆ ಮತ್ತು ಸ್ಥಿರತೆ ನೆಲೆಗೊಳಿಸಲು ಪ್ರಧಾನಿ ಕರೆ

ಆರು ಭಾರತೀಯರ ಸಾವು

ಪಶ್ಚಿಮ ಏಷ್ಯಾ ಸಂಘರ್ಷದ ನಡುವೆ ಕೊಲ್ಲಿ ಪ್ರದೇಶದಾದ್ಯಂತ ನಡೆದ ಪ್ರತ್ಯೇಕ ಘಟನೆಗಳಲ್ಲಿ ಆರು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡಿದ್ದು, ಓರ್ವ ನಾಪತ್ತೆಯಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಶುಕ್ರವಾರ ಹೇಳಿದೆ. ಭಾರತೀಯ ರಾಯಭಾರ ಕಚೇರಿಗಳು ಸಹಾಯ ಮತ್ತು ವಾಪಸಾತಿಗಾಗಿ ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿವೆ ಎಂದು ಹೇಳಿದೆ. ಮಾರ್ಚ್ 18ರಂದು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಭಾರತೀಯ ಪ್ರಜೆಯೊಬ್ಬ ಮೃತಪಟ್ಟಿದ್ದು, ಕೊಲ್ಲಿ ಪ್ರದೇಶದಲ್ಲಿ ಒಟ್ಟು ಭಾರತೀಯ ಮೃತರ ಸಂಖ್ಯೆ ಆರಕ್ಕೆ ಏರಿದೆ. ಸಾವು ಹೇಗೆ ಸಂಭವಿಸಿದೆ ಎಂಬ ಮಾಹಿತಿ ಇನ್ನೂ ಅಸ್ಪಷ್ಟವಾಗಿವೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಮಾರ್ಚ್ 18 ರಂದು ನಡೆದ ಇತ್ತೀಚಿನ ಘಟನೆಗಳಿಂದಾಗಿ ರಿಯಾದ್‌ನಲ್ಲಿ ಭಾರತೀಯ ಪ್ರಜೆಯೊಬ್ಬರ ದುರಂತ ನಿಧನಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಮೃತರ ಕುಟುಂಬ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ ಎಂದು ಹೇಳಿದೆ. ಈ ವಿಷಯದಲ್ಲಿ ಸಾಧ್ಯವಿರುವ ಎಲ್ಲಾ ಸಹಾಯವನ್ನು ನೀಡಲು ನಾವು ಬದ್ಧರಾಗಿದ್ದೇವೆ ಎಂದು ಪೋಸ್ಟ್ ಸೇರಿಸಲಾಗಿದೆ. ಅಂತರ ಸಚಿವಾಲಯದವನ್ನುದ್ದೇಶಿಸಿ ಮಾತನಾಡಿದ ಎಂಇಎಯ ಹೆಚ್ಚುವರಿ ಕಾರ್ಯದರ್ಶಿ (ಗಲ್ಫ್) ಅಸೀಮ್ ಆರ್. ಮಹಾಜನ್, ನಾಪತ್ತೆಯಾದ ವ್ಯಕ್ತಿಯನ್ನು ಪತ್ತೆಹಚ್ಚಲು ಮತ್ತು ಮೃತರನ್ನು ಭಾರತಕ್ಕೆ ಮರಳಿಸಲು ಅನೇಕ ದೇಶಗಳಲ್ಲಿನ ಭಾರತೀಯ ರಾಯಭಾರ ಕಚೇರಿಗಳು ಅಧಿಕಾರಿಗಳೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿವೆ ಎಂದು ಹೇಳಿದರು. ದುರದೃಷ್ಟವಶಾತ್ ಆರು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡಿದ್ದಾರೆ. ಸೌದಿ ಅರೇಬಿಯಾ, ಒಮಾನ್, ಇರಾಕ್ ಮತ್ತು ಯುಎಇಯಲ್ಲಿರುವ ನಮ್ಮ ನಿಯೋಗಗಳು ನಾಪತ್ತೆಯಾದ ಭಾರತೀಯ ಪ್ರಜೆಗೆ ಸಂಬಂಧಿಸಿದಂತೆ ಮತ್ತು ಮೃತ ಭಾರತೀಯ ಪ್ರಜೆಗಳ ಪಾರ್ಥಿವ ಶರೀರವನ್ನು ಶೀಘ್ರವಾಗಿ ಭಾರತಕ್ಕೆ ಮರಳಿಸಲು ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿವೆ ಎಂದು ಮಹಾಜನ್ ಹೇಳಿದರು.

ಕಿರುಸುದ್ದಿ

ಲಿಪುಲೇಖ್ ಮೂಲಕ ವ್ಯಾಪಾರ ಪುನರಾರಂಭ

ಹೊಸದಿಲ್ಲಿ: ಮಹತ್ವದ ರಾಜತಾಂತ್ರಿಕ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ, ಉತ್ತರಾಖಂಡದ ಪಿಥೌರಾಗಢ್ ಜಿಲ್ಲೆಯ ಲಿಪುಲೇಖ್ ಪಾಸ್ ಮೂಲಕ ಭಾರತ ಮತ್ತು ಚೀನಾ ನಡುವಿನ ಐತಿಹಾಸಿಕ ಗಡಿಯಾಚೆಗಿನ ವ್ಯಾಪಾರವು ಈ ಜೂನ್‌ನಲ್ಲಿ ಪುನರಾರಂಭಗೊಳ್ಳಲಿದೆ. 2025ರ ಆಗಸ್ಟ್‌ನಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ಚೀನಾದ ವಿದೇಶಾಂಗ ಸಚಿವ ಯಿ ನಡುವಿನ ಉನ್ನತ ಮಟ್ಟದ ರಾಜತಾಂತ್ರಿಕ ಮಾತುಕತೆಯ ನಂತರ, ಹಿಮಾಚಲ ಪ್ರದೇಶದ ಶಿಪ್ಕಿ ಲಾ ಮತ್ತು ಸಿಕ್ಕಿಂನ ನಾಥು ಲಾ ಸೇರಿದಂತೆ ಹಿಮಾಲಯದ ಪ್ರಮುಖ ವ್ಯಾಪಾರ ಮಾರ್ಗಗಳನ್ನು ಮತ್ತೆ ತೆರೆಯಲು ಎರಡೂ ರಾಷ್ಟಗಳು ಒಪ್ಪಿಕೊಂಡವು.

ಅಮೆರಿಕ ಯುದ್ಧ ವಿಮಾನ ನಿಲ್ಲಿಸಲು ಶ್ರೀಲಂಕಾ ಅಸಮ್ಮತಿ

ಕೊಲಂಬೊ: ಅಮೆರಿಕದ ತನ್ನ ಎರಡು ಯುದ್ಧ ವಿಮಾನಗಳನ್ನು ಮಟ್ಟಾಲ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಲ್ಲಿಸಲು ಅನುಮತಿ ನಿರಾಕರಿಸುವ ಮೂಲಕ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ತಟಸ್ಥ ನೀತಿ ಧೋರಣೆಯನ್ನು ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸಾನಾಯಕೆ ದೃಢಪಡಿಸಿದ್ದಾರೆ.

300 ಬೆಟ್ಟಿಂಗ್ ಆ್ಯಪ್‌ಗೆ ಕೇಂದ್ರ ಸರ್ಕಾರ ನಿರ್ಬಂಧ

ಹೊಸದಿಲ್ಲಿ: ಕೇಂದ್ರ ಸರ್ಕಾರ ಅಕ್ರಮ ಬೆಟ್ಟಿಂಗ್ ಮೇಲೆ ಕಠಿಣ ಕ್ರಮ ಕೈಗೊಂಡಿದ್ದು, 300 ವೆಬ್‌ಸೈಟ್‌ಗಳು ಮತ್ತು ಆನ್‌ಲೈನ್ ಬೆಟ್ಟಿಂಗ್ ಅಪ್ಲಿಕೇಶನ್‌ಗಳನ್ನು ನಿರ್ಬಂಧಿಸಿದೆ. ಆನ್‌ಲೈನ್ ಕ್ರೀಡಾ ಬೆಟ್ಟಿಂಗ್, ಕ್ಯಾಸಿನೊ-ರೂಪದ ಗೇಮಿಂಗ್ ಮತ್ತು ಪೀರ್-ಟು-ಪೀರ್ ಬೆಟ್ಟಿಂಗ್, ಓಲ್ಡ್ ಸ್ಕೂಲ್ ಸತ್ತಾ ಆ್ಯಂಡ್ ಮಟ್ಕಾ ನೆಟ್‌ವರ್ಕ್, ಕ್ಯಾಸಿನೋ ಆ್ಯಪ್ ಸೇರಿದಂತೆ ವಿವಿಧ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಬೆಟ್ಟಿಂಗ್ ಪ್ಲಾಟ್‌ಫಾರ್ಮ್‌ಗಳ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ಹೇರಿದೆ. ಆನ್‌ಲೈನ್ ಗೇಮಿಂಗ್ ಕಾಯ್ದೆಯ ಅಂಗೀಕಾರದ ನಂತರ ಕಾನೂನುಬಾಹಿರ ಚಟುವಟಿಕೆಗಳಿಗಾಗಿ ನಿರ್ಬಂಧಿಸಲಾದ ವೆಬ್‌ಸೈಟ್‌ಗಳು ಅಥವಾ ಅಪ್ಲಿಕೇಶನ್‌ಗಳ ಸಂಖ್ಯೆ 8,400 ಕ್ಕೆ ಏರಿದೆ. ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ, 2025 ಅನ್ನು 2025ರ ಆಗಸ್ಟ್ 21ರಂದು ಸಂಸತ್ತು ಅಂಗೀಕರಿಸಿತು. ಗೇಮಿಂಗ್ ಆಕ್ಟ್ ಎಲ್ಲಾ ರೀತಿಯ ಆನ್‌ಲೈನ್ ಮನಿ ಗೇಮ್‌ಗಳನ್ನು ಸಮಗ್ರವಾಗಿ ನಿಷೇಧಿಸುತ್ತದೆ. ಇದು ಕೌಶಲ್ಯದ ಆಟಗಳಾಗಿರಬಹುದು ಅಥವಾ ಯಾವುದೇ ಸಂಯೋಜನೆಯಾಗಿರಬಹುದು. ಇದು ಅಂತಹ ಆಟಗಳ ಜಾಹೀರಾತು, ಪ್ರಚಾರ ಮತ್ತು ಸೌಲಭ್ಯವನ್ನು ನಿಷೇಧಿಸುತ್ತದೆ. ಜತೆಗೆ ಬ್ಯಾಂಕುಗಳು ಅಥವಾ ಪಾವತಿ ವ್ಯವಸ್ಥೆಗಳ ಮೂಲಕ ಸಂಬಂಧಿತ ಹಣಕಾಸು ವಹಿವಾಟುಗಳ ಪ್ರಕ್ರಿಯೆಯನ್ನು ನಿಷೇಧಿಸುತ್ತದೆ. ಈ ಅಂಗೀಕಾರ ಡಿಜಿಟಲ್ ಗೇಮಿಂಗ್ ಮತ್ತು ಬೆಟ್ಟಿಂಗ್ ಚಟುವಟಿಕೆಗಳನ್ನು ನಿಯಂತ್ರಿಸಲು ಕಾನೂನು ಚೌಕಟ್ಟನ್ನು ಬಲಪಡಿಸಿತು. ಈ ವರ್ಷದ ಜನವರಿಯ ಆರಂಭದಲ್ಲಿ ಕೇಂದ್ರ ಸರ್ಕಾರವು 242 ಅಕ್ರಮ ಬೆಟ್ಟಿಂಗ್ ಮತ್ತು ಜೂಜಾಟ ವೆಬ್‌ಸೈಟ್ ಲಿಂಕ್‌ಗಳನ್ನು ನಿರ್ಬಂಧಿಸಿತ್ತು.

ಕೆನಡಾದಲ್ಲಿ ಭಾರತ ಗುಪ್ತ ಚಟುವಟಿಕೆ ನಡೆಸುತ್ತಿಲ್ಲ

ಒಟ್ಟಾವಾ: ಕೆನಡಾದಲ್ಲಿ ಭಾರತ ಸರ್ಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಗುಪ್ತ ಕಾರ್ಯಾಚರಣೆಗಳಾಗಲಿ, ದಮನಕಾರಿ ಚಟುವಟಿಕೆಗಳು ಈಗ ನಡೆಯುತ್ತಿಲ್ಲ ಎಂದು ಕೆನಡಾ ಪೊಲೀಸ್ ಮುಖ್ಯಸ್ಥರು ಹೇಳಿದ್ದಾರೆ. ರಾಯಲ್ ಕೆನೇಡಿಯನ್ ಮೌಂಟೆಡ್ ಪೊಲೀಸ್ ಆಯುಕ್ತ ಮೈಕ್ ಡುಹೆಮ್ ಸಿಟಿವಿ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಈ ಸ್ಪಷ್ಟನೆ ನೀಡಿದ್ದಾರೆ. ಭಾರತ ಪರ ಏಜೆಂಟ್‌ಗಳು ಕೆನಡಾದಲ್ಲಿರುವವರ ಮೇಲೆ ಒತ್ತಡ ಹೇರುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಈಗಿನ ತನಿಖಾ ದಾಖಲೆಗಳಲ್ಲಿ ಯಾವುದೇ ವಿದೇಶಿ ರಾಷ್ಟ್ರದ ನೇರ ಸಂಪರ್ಕವನ್ನು ಸ್ಥಾಪಿಸಲು ಸಾಕ್ಷ್ಯ ಲಭ್ಯವಾಗಿಲ್ಲ ಎಂದು ತಿಳಿಸಿದ್ದಾರೆ.

ಬೆದರಿಕೆ, ಕಿರುಕುಳ, ಒತ್ತಡದಂತಹ ಕೆಲವು ಪ್ರತ್ಯೇಕ ಘಟನೆಗಳು ದಾಖಲಾಗಿದ್ದರೂ, ಅವುಗಳನ್ನು ಭಾರತ ಅಥವಾ ಇತರ ಯಾವುದೇ ವಿದೇಶಿ ಸರ್ಕಾರದೊಂದಿಗೆ ನೇರವಾಗಿ ಕೊಂಡಿ ಹಾಕಲು ತನಿಖಾಧಿಕಾರಿಗಳ ಬಳಿ ಸಮರ್ಪಕ ಆಧಾರ ಇಲ್ಲ ಎಂದಿದ್ದಾರೆ. ಹೀಗಾಗಿ, ಈ ಹೇಳಿಕೆಯಿಂದಾಗಿ ಭಾರತ-ಕೆನಡಾ ನಡುವಿನ ಕಳೆದ ಕೆಲ ತಿಂಗಳ ರಾಜತಾಂತ್ರಿಕ ಉದ್ವಿಗ್ನತೆಗೆ ಹೊಸ ತಿರುವು ನೀಡಿದಂತಾಗಿದೆ.

2023ರಲ್ಲಿ ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಭಾರತೀಯ ಸಂಪರ್ಕ ಇರಬಹುದು ಎಂದು ಆಗಿನ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೋ ಆರೋಪಿಸಿದ್ದರು. ಭಾರತವು ಅದನ್ನು ಅಂದೇ ತೀವ್ರವಾಗಿ ತಳ್ಳಿ ಹಾಕಿತ್ತು. ಇದಾದ ಮೇಲೆ ಉಭಯ ದೇಶಗಳ ರಾಜತಾಂತ್ರಿಕ ಸಂಬಂಧ ಹಾಳಾಗಿತ್ತು. ಸದ್ಯ ಕೆನಡಾದಲ್ಲಿನ ಕಾರ್ನಿ ಸರ್ಕಾರ, ಭಾರತದ ಜತೆ ಉತ್ತಮ ಸಂಬಂಧ ಏರ್ಪಡಿಸಿಕೊಳ್ಳಲು ಮುಂದಾಗಿದ್ದು, ಇತ್ತೀಚೆಗಷ್ಟೇ ಭೇಟಿಯನ್ನೂ ನೀಡಿದ್ದರು.

ಆಫ್ಘಾನ್‌ಗೆ ಭಾರತದಿಂದ ವೈದ್ಯಕೀಯ ನೆರವು

ಹೊಸದಿಲ್ಲಿ: ಮಾರ್ಚ್ 16ರ ದಾಳಿಯಲ್ಲಿ ಗಾಯಗೊಂಡ ಜನರ ಚಿಕಿತ್ಸೆಗೆ ಸಹಾಯ ಮಾಡುವ ನಿಟ್ಟಿನಲ್ಲಿ ಭಾರತವು 2.50 ಟನ್ ತುರ್ತು ವೈದ್ಯಕೀಯ ಸರಬರಾಜುಗಳನ್ನು ಅಫ್ಘಾನಿಸ್ತಾನಕ್ಕೆ ಕಳುಹಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಶುಕ್ರವಾರ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಪಾಕಿಸ್ತಾನದ ದಾಳಿಯಲ್ಲಿ ಆಫ್ಘಾನ್‌ನ ಅನೇಕ ಜನರು ಮೃತಪಟ್ಟಿದ್ದು, ಹಲವಾರು ಜನರು ಗಾಯಗೊಂಡಿದ್ದರು.



ನಗರದಲ್ಲಿ ತುರ್ತು ವೈದ್ಯಕೀಯ ಅಗತ್ಯಗಳನ್ನು ಅನಿವಾರ್ಯತೆಗಾಗಿ ಈ ಮಾನವೀಯ ನೆರವು ಕಳುಹಿಸಲಾಗಿದೆ. ಈ ರವಾನೆಯು ತುರ್ತು ಔಷಧಿಗಳು, ವೈದ್ಯಕೀಯ ವಸ್ತುಗಳು, ಕಿಟ್‌ಗಳು ಮತ್ತು ಉಪಕರಣಗಳನ್ನು ಒಳಗೊಂಡಿದ್ದು, ತಕ್ಷಣದ ಚಿಕಿತ್ಸೆ ಮತ್ತು ಚೇತರಿಕೆಯ ಪ್ರಯತ್ನಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ ಎಂದು ಎಂಇಎ ಹೇಳಿದೆ. ಭಾರತವು ಆಫ್ಘಾನ್ ಜನರೊಂದಿಗೆ ಒಗ್ಗಟ್ಟಿನಿಂದ ನಿಲ್ಲುತ್ತದೆ ಮತ್ತು ಈ ಕಷ್ಟದ ಸಮಯದಲ್ಲಿ ಸಾಧ್ಯವಿರುವ ಎಲ್ಲಾ ಮಾನವೀಯ ಬೆಂಬಲವನ್ನು ನೀಡುವುದನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದರು. ಮಾರ್ಚ್ 16ರಂದು, ಕಾಬೂಲ್‌ನ ಆಸ್ಪತ್ರೆಯ ಮೇಲೆ ಪಾಕಿಸ್ತಾನದ ವಾಯುದಾಳಿಯಲ್ಲಿ ಕನಿಷ್ಠ 400 ಜನರು ಮೃತಪಟ್ಟಿದ್ದು, ಸುಮಾರು 250 ಜನರು ಗಾಯಗೊಂಡಿದ್ದರು.

ಅಮೋಘ್ ಜ್ವಾಲಾ ಸಮರಾಭ್ಯಾಸ ಯಶಸ್ವಿ

ಹೊಸದಿಲ್ಲಿ: ಭಾರತೀಯ ಸೇನೆಯ ದಕ್ಷಿಣ ಕಮಾಂಡ್, ಭವಿಷ್ಯದ ಯುದ್ಧ ತಂತ್ರಗಳನ್ನು ಪ್ರದರ್ಶಿಸುವ, ಸಾಂಪ್ರದಾಯಿಕ ಯುದ್ಧ ತಂತ್ರಗಳೊಂದಿಗೆ ತಂತ್ರಜ್ಞಾನ ಸಂಯೋಜಿಸುವ, 'ಅಮೋಘ್ ಜ್ವಾಲಾ' ಎಂಬ ಮಹತ್ವದ ಯುದ್ಧ ಸಮರಾಭ್ಯಸವನ್ನು ಮುಕ್ತಾಯಗೊಳಿಸಿತು. ಮಾರ್ಚ್ 6ರಿಂದ 18ರವರೆಗೆ ಬಬಿನಾ ಫೀಲ್ಡ್ ಫೈರಿಂಗ್ ಶ್ರೇಣಿಗಳಲ್ಲಿ ಅಮೋಗ್ ಜ್ವಾಲಾ ನಡೆಯಿತು. ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್, ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್, ದಕ್ಷಿಣ ಕಮಾಂಡ್, ಪಡೆಗಳನ್ನು ಅವರ ಸನ್ನದ್ಧತೆಗಾಗಿ ಶ್ಲಾಘಿಸಿದರು. ಆಧುನಿಕ ಯುದ್ಧವು ಭೂ ಕದನಗಳನ್ನು ಮೀರಿ, ವಾಯು, ಸೈಬರ್ ಮತ್ತು ಬಾಹ್ಯಾಕಾಶ ಕ್ಷೇತ್ರಗಳನ್ನು ಒಳಗೊಂಡಿದ್ದು, ಎಲ್ಲವೂ ನೈಜ ಸಮಯದಲ್ಲಿ ಕಾರ್ಯನಿರ್ವಹಿಸುತ್ತದೆ ಎಂದು ಲೆಫ್ಟಿನೆಂಟ್ ಜನರಲ್ ಸೇಠ್ ಒತ್ತಿ ಹೇಳಿದರು. ವಿವಿಧ ಮಿಲಿಟರಿ ಶಸ್ತ್ರಾಸ್ತ್ರಗಳ ತಡೆರಹಿತ ಕಾರ್ಯಾಚರಣೆಯನ್ನು ಪರೀಕ್ಷಿಸುವುದು ಇದರ ಮುಖ್ಯ ಉದ್ದೇಶವಾಗಿತ್ತು. ಟ್ಯಾಂಕ್‌ಗಗಳು ಮತ್ತು ಯಾಂತ್ರೀಕೃತ ಘಟಕಗಳು ದಾಳಿ ಹೆಲಿಕಾಪ್ಟರ್‌ಗಳು ಮತ್ತು ಫೈಟರ್ ಏರ್‌ಕ್ರಾಫ್ಟ್‌ಗಳೊಂದಿಗೆ ಸಮನ್ವಯಗೊಂಡವು, ಆದರೆ ಡ್ರೋನ್‌ಗಳು ನೇರ ಕಣ್ಗಾವಲು ಮತ್ತು ತ್ವರಿತ ಗುರಿಯನ್ನು ಗುರುತಿಸಿದವು.

11 ದಶಲಕ್ಷ ಡಾಲರ್ ಒಪ್ಪಂದ | ಬರಲಿದೆ ಇಸ್ರೇಲಿ ಎಐ-ಆಧಾರಿತ ಸ್ವದೇಶಿ ಡ್ರೋನ್

ದೇಸಿಡ್ರೋನ್ ಒಪ್ಪಂದಕ್ಕೆ ಭಾರತ-ಇಸ್ರೇಲ್ ಸಹಿ

ಹೊಸದಿಲ್ಲಿ: ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಯುದ್ಧ ನಡೆಸುತ್ತಿರುವ ಮಧ್ಯೆ, ಅಮೆರಿಕದಲ್ಲಿ ಉತ್ಪಾದನಾ ಘಟಕವಿರುವ ಇಸ್ರೇಲ್ ಕಂಪನಿಯ ಜತೆ ಭಾರತ ಎಐ-ಆಧಾರಿತ ಸ್ವದೇಶಿ ಡ್ರೋನ್ ಉತ್ಪಾದನೆಗಾಗಿ 11 ದಶಲಕ್ಷ ಡಾಲರ್ ಮೌಲ್ಯದ ಒಪ್ಪಂದ ಮಾಡಿಕೊಂಡಿದೆ. ಇಸ್ರೇಲ್‌ನ ಪ್ರಮುಖ ಎಐ-ಆಧಾರಿತ ರೋಬೋಟಿಕ್ಸ್ ಮತ್ತು ಸಾಫ್ಟ್‌ವೇರ್ ಕಂಪನಿ ಎಕ್ಸ್‌ಟೆಂಡ್ ಮೇಕ್ ಇನ್ ಇಂಡಿಯಾ ಅನ್ವಯದಲ್ಲಿ ಎಐ-ಆಧಾರಿತ ಮಾನವರಹಿತ ವಾಯುಯಾನ ವಾಹನ (ಯುಎವಿ)ಗಳನ್ನು ಉತ್ಪಾದಿಸಲಿದ್ದು, ಭಾರತದ ರಕ್ಷಣಾ ತಂತ್ರಜ್ಞಾನ ಕಂಪನಿ ರೇಯೋನಿಕ್ಸ್ ಟೆಕ್‌ನೊಂದಿಗೆ 11 ದಶಲಕ್ಷ ಡಾಲರ್ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.

ರೇಯೋನಿಕ್ಸ್ ಟೆಕ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವುದರ ಮೂಲಕ ಎಕ್ಸ್‌ಟೆಂಡ್ ತನ್ನ ಎಐ-ಆಧಾರಿತ ಆಟೋನಮಿ ಪ್ಲ್ಯಾಟ್‌ಫಾರಂ ಎಕ್ಸ್‌ಒಎಸ್ ವ್ಯವಹಾರವನ್ನು ಭಾರತದ ಎಐ ಮಾರುಕಟ್ಟೆಗೆ ವಿಸ್ತರಿಸಿದೆ. ಒಪ್ಪಂದದ ಪ್ರಕಾರ, ಎಕ್ಸ್‌ಟೆಂಡ್ ಒಡೆತನದ ಎಕ್ಸ್‌ಒಎಸ್ ಆಪರೇಟಿಂಗ್ ಸಿಸ್ಟಂ ಮತ್ತು ತಂತ್ರಜ್ಞಾನದ ನೆರವಿನೊಂದಿಗೆ ಡ್ರೋನ್‌ಗಳ ಉತ್ಪಾದನೆ, ಪರೀಕ್ಷೆ ಮತ್ತು ಪೂರೈಕೆಯನ್ನು ರೇಯೋನಿಕ್ಸ್ ನಡೆಸಲಿದೆ. ಕಳೆದ ವರ್ಷ ಇಸ್ರೇಲ್ ಸೇನೆಗೆ 5,000 ಅಸಾಲ್ಟ್ ಡ್ರೋನ್‌ಗಳನ್ನು ಪೂರೈಕೆ ಮಾಡುವ ಒಪ್ಪಂದವನ್ನು ಎಕ್ಸ್‌ಟೆಂಡ್ ಪಡೆದುಕೊಂಡಿತ್ತು.



ಸ್ವದೇಶಿ ಡ್ರೋನ್‌ಗಳಿಗೆ ಇಸ್ರೇಲಿ ತಂತ್ರಜ್ಞಾನ: ಮೇಕ್ ಇನ್ ಇಂಡಿಯಾ ಅನ್ವಯದಲ್ಲಿ, ರೇಯೋನಿಕ್ಸ್ ನಿರ್ಮಾಣದ ಡ್ರೋನ್‌ಗಳಿಗೆ ಸಾಫ್ಟ್‌ವೇರ್ ಬೆನ್ನೆಲುಬಾಗಿ ಎಕ್ಸ್‌ಒಎಸ್ ಕೆಲಸ ಮಾಡಲಿದೆ. ಇಸ್ರೇಲಿ ಆಪರೇಟಿಂಗ್ ಸಿಸ್ಟಂ ಸಾಫ್ಟ್‌ವೇರ್ ಎಐ-ಆಧಾರಿತ ಕಣ್ಗಾವಲು, ಮಿಷನ್ ಯೋಜನೆ ಮತ್ತು ನೈಜ ಸಮಯದ ಕಾರ್ಯಾಚರಣೆ ನಿಯಂತ್ರಣದಲ್ಲಿ ನೆರವಾಗಲಿದೆ. ಈಗಾಗಲೇ ಎಕ್ಸ್‌ಟೆಂಡ್ ಕಂಪನಿಯ ಕೆಲವು ಉತ್ಪನ್ನಗಳ ಉತ್ಪಾದನೆ ಮತ್ತು ಪೂರೈಕೆ ಪಾಲುದಾರಿಕೆ ಮಾಡಿರುವ ರೇಯೋನಿಕ್ಸ್ ಹೊಸ ಒಪ್ಪಂದ ಮಾಡಿಕೊಂಡಿದೆ.

> ಭಾರತವು ಜಾಗತಿಕ ಮಟ್ಟದಲ್ಲಿ ಅತ್ಯಂತ ವೇಗದಲ್ಲಿ ಪ್ರಗತಿ ಕಾಣುತ್ತಿರುವ ರಕ್ಷಣಾ ತಂತ್ರಜ್ಞಾನ ಮಾರುಕಟ್ಟೆಯಾಗಿದೆ. ಭಾರತೀಯ ರಕ್ಷಣಾ ಮಾರುಕಟ್ಟೆಯಲ್ಲಿ ಸ್ವದೇಶಿ ಉತ್ಪಾದನೆ ಮತ್ತು ಎಐ-ಆಧಾರಿತ ತಂತ್ರಜ್ಞಾನಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ.
> ■ **ಅವೀವ್ ಷಹೀರ,** ಎಕ್ಸ್‌ಟೆಂಡ್ ಸಿಇಒ ಮತ್ತು ಸಹ-ಸಂಸ್ಥಾಪಕ

> ಯುದ್ಧಗಳಲ್ಲಿ ಸಾಬೀತಾಗಿರುವ ಎಕ್ಸ್‌ಟೆಂಡ್‌ನ ಎಐ-ಆಧಾರಿತ ತಂತ್ರಜ್ಞಾನವನ್ನು ಭಾರತಕ್ಕೆ ಕರೆತರುವುದೇ ಈ ಒಪ್ಪಂದದ ಮುಖ್ಯ ಉದ್ದೇಶವಾಗಿದೆ. ಮೇಕ್ ಇನ್ ಇಂಡಿಯಾ ದೃಷ್ಟಿಕೋನದ ಮುಖೇನ ರಕ್ಷಣಾ ಕ್ಷೇತ್ರದಲ್ಲಿನ ಆತ್ಮನಿರ್ಭರ ಭಾರತದ ಕನಸು ನನಸಾಗಿಸಲು ಕೊಡುಗೆ ನೀಡಲಿದ್ದೇವೆ.
> ■ **ಅಮಿತ್ ಪಾಂಡೆ,** ರೇಯೋನಿಕ್ಸ್ ಎಂ.ಡಿ.

ಧಾರ್ಮಿಕ ಭಾವನೆಗಳಿಗೆ ಜಾರ್ಖಂಡ್ ಸಿಎಂ ಧಕ್ಕೆ

ಸನಾತನಕ್ಕೆ ಅವಮಾನ ಬಿಜೆಪಿ ಕಿಡಿ

ಹೊಸದಿಲ್ಲಿ: ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೆನ್ ಅವರು ವಿಧಾನಸಭೆಯಲ್ಲಿ ಸನಾತನ ಧರ್ಮ ಹಾಗೂ ಹಿಂದೂ ದೇವತೆಗಳ ಬಗ್ಗೆ ಮಾಡಿದ ಎನ್ನಲಾದ ಹೇಳಿಕೆಗಳ ಹಿನ್ನೆಲೆಯಲ್ಲಿ ಬಿಜೆಪಿ ಶುಕ್ರವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.



ಬಿಜೆಪಿ ಆರೋಪಿಸಿದಂತೆ, ಸೋರೆನ್ ಅವರ ಹೇಳಿಕೆಗಳು ಧಾರ್ಮಿಕ ಭಾವನೆಗಳಿಗೆ ಧಕ್ಕೆಯುನ್ನುಂಟುಮಾಡುವಂತಿವೆ. ಜೊತೆಗೆ, ಇಂಡಿ ವಿರೋಧ ಪಕ್ಷಗಳ ಮೈತ್ರಿಯ ನಾಯಕರಿಗೆ ಹಿಂದೂ ದೇವತೆಗಳನ್ನು ಹಾಸ್ಯ ಮಾಡುವುದೂ, ಅವರ ಸಂಸ್ಕೃತಿಯನ್ನು ಹಿಗ್ಗಾಮುಗ್ಗಾ ಟೀಕಿಸುವುದೂ ಒಂದು ಫ್ಯಾಷನ್ ಆಗಿಬಿಟ್ಟಿದೆ ಎಂದು ಪಕ್ಷ ಟೀಕಿಸಿದೆ.

ವಿಡಿಯೋದಲ್ಲೇನಿದೆ?: ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಒಂದು ವಿಡಿಯೋದಲ್ಲಿ, ಸೋರೆನ್ ಅವರು ನಾವು ಸರಸ್ವತಿ ಪೂಜೆ ಹೆಚ್ಚು ಆಚರಿಸುತ್ತೇವೆ, ಆದರೆ ಅತ್ಯಂತ ಪ್ರತಿಭಾವಂತ ಮಕ್ಕಳು ಜಪಾನ್‌ನಲ್ಲಿ ಹುಟ್ಟುತ್ತಾರೆ. ನಾವು ಲಕ್ಷ್ಮೀ ಪೂಜೆ ಹೆಚ್ಚು ಮಾಡುತ್ತೇವೆ, ಆದರೆ ಶ್ರೀಮಂತರಾದವರು ಅಮೆರಿಕದಲ್ಲಿ ಹುಟ್ಟುತ್ತಾರೆ. ಇದರಲ್ಲಿ ಮೂಲಭೂತವಾಗಿ ಏನೋ ತಪ್ಪಿದೆ ಎಂದು ಹೇಳಿರುವುದು ಕೇಳಿಬಂದಿದೆ.

ಈ ವಿಡಿಯೋವನ್ನು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಹಂಚಿಕೊಂಡ ಬಿಜೆಪಿ, ಸೋರೆನ್ ಅವರ ಹೇಳಿಕೆಯನ್ನು 'ಸನಾತನದ ಮೇಲೆ ದಾಳಿ ಮತ್ತು ಭಾರತದ ಅವಮಾನ' ಎಂದು ಬಣ್ಣಿಸಿದೆ.

'ಸನಾತನದ ಮೇಲೆ ದಾಳಿ ಎಂದರೆ ಭಾರತದ ಮೇಲೆ ದಾಳಿ. ಮತಬ್ಯಾಂಕ್ ರಾಜಕಾರಣಕ್ಕಾಗಿ ಸನಾತನ ಅನುಯಾಯಿಗಳ ನಂಬಿಕೆ ಮತ್ತು ಸಂಸ್ಕೃತಿಯನ್ನು ಗುರಿಯಾಗಿಸುವುದು ಹೇಮಂತ್ ಸೋರೆನ್ ಹಾಗೂ ಇಂಡಿ ಮೈತ್ರಿ ನಾಯಕರ ಅಭ್ಯಾಸವಾಗಿದೆ. ದೇವತೆಗಳನ್ನು ಹಾಸ್ಯ ಮಾಡುವುದು, ಆಚರಣೆಗಳನ್ನು ಟೀಕಿಸುವುದು ಈಗ ಅವರಿಗೆ ಸಾಮಾನ್ಯವಾಗಿದೆ. ದೇಶದ ಜನರು ಇದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ನೀಡುತ್ತಾರೆ,' ಎಂದು ಬಿಜೆಪಿ ಹೇಳಿದೆ.

ಹುಬ್ಬಳ್ಳಿಯಲ್ಲಿ ಯುಗಾದಿ ಹಬ್ಬದ ಸಂಭ್ರಮ

ಹುಬ್ಬಳ್ಳಿ: ನಗರ ಸೇರಿದಂತೆ ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಗುರುವಾರ ಯುಗಾದಿ ಹಬ್ಬವನ್ನು ಸಂಭ್ರಮ ಹಾಗೂ ಸಡಗರದಿಂದ ಆಚರಿಸಲಾಯಿತು. ಹಿಂದುಗಳ ವರ್ಷದ ಮೊದಲ ಹಬ್ಬವಾದ ಯುಗಾದಿಯಂದು ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ನಡೆದವು. ಜನರು ಮೈಗೆ ಎಣ್ಣೆ ಹಚ್ಚಿಕೊಂಡು, ಸ್ವಲ್ಪ ಸಮಯದ ನಂತರ ಸ್ನಾನ ಮಾಡಿ, ಹೊಸ ದಿರಿಸು ಧರಿಸಿ ದೇವರಿಗೆ ಮನೆಯಲ್ಲೇ ಪೂಜೆ ಸಲ್ಲಿಸಿದರು. ಬೇವು-ಬೆಲ್ಲ ತಿಂದು, ಹೋಳಿಗೆ ಊಟ ಸವಿದರು. ಇದರೊಂದಿಗೆ ಹೊಸ ವರ್ಷವನ್ನು ಸಂಭ್ರಮದಿಂದ ಬರಮಾಡಿಕೊಂಡರು. ಹತ್ತಿರವಿರುವ ದೇವಸ್ಥಾನಗಳಿಗೆ ಕುಟುಂಬ ಸಮೇತ ಭೇಟಿ ನೀಡಿ ದೇವರ ದರ್ಶನ ಪಡೆದರು. ನಗರದ ಸಿದ್ಧಾರೂಢ ಸ್ವಾಮಿ ಮಠ, ಮೂರು ಸಾವಿರ ಮಠ, ಕೃಷ್ಣ ಮಂದಿರ, ದೇಶಪಾಂಡೆ ನಗರದ ರಾಯರಮಠಕ್ಕೆ ನೂರಾರು ಜನರು ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಭೂಮಿತಾಯಿಗೆ ಪೂಜೆ: ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ವರ್ಷ ಮೊದಲ ಹಬ್ಬವಾದ ಯುಗಾದಿ ದಿನದಂದು ಭೂತಾಯಿಗೆ ವಿಶೇಷ ಪೂಜೆ ಸಲ್ಲಿಸಿದ ರೈತಾಪಿ ವರ್ಗದ ಜನರು ಸರಿಯಾಗಿ ಫಸಲು ನೀಡಲಿ ಎಂದು ಬೇಡಿಕೊಂಡರು. ಬೆಳಿಗ್ಗೆ ಎಣ್ಣೆ ಸ್ನಾನ ಮಾಡಿ, ಚಕ್ಕಡಿ, ಟ್ರ್ಯಾಕ್ಟರ್ ಹಾಗೂ ಕೃಷಿ ಬಳಕೆ ಉಪಕರಣ ಮೂಲಕ ಜಮೀನಿಗೆ ಹೋಗಿ ಪೂಜೆ ಸಲ್ಲಿಸಿ ಕೃಷಿ ಚಟುವಟಿಕೆಗಳಿಗೆ ಸಾಂಕೇತಿಕವಾಗಿ ಚಾಲನೆ ನೀಡಿದರು. ಕುಟುಂಬ ಸಮೇತ ದೇವಸ್ಥಾನಗಳಿಗೆ ಹೋಗಿ ವಿಶೇಷ ಪೂಜೆ ಸಲ್ಲಿಸಿ ಹಬ್ಬದ ಅಡುಗೆ ಮಾಡಿ ದೇವರಿಗೆ ನೈವೇದ್ಯ ಹಿಡಿದರು. ಬಳಿಕ ಕುಟುಂಬಸ್ಥರಿಗೆ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡು ಹಬ್ಬದ ಊಟ ಸವಿದು ಸಂಭ್ರಮಿಸಿದರು. ಹಿರಿಯರಿಂದ ಚಿಕ್ಕವರ ವರೆಗೂ ಹೊಸ ಬಟ್ಟೆ ಧರಿಸಿ ಹಬ್ಬದಲ್ಲಿ ತೊಡಗಿಕೊಂಡಿದ್ದರು. ಬಹುತೇಕರು ಫೋಟೋಗಳ ತೆಗೆದುಕೊಂಡು ವಾಟ್ಸ್ಆ್ಯಪ್ ಹಾಗೂ ಇತರ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿ ಸಂಭ್ರಮಿಸಿದರು.



ಉಣಕಲ್ ಸಿದ್ದಪ್ಪಜ್ಜನ ಜಾತ್ರೆ: ಯುಗಾದಿ ಹಬ್ಬದ ದಿನದಂದು ನಗರದ ಉಣಕಲ್ ಸಿದ್ದಪ್ಪಜ್ಜನವರ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ಅಜ್ಜನವರ ಅದ್ದೂರಿ ರಥೋತ್ಸವ ನೆರವೇರಿತು.

ಹುಬ್ಬಳ್ಳಿ-ಧಾರವಾಡ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಬಂದಿದ್ದ ಸಹಸ್ರಾರು ಭಕ್ತರು ತೇರಿಗೆ ಉತ್ತತ್ತಿ, ನಿಂಬೆಹಣ್ಣುಗಳನ್ನು ಎಸೆದು ತಮ್ಮ ಭಕ್ತಿ ಸಮರ್ಪಿಸಿದರು. ರಥೋತ್ಸವ ಆರಂಭವಾಗುವುದಕ್ಕೂ ಮುನ್ನ ಅಜ್ಜನವರ ಬೆಳ್ಳಿಯ ಮೂರ್ತಿಯನ್ನು ಪಾಲಕಿಯಲ್ಲಿಟ್ಟು ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ರಥೋತ್ಸವ ಆರಂಭವಾಯಿತು. ಜಗ್ಗಲಿಗೆ ಮೇಳದೊಂದಿಗೆ ಭಕ್ತರು ಹುರುಪಿನಿಂದ ತೇರು ಎಳೆದರು. ಹೂವು ಹಾಗೂ ವಿವಿಧ ಬಣ್ಣಗಳ ಬಟ್ಟೆಗಳಿಂದ ಅಲಂಕರಿಸಲಾದ ತೇರು ಉಳವಿ ಚನ್ನಬಸವೇಶ್ವರ ದೇವಸ್ಥಾನ ವರೆಗೆ ತಲುಪಿ ಅಲ್ಲಿಂದ ಮತ್ತೆ ವಾಪಸ್ ಸ್ವಸ್ಥಾನವನ್ನು ಸೇರಿತು. ಮಧ್ಯಾಹ್ನ ಭಕ್ತರಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಉಣಕಲ್ ಗ್ರಾಮ ಹಾಗೂ ಸುತ್ತಮುತ್ತಲಿನ ಬಡಾವಣೆಗಳ ಭಕ್ತರು ಬೆಳಿಗ್ಗೆಯಿಂದಲೇ ಪೂಜೆ, ಅಭಿಷೇಕಗಳನ್ನು ಮಾಡಿಸಿದರು. ಹೊಸಬಟ್ಟೆ ತೊಟ್ಟ ಪುರುಷರು, ಮಹಿಳೆಯರು, ಮಕ್ಕಳು ಜಾತ್ರೆಯ ಅಂಗವಾಗಿ ಮಠದ ಹಾದಿಯ ಇಕ್ಕೆಲಗಳಲ್ಲಿ ಹಾಕಿದ್ದ ವಿವಿಧ ಅಂಗಡಿಗಳಲ್ಲಿ ಬೆಂಡು, ಬತ್ತಾಸು ಖರೀದಿಸಿದರು. ಉಣಕಲ್ ಸಿದ್ದಪ್ಪಜ್ಜನವರ 105 ನೇ ಪುಣ್ಯಾರಾಧನೆ ಅಂಗವಾಗಿ ಅಜ್ಜನ ನೂತನ ಶಿಲಾ ಮಂದಿರ ಉದ್ಘಾಟನೆ ಹಾಗೂ ನೂತನ ಶಿಲಾ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ನಡೆಯಿತು.

ಅಹಿಂಸೆಯ ಮಾರ್ಗ ಸಾರಿದ ದೇಶ ಭಾರತ

ಜಮಖಂಡಿ: ವಿಶ್ವದಲ್ಲಿ ಸ್ವಪ್ರತಿಷ್ಠೆ ಬೆಳೆದರೆ ವಿಶ್ವ ನಾಶದತ್ತ ಸಾಗುತ್ತದೆ. ಭಾರತ ಅಹಿಂಸೆಯ ಮಾರ್ಗ ಸಾರಿದ ದೇಶವಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಬದುಕುವ ಹಕ್ಕು ನೀಡಿದ್ದು ಭಾರತವಾಗಿದೆ. ಧರ್ಮ ಗುರು ದೇವರ ಧ್ಯಾನ ಮಾಡುತ್ತಿದ್ದರೆ ಅವರು ದರ್ಮ ಗುರುಗಳೇ ಅಲ್ಲ, ಜೀವಿಗಳ ದುಖದಲ್ಲಿ ಭಾಗವಹಿಸಿ ಪರಿಹಾರ ನೀಡುವದೇ ಧರ್ಮ ಗುರುವಿನ ಕರ್ತವ್ಯವಾಗಿದೆ ಎಂದು ಹಿಪ್ಪರಗಿ ಸಂಗಮೇಶ್ವರ ಮಠದ ಪ್ರಭುಜಿ ಮಹಾರಾಜ ಬೆನ್ನಾಳೆ ಹೇಳಿದರು.

ನಗರದ ಪ್ರತ್ರಿಕಾ ಭವನದಲ್ಲಿ ಸುದ್ದೊಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಮಾನವನಿಗೆ ಭೂಮಿಯ ಮೇಲೆ ಎಲ್ಲೆಂದರಲ್ಲಿ ತಿರುಗಾಡುವ ಹಕ್ಕು ಭಗವಂತ ನೀಡಿದ್ದಾನೆ. ಆದರೆ ನಾವು ಗಡಿ ಹಾಕಿಕೊಂಡಿದ್ದೇವೆ. ಮತ್ತೊಂದು ಗಡಿಯ ಮೇಲೆ ದಾಳಿ ಮಾಡುತ್ತಿದ್ದೇವೆ. ದೇವರ ನೀಡಿದ ಪೃಥ್ವಿಯ ಸದ್ಬಳಕೆ ಮಾಡುತ್ತಿಲ್ಲ, ಶಸ್ತ್ರಾಸ್ತ್ರದಿಂದ ಭೂಮಿಯನ್ನು ಹಾಳು ಮಾಡುತ್ತುದ್ದೇವೆ. ಅಲ್ಲಿ ಖನಿಜ ಸಂಪತ್ತು ಹಾಳಾಗುತ್ತದೆ. ಮಹಾಮಾರಿ ಹುಟ್ಟುತ್ತದೆ. ಇದು ಜಗದಲ್ಲಿ ವಾಸಿಸುವ ಮಾನವಕುಲದ ಮೇಲೆಯೇ ಆಗುತ್ತದೆ ಈ ಪರಿಜ್ಞಾನ ಬೆಳೆಸಲು ನಾವು ವಿಶ್ವ ಶಾಂತಿ ಸಾರಿದ್ದೇವೆ ಎಂದರು.

ಮಾನವ ಕುಲ ಸಮೃದ್ಧಿಗಾಗಿ ಇಂಚಗೇರಿಮಠ ಸಾಕಷ್ಟು ಕೆಲಸ ಮಾಡಿದೆ. ಆದಕ್ಕಾಗಿ ಇಂದು ನಡೆಯುತ್ತಿರುವ ಯುದ್ಧ ನಿಲ್ಲಲು ಶ್ರಮ ವಹಿಸುತ್ತವೆ. ಸರ್ಕಾರ ಇದನ್ನು ಮಾಡಲೇಬೇಕು ಎಂದರು. ಎಸ್.ಎಸ್ .ದೇವರವರ ಮಾತನಾಡಿ, ಜಗತ್ತಿನಲ್ಲಿ ಯುದ್ಧದ ಪ್ರಮಾಣ ಹೆಚ್ಚಾಗಿದೆ. ಭಾರತ ಯುದ್ಧದಲ್ಲಿ ಭಾಗಿಯಿಲ್ಲದಿದ್ದರೂ ಹಿಂದೂ ಮಹಾಸಾಗರದ ಪ್ರಕ್ಷುಬ್ಧತೆ ನಮ್ಮ ಮೇಲೂ ಆಗುತ್ತಿದೆ. ಇಂಚಗೇರಿ ಮಠವು ಈ ವಿಶ್ವ ಶಾಂತಿಗಾಗಿ ಒಂದು ಹೆಜ್ಜೆ ಮುಂದೆ ಬಂದಿದೆ. ಇದಕ್ಕಾಗಿ ಹಿಂದಿನಿಂದಲೂ ವಿಶ್ವ ಶಾಂತಿಗಾಗಿ ಹೋರಾಟ ಮಾಡುತ್ತಲೇ ಬಂದಿದೆ ಎಂದು ಹೇಳಿದರು. ರವೀಂದ್ರ ಹಳಿಂಗಳಿ, ಪ್ರದೀಪ ಮೆಟಗುಡ್ಡ ಮಾತನಾಡಿದರು. ಗಿರಿಮಲ್ಲಪ್ಪ ಆದಬಸಪ್ಪಗೋಳ, ಸಂಗಪ್ಪ ಬಾಗೇವಾಡಿ, ಇದ್ದರು.



ಕಿರುಸುದ್ದಿ

ನಾಳೆಯಿಂದ ಜಾತ್ರಾ ಮಹೋತ್ಸವ

ಬೀಳಗಿ: ತಾಲೂಕಿನ ಗಿರಿಸಾಗರದ ಕಲ್ಯಾಣ ಹಿರೇಮಠದಲ್ಲಿ ಮಹಾತಪಸ್ವಿ ಸಂಗನಬಸವ ಶಿವಾಚಾರ್ಯ ಸ್ವಾಮಿಗಳ ಜಾತ್ರಾ ಮಹೋತ್ಸವವು ಏ.22ರಿಂದ 28ರ ವರೆಗೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ಜರುಗಲಿದೆ ಎಂದು ಮಠದ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದರು. ಪತ್ರಿಕೆಯೊಂದಿಗೆ ಮಾತನಾಡಿದ ಅವರು, 1994 ರಿಂದ ಮಠದಲ್ಲಿ ಸತತವಾಗಿ ಸಾಮೂಹಿಕ ವಿವಾಹ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರಲಾಗಿದೆ. 12ನೇ ಶತಮಾನದಿಂದಲೂ 20ನೇ ಶತಮಾನದವರೆಗೂ ತನ್ನದೇಯಾದ ಐತಿಹಾಸಿಕ ಮಹತ್ವ ಹೊಂದಿರುವ ಮಠವು ಅಧ್ಯಾತ್ಮ ಮತ್ತು ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿದೆ ಎಂದರು. ಏಪ್ರಿಲ್ 22 ರಿಂದ 28ರ ವರೆಗೆ ಪ್ರತಿದಿನ ರಾತ್ರಿ 8 ಗಂಟೆಗೆ ಹರ್ಲಾಪುರದ ಸದಾನಂದ ಶಾಸ್ತ್ರಿಗಳಿಂದ ಮಹಾಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಪುರಾಣ ಪ್ರವಚನ ನಡೆಯಲಿದೆ. ಮತ್ತು ಧಾರ್ಮಿಕ ವಿಧಿಗಳು ಪ್ರತಿನಿತ್ಯ ಶ್ರೀಗುರು ಸಂಗನಬಸವ ಶಿವಾಚಾರ್ಯ ಹಾಗೂ ಮುಕ್ತಿನಾಥ ಶಿವಾಚಾರ್ಯರ ಗದ್ದುಗೆಗಳಿಗೆ ಮಹಾರುದ್ರಾಭಿಷೇಕ, ಬಿಲ್ವಾರ್ಚನೆ ಹಾಗೂ ಮಂಗಳಾರತಿ ನೆರವೇರಲಿದೆ ಎಂದು ತಿಳಿಸಿದರು. ಏಪ್ರಿಲ್ 28 ರಂದು ಬೆಳಗ್ಗೆ 9 ಗಂಟೆಗೆ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಅದ್ದೂರಿ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಲಿದೆ. ಮಧ್ಯಾಹ್ನ 12.38ಕ್ಕೆ ಸರ್ವಧರ್ಮ ಸಾಮೂಹಿಕ ವಿವಾಹ ಹಾಗೂ ಭಾವೈಕ್ಯ ಧರ್ಮ ಸಮ್ಮೇಳನ ಏರ್ಪಡಿಸಲಾಗಿದೆ ಎಂದು ತಿಳಿಸಿದರು. ವಿವಾಹವಾಗಲಿಚ್ಛಿಸುವ ವಧು-ವರರು ಏಪ್ರಿಲ್ 22ರ ಒಳಗಾಗಿ ಫೋಟೋ ಹಾಗೂ ವರನಿಗೆ 21 ಮತ್ತು ವಧುವಿಗೆ 18 ವರ್ಷ ತುಂಬಿದ ಅಗತ್ಯ ವಯಸ್ಸಿನ ದಾಖಲೆಯೊಂದಿಗೆ ಹೆಸರು ನೋಂದಾಯಿಸಿಕೊಳ್ಳಬೇಕು.



ಸುಗ್ಗಿ ಕುಣಿತ ಪ್ರದರ್ಶನ



ಗೋಕರ್ಣ: ತುಳಸೇರಿ ಹಾಲಕ್ಕಿ ಒಕ್ಕಲಿಗರ ಸುಗ್ಗಿ ಹಬ್ಬದ ಪೂರ್ವಭಾವಿಯಾಗಿ ಯುಗಾದಿ ದಿನವಾದ ಗುರುವಾರದಂದು ಪ್ರಥಮ ಸುಗ್ಗಿ ಕುಣಿತದ ಸೇವೆ ನಡೆಯಿತು. ತಾರಮಕ್ಕಿಯ ಗಣಪು ಮನೆ ಅಂಗಳದಲ್ಲಿ ತುರಾಯಿ ಕಟ್ಟಿದ ಸುಗ್ಗಿ ತಂಡ ದೇವರಿಗೆ ವಂದಿಸಿ ನಂತರ ಸುಗ್ಗಿ ಕುಣಿತ ಹೆಜ್ಜೆ ಹಾಕಿತು. ಈ ದಿನದಿಂದ ಸುಗ್ಗಿ ಹಬ್ಬದ ಪ್ರಾರಂಭದವರೆಗೂ ಪ್ರತಿ ರಾತ್ರಿ ಸುಗ್ಗಿ ತಂಡದ ಆಕರ್ಷಕ ಸುಗ್ಗಿ ಕುಣಿತ ಪ್ರದರ್ಶನ ನಡೆಯುತ್ತದೆ

ಅಣ್ಣನಿಂದಲೇ ಆಸ್ತಿಗಾಗಿ ತಂಗಿ ಹತ್ಯೆ

ಧಾರವಾಡ: ಒಡಹುಟ್ಟಿದ ಸಹೋದರ, ಸ್ವಂತ ಸಹೋದರಿ ಹತ್ಯೆ ಮಾಡಿದ ಘಟನೆ ತಾಲೂಕಿನ ಅಮ್ಮಿನಬಾವಿ ಗ್ರಾಮದಲ್ಲಿ ಗುರುವಾರ ನಡೆದಿದೆ. ಶಿವಲೀಲಾ ಈಶ್ವರ ಸಂಗೊಳ್ಳಿ ಹತ್ಯೆಗಿಡಾದ ಸಹೋದರಿ. ಹನುಮಂತ ಯಲಿವಾಳ ಹತ್ಯೆ ಮಾಡಿದ ಸಹೋದರ. ಅಮ್ಮಿನಬಾವಿ ಶಿವಲೀಲಾ ಅವಳನ್ನು ತಡಕೋಡದ ಈಶ್ವರ ಸಂಗೊಳ್ಳಿ ಎಂಬುವ ವ್ಯಕ್ತಿಗೆ ಮದುವೆ ಮಾಡಿಕಡಲಾಗಿತ್ತು. ಆದರೆ, ಶಿವಲೀಲಾ ಪತಿಯೊಂದಿಗೆ ಜಗಳ ಮಾಡಿಕೊಂಡು, ತವರು ಮನೆ ಅಮ್ಮಿನಬಾವಿ ಗ್ರಾಮಕ್ಕೆ ಬಂದು ವಾಸವಾಗಿದ್ದಳು ಎನ್ನಲಾಗಿದೆ. ಆಸ್ತಿ ವಿಚಾರವಾಗಿ ಅಣ್ಣ-ತಂಗಿ ನಡುವೆ ಮನಸ್ತಾಪ ಬಂದಿದ್ದು, ಹೊಲಕ್ಕೆ ಹೋದ ತಂಗಿ ಬೆನ್ನಟ್ಟಿದ ಅಣ್ಣ ಹನುಮಂತ ಆಕೆಯನ್ನು ಹತ್ಯೆ ಮಾಡಿದ್ದಾನೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಳೆಹಾನಿ ಸ್ಥಳಕ್ಕೆ ಅಧಿಕಾರಿಗಳ ತಂಡ ಭೇಟಿ



ಬಳ್ಳಾರಿ: ಕಳೆದ ಎರಡು ದಿನಗಳ ಹಿಂದೆ ಸುರಿದ ಭಾರಿ ಬಿರುಗಾಳಿ ಸಮೇತ ಆಲಿಕಲ್ಲು ಮಳೆಗೆ ಭತ್ತ ಸೇರಿದಂತೆ ನಾನಾ ಬೆಳೆಗಳು ಹಾನಿಗೀಡಾಗಿದ್ದು, ಶುಕ್ರವಾರ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಸೇರಿದಂತೆ ಅಧಿಕಾರಿಗಳ ತಂಡ ಕುರುಗೋಡು ತಾಲೂಕಿಗೆ ಭೇಟಿ ನೀಡಿ ಪರಿಶೀಲಿಸಿದರು.

ಕುರುಗೋಡು ತಾಲೂಕಿನ ಬಾದನಹಟ್ಟಿ, ಗೆಣಿಕೆನಾಳ್ ಮುಷ್ಟಗಟ್ಟಿ ಸೇರಿದಂತೆ ವಿವಿಧ ಗ್ರಾಮಗಳ ರೈತರ ಜಮೀನುಗಳಿಗೆ ಭೇಟಿ ನೀಡಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಅವರು ಪರಿಶೀಲಿಸಿದರು. ಆಲಿಕಲ್ಲು ಮಳೆಗೆ ಭತ್ತ ಸೇರಿದಂತೆ ನಾನಾ ಬೆಳೆಗಳು ಹಾನಿಗೀಡಾಗಿದ್ದು, ಲಕ್ಷಾಂತರ ರೂ.ನಷ್ಟವಾಗಿದೆ, ಸೂಕ್ತ ಪರಿಹಾರ ನೀಡಬೇಕು ಎಂದು ಸ್ಥಳದಲ್ಲಿದ್ದ ರೈತರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು. ಲಕ್ಷಾಂತರ ರೂ. ಖರ್ಚು ಮಾಡಿದ ಭತ್ತದ ಬೆಳೆ ನಾಶವಾಗಿದೆ, ಬೆಳೆಗೆ ಲಕ್ಷಾಂತರ ರೂ. ಖರ್ಚು ಮಾಡಿದ್ದೇವೆ ಎಂದು ರೈತರು ಕಣ್ಣೀರಿಟ್ಟರು. ಬೆಳೆ ಹಾನಿ ಕುರಿತು ಸರ್ಕಾರಕ್ಕೆ ಪೂರಕ ಮಾಹಿತಿ ನೀಡಲಾಗುವುದು, ಖಂಡಿತ ಪರಿಹಾರ ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಭರವಸೆ ನೀಡಿದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಸೋಮಸುಂದರ್ ಸೇರಿದಂತೆ ವಿವಿಧ ಅಧಿಕಾರಿಗಳು, ರೈತರು ಇತರರಿದ್ದರು.

ರಸ್ತೆ ಕಾಮಗಾರಿಗೆ ಶಾಸಕ ಐಹೊಳೆ ಚಾಲನೆ



ಚಿಕ್ಕೋಡಿ: ಕರಗಾಂವ ಏತ ನೀರಾವರಿ ಯೋಜನೆಕಾಮಗಾರಿಯುಪ್ರಗತಿಯಲ್ಲಿದ್ದು, ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಂಡಲ್ಲಿ ರಾಯಬಾಗ ಕ್ಷೇತ್ರ ವ್ಯಾಪ್ತಿಯ ಲಕ್ಷಾಂತರ ರೈತರ ಬಾಳು ಬಂಗಾರವಾಗಲಿದೆ ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ತಾಲೂಕಿನ ಕರಗಾಂವ ಗ್ರಾಮದಲ್ಲಿ 40 ಲಕ್ಷ ರೂ. ಅನುದಾನದಲ್ಲಿ ಮಂಜೂರಾದ ರಸ್ತೆ ಸುಧಾರಣೆ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ರಾಯಬಾಗ ವಿಧಾನಸಭಾಕ್ಷೇತ್ರ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಸಾರ್ವಜನಿಕರ ಬೇಡಿಕೆಗೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದರು.

ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಮಹೇಶ ಭಾತೆ ಮಾತನಾಡಿ, ಕರೋಶಿ ಜಿಲ್ಲಾ ಪಂಚಾಯಿತಿ ಕ್ಷೇತ್ರ ವ್ಯಾಪ್ತಿಯಲ್ಲಿ ನೀರಾವರಿ, ಶಿಕ್ಷಣ, ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಒತನ್ನು ಶಾಸಕ ಐಹೊಳೆ ಅವರು ನೀಡಿದ್ದಾರೆ ಎಂದರು. ಈಸಂದರ್ಭದಲ್ಲಿಗುತ್ತಿಗೆದಾರರಾದ ಅಪ್ಪಯ್ಯಗೌಡ ಪಾಟೀಲ, ರಾಮಗೌಡ ಪಾಟೀಲ, ವಿಜಯ ಕೋಳಿವಾಲೆ, ಸದಾಶಿವ ಘೋರ್ಪಡೆ, ಹಸನ್ ಸನದಿ, ಶಿವರಾಯ ಕಮತೆ, ಭರಮಪ್ಪ ಹುಚ್ಚನ್ನವರ, ಶಿವಾನಂದ ಪಾಟೀಲ, ಕೆಂಪಣ್ಣ ಹಾವಪ್ಪಗೋಳ, ಶಿವಗೌಡ ಪಾಟೀಲ ಇತರರು ಇದ್ದರು.

ನಿಸರ್ಗದ ಜಯಂತಿ ಆಚರಿಸುವ ಏಕೈಕ ದೇಶ ಭಾರತ

ಬನವಾಸಿ: ನಿಸರ್ಗದ ಜಯಂತಿಯನ್ನು ಆಚರಿಸುವ ಏಕೈಕ ದೇಶವಿದ್ದರೆ ಅದು ನಮ್ಮ ಭಾರತ ದೇಶ ಮಾತ್ರ ಎಂದು ಶಾಂತಪುರ ಸಂಸ್ಥಾನಮಠದ ಶ್ರೀ ಶಾಂತವೀರ ಶಿವಚಾರ್ಯ ಸ್ವಾಮಿ ಹೇಳಿದರು.

ಇಲ್ಲಿಯ ಉತ್ಸಾಹಿ ಹಿಂದೂ ಯುವಕರು ಯುಗಾದಿ ಉತ್ಸವದ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ ಶೋಭಯಾತ್ರೆಗೆ ಚಾಲನೆ ನೀಡಿ ಆಶೀರ್ವಚನ ನೀಡಿದ ಅವರು, ನೀತಿಯಿಲ್ಲದ ಶಿಕ್ಷಣ, ಭೀತಿಯಿಲ್ಲದ ಶಾಸನದಿಂದಾಗಿ ಇಂದು ದೇಶದ ಸಂಸ್ಕೃತಿ ನಶಿಸುತ್ತಿದೆ. ಪಾಶ್ಚಾತ್ಯ ವೇಷಭೂಷಣಗಳಿಂದ ದೇಶದ ಸಂಸ್ಕೃತಿ ನಾಶವಾಗುತ್ತಿದೆ. ನಾವು ಪಾಶ್ಚಾತ್ಯ ದೇಶಗಳ ಸಂಸ್ಕೃತಿಗೆ ಮಾರು ಹೋಗುತ್ತಿದ್ದೇವೆ. ವಿದೇಶಿ ಸಂಸ್ಕೃತಿಯ ಪ್ರಭಾವ ಯುವಕರ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಸಂಸ್ಕೃತಿಯನ್ನು ನಾಶಗೊಳಿಸುವ ಷಡ್ಯಂತ್ರ ನಡೆದಿದೆ.

ಈ ದೇಶದ ಬಲಿಷ್ಠ ಯುವಕರು ದೇಶದ ಸಂಪತ್ತಾಗಿದ್ದು, ಸ್ವಾಭಿಮಾನ ಬೆಳಸಿಕೊಂಡುಸತ್ಕಾರ್ಯದಉತ್ಸಾಹದ ನಶೆ ಏರಿಸಿಕೊಂಡರೆ, ದೇಶವನ್ನು ವಿಶ್ವಗುರುವನ್ನಾಗಿಸಲು ಸಾಧ್ಯವಿದೆ. ನಮ್ಮ ಆಚರಣೆಯನ್ನು ಕಂಡು ಜಗತ್ತು ಬೆರಗಾಗುತ್ತಿದೆ. ನಮ್ಮ ಮಕ್ಕಳಿಗೆ ಸಂಸ್ಕೃತಿಯ ಪಾಠ ಕಲಿಸಬೇಕು. ನಮ್ಮೆಲ್ಲರ ಮನಸ್ಸಿನಲ್ಲಿ ರಾಷ್ಟ್ರಭಕ್ತಿ ಮೂಡಬೇಕು. ಎಲ್ಲರೂ ನಮ್ಮವರೇ ಎಂಬ ಆಶಾಭಾವನೆ ಬರಬೇಕು. ಆಚಾರ ವಿಚಾರ ಬೇರೆಯಾಗಿರಬಹುದು ಆದರೆ ನಾವೆಲ್ಲರೂ ಹಿಂದೂ ಅನ್ನುವ ಭಾವನೆ ನಮ್ಮೆಲ್ಲರಲ್ಲಿ ಮೂಡಬೇಕು. ಯುವ ಪೀಳಿಗೆ ಮಾತೆ, ಗೋ ಮಾತೆ, ಧರ್ಮ, ಸಂಸ್ಕೃತಿಯ ರಕ್ಷಣೆಗೆ ಮುಂದಾಗಬೇಕು. ಬನವಾಸಿಯ ಉತ್ಸಾಹಿ ಹಿಂದೂ ಯುವಕರು ಪ್ರತಿ ವರ್ಷವೂ ಯುಗಾದಿ ಉತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿರುವುದು ಸಂತಸ ತಂದಿದೆ. ಇಂತಹ ಯುವಕರಿಗೆ ನಾವೆಲ್ಲರೂ ಸಹಕಾರ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಊರ ಗಣ್ಯರು, ಉತ್ಸಾಹಿ ಹಿಂದೂ ಯುಗಾದಿ ಉತ್ಸವ ಸಮಿತಿಯ ಸದಸ್ಯರು, ಸಾವಿರಾರು ಹಿಂದೂ ಸಮಾಜ ಬಾಂಧವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸುಧೀರ ನಾಯರ್ ನಿರೂಪಿಸಿ, ಸ್ವಾಗತಿಸಿ, ವಂದಿಸಿದರು.



ಸಾವಿರಾರು ಜನರ ಭಾಗಿ

ಯುಗಾದಿ ಉತ್ಸವದ ಅಂಗವಾಗಿ ಉತ್ಸಾಹಿ ಹಿಂದೂ ಯುವಕರು ಹಮ್ಮಿಕೊಂಡ ಭವ್ಯ ಶೋಭಯಾತ್ರೆ ಸಂಭ್ರಮ, ಸಡಗರದಿಂದ ನಡೆಯಿತು. ಅಲಂಕೃತ ತೆರೆದ ವಾಹನದಲ್ಲಿ ತಾಯಿ ಭಾರತಾಂಬೆ ಹಾಗೂ ಶ್ರೀ ರಾಮಚಂದ್ರನ ಭಾವಚಿತ್ರವಿಟ್ಟು ಪಟ್ಟಣದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು. ಕಾಲೇಜು ರಸ್ತೆಯಲ್ಲಿರುವ ಸುಬ್ರಹ್ಮಣ್ಯ ದೇವಸ್ಥಾನದಿಂದ ಆರಂಭಗೊಂಡ ಶೋಭಯಾತ್ರೆ ಶಿವಾಜಿ ವೃತ್ತ, ಅಪ್ಪು ಸರ್ಕಲ್, ಪಂಪ ವೃತ್ತದ ಮೂಲಕ ಸಾಗಿ ಮಧುಕೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಮುಕ್ತಾಯ ಕಂಡಿತು. ಶೋಭಾಯಾತ್ರೆಯಲ್ಲಿ ಸಾವಿರಾರು ಜನ ಪಾಲ್ಗೊಂಡು ಸಂಭ್ರಮಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬನವಾಸಿ ಪೊಲೀಸ್ ಠಾಣೆಯ ಪಿಎಸ್ಐ ಮಾಂತೇಶ ಕುಂಬಾರ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಆಯೋಜಿಸಲಾಗಿತ್ತು.

ಅಪಘಾತ: ಚಾಲಕರಿಬ್ಬರ ಸಾವು

ಕುಷ್ಟಗಿ: ರಾಷ್ಟ್ರೀಯ ಹೆದ್ದಾರಿ 50ರ ಕುಷ್ಟಗಿ ಪಟ್ಟಣದ ಹೊರವಲಯದ ಅಶೋಕ ಲೈಲ್ಯಾಂಡ್ ಸರ್ವಿಸ್ ಕೇಂದ್ರ ಬಳಿ ಶುಕ್ರವಾರ ಮಧ್ಯಾಹ್ನ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಲಾರಿ ಚಾಲಕರಿಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರನ್ನು ಯಲಬುರ್ಗಾ ತಾಲೂಕಿನ ಕಟಗಿಹಳ್ಳಿ ಗ್ರಾಮದ ಗೋವಿಂದ ಹನುಮಂತಪ್ಪ ಆನೆಗುಂದಿ (38) ಮತ್ತು ಹುಚ್ಚಪ್ಪ ಶಿವಲಿಂಗಪ್ಪ ಬೊಮ್ಮನಾಳ (35) ಎಂದು ಗುರುತಿಸಲಾಗಿದೆ. ಸೊಲ್ಲಾಪುರದಿಂದ ಗಂಗಾವತಿಯತ್ತ ತೆರಳುತ್ತಿದ್ದ ವಿಆರ್ಎಲ್ ಸರಕು ವಾಹನವು ಮಧ್ಯಾಹ್ನ ಸುಮಾರು 4:20ರ ಸುಮಾರಿಗೆ ಕುಷ್ಟಗಿ ಬಳಿ ತಲುಪಿದಾಗ, ವಾಹನದ ಮುಂಭಾಗದ ಟೈರ್ ಅನಿರೀಕ್ಷಿತವಾಗಿ ಸ್ಫೋಟಗೊಂಡಿದೆ. ಇದರ ಪರಿಣಾಮವಾಗಿ ನಿಯಂತ್ರಣ ತಪ್ಪಿದ ಲಾರಿಯು ಡಿವೈಡರ್ ದಾಟಿ ರಸ್ತೆಯ ಮತ್ತೊಂದು ಬದಿಗೆ ನುಗ್ಗಿದೆ. ಈ ವೇಳೆ ಎದುರುಗಡೆಯಿಂದ ಬರುತ್ತಿದ್ದ ಟಿಪ್ಪರ್ ವಾಹನಕ್ಕೆ ಬಲವಾಗಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ವಿಆರ್ಎಲ್ ಲಾರಿ ಸಂಪೂರ್ಣವಾಗಿ ನುಜ್ಜುಗುಜ್ಜಾಗಿದ್ದು, ವಾಹನದಲ್ಲಿದ್ದ ಗೋವಿಂದಪ್ಪ ಮತ್ತು ಹುಚ್ಚಪ್ಪ ಅವರು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಘಟನೆಯ ನಂತರ ಲಾರಿಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ನಿಧಿ ಆಸೆ: ಮೂರ್ತಿ ಸ್ಥಳಾಂತರ ಆರೋಪ

ಹುಬ್ಬಳ್ಳಿ: ಇಲ್ಲಿಯ ಹಳೇ ಹುಬ್ಬಳ್ಳಿಯ ಅಕ್ಕಿಪೇಟೆಯ ವೆಂಕಟೇಶ್ವರ ದೇವಸ್ಥಾನ ದೇವ ಮೂರ್ತಿಯನ್ನು ನಿಧಿ ಆಸೆಗೆ ಬೇರೆ ಕಡೆ ಸ್ಥಳಾಂತರಿಸಿರುವ ಆರೋಪದಡಿ ಮೂವರ ವಿರುದ್ಧ ಕಸಬಾಪೇಟ್ ಪೊಲೀಸ್ ಠಾಣೆಯಲ್ಲಿ ದೂರ ದಾಖಲಾಗಿದೆ. ಹಳೇ ಹುಬ್ಬಳ್ಳಿಯ ನಾರಾಯಣ ಮುತಾಲಿಕದೇಸಾಯಿ, ರಮೇಶ ಮುತಾಲಿಕ್‌ದೇಸಾಯಿ ಸೇರಿ ಮೂವರ ವಿರುದ್ಧ ದೇವಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಅಡಿವಯ್ಯ ಬಿಜಗತ್ತಿಮಠ ದೂರು ನೀಡಿದ್ದಾರೆ. ಆರೋಪಿಗಳು ನಿಧಿ ಆಸೆಗೆ ವೆಂಕಟೇಶ್ವರ ಮೂರ್ತಿ ಭಗ್ನ ಮಾಡಿ, ಗರ್ಭಗುಡಿಯಲ್ಲಿದ್ದ ಮೂರ್ತಿ ಬೇರೆ ಕಡೆ ಸ್ಥಳಾಂತರಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಯುವತಿಗೆ ಅನ್ಯ ಕೋಮಿನ ಯುವಕನಿಂದ ಬೆದರಿಕೆ

ಹುಬ್ಬಳ್ಳಿ: ಯುವತಿಯೊಬ್ಬಳಿಗೆ ಅನ್ಯಕೋಮಿನ ಯುವಕನೊಬ್ಬ ಎಐ ಎಡಿಟ್ ಮಾಡಿ ತನ್ನ ಜೊತೆ ಇರದಿದ್ದರೆ ಸಾಮಾಜಿಕ ತಾಲತಾಣದಲ್ಲಿ ಹರಿಬಿಡುವುದಾಗಿ ಜೀವ ಬೆದರಿಕೆ ಹಾಕಿದ ಘಟನೆ ಕುರಿತು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಅಶೋಕ ನಗರ ನಿವಾಸಿ ಜಾಫರ್ ನದಾಫ್ ಎಂಬಾತನ ವಿರುದ್ಧ ಯುವತಿ ತಾಯಿ ದೂರು ನೀಡಿದ್ದಾರೆ. ಜಾಫರ್ ಹಾಗೂ ಯುವತಿ ಒಂದೆ ಕಡೆ ಕೆಲಸ ಮಾಡುತ್ತಿದ್ದರು. ಆಗ ಪರಿಚಿಯವಾಗಿದ್ದು, ಅವಳೊಂದಿಗೆ ಫೋಟೋ ತೆಗೆದುಕೊಂಡಿದ್ದಾನೆ. ತನ್ನ ಜೊತೆಗೆ ಇರಲಿಲ್ಲ ಅಂದರೆ ಎಡಿಟ್ ಮಾಡಿದ ಫೋಟೋ ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ, ಅವಳಿಂದ 1.50 ಲಕ್ಷ ರೂ. ಒತ್ತಾಯಪೂರ್ವಕವಾಗಿ ತೆಗೆದುಕೊಂಡು ಮಾನಸಿಕ ಕಿರುಕುಳ ನೀಡಿ, ಮತಾಂತರ ಮಾಡುವ ದುರುದ್ದೇಶದಿಂದ ದರ್ಗಾಕ್ಕೆ ಕರೆದುಕೊಂಡು ಹೋಗಿ ತಾಯಿತಾ ಕಟ್ಟಿಸಿದ್ದಾನೆ ಎಂದು ದೂರಿನಲ್ಲಿ ಯುವತಿ ತಾಯಿ ಉಲ್ಲೇಖಿಸಿದ್ದಾರೆ.

ಲಾರಿ ಬೈಕ್ ಅಪಘಾತ: ಸವಾರ ಸಾವು

ಯಲ್ಲಾಪುರ: ಲಾರಿ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರನ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಪಟ್ಟಣದ ಮಾಗೋಡ ಕ್ರಾಸ್ ಬಳಿ ಪುರಾಣಜಡ್ಡಿ ಕ್ರಾಸ್ ಸಮೀಪ ನಡೆದಿದೆ. ಅಂಕೋಲಾ ಹಳವಳ್ಳಿಯ ದುಗ್ಗನಮನೆಯ (21) ದೇವೇಂದ್ರ ಸೀತಾರಾಮ ಗೌಡ ಮೃತಪಟ್ಟ ಸವಾರ. ಕಳಚೆಯ ವಿಜೇತ ಪ್ರೇಮಾನಂದ ಗೌಡ(20) ಗಾಯಗೊಂಡಿದ್ದಾರೆ. ಯಲ್ಲಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಾಲಕ ಸಾವು

ಕಲಬುರಗಿ: ಮನೆ ಎದುರು ನಿಲ್ಲಿಸಿದ ಕಾರ್‌ನ್ನು ರಿವರ್ಸ್ ತೆಗೆದುಕೊಳ್ಳುವಾಗ ಹಿಂದುಗಡೆ ನಿಂತಿದ್ದ ಬಾಲಕನಿಗೆ ಗುದ್ದಿ, ಮೃತಪಟ್ಟ ಟನೆ ನಗರದ ಫಿರೋರ್ಷ ಕಾಲನಿಯಲ್ಲಿ ನಡೆದಿದೆ. 9 ವರ್ಷದ ಶಹಾಬಾಜ್ ಶೇಖ ಮೃತ ಬಾಲಕ. ಶಾಲೆಗೆ ರಜೆ ಇರುವುದರಿಂದ ಆಟ ಆಡುತ್ತಿದ್ದ ವೇಳೆ ಪಕ್ಕದ ಮನೆಯವರು ನಿಲ್ಲಿಸಿದ ಕಾರ್ ಹಿಂದುಗಡೆ ನಿಂತಿದ್ದು, ಕಾರ್ ಮಾಲಿಕ ಸೈಯದ್ ಆಬೀದ್ ಹುಸೇನ್ ಕಾರ್ ಚಾಲು ಮಾಡಿ, ಹಿಂದಕ್ಕೆ ತೆಗೆದುಕೊಳ್ಳುವಾಗ ಬಾಲಕನಿಗೆ ಗುದ್ದಿದೆ. ಈ ಕುರಿತು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೈದಿಯಿಂದ ಜೀವ ಬೆದರಿಕೆ

ಹುಬ್ಬಳ್ಳಿ: ಧಾರವಾಡ ಸಬ್ ಜೈಲಿನಲ್ಲಿರುವ ಕೈದಿಯೊಬ್ಬ ಹಳೇ ಹುಬ್ಬಳ್ಳಿಯ ವಿವೇಕ ಎಂ. ಎಂಬುವರಿಗೆ ಕರೆ ಮಾಡಿ ಜೀವ ಬೆದರಿಕೆ ಹಾಕಿದ ಕುರಿತು ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಆರೋಪಿ ಪರವೇಜ ಬೆಟಗೇರಿ ಎಂಬಾತ ಜೀವ ಬೆದರಿಕೆ ಹಾಕಿದ್ದಾನೆ. ವಿವೇಕ ಅವರಿಗೆ ಕರೆ ಮಾಡಿ ಆತ ನನ್ನ ಪ್ರೇಯಸಿಗೆ ಕರೆ ಮಾಡಿ ನನ್ನ ನಂಬರ್ ನೀಡಿ ನನಗೆ ಫೋನ್ ಮಾಡಲು ಹೇಳಬೇಕು. ಇಲ್ಲವಾದರೆ ಜೈಲಿನಿಂದ ಬಂದು ನಿನಗೆ ಜೀವ ಸಹಿತ ಬಿಡಲ್ಲ ಎಂದು ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ವಿವೇಕ ತಿಳಿಸಿದ್ದಾರೆ.

ವಿಶೇಷ ಪೂಜೆ ಸಲ್ಲಿಸಿದ ಸಚಿವೆ ಹೆಬ್ಬಾಳ್ಕರ್

ಬೆಳಗಾವಿ : ಗಣೇಶಪುರದ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ದರ್ಶನ ಪಡೆದು ನಾಡಿನ ಸುಭೀಕ್ಷೆಗಾಗಿ ಪ್ರಾರ್ಥನೆ ಸಲ್ಲಿಸಿದರು.

ಬಳಿಕ ದೇವರಿಗೆ ನೈವೇದ್ಯ ಸಮರ್ಪಿಸಿ, ಮಹಾಪ್ರಸಾದ ಸೇವೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಲ್ಲೇಶ್ ಚೌಗುಲೆ, ರಾಜು ದಂಡಗಲ್ಕರ್, ತಿಪ್ಪಣ್ಣ ದಂಡಗಲ್ಕರ್, ರಾಜೇಶ್ ನಾಯಿಕ್, ವಿಠ್ಠಲ ವಡ್ಡರ, ಬಾಳಕೃಷ್ಣ ದಂಡಗಲ್ಕರ್, ಮಹೇಶ್ ಕೋಲಕಾರ, ನಿಖಿತಾ ದಂಡಗಲ್ಕರ್, ಬೋಸಲೆ ಸರ್, ಚೌಡಪ್ಪ ದಂಡಗಲ್ಕರ್, ಭೀಮಾ ಮಂಜಲಕರ್, ಪ್ರಕಾಶ ದಂಡಗಲ್ಕರ್ ಸೇರಿದಂತೆ ದೇವಸ್ಥಾನ ಸಮಿತಿಯ ಸದಸ್ಯರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.



ಆಲಿಕಲ್ಲು ಮಳೆಗೆ ಭತ್ತದ ಬೆಳೆ ಹಾನಿ: ಸ್ಥಳಕ್ಕೆ ಡಿಸಿ ಭೇಟಿ

ಕುರುಗೋಡು: ತಾಲೂಕಿನ ಗೆಣಿಕೆಹಾಳ್, ಬೈಲೂರು, ಬಾದನಹಟ್ಟಿ ಗ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಕಾಲಿಕ ಆಲಿಕಲ್ಲು ಮಳೆ ಗುಡುಗು ಸಿಡಿಲಿನಿಂದ ರೈತರ ಭತ್ತದ ಬೆಳೆ ಹಾಗೂ ವಿವಿಧ ದವಸ ಧಾನ್ಯದ ಬೆಳೆಗಳು ಸಂಪೂರ್ಣ ನಾಶಗೊಂಡು ರೈತರ ಬೆಳೆದ ಅಪಾರ ಭತ್ತದ ಬೆಳೆ ಉದರಿ ನಷ್ಟ ಆಗಿರುವುದರಿಂದ ಸ್ಥಳಕ್ಕೆ ಸೂಕ್ತ ಪರಿಶೀಲನೆ ಮಾಡಲು ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ್ ಭೇಟಿ ನೀಡಿ ರೈತರಿಂದ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.



ಈ ವೇಳೆ ರೈತರು ಮಾತನಾಡಿ, ಬೇಸಿಗೆ ಬೆಳೆಗೆ ಕಷ್ಟಪಟ್ಟು ಭತ್ತ ನಾಟಿ ಮಾಡಿದರೂ ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ರೈತರ ಪರಿಸ್ಥಿತಿಯಾಗಿದೆ. ದಿಢೀರನೆ ಬಂದ ಆಲಿಕಲ್ಲು ಮಳೆಯಿಂದ ಅಪಾರ ನಷ್ಟವಾಗಿದ್ದು, ನಷ್ಟ ಹೊಂದಿದ ರೈತರ ಬೆಳೆಗಳಿಗೆ ಸೂಕ್ತ ಪರಿಶೀಲನೆ ಮಾಡಿ ಪರಿಹಾರ ಒದಗಿಸಬೇಕೆಂದು ಜಿಲ್ಲಾಧಿಕಾರಿಗಳಲ್ಲಿ ಮನವಿ ಸಲ್ಲಿಸಿದರು.

ಡಿಸಿ ಸ್ಪಂದಿಸಿ ಖುದ್ದಾಗಿ ರೈತರ ಕಷ್ಟ ಅರಿತು ಸ್ಥಳಕ್ಕೆ ಭೇಟಿ ನೀಡಿರುವುದು ರೈತರಿಗೆ ಸೂಕ್ತ ಪರಿಹಾರ ಒದಗಿಸುವ ಉದ್ದೇಶವಾಗಿದೆ. ನಷ್ಟ ಸಂಭವಿಸಿದ ರೈತರಿಗೆ ಸೂಕ್ತ ಪರಿಹಾರ ಒದಗಿಸಲು ವ್ಯವಸ್ಥೆ ಕಲ್ಪಿಸಲಾಗುವುದು. ರೈತರು ತಮ್ಮ ತಮ್ಮ ಜಮೀನುಗಳ ಸೂಕ್ತ ಮಾಹಿತಿಯನ್ನು ಕಂದಾಯ ಇಲಾಖೆಗಳಿಗೆ ಮಾಹಿತಿ ನೀಡಿ ಎಂದು ತಿಳಿಸಿದರು.

ನಂತರ ಜಿಲ್ಲಾಧಿಕಾರಿಗಳು ಬೈಲೂರು ಗ್ರಾಮದ ಹತ್ತಿರ ನವೋದಯ ವಸತಿ ಶಾಲೆಗಾಗಿ ಸ್ಥಳ ಪರಿಶೀಲನೆ ನಡೆಸಿದರು.

ಕುರುಗೋಡು ತಹಶೀಲ್ದಾರ್ ನರಸಪ್ಪ, ಗ್ರೇಡ್-2 ತಹಶೀಲ್ದಾರ್ ಮಲ್ಲೇಶಪ್ಪ, ಕೃಷಿ ಅಧಿಕಾರಿ ಎಂ.ದೇವರಾಜ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಆರ್ .ಐ.ಸುರೇಶ್ ಹಾಗೂ ಪೊಲೀಸ್ ಇಲಾಖೆ ತೋಟಗಾರಿಕೆ ಇಲಾಖೆ, ಅಧಿಕಾರಿ ವರ್ಗದವರು ಸಿಬ್ಬಂದಿ, ತಾಲೂಕಿನ ರೈತ ಮುಖಂಡರು, ಉಪಸ್ಥಿತರಿದ್ದರು.

ಲೋಕಕಲ್ಯಾಣಕ್ಕಾಗಿ ದೀರ್ಘದಂಡ ನಮಸ್ಕಾರ

ಹೂವಿನಹಡಗಲಿ: ತಾಲೂಕಿನ ಕಾಗನೂರು ಗ್ರಾಮದ ಕವಿ, ಸಾಹಿತಿ, ಸಮಾಜ ಸೇವಕ, ನಿರ್ದೇಶಕ ಶಿವಕುಮಾರ ಕಾಗನೂರು ಅವರು ಗುರುವಾರದಂದು ಚಂದ್ರಮಾನ ಯುಗಾದಿ ಪಾಡ್ಯದ ದಿನದಂದು ಲೋಕಕಲ್ಯಾಣಕ್ಕಾಗಿ ತಮ್ಮ ಸ್ವ-ಗ್ರಾಮ ಕಾಗನೂರಿನಿಂದ ಶ್ರೀಕ್ಷೇತ್ರ ಮೊದಲಘಟ್ಟಿ ಆಂಜನೇಯನ ದೇವಸ್ಥಾನದವರೆಗೆ ಸತತ ನಾಲ್ಕನೇ ವರ್ಷದ ದೀರ್ಘ ದಂಡ ನಮಸ್ಕಾರವನ್ನು ಹಾಕಲಾಯಿತು.



ಕೊಂಬಳಿ ಚೌಕಿಮಠದ ಸದ್ಗುರು ಗಾಡಿತಾತ ಮಾತನಾಡಿ, ದೀರ್ಘದಂಡ ನಮಸ್ಕಾರವು ಹಿಂದೂಸಂಪ್ರದಾಯದಲ್ಲಿ, ವಿಶೇಷವಾಗಿ ಭಗವಂತನಿಗೆ ಅಥವಾ ಗುರುಗಳಿಗೆ ಭಕ್ತಿಯಿಂದ ಶರಣಾಗುವ ಅತ್ಯುನ್ನತ ರೂಪವಾಗಿದೆ. ಇಂತಹ ಸಂದರ್ಭದಲ್ಲಿ ಶಿವಕುಮಾರ ಅವರ ಅಪಾರ ಭಕ್ತಿ ಸೇವೆ ನಿಜಕ್ಕೂ ಮೆಚ್ಚುವಂತದ್ದು ಸುಮಾರು 8 ಕಿ.ಮೀ. ವರೆಗೂ ನೆಲದ ಮೇಲೆ ಪೂರ್ತಿ ಮಲಗಿ ಎರಡು ಕೈಗಳನ್ನ ಚಾಚಿ ನೇರವಾಗಿ ದೀರ್ಘದಂಡ ನಮಸ್ಕಾರವನ್ನು ಹಾಕುವುದು ಸುಲಭದ ಮಾತಲ್ಲ ನಿಜಕ್ಕೂ ಅವರ ಭಕ್ತಿ ಕಾರ್ಯ ಶ್ಲಾಘನೀಯವಾಗಿದೆ.

ಭಕ್ತಿ ಪ್ರದರ್ಶನ: ಇದು ಕೇವಲ ದೈಹಿಕ ಕಸರತ್ತಲ್ಲ, ಬದಲಿಗೆ ಭಕ್ತಿಯ ಭಾವಾವೇಶದಲ್ಲಿ ದೇವರಿಗೆ ಅಥವಾ ಗುರುಗಳಿಗೆ ಇಷ್ಟಾರ್ಥ ಸಿದ್ಧಿಗಾಗಿ ಅರ್ಪಿಸುವ ಭಕ್ತಿ ಪರಾಕಾಷ್ಠೆ. ಹಾಗೂ ದೀರ್ಘದಂಡ ನಮಸ್ಕಾರವು ಒಬ್ಬ ಭಕ್ತನಿಗೆ ತನ್ನ ಅಹಂಕಾರವನ್ನು ತೊರೆದು, ಸಂಪೂರ್ಣವಾಗಿ ದೇವರಿಗೆ ಶರಣಾಗಲು ಸಹಾಯ ಮಾಡುತ್ತದೆ ಎಂದರು. ಕುಟುಂಬ ಸಮೂಹ, ಸ್ನೇಹಿತರು, ಭಕ್ತಾದಿಗಳು ಇತರರಿದ್ದರು.

ಜನಮನ ಸೆಳೆದ ಹಗರಣ ಪ್ರದರ್ಶನ

ಅಂಕೋಲಾ: ತಾಲೂಕಿನ ಬಡಗೇರಿಯಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ನಡೆದ ಹಾಲಕ್ಕಿ ಸಮಾಜದವರ ಸಾಂಪ್ರದಾಯಿಕ ಹಗರಣ ಪ್ರದರ್ಶನ ಜನಮನ ಸೆಳೆಯಿತು.

ಗ್ರಾಮೀಣ ಪ್ರದೇಶದ ಹಿಂದುಳಿದ ಜನಾಂಗದ ಜನರು ತಾಂತ್ರಿಕ ಕೌಶಲ್ಯಗಳಿಗೆ ಮಹತ್ವ ನೀಡಿ ಹಲವಾರು ರೂಪಕಗಳನ್ನು ವಾಹನಗಳಲ್ಲಿ ಮೆರವಣಿಗೆ ನಡೆಸಿ ಮೆಚ್ಚುಗೆಗೆ ಪಾತ್ರರಾದರು. ಸ್ಥಳೀಯ ಬೇಟೆ ಬೀರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಆರಂಭಗೊಂಡ ಹಗರಣ ಮೆರವಣಿಗೆಯಲ್ಲಿ ಕಾಲ್ನಡಿಗೆ ಮತ್ತು ವಾಹನಗಳು ಸೇರಿದಂತೆ ಸುಮಾರು 50 ರಷ್ಟು ಪ್ರಹಸನಗಳು ಕಂಡು ಬಂದವು.

ಧರ್ಮ ರಕ್ಷಣೆಗೆ ಪ್ರಾಣತ್ಯಾಗ ಮಾಡಿದ ಸಾಂಬಾಜಿ, ಭಾರತಕ್ಕೆ ಜಲಮಾರ್ಗ ಕಂಡು ಹಿಡಿದ ವಾಸ್ಕೋ ಡಿ ಗಾಮ, ಬ್ರಹ್ಮದಂಡದ ಮೇಲೆ ಸಾದುಗಳ ತಪಸ್ಸು, ಅಲೆಮಾರಿ ಜನಾಂಗದ ನೃತ್ಯ, ಧೂಮಪಾನದ ದುಷ್ಪರಿಣಾಮ, ಕರಾಟೆ, ಚಂದ್ರನ ಮೇಲೆ ಪ್ರೇಮಿಗಳು, ಕಾಂತಾರ ಬ್ರಹ್ಮ ರಾಕ್ಷಸ, ರುದ್ರಾವತಾರ, ಸೃಷ್ಟಿಯ ಮೊದಲ ಪ್ರೇಮ ಕಥೆ, ಮಹಾ ಕಾಳಿಯಿಂದ ಧರ್ಮ ವಿಜಯ, ಕಾಂತಾರ ಗುಳಿಗ ಅರ್ಭಟ ಕನ್ನಡಾಂಬೆಯಿಂದ ಯುಗಾದಿಯ ಶುಭ ಹಾರೈಕೆ ಮೊದಲಾದ ರೂಪಕಗಳು ರಾಡ್ ಮೂಲಕ ಸಮತೋಲನ ಕಾಯ್ದುಕೊಳ್ಳುವ ತಾಂತ್ರಿಕ ಕೌಶಲ್ಯದಿಂದ ಮೆಚ್ಚುಗೆ ಪಡೆದರೆ ಧರ್ಮಸ್ಥಳದ ಬುರುಡೆ ಆರೋಪ ಎಸ್ .ಐ.ಟಿ ಶೋಧ, ಗ್ಯಾಸ್ ಸಿಲಿಂಡರಿನ ಅಭಾವ ಸಿಲಿಂಡರುಗಳಿಗೆ ಸೇನೆಯ ಭದ್ರತೆ, ಸಾಮಾಜಿಕ ಜಾಲ ತಾಣಗಳ ಲೈಕ್ ಹುಚ್ಚು ಅಮಾಯಕರ ಪ್ರಾಣಕ್ಕೆ ಕತ್ತು, ತೆಂಗಿನಕಾಯಿ ಗೆರಟೆ ಖರೀದಿ ಮುಂದಿನ ವರ್ಷ ಬೂದಿಗೂ ಬೆಲೆ ಮೊದಲಾದ ರೂಪಕಗಳ ಮೂಲಕ ಪ್ರಸ್ತುತ ಕಾಲಘಟ್ಟದ ಘಟನೆಗಳನ್ನು ವಿಡಂಬನಾತ್ಮಕ ರೀತಿಯಲ್ಲಿ ತೋರಲಾಯಿತು. ಅಂಕೋಲಾ ಸುತ್ತ ಮುತ್ತಲಿನ ಸಹಸ್ರಾರು ಜನರು ಪಾಲ್ಗೊಂಡು ಯುಗಾದಿ ಹಗರಣ ವೀಕ್ಷಿಸಿದರು.



ಹಿಂದಿನ ದಿನಗಳಲ್ಲಿ ಚಕ್ಕಡಿ ಗಾಡಿಯಲ್ಲಿ ನಡೆಯುತ್ತಿರುವ ಹಗರಣದ ವೈಭವ ನೆನಪಿಸುವಂತೆ ಈ ವರ್ಷ ಒಂದೆರಡು ಚಕ್ಕಡಿ ಗಾಡಿಗಳಲ್ಲಿ ಹಗರಣ ವೇಷಗಳ ಮೆರವಣಿಗೆ ಕಂಡು ಬಂತು. ಹಿಂದೆ ಚಕ್ಕಡಿ ಗಾಡಿಗಳಲ್ಲಿ ಹಗರಣ ಪ್ರದರ್ಶನ ನಡೆಸಿ ಸ್ಥಳೀಯ ಜನರೇ ಚಕ್ಕಡಿ ಗಾಡಿಗಳನ್ನು ಎಳೆಯುತ್ತಿದ್ದರು, ಇದೀಗ ವಾಹನಗಳಲ್ಲಿ ಹಗರಣ ಪ್ರದರ್ಶನ ನಡೆಯುತ್ತಿದ್ದು ಸಾಮಾಜಿಕ,ರಾಜಕೀಯ ಘಟನೆಗಳ ವಿಡಂಬನೆ ಅಣಕು ಪ್ರದರ್ಶನಗಳಿಗಿಂತ ಹೆಚ್ಚು ತಾಂತ್ರಿಕವಾಗಿ ಗಮನ ಸೆಳೆಯುವ ಕೌಶಲ್ಯಗಳ ರೂಪಕಗಳು ಹೆಚ್ಚಿವೆ.

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
KARNATAKA RURAL INFRASTUCTURE DEVELOPMENT LTD.

(Formerly Karnataka Land Army Corporation Limited)
No.1106, 10th Main Road, RPC Layout, Vijayanagar, Bengaluru - 560040

ಸಂ: ಕಾಪಾಅ-4/ಕೆಆರ್‌ಐಡಿಎಲ್/ಟೆಂಡರ್/2025-26/1274 ದಿನಾಂಕ: 20.03.2026

ಇ-ಟೆಂಡರ್ ಅಧಿಸೂಚನೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (KRIDL) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಕಾರ್ಯಪಾಲಕ ಇಂಜನಿಯರ್, BBMP ವಿಭಾಗ-4 ಅವರು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಎರಡು ಕವರ್ ಪದ್ಧತಿಯ ಇ-ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ಸೂಚನೆ ಸಂಖ್ಯೆ (**KRIDL/2025-26/RD/WORK_INDENT34, 35, 36 and 37**) ಅಡಿಯಲ್ಲಿ ಪ್ರತಿ ಕಾಮಗಾರಿಯ ಅಂದಾಜು ಯೋಜನಾ ವೆಚ್ಚ ರೂ.995.00 ಲಕ್ಷಗಳು ಹಾಗೂ EMD ಮೊತ್ತ ರೂ.13.50 ಲಕ್ಷಗಳು ಆಗಿರುತ್ತದೆ. ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು KPPP ವೆಬ್‌ಸೈಟ್ https://kppp.karnataka.gov.in ಮೂಲಕ ಮಾತ್ರ ಟೆಂಡರ್ ವಿವರಗಳನ್ನು ವೀಕ್ಷಿಸಿ, ಡೌನ್‌ಲೋಡ್ ಮಾಡಿ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿ ಕೆಳಗಿನಂತಿದೆ:

ಟೆಂಡರ್ ಪ್ರಕಟಣೆಯ ದಿನಾಂಕ	**20.03.2026**
ಆನ್‌ಲೈನ್ ಪ್ರಶ್ನೆಗಳಿಗಾಗಿ ಕೊನೆಯ ದಿನಾಂಕ	**27.03.2026, 17:30**
ಪ್ರಿ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	**02.04.2026, 11:30**
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	**09.04.2026, 15:00**
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	**13.04.2026, 15:30**
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	**21.04.2026, 15:30**

ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in.** ವೆಬ್‌ಸೈಟ್‌ಗೆ ಭೇಟಿ ನೀಡಿ

ಸಹಿ/- ಕಾರ್ಯಪಾಲಕ ಅಭಿಯಂತರರು-4,
ಕೆ.ಆರ್.ಐ.ಡಿ.ಎಲ್, ಬೆಂಗಳೂರು

ಡಿಐಪಿಆರ್/ಸಿಪಿ/6350/ಸಿಸಿಎಲ್/2025-26

CALL FOR TENDER
under MSE-CDP Scheme of Government of India

Sangameshwar Grape Processing and Preservation Association (SGPPA) invites tenders for the **"Construction of Common Facility Centre Building"** at Survey no. 50/3, Near Vijayapura to Hubli Highway, At-Dudihal, Post-Karjol, Dist. Vijayapura, Karnataka 586170.

Reference Number: **SGPPA/2025-26/BD/WORK_INDENT2**
Last Date for Tender Queries/Clarifications: **02-04-2026**
Last Date for Receipt of Tenders: **18-04-2026**
Contact: **Somanath Biradar, Mobile: 9008810010**
Procuring Entity: **Sangameshwar Grape Processing and Preservation Association, Vijayapura**
For more details, refer Karnataka Public Procurement Portal

CHANGE OF NAME

I, **ZIYANAZ R TAHASHEELADAR** (Old Name) Resident of Village Sidnekoppa Tq Kukanoor Dist: koppal, State Karnataka, have changed my name as **ZIYANAZ R TAHASHEELDAR** (New Name) for all purposes, vide affidavit dated: 17/03/2026 before notary **Ramappa.**

CHANGE OF NAME

I, **MADHU VEERANAGOUDRA** (old name) Resident of H No 24, Basava Nilaya, Sridatta Nagar, Vidyanagar, Hubballi - Dharwad City - 580031, Karnataka, India, have changed my name as **MADHU MAHENDRAGOUDA VEERANAGOUDAR** (new name) henceforth I will be called and recognized by new name for all future purposes, dated: 20/03/2026.

CHANGE OF NAME

I, **MALAPPA JUGYAGOL** (old name) Resident of House No 424, Near Ramalingeshwar Temple, Maladinni, Tq: Gokak, Dist: Belagavi - 591233, Karnataka, India, have changed my name as **MALAPPA LAKKAPPA JUGYAGOL** (new name) henceforth I will be called and recognized by new name for all future purposes, dated: 20/03/2026.

ಹೆಸರಿನಲ್ಲಿ ಬದಲಾವಣೆ

ನಾನು, ರಾಧಿಕಾ ಗಂಡ ಗೋಪಾಲ ಜೋಶಿ ಸಾ: ಲಕ್ಕುಂಡಿ, ತಾ ಮತ್ತು ಜಿಲ್ಲಾ: ಗದಗ, ಈ ಮೂಲಕ ಧೃಡಿಕರಿಸುವದೇನೆಂದರೆ ನಾನು, **ಗೋಪಾಲ ಜೋಶಿ** ಇವರನ್ನು ಮದುವೆ ಆಗುವ ಪೂರ್ವದಲ್ಲಿ ನನ್ನ ಹೆಸರು **ಸಂಗೀತ ತಂದೆ ನಾಗೇಶರಾವ್ ಕುಲಕರ್ಣಿ** ಅಂತಾ ಇತ್ತು. ಮದುವೆಯ ನಂತರ ನನ್ನ ಹೆಸರು **ರಾಧಿಕಾ ಗಂಡ ಗೋಪಾಲ ಜೋಶಿ** ಅಂತಾ ಬದಲಾವಣೆ ಆಗಿರುತ್ತದೆ. ಈ ಕುರಿತು ನಾನು ಶ್ರೀ. ಬಸವರಾಜ ಎಫ್. ಕಲುತಿ ನೋಟರಿಯವರ ಸಮಕ್ಷಮದಲ್ಲಿ ದಿನಾಂಕ: 16-03-2026 ರಂದು ಪ್ರಮಾಣ ಪತ್ರ ಮಾಡಿರುತ್ತೇನೆ.

ಕರ್ನಾಟಕ ಸರ್ಕಾರ
ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೂವಿನಹಡಗಲಿ-583219,
ವಿಜಯನಗರ ಜಿಲ್ಲೆ

ಸಂಖ್ಯೆ/ಸ.ಸಾ.ಆ.ಹ/ಹೊಗು/2025-26 ದಿನಾಂಕ : 16.03.2026

ಇ-ಪ್ರೊಕ್ಯೂರ್ ಮೆಂಟ್ ಟೆಂಡರ್ ಅಧಿಸೂಚನೆ

ಸಾರ್ವಜನಿಕ ಆಸ್ಪತ್ರೆ ಹೂವಿನಹಡಗಲಿಗೆ ಹೊರಗುತ್ತಿಗೆ ಆಧಾರ ಮೇಲೆ ಕ್ಲಿನಿಕಲ್ & ನಾನ್ ಕ್ಲಿನಿಕಲ್ ಗ್ರೂಪ್ ಡಿ ಸಿಬ್ಬಂದಿಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್ ಮೆಂಟ್ ಪ್ಲಾಟ್ ಫಾರ್ಮ್ ನಲ್ಲಿ ಟೆಂಡರ್ ಕರೆಯಲಾಗಿದೆ ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31.03.2027 ರವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರಿನ ಅಂದಾಜು ಮೌಲ್ಯ ವರ್ಷಕ್ಕೆ ರೂ. 20 ಲಕ್ಷ (ಇಪ್ಪತ್ತು ಲಕ್ಷಗಳು) ಟೆಂಡರ್ ವಿವರಗಳ ಈ ಕೆಳಕಂಡಂತಿರುತ್ತದೆ. ದ್ವಿ ಲಕೋಟೆ ಪದ್ಧತಿಯಲ್ಲಿ ಔಷಧಗಳನ್ನು/ಪ್ರಯೋಗಶಾಲಾ ರಾಸಾಯನಿಕಗಳ ಪೂರೈಕೆಗಾಗಿ **E-procurement** ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ವೇಳಾಪಟ್ಟಿ;

01.ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: **DHFWS/2025-26/SE2072 Dated 16.03.2026.** ಟೆಂಡರ್ ನ ವಿವರಗಳು: **ಹೊರಗುತ್ತಿಗೆ ಆಧಾರದ ಮೇಲೆ ಕ್ಲಿನಿಕಲ್ & ನಾನ್ ಕ್ಲಿನಿಕಲ್ ಸಿಬ್ಬಂದಿಗಳನ್ನು ಟೆಂಡರ್ ಅಂಗೀಕಾರವಾದ ದಿನಾಂಕದಿಂದ 31.03.2027 ರವರೆಗೆ ಸರಬರಾಜು ಮಾಡುವುದು.** 01.ಅಗತ್ಯ ತುರ್ತು ಔಷಧಗಳು/ರಾಸಾಯನಿಕಗಳು/ವೈದ್ಯಕೀಯ ಉಪಕರಣಗಳು: **ಅಂದಾಜು ಮೊತ್ತ 20 ಲಕ್ಷ ಇ.ಎಂ.ಡಿ ಮೊತ್ತ ರೂ 50,000-00.** 02.ಟೆಂಡರ್ ಅಪ್ ಲೋಡ್ ಮಾಡುವ ಪ್ರಾರಂಭದ ದಿನಾಂಕ: **16.03.2026.** 03.ಟೆಂಡರ್ ಅಪ್ ಲೋಡ್ ಮಾಡುವ ಅಂತಿಮ ದಿನಾಂಕ: **30.03.2026.** 04.ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **01.04.2026 ಬೆಳಗ್ಗೆ 11.00 ಘಂ.** 05.ಆರ್ಥಿಕ ಬಿಡ್ ತೆರೆಯುವ ದಿನಾಂಕ: **03.04.2026 ಅಥವಾ ನಂತರದ ದಿನ ತಿಳಿಸಲಾಗುವುದು.** 06.ಟೆಂಡರ್ ತೆರೆಯುವ ಸ್ಥಳ : **ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹೂವಿನಹಡಗಲಿ.** 07.ಇ-ಮೇಲ್ ವಿಳಾಸ: **ghhadagali@gmail.com.** 08.ದೂರವಾಣಿ ಸಂಖ್ಯೆ: **9743243740**

ಸಹಿ/-ಆಡಳಿತ ವೈದ್ಯಾಧಿಕಾರಿಗಳು ಸರ್ಕಾರಿ ಸಾರ್ವಜನಿಕ ಆಸ್ಪತ್ರೆ
ಹೂವಿನಹಡಗಲಿ-583219, ವಿಜಯನಗರ ಜಿಲ್ಲೆ

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/607

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ-580 005

ಸಂಖ್ಯೆ:ಆ.ಅ/ಕೃವಿವಿ/2025-26 ದಿನಾಂಕ: 20.03.2026

ಆಸಕ್ತಿ ಅಭಿವ್ಯಕ್ತ ಪಡಿಸುವುದು (ತೃತೀಯ ಕರೆ)

ನಿಖರ ಠೇವಣಿಗಾಗಿ ಆಸಕ್ತಿ ಅಭಿವ್ಯಕ್ತ ಪಡಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡವು ಕೆ.ಸಿ-1 ರಂತೆ ಇ-ಟೆಂಡರ್ ಮೂಲಕ ವಿಜಯಪೂರ ನಗರ ವ್ಯಾಪ್ತಿಯಲ್ಲಿ ಶಾಖೆಯನ್ನು ಹೊಂದಿರಬಹುದಾದ ಸಾರ್ವಜನಿಕ ವಲಯದ ಬ್ಯಾಂಕುಗಳು/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಕೋರಲಾಗಿದೆ. ಫಾರ್ಮ ಮಷಿನರಿ ಪರೀಕ್ಷಣೆ ಸಂಸ್ಥೆ, ವಿಜಯಪೂರ ಇದರ ಆವರ್ತ ನಿಧಿಯ ಹೆಚ್ಚುವರಿ ಹಣ ಸುಮಾರು ರೂ.1.5 ಕೋಟಿಗಳು ಅಲ್ಪಾವಧಿ ಠೇವಣಿಗಾಗಿ ಲಭ್ಯವಿರುವುದು. ವಿವರವಾದ ಅಧಿಸೂಚನೆ ಮತ್ತು ಅರ್ಹತೆಗಳನ್ನು ತಿಳಿದುಕೊಳ್ಳಲು ವೆಬ್ ಸೈಟ್ **https://kppp.karnataka.gov.in.** ನ್ನು ನೋಡುವುದು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	**27.03.2026 ಸಾಯಂಕಾಲ 04.00 ಘಂಟೆ**
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	**28.03.2026 ಸಾಯಂಕಾಲ 04.15 ಘಂಟೆ**

ಆಸಕ್ತ ಬ್ಯಾಂಕುಗಳು ಇ-ಟೆಂಡರ್ ಪೋರ್ಟಲ್ ಮೂಲಕ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ **ಸಂಖ್ಯೆ: 080-23010900** ಯನ್ನು ಸಂಪರ್ಕಿಸಬಹುದು. ಬ್ಯಾಂಕುಗಳು ಈ ಟೆಂಡರ್‌ಗೆ ತಿದ್ದುಪಡಿ/ಜೋಡಣೆ ಅಥವಾ ಇನ್ನೇನಾದರು ತಿಳಿದುಕೊಳ್ಳಲು ಸದಾ ವೆಬ್ ಸೈಟ್ **https://kppp.karnataka.gov.in.** ನ್ನು ನೋಡುವುದು. ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಟೆಂಡರ್ ಮುಂದುವರಿಸುವ ಅಥವಾ ರದ್ದು ಪಡಿಸುವ ಕುರಿತು ಅಂತಿಮ ಅಧಿಕಾರವನ್ನು ಹೊಂದಿರುವುದು. ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

ಸಹಿ/-
ಆಸ್ತಿ ಅಧಿಕಾರಿಗಳು

ವಾ.ಸಾ.ಇ./ಧಾರವಾಡ/1376/2025-26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590002
ದೂರವಾಣಿ: 0831-2407207/2407212, ಇ-ಮೇಲ್ ವಿಳಾಸ: dsadmbgm@gmail.com

ಟೆಂಡರ್ ಪ್ರಕಟಣೆ (4ನೇ ಕರೆ)
ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತಿ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸುವ ಸಲುವಾಗಿ.

ಉಪ ಕಾರ್ಯದರ್ಶಿಗಳು (ಆಡಳಿತ), ಜಿಲ್ಲಾ ಪಂಚಾಯತ ಬೆಳಗಾವಿ ಇವರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **https://kppp.karnataka.gov.in** ಮೂಲಕ ಬೆಳಗಾವಿ ಜಿಲ್ಲೆಯ 477 ಗ್ರಾಮ ಪಂಚಾಯತ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು ಪೂರೈಸಲು ಅರ್ಹ ಬಿಡ್‌ದಾರರಿಂದ ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಸಿದ್ಧರಿರುವ ನಿರೀಕ್ಷಿತ ಬಿಡ್‌ದಾರರು ಅಗತ್ಯವಾಗಿ ಮೇಲೆ ತಿಳಿಸಿದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಉಲ್ಲೇಖ ಸಂಖ್ಯೆ ಮತ್ತು ದಿನಾಂಕ (4ನೇ ಕರೆ)	ನಂ./ಜಿಪಂಬೆ/ಆಡಳಿತ/ಗ್ರಂಥಾಲಯ/ ಎಐ-43/ 2024-25 ದಿನಾಂಕ: 19.02.2026
2	ಅಂದಾಜು ಬಿಡ್ ಮೌಲ್ಯ	ರೂ. 477 ಲಕ್ಷಗಳು
3	ಟೆಂಡರ್ ಡಾಕ್ಯೂಮೆಂಟ್ ಡೌನಲೋಡ್ ಮಾಡಲು ಲಭ್ಯವಾಗುವ ಮತ್ತು ಟೆಂಡರ್ ಪ್ರಾರಂಭದ ದಿನಾಂಕ	ದಿನಾಂಕ: 18.03.2026
4	ಬಿಡ್ ಪೂರ್ವ ಸಭೆ	ದಿನಾಂಕ: 24.03.2026 ಸಮಯ: 11.00 ಪೂರ್ವಾಹ್ನ @ ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
5	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 02.04.2026 ಸಮಯ: 05.00 ಅಪರಾಹ್ನ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 04.04.2026 ಸಮಯ: 11.00 ಪೂರ್ವಾಹ್ನ
7	ಮಾದರಿಗಳನ್ನು ಸಲ್ಲಿಸಲು ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 06.04.2026 ಸಮಯ: 11.00 ಪೂರ್ವಾಹ್ನ @ ಜಿಲ್ಲಾ ಪಂಚಾಯತ ಕಚೇರಿ, ಬೆಳಗಾವಿ
8	ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ	ದಿನಾಂಕ: 10.04.2026 ಸಮಯ: 11.00 ಪೂರ್ವಾಹ್ನ
9	ಇಎಆ ಮೊತ್ತ ಶೇ. 1.5% (ಎಲ್ಲ ಬಿಡ್‌ದಾರರಿಗೆ ಕಡ್ಡಾಯ)	ರೂ. 7,15,500/-

ಈ ಟೆಂಡರ್‌ನಲ್ಲಿ ಭಾಗವಹಿಸಲು ನಿರೀಕ್ಷಿತ ಪೂರೈಕೆದಾರರು **https://kppp.karnataka.gov.in** ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು. ಯಾವುದೇ ಟೆಂಡರ್ ಸ್ಪಷ್ಟೀಕರಣಕ್ಕಾಗಿ ಮೊಬೈಲ್ ಸಂಖ್ಯೆ: **9480854001** & **e-mail: dsadmbgm@gmail.com** ಸಂಪರ್ಕಿಸಬಹುದು.

ಸಹಿ/-
ಉಪಕಾರ್ಯದರ್ಶಿಗಳು (ಆಡಳಿತ)
ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಸಹಿ/-
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ ಮತ್ತು
ಟೆಂಡರ್ ಅನುಮೋದನೆ ಪ್ರಾಧಿಕಾರ

ವಾ.ಸಾ.ಇ/ಬೆಳಗಾವಿ/2127/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರ ಕಾರ್ಯಾಲಯ ಕಲಬುರಗಿ, ಜಿಲ್ಲೆ: ಕಲಬುರಗಿ

ನಂ: ಕಂ:ಸಿಬ್ಬಂದಿ/ಹೊಗು/ಬಾಜ/ಟೆಂಡರ್/36/2025-26 ದಿ.16-3-2026

:: ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ::

(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಲಬುರಗಿ ಜಿಲ್ಲೆಯ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗಳಿಗೆ ಬಾಂದೆ ಜವಾನರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರಗಳನ್ನು ದಿನಾಂಕ 07-04-2026 ಸಂಜೆ 05-00 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ನಲ್ಲಿ ಅರ್ಜಿ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು
ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ
ನಿರ್ದೇಶಕರು, ಕಲಬುರಗಿ ಜಿಲ್ಲೆ

ವಾ.ಸಾ.ಸಂ.ಇ/ಕಲಬುರಗಿ/1199/ಕೆ.ಎಸ್.ಎಂ.ಸಿ.&ಎ/2025-26

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯಡಿಯೂರು ವಿಭಾಗ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ, 4ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್ ಪಶ್ಚಿಮ ಬೆಂಗಳೂರು-560070

ಸಂಖ್ಯೆ:ಕಾ.ಪಾ.ಅ.(ಯ.ವಿ.)/ಟೆಂಡರ್/03/2025-26 ದಿನಾಂಕ:20-03-2026

ಟೆಂಡರ್ ತಿದ್ದುಪಡಿ ಪ್ರಕಟಣೆ-2

ವಿಷಯ: ಟೆಂಡರ್ ಪ್ರಕಟಣೆಯನ್ನು ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ:1) ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ಪಾ.ಅ.(ಯ.ವಿ.)/ಟೆಂಡರ್/03/2025-26 ದಿನಾಂಕ: 04-02-2026
2) ಈ ಕಚೇರಿಯ ಟೆಂಡರ್ ತಿದ್ದುಪಡಿ ಪ್ರಕಟಣೆ-1 ರ ಸಂಖ್ಯೆ: ಕಾ.ಪಾ.ಅ.(ಯ.ವಿ.)/ಟೆಂಡರ್/03/2025-26 ದಿನಾಂಕ: 21-02-2026

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಈ ಕಚೇರಿಯಿಂದ ದಿನಾಂಕ: 04-02-2026 ರಂದು ಟೆಂಡರ್ ಪ್ರಕಟಣೆ ಸಂಖ್ಯೆ: ಕಾ.ಪಾ.ಅ.(ಯ.ವಿ.)/ಟೆಂಡರ್/03/2025-26 ರಂತೆ ಟೆಂಡರ್ ಕರೆಯಲಾಗಿದ್ದು, ಸದರಿ ಪ್ರಕಟಣೆಯಲ್ಲಿ ತಿಳಿಸಲಾದ ಷೆಡ್ಯೂಲ್ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಮುಂದೂಡಲಾಗಿದೆ. ಉಳಿದಂತೆ ಪ್ರಕಟಣೆಯಲ್ಲಿರುವ ಟೆಂಡರ್ ನಿಯಮಗಳಲ್ಲಿ ಬದಲಾವಣೆ ಇರುವುದಿಲ್ಲ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: **23-03-2026**ರ ಸಂಜೆ **4:30** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **06-04-2026**ರ ಸಂಜೆ **4:00** ಗಂಟೆಯವರೆಗೆ (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **26-03-2026**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ದಾಖಲೆಗಳನ್ನು ದಿನಾಂಕ: **07-04-2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು (5) ಆರ್ಥಿಕ ಬಿಡ್ ತೆರೆಯುವಿಕೆ ದಿನಾಂಕವನ್ನು ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಯಡಿಯೂರು ವಿಭಾಗ, ಬೆಂ.ಪ.ನ.ಪಾಲಿಕೆ

ನಗರಸಭೆ ಕಾರ್ಯಾಲಯ
ಚಿಕ್ಕಬಳ್ಳಾಪುರ
ವೆಬ್‌ಸೈಟ್:www.chikkaballapurcity.gov.in, ಇ-ಮೇಲ್: itstaff_ulb_chickballapur@yahoo.co.in, ದೂರವಾಣಿ: 08156-275557, ಫ್ಯಾಕ್ಸ್: 08156-274742

ಸಂಖ್ಯೆ: ನ.ಸ.ಚಿ/ಶಾ.ಶಾ/ಸಿ.ಆರ್/ಟೆಂ-32/2025-26 ದಿನಾಂಕ : 10.03.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರಂತೆ 2025-26ನೇ ಸಾಲಿನ ನಗರಸಭಾ ನಿಧಿಯಲ್ಲಿ, 2025-26ನೇ ಸಾಲಿನ 15ನೇ ಹಣಕಾಸು ಮತ್ತು ಡಲ್ಟ್ ಯೋಜನೆಗಳ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ/ಸರಬರಾಜುದಾರರಿಂದ ಟೆಂಡರ್‌ನ್ನು (ಇ-ಪ್ರೊಕ್ಯೂರ್‌ಮೆಂಟ್-2.0) ಆಹ್ವಾನಿಸಲಾಗಿದೆ. ವೆಬ್‌ಸೈಟ್ **https:kppp.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಟೆಂಡರ್ ಸ್ವೀಕೃತಿ ಮತ್ತು ತೆರೆಯುವ ದಿನಾಂಕಗಳ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಂತೆ ಇರುತ್ತದೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವತ್ರಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ಕೆಲಸದ ದಿನಗಳನ್ನು ಪರಿಗಣಿಸಲಾಗುವುದು.ಇಂಡೆಂಟ್ ಸಂಖ್ಯೆ ವಿವರ **(1)** DMA/2025-26/IND5138/CALL-2 **(2)** DMA/2025-26/IND5139/CALL-2 **(3)** DMA/2025-26/IND5140/CALL-2 **(4)** DMA/2025-26/IND5980/CALL-2 **(5)** DMA/2025-26/IND5983/CALL-2 **(6)** DMA/2025-26/ IND5981/CALL-2 **(7)** DMA/2025-26/IND5708/CALL-2 **(8)** DMA/2024-25/OW/WORK_INDENT36014/CALL-3

ಸಹಿ/- ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:502/ಕೆಎಸ್‌ಎಂಸಿಎ/2025-26

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.ದೂರವಾಣಿ: 080-22255210

ಸಂಖ್ಯೆ: ಕಾಅ/ಕವಿ.1/ಎಇ-3/ಎಇ-2/ಎಇ-ಎಲ್‌ಹೆಚ್/2025-26/86 ದಿನಾಂಕ: 18.03.2026

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯ ಸೂಚಿತ ಸ್ಥಳಗಳಲ್ಲಿ ವುಡನ್ ಸ್ಟೋರೇಜ್ ಯೂನಿಟ್‌ಗಳು/ವಾರ್ಡ್‌ರೋಬ್‌ಗಳು, ಮಾಡ್ಯುಲರ್ ಕಿಚನ್, ಟಿವಿ ಯೂನಿಟ್‌ಗಳನ್ನು ಒದಗಿಸುವುದು, ಶೌಚಾಲಯ ದುರಸ್ತಿ, ಕಚೇರಿ ನವೀಕರಣ, ಆರ್ಕಿಟೆಕ್ಚರಲ್/ಒಳಾಂಗಣ/ಹೊರಾಂಗಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹಾ ಸೇವೆಗಳು, ಎಂಎಸ್ ಗ್ರೇಟಿಂಗ್ ಒದಗಿಸುವುದು, ಪಾರ್ಕಿಂಗ್ ಏರಿಯಾಗೆ ಫ್ಲೋರಿಂಗ್ ಟೈಲ್ಸ್ ಒದಗಿಸುವುದು, ಟೆರೇಸ್‌ನ ವಾಟರ್‌ಪ್ರೂಫಿಂಗ್, ಪೇಂಟಿಂಗ್ ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 05 ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.10.07 ಲಕ್ಷಗಳು, ಗರಿಷ್ಠ ರೂ.762.62 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.12,600/-, ಗರಿಷ್ಠ ರೂ.11,44,000/-** ಪ್ರತೀ ಕಾಮಗಾರಿಯ ಕಾಲಾವಧಿ: **2 ರಿಂದ 24 ತಿಂಗಳು** (ಮಳೆಗಾಲ ಸೇರಿದಂತೆ). ಕಾಮಗಾರಿಯ ದಸ್ತಾವೇಜು ಬೆಲೆ: **ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: ಕ್ರಸಂ.1ಕ್ಕೆ 23.03.2026, ಸಂಜೆ 5.00 ಗಂಟೆಯೊಳಗೆ ಮತ್ತು ಕ್ರಸಂ.2 ರಿಂದ 5ಕ್ಕೆ 24.03.2026, ಸಂಜೆ 5.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರ, ಇಂಡೆಂಟ್ ಸಂಖ್ಯೆಗಳು, ಅಂದಾಜು ಮೊತ್ತ, ಇಎಂಡಿ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಯುನಿ-ಸಿ.ಪಿ/6382/ಕೆಎಸ್‌ಎಂಸಿಎ/2025-26

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಸರ್ ಸಿವಿ ರಾಮನ್ ಜನರಲ್ ಹಾಸ್ಪಿಟಲ್ ಇಂದಿರಾನಗರ. ಬೆಂಗಳೂರು-560038

ಶ್ರೀ ಸಿ.ವಿ.ರಾಮನಗರ ಜನರಲ್ ಆಸ್ಪತ್ರೆಯಿಂದ ಅಗತ್ಯ ವಸ್ತುಗಳ ಪೂರೈಕೆಗಾಗಿ ಅಲ್ಪಾವಧಿಯ ಟೆಂಡರ್ ಆಹ್ವಾನ

ವೈದ್ಯಕೀಯ ಅಧೀಕ್ಷಕರು, ಸರ್ ಸಿ ವಿ ರಾಮನ್ ಜನರಲ್ ಆಸ್ಪತ್ರೆ, ಬೆಂಗಳೂರು, ಇವರು ಸರ್ ಸಿ ವಿ ರಾಮನ್ ಜನರಲ್ ಆಸ್ಪತ್ರೆಗೆ ಬೇಕಾಗಿರುವ ಅತಿ ಆವಶ್ಯಕ ವಸ್ತುಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ ಹಾಗು ನಿಯಮ 2000 ರನ್ವಯ ಕರ್ನಾಟಕ ಸರಕಾರದ ಸಾರ್ವಜನಿಕ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ **(https://kppp.karnataka.gov.in)** ಮುಖಾಂತರ ದ್ವಿಲಕೋಟೆ ಪದ್ಧತಿಯಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತ ಪೂರೈಕೆದಾರರು ಮೇಲೆ ತಿಳಿಸಿದ ಪೋರ್ಟಲ್‌ನಲ್ಲಿ ಅಗತ್ಯವಾಗಿ ನೋಂದಾಯಿಸಿಕೊಳ್ಳಬೇಕು.

1	ಟೆಂಡರ್ ಉಲ್ಲೇಖ ಸಂಖ್ಯೆ:	**DHFWS/2025-26/IND2369**
2	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಿಂದ ಟೆಂಡರ್ ಡಾಕ್ಯುಮೆಂಟ್ ಡೌನ್ ಲೋಡ್ ಮಾಡುವ ಪ್ರಾರಂಭದ ದಿನಾಂಕ	19.03.2026 ರಿಂದ
3	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ :	23.03.2026 ಸಂಜೆ 5 ಗಂಟೆ ವರೆಗೆ
4	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ ಇ-ಟೆಂಡರ್ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ	27.03.2026 ಸಂಜೆ 5 ಗಂಟೆ ವರೆಗೆ.
5	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ ಆನ್ ಲೈನ್ ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	28.03.2026, ಸಂಜೆ 5.10 ಗಂಟೆಗೆ.
6	ಮಾದರಿಗಳನ್ನು ಸಲ್ಲಿಸುವ ದಿನಾಂಕ	26.03.2026 ಸಂಜೆ 5.00 ಗಂಟೆವರೆಗೆ.

ಸಂಪರ್ಕಿಸುವ ವಿಳಾಸ : ವೈದ್ಯಕೀಯ ಅಧೀಕ್ಷಕರ ಕಚೇರಿ, ಸರ್ ಸಿ ವಿ ರಾಮನ್ ಜನರಲ್ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು - 560038
ದೂರವಾಣಿ ಸಂಖ್ಯೆ : 080-25281245, ಇ ಮೇಲ್ : **ghibengaluru@gmail.com**

ಸಹಿ/- ವೈದ್ಯಕೀಯ ಅಧೀಕ್ಷಕರು, ಬೆಂಗಳೂರು.

DIPR/CP/6377/Zen/2025-26

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಬಿ-1/2025-26/57 ದಿ: 18.03.2026

ಟೆಂಡರ್ ಪ್ರಕಟಣೆ-57/2025-26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) 2024-25 ನೇ ಸಾಲಿನ ಐ.ಸಿ.ಡಿ ಎಸ್ ಹಾಗೂ ನರೇಗಾ ಅನುದಾನದ ಕ್ರೀಯಾ ಯೋಜನೆಯಡಿ ಅಂಕೋಲಾ ತಾಲೂಕಿನ ಭಾವಿಕೇರಿ ಗ್ರಾ.ಪಂ ಬಡಗೇರಿ ಹರಿಕಂತ್ರವಾಡ-2 ಅಂಗನವಾಡಿ ಕಟ್ಟಡ ನಿರ್ಮಾಣ. RDPR/2025-26/BD/WORK_INDENT24631/CALL-2, ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(ಮೀಸಲಾತಿ: ಪ್ರವರ್ಗ 1) (2) 2245-08-101-0-01-059 ರಾಷ್ಟ್ರೀಯ ವಿಪತ್ತು ಉಪಶಮನ ನಿಧಿ (NDRF) ಮತ್ತು ರಾಜ್ಯ ವಿಪತ್ತು ಉಪಶಮನ ನಿಧಿ (SDRF) ಯೋಜನೆಯಡಿ ಭಟ್ಕಳ ತಾಲೂಕಿನ ಮಾವಿನಕುರ್ವಾ ಪಂಚಾಯತದ ತಲಗೋಡ ರಸ್ತೆ ಬದಿಯ ಗುಡ್ಡ ಕುಸಿದ ಮಣ್ಣು ತೆರವುಗೊಳಿಸಿ ತಡೆಗೋಡೆ ನಿರ್ಮಿಸುವುದು. RDPR/2025-26/RD/WORK_INDENT23880/Call-2, ಅಂದಾಜು ಮೊತ್ತ: ರೂ. 37.70 ಲಕ್ಷ, ಮುಂಗಡ ಠೇವಣಿ: ರೂ. 47,500.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು Technical Bid ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 30.03.2026 ರ ಅಪರಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 01.04.2026 ಅಪರಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1232/25-26 dt. 20.03.2026

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ಶಾಶಾ-1/ಇ-ಟೆಂಡರ್ ಪ್ರಕಟಣೆ/2025-26/ 3558, ದಿನಾಂಕ:20.03.2026

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-2 ಮತ್ತು 4 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 2025-26ನೇ ಸಾಲಿನ 3054 ರಾಹೆ, ಜಿಮುರ ನಿರ್ವಹಣೆ ಅಡಿಯಲ್ಲಿ ಸುರಪೂರ ತಾಲೂಕಿನ (1)34541, (2)34042, (3)34040 & (4)34764 ಮತ್ತು 4059 ಸಿಎಂಐಡಿಪಿ (ಯೋಜನೆ) (1)34047 ಹಾಗೂ 5054 ಜಿಮುರ ಸೇತುವೆ (ಯೋಜನೆ) (1)27570/2ನೇ ಕರೆ ಒಟ್ಟಾರೆ 6 (ಆರು) ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.50.00 ಲಕ್ಷಗಳು ಹಾಗೂ ಗರಿಷ್ಠ ರೂ:200.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ ಬಿಡ್ ಮೀಟಿಂಗ್ ದಿನಾಂಕ:** 25.03.2026 (11.30 ಗಂಟೆ ನಂತರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 27.03.2026 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 31.03.2026 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 01.04.2026 (16.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 04.04.2026 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ
ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/606/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಸರ್ಕಾರ
ಜಿಲ್ಲೆ : ರಾಯಚೂರು ರಾಜ್ಯ : ಕರ್ನಾಟಕ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಿಂಗಸಗೂರು.
Agricultural Produce Market Committee, LINGASAGUR-PIN: 584 122
E-Mail: apmclingasugur@gmail.com ph.No (08537) 257382

ಸಂ:ಕೃಮಾಇ/ಕೃಉಮಾಸ/ಲಿಂ/ಅಭಿಕೆವಿ/1424/2025-26 ದಿನಾಂಕ : 16-03-2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಲಿಂಗಸುಗೂರು ವತಿಯಿಂದ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ತತ್ಸಂಬಂಧವಾಗಿ ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳನ್ವಯ Standard Tender Documents ರಂತೆ ಅರ್ಹರಿರುವ ಕರ್ನಾಟಕ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಯಮಾನುಸಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ನ್ನು ಈ ಕೆಳಗಿನ ಕಾಮಗಾರಿ ನಿರ್ವಹಿಸಲು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://www.kppp.karnataka.gov.in ನಲ್ಲಿ ಪ್ರಕಟಿಸಿದಂತೆ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
1	APMC/2025-26/BD/ WORK_INDENT 836)	18.64	46,600.00	3ನೇ ದರ್ಜೆ ಹಾಗೂ ಮೇಲ್ಪಟ್ಟು ಸಿವಿಲ್ ಗುತ್ತಿಗೆದಾರರು As per KW-1 Eligible Contractor
2	(APMC/2025-26/ OW /WORK_ INDENT 842)	60.57	1,21,500.00	As per KW-3 Eligible Contractor
3	(APMC/2025-26/ BD/ WORK_ INDENT 893)	104.44	2,00,000.00	As per KW-4 Eligible Contractor
4	(APMC/2025-26/ RD/ WORK_ INDENT 843)	59.03	1,18,500.00	As per KW-3 Eligible Contractor

-::ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ::- 1) ಇ-ಪ್ರಕ್ಯೂರಮೆಂಟ್‌ನಲ್ಲಿ ಶೆಡ್ಯೂಲ್‌ಗಳನ್ನು ಬಿಡುವ ದಿನಾಂಕ : 20-03-2026. 2) ಪ್ರಿಬಿಡ್ ಮಿಟಿಂಗ್ ದಿ:23-03-2026 ಬೆಳ್ಳಿಗೆ 11:30ಕ್ಕೆ ಆಡಳಿತ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಲಿಂಗಸುಗೂರು. 3) ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 02-04-2026, 04:30 ಸಾಯಂಕಾಲ ವರೆಗೆ 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06-04-2026, 04:30 ಸಾಯಂಕಾಲ ಒಳಗಡೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ:16-04-2026, 04:30 ಸಾಯಂಕಾಲ ಒಳಗಡೆ (ಸಾಧ್ಯಾವದಲ್ಲಿ)ಅಥವಾ ತಾಂತ್ರಿಕ ಬಿಡ್-ಗಳಿಗೆ ಅನುಮೋದನೆ ದೊರಕಿದ ನಂತರ ತೆರೆಯಲಾಗುತ್ತದೆ.

ಇ.ಎಂ.ಡಿ. ಹಾಗೂ ಇ-ಟೆಂಡರ್ ಪ್ರೊಸೆಸಿಂಗ್ ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಎಕ್ಸಿಸ್ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರಕಾರ ಸೆಂಟ್ರಲ್ ಪೂಲಿಂಗ್ ಅಕೌಂಟಿನ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು.

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ, ಸಮಿತಿ ಕಛೇರಿ ವೇಳೆಯಲ್ಲಿ ಅಥವಾ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-2485867 ಮತ್ತು ಕಾರ್ಯದರ್ಶಿ, ಕೃ.ಉ.ಮಾ.ಸ, ಲಿಂಗಸುಗೂರು ಸಹಾಯವಾಣಿ 08537-257382 ರವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯದರ್ಶಿ
ಕೃಉಮಾಸ ಲಿಂಗಸಗೂರು


ಸಹಿ/- ಅಧ್ಯಕ್ಷರು
ಕೃಉಮಾಸ ಲಿಂಗಸಗೂರು

DIP/RCR/776/KSMC&A/779/2025-26

ಕಿರುಸುದ್ದಿ

ಒಲಿಂಪಿಕ್ಸ್ ವಿಜೇತೆ ಮಣಿಸಿದ 13 ಹರೆಯದ ಯು-ಝಿದಿ

ಹೊಸದಿಲ್ಲಿ: ವಿಶ್ವವೇ ನಿಬ್ಬೆರಗಾಗಿ ರೋಮಾಂಚನಗೊಳ್ಳುವಂತೆ ಚೀನಾದ 13 ವರ್ಷದ ಈಜುಗಾರ್ತಿ ಯು-ಝಿದಿ ಆವಳಿ ಒಲಿಂಪಿಕ್ಸ್ ಪದಕ ವಿಜೇತೆ ರೇಗಾನ್ ಸ್ಮಿತ್ ಅವರನ್ನು ಸೋಲಿಸಿದರು. ಶೆನ್ಜೆನ್‌ನಲ್ಲಿ ನಡೆದ ಮಹಿಳೆಯರ 200 ಮೀ. ಬಟರ್‌ಫ್ಲೈ ಕೂಟದಲ್ಲಿ ವೈಯಕ್ತಿಕ ಅತ್ಯುತ್ತಮ ದಾಖಲೆಯೊಂದಿಗೆ ಈ ದಾಖಲೆ ಮಾಡಿದರು. ಕಳೆದ ಬೇಸಿಗೆಯಲ್ಲಿ ಬಾಲಕಿ ಯು 12 ನೇ ವಯಸ್ಸಿನಲ್ಲಿ ಈಜು ವಿಶ್ವ ಚಾಂಪಿಯನ್‌ಶಿಪ್ ಇತಿಹಾಸದಲ್ಲಿ



ಅತ್ಯಂತ ಕಿರಿಯ ಪದಕ ವಿಜೇತೆ ಎಂಬ ಹೆಗ್ಗಳಿಕೆಗೆ ಪಾತ್ರಳಾಗುವ ಮೂಲಕ ಜಾಗತಿಕ ಸುದ್ದಿಯಾಗಿದ್ದರು. ಗುರುವಾರ ನಡೆದ ಚೀನಾ ಓಪನ್‌ನಲ್ಲಿ, 200 ಮೀಟರ್ ಫ್ಲೈನಲ್ಲಿ 2 ನಿಮಿಷ 05.71 ಸೆಕೆಂಡುಗಳಲ್ಲಿ ಗುರಿ ತಲುಪಿ, ಅಮೆರಿಕದ ಸ್ಮಿತ್ ಅವರನ್ನು ಮತ್ತೊಂದು ಗಮನಾರ್ಹ ಪ್ರದರ್ಶನದಲ್ಲಿ ಎರಡನೇ ಸ್ಥಾನಕ್ಕೆ ತಳ್ಳಿದಳು. ಅವರ ಸಮಯವು ಯು ಅವರನ್ನು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ವೇದಿಕೆಯ ಮೇಲೆ ಇರಿಸುತ್ತಿತ್ತು. ಪ್ಯಾರಿಸ್ 2024 ರ ಒಲಿಂಪಿಕ್ಸ್‌ನಲ್ಲಿ ಕೆನಡಾದ ಸಮ್ಮರ್ ಮೆಕಿಂತೋಷ್ ಅವರ ಹಿಂದೆ ಸ್ಮಿತ್ ಬೆಳ್ಳಿ ಪದಕ ಗೆದ್ದರು 24 ವರ್ಷದ ಸ್ಮಿತ್ ಒಟ್ಟು ಎಂಟು ಒಲಿಂಪಿಕ್ ಪದಕಗಳನ್ನು ಗೆದ್ದಿದ್ದಾರೆ, ಅವುಗಳಲ್ಲಿ ಎರಡು ಚಿನ್ನ. ದಕ್ಷಿಣ ನಗರವಾದ ಶೆನ್ಜೆನ್‌ನಲ್ಲಿ ನಡೆಯುವ ಚೀನಾ ಓಪನ್ ಚೀನಾ ಮತ್ತು ಅಂತರರಾಷ್ಟ್ರೀಯ ತಾರೆಗಳ ಪ್ರಬಲ ಕ್ಷೇತ್ರವನ್ನು ಆಕರ್ಷಿಸಿದೆ. ಯು ಐದು ಸ್ಪರ್ಧೆಗಳಲ್ಲಿ ಸ್ಪರ್ಧಿಸಲಿದ್ದಾರೆ.

ಭಾರತದಲ್ಲಿ ವಿಶ್ವ ಒಳಾಂಗಣ ಅಥ್ಲೆಟಿಕ್ಸ್

ಹೊಸದಿಲ್ಲಿ: ವಿಶ್ವ ಇಂಡೋರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕ್ರೀಡಾಕೂಟವು ಭಾರತದಲ್ಲೇ ನಡೆಯುವುದು ಖಚಿತವಾಗಿದೆ. ಭುವನೇಶ್ವರದಲ್ಲಿ ಈ ಕೂಟ ನಡೆಸುವುದಕ್ಕೆ ಸಿದ್ಧತೆ ನಡೆಸಲಾಗಿದೆ ಎಂದು ರಾಷ್ಟ್ರೀಯ ಅಥ್ಲೆಟಿಕ್ಸ್ ಸಂಸ್ಥೆ ಗುರುವಾರ ತಿಳಿಸಿದೆ. ಪೋಲ್ಯಾಂಡಿನ ತೋರನ್‌ನಲ್ಲಿ ನಡೆದಿದ್ದ ಬಿಡ್ಡಿಂಗ್ ಕಾರ್ಯಕ್ರಮದಲ್ಲಿ ಭಾರತ ಹೋಸ್ಟಿಂಗ್ ರೈಟ್ಸ್ ಗೆದ್ದುಕೊಂಡಿದೆ. 2032ರ ಒಲಿಂಪಿಕ್ಸ್ ಆಯೋಜನೆಯಲ್ಲಿ ಆತಿಥ್ಯ ಪ್ರಮುಖವಾಗಿರಲಿದೆ. ಈ ಹಿಂದೆಯೇ ಅಥ್ಲೆಟಿಕ್ಸ್ ಸಂಸ್ಥೆ ಬಿಡ್ ಸಲ್ಲಿಸಿರುವ ಬಗ್ಗೆ ಹೇಳಿತ್ತು. ಭುವನೇಶ್ವರದ ಕಾಳಿಂಗ ಕ್ರೀಡಾಂಗಣವನ್ನು ವಿಶ್ವ ಅಥ್ಲೆಟಿಕ್ಸ್ ಸಂಸ್ಥೆಯ ಅಧಿಕಾರಿಗಳು ಪರಿಶೀಲನೆ ನಡೆಸಿರುವ ನಂತರ ಈ ಬಗ್ಗೆ ಘೋಷಣೆಯಾಗಿದೆ. ಇದೇ ಮೊದಲ ಬಾರಿಗೆ ಭಾರತ ದೊಡ್ಡ ಆತಿಥ್ಯ ವಹಿಸುತ್ತಿದೆ. ಇದರೊಂದಿಗೆ ಭಾರತ ಈ ಕೂಟವನ್ನು ಆಯೋಜಿಸಲಿರುವ ಏಷ್ಯಾದ ನಾಲ್ಕನೇ ರಾಷ್ಟ್ರವಾಗಲಿದೆ. ಜಪಾನ್ ಈ ಕೂಟವನ್ನು ಆಯೋಜಿಸಿದ್ದ ಮೊದಲ ಏಷ್ಯನ್ ರಾಷ್ಟ್ರವಾಗಿತ್ತು.

ಯುದ್ಧದ ಬಿಸಿ: ಪ್ಯಾಲೆಸ್ತೀನ್ ಫುಟ್‌ಬಾಲ್ ಪಂದ್ಯ ರದ್ದು

ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ಪ್ಯಾಲೆಸ್ತೀನ್ ರಾಷ್ಟ್ರೀಯ ಫುಟ್‌ಬಾಲ್ ತಂಡದ ಸ್ನೇಹಪೂರ್ಣ ಪಂದ್ಯಗಳು ರದ್ದುಗೊಂಡಿವೆ. ಪ್ಯಾಲೆಸ್ತೀನ್ ತಂಡವು ಈ ತಿಂಗಳ ಕೊನೆಯಲ್ಲಿ ಮೊರೊಕ್ಕೊದಲ್ಲಿ ಮೌರಿಟಾನಿಯಾ ಮತ್ತು ಬೆನಿನ್ ವಿರುದ್ಧ ಪಂದ್ಯಗಳನ್ನು ಆಡಬೇಕಾಗಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಗಳಿಂದಾಗಿ ಈ ಪಂದ್ಯಗಳನ್ನು ರದ್ದುಪಡಿಸಲಾಗಿದೆ ಎಂದು ಪ್ಯಾಲೆಸ್ತೀನ್ ಫುಟ್‌ಬಾಲ್ ಸಂಘ ತಿಳಿಸಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಇರಾನ್ ಮೇಲಿನ ದಾಳಿಗಳ ನಂತರ, ಪ್ರದೇಶದಲ್ಲಿ ವ್ಯಾಪಕ ಪ್ರಯಾಣ ವ್ಯತ್ಯಯ ಉಂಟಾಗಿದೆ. ಹಲವಾರು ಪ್ರಮುಖ ಗಲ್ಫ್ ಟ್ರಾನ್ಸಿಟ್ ಕೇಂದ್ರಗಳಲ್ಲಿ ವಿಮಾನ ಸಂಚಾರಕ್ಕೆ ತೊಂದರೆ ಉಂಟಾಗಿದ್ದು, ಭದ್ರತಾ ಕಾರಣಗಳಿಂದ ಕೆಲವು ವಿಮಾನ ನಿಲ್ದಾಣಗಳನ್ನು ಮುಚ್ಚಲಾಗಿದೆ. ಕೋಚ್ ಇಹಾಬ್ ಅಬು ಜಜಾರ್ ನೇತೃತ್ವದ ತಂಡ ಮಾರ್ಚ್ 27ರಂದು ಬೆನಿನ್ ವಿರುದ್ಧ ಮತ್ತು ನಾಲ್ಕು ದಿನಗಳ ಬಳಿಕ ಮೌರಿಟಾನಿಯಾ ವಿರುದ್ಧ ಆಡಬೇಕಾಗಿತ್ತು. ಈ ಪಂದ್ಯಗಳು 2027ರ ಏಷ್ಯನ್ ಕಪ್‌ಗೆ ಸಿದ್ಧತೆಯ ಭಾಗವಾಗಿದ್ದವು. ಈ ಟೂರ್ನಿಯನ್ನು ಸೌದಿ ಅರೇಬಿಯಾದಲ್ಲಿ ಆಯೋಜಿಸಲಾಗುತ್ತಿದೆ. ಮೊರೊಕ್ಕೊದಲ್ಲಿ ಆಯೋಜಿಸಲಾದ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ ಎಂದು ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನಸ್ವಾಮಿಯಲ್ಲಿ ಕ್ರಿಕೆಟ್ | ಹೊಸ ನಿಯಮ | ಮೆಟ್ರೋ ಉಚಿತ, ಪ್ರವೇಶ-ನಿರ್ಗಮನ ದ್ವಾರಗಳ ನವೀಕರಣ

ಅಭಿಮಾನಿಗಳಿಗೆ ಹೊಸ ಮಾರ್ಗಸೂಚಿ

ಬೆಂಗಳೂರು: ಮುಂದಿನ ವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಉದ್ಘಾಟನಾ ಪಂದ್ಯಕ್ಕೆ ಬೆಂಗಳೂರು ಸಜ್ಜುಗೊಳ್ಳುತ್ತಿದೆ. ಸುಮಾರು 8 ತಿಂಗಳ ಮಟ್ಟಿಗೆ ನಿಂತಿದ್ದ ಕ್ರಿಕೆಟ್ ಮತ್ತೊಮ್ಮೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊಳಗಲು ಅಣಿಯಾಗಿದೆ.

ಪಂದ್ಯಕ್ಕೆ ಒಂದು ವಾರ ಉಳಿದಿರುವಂತೆ ಸಕಲ ಸಿದ್ಧತೆಗಳು ನಡೆಯುತ್ತಿದ್ದು, ಶುಕ್ರವಾರದಂದು ಅಭಿಮಾನಿಗಳಿಗೆ ಪಂದ್ಯದ ಟಿಕೆಟ್, ಪಾರ್ಕಿಂಗ್ ಮತ್ತು ನೂತನ ಪ್ರವೇಶ-ನಿರ್ಗಮಿಸುವ ಗೇಟುಗಳ ಮಾರ್ಗಸೂಚಿಯನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ರಕಟಿಸಿದೆ. ಮೆಟ್ರೋ ಜತೆಗೆ ಬೆಂಗಳೂರು ತಂಡ ಟೈ-ಅಪ್ ಮಾಡಿಕೊಂಡಿದ್ದು ಪಂದ್ಯದ ಟಿಕೆಟ್ ಇರುವವರಿಗೆ ಉಚಿತ ಮೆಟ್ರೋ ಸೇವೆ ಕೂಡ ಲಭ್ಯವಿದೆ ಎಂದು ಆರ್‌ಸಿಬಿ ಅಧಿಕೃತ ಘೋಷಣೆ ಮಾಡಿದೆ.

ವಾಹನ ದಟ್ಟಣೆ ನಿಯಂತ್ರಣ: ಪಂದ್ಯಗಳು ನಡೆಯುವ ಹಂತದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಹತ್ತಿರ ವಾಹನ ದಟ್ಟಣೆ ಆಗದಂತೆ ನೋಡಿಕೊಳ್ಳುವನಿಟ್ಟಿನಲ್ಲಿ ಹೊಸಮಾರ್ಗಸೂಚಿಯನ್ನು ನೀಡಲಾಗಿದೆ. ಮುಖ್ಯವಾಗಿ ಅಭಿಮಾನಿಗಳಿಗೆ ಮೆಟ್ರೋ ಅಥವಾ ಸಾರ್ವಜನಿಕ ವಾಹನಗಳನ್ನು ಬಳಸಿಕೊಳ್ಳಲು ಸಲಹೆ ನೀಡಿರುವ ಕೆಎಸ್‌ಸಿಎ, ಬೆಂಗಳೂರು ಪೊಲೀಸ್ ಮತ್ತು ಬೆಂಗಳೂರು ಫ್ರಾಂಚೈಸಿ ವಾಹನ ದಟ್ಟಣೆಗೆ ವಿವಿಧ ಕ್ರಮಗಳನ್ನೂ ಕೂಡ ಜರುಗಿಸಿದೆ. ಇದೇ ವಿಭಾಗದಲ್ಲಿ ಮೆಟ್ರೋದೊಂದಿಗೆ ಟೈ-ಅಪ್ ಮಾಡಿಕೊಂಡಿದ್ದು, ಪಂದ್ಯದ ವೇಳೆ ಟಿಕೆಟ್ ಪಡೆದವರಿಗೆ ಕ್ರೀಡಾಂಗಣದವರೆಗೂ ಉಚಿತ ಮೆಟ್ರೋ ಸೇವೆ ಒದಗಿಸುವ ಬಗ್ಗೆ ಘೋಷಣೆಯಾಗಿದೆ.

ಕಾರ್ಯನಿರ್ವಹಿಸುವುದುಹೇಗೆ?: ಚಿನ್ನಸ್ವಾಮಿಕ್ರೀಡಾಂಗಣಕ್ಕೆ ಹೋಗಲು ಎರಡು ಪ್ರಮುಖ ಮೆಟ್ರೋ ನಿಲ್ದಾಣಗಳಿವೆ. ಎಮ್‌ಜಿ ರೋಡ್ ಮತ್ತು ಕಬ್ಬನ್ ಪಾರ್ಕ್. ಪ್ರತಿಷ್ಠಿತ ಪಂದ್ಯದ ಟಿಕೆಟ್ ಖರೀದಿಸುವ ಅಭಿಮಾನಿಗಳಿಗೆ ಪಂದ್ಯದ ವೇಳೆ ಈ ಎರಡೂ ನಿಲ್ದಾಣಕ್ಕೆ ಉಚಿತ ಪ್ರಯಾಣ ಒದಗಿಸಲಾಗುವುದು. ವೆಬ್‌ಸೈಟ್‌ನಲ್ಲಿ ಖರೀಸಿರುವ ಟಿಕೆಟಿನಲ್ಲಿ ಎರಡು ಬಾರ್‌ಕೋಡ್‌ಗಳಿರುತ್ತವೆ. ಪಂದ್ಯದ ಟಿಕೆಟ್ ಎಂಬ ಆಯ್ಕೆಯ ಪಕ್ಕದಲ್ಲೇ ಮೆಟ್ರೋ ಟಿಕೆಟ್ ಅನ್ನುವ ಆಯ್ಕೆಯನ್ನೂ ನೀಡಲಾಗಿದೆ. ಇದರ ಮೇಲೆ ಕ್ಲಿಕ್ ಮಾಡಿಕೊಂಡರೆ, ಅಭಿಮಾನಿಗಳು ಉಚಿತ ಮೆಟ್ರೋ ಟಿಕೆಟ್ ಪಡೆದುಕೊಳ್ಳಲಿದ್ದಾರೆ.

ಕ್ವೀನ್ಸ್ ರೋಡ್ ಮೂಲಕ ಪ್ರವೇಶ ಬಂದ್: ಕಬ್ಬನ್ ಪಾರ್ಕ್ ರೋಡ್ ಹಾಗೂ ಲಿಂಗ್ ರೋಡ್‌ನಿಂದ ಮಾತ್ರ ಪ್ರವೇಶ ಪಡೆಯಬಹುದು. ಇನ್ನುಮುಂದೆ ಕ್ವೀನ್ಸ್ ರೋಡ್ ಮೂಲಕ ಪ್ರವೇಶ ಪಡೆಯುವ ಹಾಗಿಲ್ಲ ಎಂಬುದು ಖಚಿತವಾಗಿದೆ. ಒಟ್ಟು 18 ಗೇಟುಗಳ ಮೂಲಕ ಮೈದಾನದೊಳಗೆ ಹೋಗಬಹುದು. ಆದರೆ ಕ್ವೀನ್ಸ್ ರೋಡ್ ಮೂಲಕ ಪ್ರವೇಶ ರದ್ದುಗೊಳಿಸಲಾಗಿದೆ. ಸ್ಟ್ಯಾಂಡ್‌ಗಳಿಗೆ ಹೋಗಲು ಹೆಚ್ಚಿನ ಒಳಗೇಟ್‌ಗಳನ್ನು ಅಳವಡಿಸಲಾಗಿದೆ.

ವೆಬ್‌ಸೈಟ್‌ನಲ್ಲಿ ಮಾತ್ರ ಟಿಕೆಟ್ ಲಭ್ಯ: ಪ್ರಮುಖ ವಿಚಾರದಲ್ಲಿ ಆರ್‌ಸಿಬಿ ಕೇವಲ ಫ್ರಾಂಚೈಸಿ ವೆಬ್‌ಸೈಟ್‌ನಲ್ಲಿ ಮಾತ್ರ ಟಿಕೆಟ್ ಸಿಗಲಿದ್ದು, ಯಾವುದೇ ಕಾರಣಕ್ಕೂ ವಂಚನೆಗೆ ಒಳಗಾಗದಿರಿ ಎಂಬ ಕಿವಿಮಾತು ಹೇಳಿದೆ. ಅಧಿಕೃತ ವೆಬ್‌ಸೈಟ್ SHOP.ROYALCHALLENGER.COM ನಲ್ಲಿ ಮಾತ್ರ ಅಸಲು ಟಿಕೆಟ್‌ಗಳು ಸಿಗಲಿವೆ. ಆ ಟಿಕೆಟ್‌ಗಳು ಮೆಟ್ರೋದೊಂದಿಗೆ ಲಿಂಕ್ ಹೊಂದಿದ್ದು, ಮೆಟ್ರೋ ಟಿಕೆಟ್ ಕೂಡ ಅದರಲ್ಲಿ ಲಭ್ಯ ಎಂದು ಆರ್‌ಸಿಬಿ ತಿಳಿಸಿದೆ.

ಪರಿಶೀಲನೆ ಮುಕ್ತಾಯ: ಚಿನ್ನಸ್ವಾಮಿ ಕ್ರೀಡಾಂಗಣವು ಪಂದ್ಯದ ಸಂಭ್ರಮಕ್ಕೆ ಸಜ್ಜಾಗುತ್ತಿರುವ ಬೆನ್ನಲ್ಲೇ, ನಗರ ಪೊಲೀಸರು ಹಾಗೂ ಕೆಎಸ್‌ಸಿಎ ಜಂಟಿಯಾಗಿ ಭದ್ರತಾ ವ್ಯವಸ್ಥೆಯನ್ನು ರೂಪಿಸಿವೆ. ಪಂದ್ಯದ ವೇಳೆ ಯಾವುದೇ ಸಣ್ಣ ಲೋಪಕ್ಕೂ ಅವಕಾಶ ನೀಡಬಾರದೆಂಬ ಉದ್ದೇಶದಿಂದ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಪ್ರಮುಖ ಭಾಗೀದಾರರು ಕ್ರೀಡಾಂಗಣದಲ್ಲಿ ಖುದ್ದಾಗಿ ಭೇಟಿ ನೀಡಿ ಸಕಲ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದ್ದಾರೆ. ಭದ್ರತಾ ಸಿಬ್ಬಂದಿಯ ನಿಯೋಜನೆ, ಹೈಟೆಕ್ ಕಣ್ಗಾವಲು ಮತ್ತು ತುರ್ತು ಪರಿಸ್ಥಿತಿಗಳನ್ನು ಎದುರಿಸುವ ತಂತ್ರಗಳ ಬಗ್ಗೆ ಹಿರಿಯ ಅಧಿಕಾರಿಗಳು ಚರ್ಚೆನಡೆಸಿದ್ದಾರೆ. ಕ್ರೀಡಾಂಗಣದ ಸುತ್ತಮುತ್ತಲಿನ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ವಿಶೇಷ ಸಂಚಾರ ವ್ಯತ್ಯಯ ಯೋಜನೆಗಳನ್ನು ರೂಪಿಸಲಾಗಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ತಾಂತ್ರಿಕ ತಂಡಗಳು ಸಿಸಿಟಿವಿ ಕ್ಯಾಮೆರಾಗಳ ಮೂಲಕ ಪ್ರತಿ ಚಲನವಲನದ ಮೇಲೆ ಹದ್ದಿನ ಕಣ್ಣಿಡಲು ಸನ್ನದ್ಧವಾಗಿವೆ.



ಪಾರ್ಕಿಂಗ್ ವ್ಯವಸ್ಥೆ

- ಗರುಡ ಮಾಲ್
- ಸೆಂಟ್ ಜೋಸೆಫ್ ಇಂಡಿಯನ್ ಶಾಲೆ
- ಸೆಂಟ್ ಜೋಸೆಫ್ ಪುರಷರ ಪ್ರೌಢ ಶಾಲೆ
- ಫ್ರೀಡಂ ಪಾರ್ಕ್

ವಿಶೇಷ ಪಾರ್ಕಿಂಗ್ ವ್ಯವಸ್ಥೆ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಪಾರ್ಕಿಂಗ್ ಸಮಸ್ಯೆ ಮೊದಲಿನಿಂದಲೂ ಎದುರಿಸುತ್ತಲೇ ಬಂದಿತ್ತು. ಪಂದ್ಯ ಶುರುವಾಗುವ ಮೊದಲು ಮತ್ತು ಮುಗಿದ ನಂತರ ಕ್ರೀಡಾಂಗಣದ ಸುತ್ತಲೂ ಭಾರೀ ವಾಹನ ದಟ್ಟಣೆಯಾಗುತ್ತಿತ್ತು. ಈ ಸಮಸ್ಯೆಯ ಪರಿಹಾರವಾಗಿ ಹೊಸ ಪಾರ್ಕಿಂಗ್ ವ್ಯವಸ್ಥೆ ಬಗ್ಗೆಯೂ ಆರ್‌ಸಿಬಿ ಅಭಿಮಾನಿಗಳಿಗೆ ನೀಡಿದೆ. ಕ್ರೀಡಾಂಗಣದ ಸಮೀಪ ನಾಲ್ಕು ಕಡೆ ಪಾರ್ಕಿಂಗ್ ಮಾಡಬಹುದಾಗಿ ತಿಳಿಸಿದೆ. ಪಾರ್ಕಿಂಗ್‌ಗಾಗಿ ಫ್ರೀ ಬುಕ್ಕಿಂಗ್ ಕೂಡ ಆನ್‌ಲೈನ್‌ನಲ್ಲಿ ಇರಿಸುವುದಾಗಿ ಆರ್‌ಸಿಬಿ ತಿಳಿಸಿದೆ. ಪಾರ್ಕಿಂಗ್ ಮಾಡುವ ಅಭಿಮಾನಿಗಳಿಗೆ ಕ್ರೀಡಾಂಗಣದವರೆಗೂ ಬಸ್ ವ್ಯವಸ್ಥೆ ಕೂಡ ಇರಲಿದೆ.

ತುರ್ತು ವಾಹನಕ್ಕೆ ಬೇರೆ ಗೇಟ್

ಕೆಲವು ಗೇಟ್‌ಗಳನ್ನು ಆಂಬ್ಯುಲೆನ್ಸ್, ಅಗ್ನಿಶಾಮಕ ವಾಹನ ಸೇರಿದಂತೆ ತುರ್ತು ವಾಹನಗಳಿಗೆ ಮಾತ್ರ ಪ್ರವೇಶಕ್ಕಾಗಿ ವಿಶೇಷ ಗೇಟ್‌ಗಳನ್ನು ಸ್ಥಾಪಿಸಲಾಗಿದೆ. ಇವುಗಳಿಗಾಗಿ ಕ್ರೀಡಾಂಗಣದ ಒಳಗೆ ಪ್ರತ್ಯೇಕ ಗೇಟ್‌ಗಳನ್ನು ಮೀಸಲಿಡಲಾಗಿದೆ.

ಅನ್‌ಬಾಕ್ಸಿಂಗ್ ರದ್ದು?

ಪ್ರತಿ ವರ್ಷ ನಡೆಯುವ ಆರ್‌ಸಿಬಿ ಜೆರ್ಸಿ ಅನಾವರಣ ಕಾರ್ಯಕ್ರಮ ಈ ಬಾರಿ ರದ್ದಾಗುವ ಸಾಧ್ಯತೆಯಿದೆ. ಪಂದ್ಯಾವಳಿಗೆ ಕೆಲವೇ ದಿನಗಳು ಉಳಿದರೂ ಈ ಬಗ್ಗೆ ಘೋಷಣೆಯಾಗಿಲ್ಲ. ಕನಿಷ್ಠ ಪಕ್ಷ ದಿನಾಂಕವೂ ನಿಗದಿಯಾಗಿಲ್ಲ. ಉದ್ಘಾಟನಾ ಸಮಾರಂಭ ಬೆಂಗಳೂರಲ್ಲೇ ನಡೆಯಬೇಕಿದೆ. ಇದಕ್ಕೂ ಮುನ್ನ ಅಂತಹ ದೊಡ್ಡ ಕಾರ್ಯಕ್ರಮ ನಡೆಯುವುದು ಅನುಮಾನ ಎಂದು ವರದಿಯಾಗಿವೆ.

ಮುಂದಿನ ವರ್ಷ ಟೇಬಲ್ ಟೆನಿಸ್ ಡಬಲ್ಸ್ ವಿಶ್ವಕಪ್

ಹೊಸದಿಲ್ಲಿ: ಹೊಚ್ಚಹೊಸ ಟೇಬಲ್ ಟೆನಿಸ್ ಡಬಲ್ಸ್ ವಿಶ್ವಕಪ್ ಪಂದ್ಯಾವಳಿ ಯನ್ನು ಮುಂದಿನ ವರ್ಷ ಪರಿಚಯಿಸಲು ಅಂತಾ ರಾಷ್ಟ್ರೀಯ ಟೇಬಲ್ ಟೆನಿಸ್ ಸಂಸ್ಥೆ ಮುಂದಾಗಿದೆ. ಶುಕ್ರವಾರ ಈ ಬಗ್ಗೆ ಘೋಷಣೆ ಯಾಗಿದ್ದು ಮೊದಲ ಆವೃತ್ತಿ 2027ರಲ್ಲಿ ನಡೆಯಲಿದೆ. ಡಬಲ್ಸ್‌ಗಳಿಗಾಗಿಯೇ ಮಾಡ ಲಾಗುವ ಈ ಕೂಟದಲ್ಲಿ ಮಹಿಳೆಯರ ಮತ್ತು ಪುರುಷರ ವಿಭಾಗ ಇರಲಿವೆ. ಸಿಂಗಲ್ಸ್ ಪಂದ್ಯಗಳು ನಡೆಯುವುದಿಲ್ಲ.

2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೂ ಮುನ್ನ ವಿಶ್ವಕಪ್ ನಡೆಯುತ್ತಿರುವುದು ಜೋಡಿ ಟಿಟಿ ಆಟಗಾರರಿಗೆ ಭರವಸೆ ಮೂಡಿಸಿದೆ. ಸದ್ಯ ಚಾಲ್ತಿಯಲ್ಲಿರುವ ಐಟಿಟಿಎಫ್ ವಿಶ್ವಕಪ್ ಕೇವಲ



ಸಿಂಗಲ್ಸ್‌ಗೆ ಮಾತ್ರ ಸೀಮಿತವಾಗಿತ್ತು. ಡಬಲ್ಸ್ ಹಾಗೂ ಮಿಶ್ರ ವಿಶ್ವಕಪ್ ಈ ರಚನೆಯನ್ನು ಪೂರ್ಣಗೊಳಿಸುತ್ತದೆ. 2004ರ ಅಥೇನ್ಸ್ ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ಪಂದ್ಯಗಳು ಮರಳಿವೆ. ಟಿಟಿ ವಿಭಾಗದಲ್ಲಿ ಸಿಂಗಲ್ಸ್ ಪಂದ್ಯಗಳು ಮಾತ್ರ ನಡೆಯುತ್ತಿದ್ದವು. 2020ರ ಟೋಕಿಯೊ ಒಲಿಂಪಿಕ್ಸ್ ಸಮಯ ದಲ್ಲಿ ಮಿಶ್ರ ಡಬಲ್ಸ್ ವಿಭಾಗವನ್ನು ಸೇರಿಸಲಾಯಿತು. ಇದೀಗ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ನಲ್ಲಿ ಮಹಿಳೆಯರ ಹಾಗೂ ಪುರುಷರ ಡಬಲ್ಸ್ ವಿಭಾಗವನ್ನು ಮೊದಲ ಬಾರಿಗೆ ಸೇರಿಸಲಾಗಿದೆ. ಈ ಬಗ್ಗೆ ಘೋಷಣೆ ಮಾಡುತ್ತಾ, ಅಂತಾ ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಅಧ್ಯಕ್ಷೆ ಪೆಟ್ರಾ ಸೋರ್ಲಿಂಗ್ ಅವರು ಮಾತನಾಡುತ್ತಾ, ಒಲಿಂಪಿಕ್ಸ್‌ನಲ್ಲಿ ಡಬಲ್ಸ್ ವಿಭಾಗವನ್ನು ಈ ಬಾರಿ ಮತ್ತೆ ಸೇರಿಸಲಾಗುತ್ತಿರುವುದು ಖುಷಿಯ ವಿಚಾರ. ಈ ತಯಾರಿ ಮತ್ತು ಸಂಭ್ರಮಾಚರಣೆ ಯನ್ನು ಐಟಿಟಿಎಫ್ ವಿಶ್ವಕಪ್ ಮೂಲಕ ಶುರು ಮಾಡುತ್ತೇವೆ ಎಂದರು. 100 ವರ್ಷದ ಟೇಬಲ್ ಟೆನಿಸ್ ಸಂಭ್ರಮಾಚರಣೆ ಮಾಡುವುದಲ್ಲದೆ ನಾವು ಮುಂದಿನ 100 ವರ್ಷಕ್ಕೆ ಸಿದ್ಧತೆಗಳನ್ನು ನಡೆಸಿದ್ದೇವೆ ಎಂದಿದ್ದಾರೆ.

ಆರಂಭಿಕ ಪಂದ್ಯಗಳಿಗೆ ಸ್ಟಾರ್ಕ್ ಕೂಡ ಅಲಭ್ಯ

ಮುಂಬೈ: ವೇಗಿ ಮಿಚೆಲ್ ಸ್ಟಾರ್ಕ್, ಲೋಕಿ ಫರ್ಗುಸನ್, ಸ್ಯಾಮ್ ಕರ್ರನ್ ಸೇರಿದಂತೆ ಪ್ರಮುಖ ಆಟಗಾರರು ಐಪಿಎಲ್‌ಗೆ ಅಲಭ್ಯರಾಗಿದ್ದಾರೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯು ಮಾರ್ಚ್ 28ರಿಂದ ಶುರುವಾಗಲಿದೆ. ಆಸ್ಟ್ರೇಲಿಯಾ ವೇಗಿ ಜೋಷ್ ಹ್ಯಾಜೆಲ್ವುಡ್, ಪ್ಯಾಟ್ ಕಮ್ಮಿನ್ಸ್ ಅಲಭ್ಯರಿರುವುದು ಈ ಹಿಂದೆ ಖಚಿತವಾಗಿತ್ತು. ಇದೀಗ ಮಿಚೆಲ್ ಸ್ಟಾರ್ಕ್ ಕೂಡ ಒಂದಿಷ್ಟು ಪಂದ್ಯಗಳಿಗೆ ಲಭ್ಯರಿಲ್ಲ ಎಂಬ ಮಾಹಿತಿ ಹೊರಬಿದ್ದಿದೆ. ವರ್ಕ್ ಲೋಡ್ ಹೆಚ್ಚಳ ಬೆನ್ನೆಲ್ಲೇ ಒಂದಿಷ್ಟು ಪಂದ್ಯಗಳಿಗೆ ಸ್ಟಾರ್ಕ್ ಲಭ್ಯರಿಲ್ಲ. ಪಂಜಾಬ್ ವೇಗಿ ವೈಯಕ್ತಿಕ ಕಾರಣಗಳಿಂದ ಅಲಭ್ಯರಾಗಿದ್ದಾರೆ. ರಾಜಸ್ಥಾನಕ್ಕೆ ಟ್ರೇಡ್ ಆಗಿರುವ ಸ್ಯಾಮ್ ಕರ್ರನ್ ಗಾಯದಿಂದಾಗಿ ಹಿನ್ನಡೆ ಅನುಭವಿಸಿದ್ದಾರೆ. ಮುಂಬೈನ ಅಥರ್ವಾ ಅಂಕೋಲಾ, ಲಖನೌ ತಂಡದ ಜೋಶ್ ಇಂಗ್ಲಿಸ್, ಚೆನ್ನೈ ತಂಡದ ನಾಥನ್ ಎಲ್ಲಿಸ್ ಕೂಡ ಅಲಭ್ಯರಿದ್ದಾರೆಂದು ಹೇಳಲಾಗುತ್ತಿದೆ. ಎರಡನೇ ಹಂತದ ವೇಳಾ ಪಟ್ಟಿ ಪ್ರಕಟವಾದ ನಂತರ ಮುಂದಿನ ಪಂದ್ಯಗಳಿಗೆ ಲಭ್ಯತೆ ಬಗ್ಗೆ ಮಾಹಿತಿ ಹೊರಬರಲಿದೆ.

ಅ.29ರಿಂದ ಯೂಥ್ ಕಾಮನ್‌ವೆಲ್ತ್


ಹೊಸದಿಲ್ಲಿ: ಕಾಮನ್‌ವೆಲ್ತ್ ಯುವ ಕ್ರೀಡಾ ಕೂಟದ ಎಂಟನೇ ಆವೃತ್ತಿ ಮುಂದಿನ ವರ್ಷ ಅಕ್ಟೋಬರ್ 29ರಿಂದ ನವೆಂಬರ್ 4ರವರೆಗೆ ಮಾಲ್ಟಾ ಮತ್ತು ಗೋಜೊದಲ್ಲಿ ನಡೆಯಲಿದೆ. ಅಕ್ಟೋಬರ್ 29ರಂದು ಉದ್ಘಾಟನಾ ಸಮಾರಂಭ ನಡೆಯಲಿದ್ದು, ಅಕ್ಟೋಬರ್ 30ರಿಂದ ನವೆಂಬರ್ 4ರವರೆಗೆ ಆರು ದಿನಗಳ ಕ್ರೀಡಾ ಕಾರ್ಯಕ್ರಮಗಳು ನಡೆಯಲಿವೆ ಎಂದು ಘೋಷಣೆಯಾಗಿದೆ.

ಈ ಕ್ರೀಡಾಕೂಟದಲ್ಲಿ ಈಜು ಮತ್ತು ಪ್ಯಾರಾ ಈಜು, ಅಥ್ಲೆಟಿಕ್ಸ್ ಮತ್ತು ಪ್ಯಾರಾ ಅಥ್ಲೆಟಿಕ್ಸ್, ನೆಟ್ಬಾಲ್, ಸೇಲಿಂಗ್, ಸ್ಕ್ವ್ಯಾಷ್, ಟ್ರೈಥ್ಲಾನ್, ವಾಟರ್ ಪೋಲೊ ಮತ್ತು ವೇಟ್‌ಲಿಫ್ಟಿಂಗ್ ಸೇರಿ ಒಟ್ಟು ಎಂಟು ಕ್ರೀಡೆಗಳು ಇರಲಿವೆ. ಕಾಮನ್‌ವೆಲ್ತ್ ಸ್ಪೋರ್ಟ್ ಮುಖ್ಯ ಕಾರ್ಯನಿರ್ವಾಹಕ ಕೇಟಿ ಸಾಡ್ಲೈರ್ ಅವರು ಪ್ರಕಟಣೆಯಲ್ಲಿ, ಮಾಲ್ಟಾ 2027 ಯುವ ಕ್ರೀಡಾಕೂಟವು ಉತ್ಸಾಹಭರಿತ ಮತ್ತು ಸ್ಪರ್ಧಾತ್ಮಕ ವಾತಾವರಣವನ್ನು ಒದಗಿಸಲಿದೆ. ವಿಶ್ವಮಟ್ಟದ ಸೌಲಭ್ಯಗಳು ಯುವ ಆಟಗಾರರಿಗೆ ಹೊಸ ಅನುಭವವನ್ನು ನೀಡಲಿವೆ ಮತ್ತು ಭವಿಷ್ಯದ ತಾರೆಗಳನ್ನು ಬೆಳೆಸಲು ಸಹಾಯ ಮಾಡಲಿವೆ ಎಂದು ತಿಳಿಸಿದ್ದಾರೆ. ಈ ಬಾರಿ ಕ್ರೀಡಾಕೂಟದಲ್ಲಿ ಇತಿಹಾಸದಲ್ಲೇ ಅತಿ ದೊಡ್ಡ ಪ್ಯಾರಾ ಕ್ರೀಡಾ ಕಾರ್ಯಕ್ರಮ ಇರಲಿದೆ. 2023ರಲ್ಲಿ ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ ನಡೆದ ಕ್ರೀಡಾಕೂಟದಲ್ಲಿ ಪ್ಯಾರಾ ಅಥ್ಲೆಟಿಕ್ಸ್ ಸೇರಿಸಿದ ಬಳಿಕ ಇದನ್ನು ಇನ್ನಷ್ಟು ವಿಸ್ತರಿಸಲಾಗಿದೆ. ಇದೇ ವೇಳೆ, ಈ ಬಾರಿ ಸೇಲಿಂಗ್ ಮತ್ತು ವಾಟರ್ ಪೋಲೊ ಮೊದಲ ಬಾರಿಗೆ ಕಾಮನ್‌ವೆಲ್ತ್ ಯುವಕ್ರೀಡಾಕೂಟದಲ್ಲಿಪರಿಚಯವಾಗುತ್ತಿವೆ. ಸುಮಾರು 14ರಿಂದ 18 ವರ್ಷದ ವಯಸ್ಸಿನ 1200ಕ್ಕೂ ಹೆಚ್ಚು ಆಟಗಾರರು ಕಾಮನ್‌ವೆಲ್ತ್‌ನ 74 ರಾಷ್ಟ್ರಗಳು ಮತ್ತು ಪ್ರದೇಶಗಳಿಂದ ಭಾಗವಹಿಸುವ ನಿರೀಕ್ಷೆಯಿದೆ.

ಕ್ರೀಡಾಕೂಟದ ಪ್ರಮುಖ ಸ್ಥಳಗಳು: ಕಾಟೋನೆರಾ ಇಂಡೋರ್ ಪೂಲ್, ತಲ್-ಕ್ರೋಕ್ ರಾಷ್ಟ್ರೀಯ ಪೂಲ್, ಮಾರ್ಸಾ ಅಥ್ಲೆಟಿಕ್ಸ್ ಸ್ಟೇಡಿಯಂ, ಮಾರ್ಸಾ ಸ್ಪೋರ್ಟ್ಸ್ ಸೆಂಟರ್, ಮೆಲ್ಲಿಹಾ ಬೇ, ಗೋಜೊ ಇಂಡೋರ್ ಸ್ಪೋರ್ಟ್ಸ್ ಪೆವಿಲಿಯನ್, ಮಾರ್ಸಲ್‌ಫೋರ್ನ್ ಬೇ.

ಪದಬಂಧ 5929

ರಾಜಾ ಸಂಗಮೇಶ ಹಿರೇಮಠ



5928 ಉತ್ತರ

ಎಡದಿಂದ ಬಲಕ್ಕೆ:
1.ಭವಪಾಶ 3.ಭದ್ರಗಜ
5.ರಜಕ 7.ತಹನಾಮೆ
9.ನರಕುಲ 11.ಬಾಕಿದಾರ
14.ಹರಿಹರ 16.ಸಕಲ
17.ಬೇರುಬಿಡು
18.ಒಳಸುಳಿ

ಮೇಲಿನಿಂದ ಕೆಳಕ್ಕೆ :
2.ವನರುಹ 4.ಗಡಿಯಾರ
5.ರಮೆ 6.ಕಲ 8.ನಾರದಾ
10.ಕುತ್ತರಿ 12.ಕಿಡಿಕಾರು
13.ರಸ 14.ಹಲ
15.ಹವಣಿಸು

ಎಡದಿಂದ ಬಲಕ್ಕೆ
1.ಹಿಂದೂಗಳ ಪ್ರಸಿದ್ಧ ಧರ್ಮಗ್ರಂಥ (5)
3.ಕುಕ್ಕು-ತಿವಿಯುವಿಕೆ (3)
5.ಈತ ಹಣದೊಡತಿಯ ಪತಿ (3)
6.ನನ್ನ ಕುಲ ಕೇಳಿದ ಪಾಂಡವ (3)
8.ಈತ ಆಕೃತಿಗಳನ್ನು ಬರೆಯುವವನು (3)
9.ಅಕ್ಷರ ವಿದ್ಯೆ ಗೊತ್ತಿರುವವನು (3)
13.ಕಣ ಕಡೆಯಲ್ಲಿ ತಿರುಗಿ ಪ್ರಾಯದ ಹೋರಿಯಾಯ್ತು (3)
15.ತಳದ ನಡುವೆ ಹೊಂಗೆಯ ಮರವಿದೆ (3)
16.ನಮ್ಮವನು ನನಗೆ ಮಾಡಿದ ವಂದನೆ (3)
17.ನೈದಿಲೆಗಳಿಂದ ಕೂಡಿದ ಸರೋವರ (5)

ಮೇಲಿನಿಂದ ಕೆಳಕ್ಕೆ
1.ಕುಂಭವನ್ನವನು ಇಟ್ಟದ್ದು ದೊಡ್ಡ ಕಟ್ಟಡದಲ್ಲಿ (3)
2.ಅಲ್ಲಿಗೆ ಹೋಗು ಎಂಬರ್ಥದ ಶಬ್ದ (3)
3.ಕುನು ಲಲಿತೆಗೆ ಕೇಳಿದ ಕ್ಷೇಮ ಸಮಾಚಾರ (3)
4.ಕಾರ-ಚಾಕು ಇರುವ ಹೀನವಾದ ನಡತೆ (5)
7.ಕೆಟ್ಟ ಹಂಚಿಕೆ-ಕುಟಿಲೋಪಾಯವಿದು (3)
8.ಯಾವಾಗಲೂ ಹೊಸದರಂತಿರುವುದು (5)
10.ಕ್ಷಣದ ನಡುವೆ ಇರುವ ಬೌದ್ಧಭಿಕ್ಷು (3)
11.ವೇಗದಿಂದ ಬಂದ ತನಯ ಪಡೆದ ಸಂಬಳ (3)
12.ಸೂರ್ಯ-ದೀಪಗಳ ಪ್ರಕಾಶವಿದು (3)
14.ವಿಠೋಬನ ಕರದಲ್ಲಿರುವ ಕಠಿಣವಾದುದು (3)

ಜಲ ಸುರಕ್ಷತೆ: ನೀರಿಗಾಗಿ ಜನಾಂದೋಲ ರೂಪಿಸೋಣ

ಸಿ. ಆರ್. ಪಾಟೀಲ್, ಕೇಂದ್ರ ಜಲಶಕ್ತಿ ಸಚಿವ



ಮಾ. 22ರಂದು ನಾವು 'ವಿಶ್ವ ಜಲ ದಿನ'ವನ್ನು ಆಚರಿಸುತ್ತೇವೆ. ದೇಶದಸಮಸ್ತ ನಾಗರಿಕರಿಗೂ ಇದರ ಶುಭಾಶಯಗಳು. ನೀರು ಬದುಕಿನಲ್ಲಿ ಎಷ್ಟು ಮುಖ್ಯ ಮತ್ತು ಭವಿಷ್ಯದ ಪೀಳಿಗೆಗಾಗಿ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂಬ ಸಂಗತಿಯನ್ನು ಈ ದಿನ ನಮಗೆ ನೆನಪಿಸುತ್ತದೆ.

ನಮ್ಮ ಜೀವ ಸಂಕುಲ, ಪರಿಸರ ಮತ್ತು ದೇಶದ ಆರ್ಥಿಕತೆಗೆ ನೀರೇ ಆಧಾರ. ಆದರೆ, ಈ ಅಮೂಲ್ಯ ಸಂಪನ್ಮೂಲದ ಮೇಲೆ ಒತ್ತಡ ಹೆಚ್ಚುತ್ತಿದೆ. ಜಗತ್ತಿನ ಒಟ್ಟು ಜನಸಂಖ್ಯೆ ಮತ್ತು ಜಾನುವಾರುಗಳಲ್ಲಿ ಶೇ. 18ರಷ್ಟು ಭಾರತದಲ್ಲಿದ್ದರೂ, ನಮ್ಮಲ್ಲಿರುವ ಸಿಹಿನೀರಿನ ಪ್ರಮಾಣ ಕೇವಲ ಶೇ. 4ರಷ್ಟು ಮಾತ್ರ. ವೇಗವಾಗಿ ಬೆಳೆಯುತ್ತಿರುವ ನಗರಗಳು, ಹೆಚ್ಚುತ್ತಿರುವ ನೀರಿನ ಬೇಡಿಕೆ ಮತ್ತು ಹವಾಮಾನ ಬದಲಾವಣೆಯ ಸವಾಲುಗಳ ನಡುವೆ, ನೀರಿನ ಸಮರ್ಥ ನಿರ್ವಹಣೆ ಮಾಡುವುದು ನಮ್ಮ ರಾಷ್ಟ್ರೀಯ ಆದ್ಯತೆಯಾಗಿದೆ.

ಈ ಸವಾಲನ್ನು ಸಮರ್ಥವಾಗಿ ಎದುರಿಸಲು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತವು ನೀರಿಗಾಗಿ ಒಂದು ಸಮಗ್ರ ಆಡಳಿತ ನೀತಿ ಅಳವಡಿಸಿಕೊಂಡಿದೆ. ಇದಕ್ಕಾಗಿಯೇ 'ಜಲಶಕ್ತಿ ಸಚಿವಾಲಯ'ವನ್ನು ಸ್ಥಾಪಿಸಿ, ನೀರಿನ ನಿರ್ವಹಣೆಗೆ ಸಂಬಂಧಿಸಿದ ವಿವಿಧ ವಿಭಾಗಗಳನ್ನು ಒಂದೇ ಸೂರಿನಡಿ ತರಲಾಗಿದೆ. ಇದು ನೀರಿನ ಯೋಜನೆಗಳನ್ನು ರೂಪಿಸುವಲ್ಲಿ ಒಂದು ದೊಡ್ಡ ಬದಲಾವಣೆಯನ್ನು ತಂದಿದ್ದು, ಸಮಗ್ರವಾದ ಯೋಜನೆಯತ್ತ ನಾವೀಗ ಸಾಗುತ್ತಿದ್ದೇವೆ.

ಈ ವಿಧಾನವು ನೀರಿನ ಸಂಪೂರ್ಣ ಚಕ್ರದ ಮೇಲೆ ಗಮನ ಹರಿಸುತ್ತದೆ. ಅಂದರೆ, ನೀರಿನ ಸಂರಕ್ಷಣೆ ಮತ್ತು ಅಂತರ್ಜಲ ಮರುಪೂರಣ ಮಾಡುವುದು; ಅಣೆಕಟ್ಟು ಹಾಗೂ ಜಲಾಶಯಗಳ ಮೂಲಕ ನೀರಿನ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸುವುದು; ನದಿ ಜೋಡಣೆಯ ಮೂಲಕ ಎಲ್ಲ ಪ್ರದೇಶಗಳಿಗೂ ಸಮಾನವಾಗಿ ನೀರನ್ನು ಹಂಚುವುದು; 'ಜಲ ಜೀವನ್ ಮಿಷನ್' ಮತ್ತು ಆಧುನಿಕ ನೀರಾವರಿ ಯೋಜನೆಗಳ ಮೂಲಕ ಎಲ್ಲರಿಗೂ ನೀರು ತಲುಪಿಸುವುದು. 'ನಮಾಮಿ ಗಂಗೆ'ಯಂತಹ ಕಾರ್ಯಕ್ರಮಗಳ ಮೂಲಕ ನೀರಿನ ಶುದ್ಧತೆ ಕಾಪಾಡುವುದು, ಮತ್ತು ಸಂಶೋಧನೆ ಹಾಗೂ ಹೊಸ ಆಲೋಚನೆಗಳ ಮೂಲಕ ಜಲ ಭದ್ರತೆಯನ್ನು ಗಟ್ಟಿಗೊಳಿಸುವುದು. ಇವೆಲ್ಲವೂ ದೀರ್ಘಕಾಲದ ಜಲ ಭದ್ರತೆಯ ದೂರದೃಷ್ಟಿಯನ್ನು ಉಲ್ಲೇಖಿಸುತ್ತದೆ.

ಯೋಜನೆಯ ಕೇಂದ್ರಬಿಂದುವೇನೆಂದರೆ, ನೀರಿನ ನಿರ್ವಹಣೆಯು ಎಲ್ಲಾ ಹಂತಗಳಲ್ಲೂ ಒಂದು 'ಜನ ಚಳವಳಿ' ಅಥವಾ ಜನಾಂದೋಲನವಾಗಬೇಕು ಎನ್ನುವುದು. ಸರ್ಕಾರದ ಯೋಜನೆಗಳು ಕೇವಲ ದಾರಿ ತೋರಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಬಹುದು. ಆದರೆ, ನಿಜವಾದ ಬದಲಾವಣೆಗಾಗಿ ಪ್ರತಿಯೊಬ್ಬ ನಾಗರಿಕನೂ ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದು ನನ್ನ ಹೊಣೆ ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು.

ಜಲ ಜೀವನ್ ಮಿಷನ್ ಪ್ರತಿಯೊಂದು ಗ್ರಾಮೀಣ ಮನೆಗೂ ಸುರಕ್ಷಿತ ಮತ್ತು ಸಮರ್ಪಕ ಕುಡಿಯುವ ನೀರನ್ನು ಒದಗಿಸುವ ವಿಶ್ವದ ಅತಿದೊಡ್ಡ ಕಾರ್ಯಕ್ರಮವಾಗಿ ಜಾರಿಯಾಗುತ್ತಿದೆ. ಈಗಾಗಲೇ 15.8 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿದ್ದು, ಜನರ ಜೀವನಮಟ್ಟ ಸುಧಾರಿಸಿದೆ. ಲಕ್ಷಾಂತರ ಮಹಿಳೆಯರಿಗೆ ಮೈಲುಗಟ್ಟಲೆ ನಡೆದು ನೀರು ಹೊರುವ ಸಂಕಷ್ಟ ತಪ್ಪಿದೆ. ಇದು ಅವರ ಆರೋಗ್ಯವನ್ನು ಸುಧಾರಿಸಿದ್ದಲ್ಲದೆ, ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ. ಯೋಜನೆ ಕೇವಲ ಪೈಪ್‌ಲೈನ್‌ಗಳನ್ನು ಅಳವಡಿಸುವುದಕ್ಕಷ್ಟೇ ಸೀಮಿತವಾಗಿಲ್ಲ; ಬದಲಿಗೆ ಗ್ರಾಮ ಪಂಚಾಯತಿಗಳು ಮತ್ತು 'ಗ್ರಾಮ ನೀರು ಹಾಗೂ ನೈರ್ಮಲ್ಯ ಸಮಿತಿ'ಗಳ ಮೂಲಕ ಜನರನ್ನೇ ಈ ಯೋಜನೆಯ ಮಾಲೀಕರನ್ನಾಗಿ ಮಾಡುತ್ತಿದೆ. ಅದರಲ್ಲೂ ವಿಶೇಷವಾಗಿ, ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಮಹಿಳೆಯರಿಗೆ ತರಬೇತಿ ನೀಡಿ ಸ್ಥಳೀಯ ಮಟ್ಟದಲ್ಲಿ ಹೊಣೆಗಾರಿಕೆಯನ್ನು ಗಟ್ಟಿಗೊಳಿಸಲಾಗುತ್ತಿದೆ. 'ನಮಾಮಿ ಗಂಗೆ' ಯೋಜನೆಯು ಗಂಗಾ ನದಿ ಮತ್ತು ಅದರ



ಉಪನದಿಗಳ ನೀರಿನ ಗುಣಮಟ್ಟವನ್ನು ಸುಧಾರಿಸಿದ್ದಲ್ಲದೆ, ಅಲ್ಲಿನ ನೈಸರ್ಗಿಕ ಪರಿಸರವನ್ನು ಮರುಸ್ಥಾಪಿಸುವಲ್ಲಿ ಯಶಸ್ಸು ಕಂಡಿದೆ. ಪರಿಣಾಮ, ಗಂಗಾ ನದಿಯ ಡಾಲ್ಫಿನ್‌ಗಳಂತಹ ಪ್ರಮುಖ ಜಲಚರಗಳ ಆವಾಸಸ್ಥಾನಗಳು ಸುಧಾರಿಸಿದ್ದು, ಅವುಗಳ ಸಂಖ್ಯೆ ಹೆಚ್ಚಿದೆ. ಗಂಗೆಯನ್ನು 'ನಿರ್ಮಲ' (ಶುದ್ಧ) ಮತ್ತು 'ಅವಿರಲ' (ನಿರಂತರ ಹರಿವು) ಮಾಡುವುದರ ಜೊತೆಗೆ, ಈ ಯೋಜನೆಯು 'ಅರ್ಥಗಂಗೆ' ಮತ್ತು 'ಜನಗಂಗೆ' ಎಂಬ ಹೊಸ ಆಲೋಚನೆಗಳನ್ನು ತಂದಿದೆ. ಇದು ನದಿಯನ್ನು ಕೇವಲ ಸ್ವಚ್ಛಗೊಳಿಸುವುದಷ್ಟೇ ಅಲ್ಲ, ಜನರ ಜೀವನೋಪಾಯ, ಜಾಗೃತಿ ಮತ್ತು ಸ್ಥಳೀಯರ ಸಕ್ರಿಯ ಸಹಭಾಗಿತ್ವವನ್ನು ನದಿ ಸಂರಕ್ಷಣೆಯೊಂದಿಗೆ ಜೋಡಿಸಿದೆ. ಈ ಮೂಲಕ ನದಿ ಪುನಶ್ಚೇತನದ ಕಾರ್ಯದಲ್ಲಿ ಸಮುದಾಯವನ್ನೇ ಕೇಂದ್ರಬಿಂದುವನ್ನಾಗಿ ಮಾಡಲಾಗಿದೆ.

ಜಲಶಕ್ತಿ ಅಭಿಯಾನ ಇಂದು ನೀರಿನ ಸಂರಕ್ಷಣೆಯನ್ನು ಒಂದು ದೊಡ್ಡಜನಾಂದೋಲನವನ್ನಾಗಿಮಾಡಿದೆ. ಪ್ರಧಾನಮಂತ್ರಿಯವರ ಕ್ಯಾಚ್ ದಿ ರೈನ್ (ಮಳೆ ನೀರನ್ನು ಹಿಡಿದಿಡಿ - ಎಲ್ಲಿ ಬೀಳುತ್ತದೋ ಅಲ್ಲಿ, ಯಾವಾಗ ಬೀಳುತ್ತದೋ ಆಗ) ಎನ್ನುವ ಘೋಷಣೆ ದೇಶಾದ್ಯಂತ ಸಂಚಲನ ಮೂಡಿಸಿದೆ. 'ಜಲ ಸಂಚಯ ಜನ ಭಾಗೀದಾರಿ' ಉಪಕ್ರಮದ ಅಡಿಯಲ್ಲಿ ಜನರು ಮತ್ತು ಸಮುದಾಯಗಳು ಒಟ್ಟಾಗಿ ಮಳೆನೀರು ಕೊಯ್ಲು, ಹಳೆಯ ಕೆರೆ-ಕುಂಟೆಗಳ ಪುನಶ್ಚೇತನ, ಜಲಾನಯನ ಅಭಿವೃದ್ಧಿ ಮತ್ತು ಗಿಡಗಳನ್ನು ನೆಡುವ ಕೆಲಸಗಳನ್ನು ಕೈಗೆತ್ತಿಕೊಂಡಿದ್ದಾರೆ. ಸೆಪ್ಟೆಂಬರ್ 2024ರಿಂದೀಚೆಗೆ, ಇಂತಹ ಸಂಘಟಿತ ಪ್ರಯತ್ನಗಳಿಂದಾಗಿ ದೇಶಾದ್ಯಂತ 45 ಲಕ್ಷಕ್ಕೂ ಹೆಚ್ಚು ಜಲ ಸಂರಕ್ಷಣಾ ರಚನೆಗಳು ನಿರ್ಮಾಣವಾಗಿವೆ. ಸರ್ಕಾರದ ಬೆಂಬಲದೊಂದಿಗೆ ಜನಸಾಮಾನ್ಯರು ಮನಸ್ಸು ಮಾಡಿದರೆ ಎಷ್ಟು ದೊಡ್ಡ ಬದಲಾವಣೆ ತರಬಹುದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಇಂತಹ ಸಕ್ರಿಯ ಜನಭಾಗೀದಾರಿಕೆಯ ಉದಾಹರಣೆಗಳು ಭಾರತದ ಉದ್ದಗಲಕ್ಕೂ ಕಾಣಸಿಗುತ್ತವೆ. ಗುಜರಾತಿನ ಬನಸ್ಕಾಂತ ಜಿಲ್ಲೆಯಲ್ಲಿ, ಹೈನುಗಾರಿಕೆ ಸಹಕಾರ ಸಂಘಗಳು ಮತ್ತು ರೈತರು ಕೈಜೋಡಿಸಿ ಕಡಿಮೆ ವೆಚ್ಚದಲ್ಲಿ ಅಂತರ್ಜಲ ಮರುಪೂರಣ ಘಟಕಗಳನ್ನು ನಿರ್ಮಿಸಿದ್ದಾರೆ. ಇತ್ತ ಛತ್ತೀಸಗಢದ ಕೊರಿಯಾ ಜಿಲ್ಲೆಯಲ್ಲಿ, ರೈತರು ತಮ್ಮ ಜಮೀನಿನ ಒಂದು ಭಾಗವನ್ನೇ ಅಂತರ್ಜಲ ಹೆಚ್ಚಿಸುವ ಕೆಲಸಕ್ಕಾಗಿ ಮೀಸಲಿಟ್ಟಿದ್ದಾರೆ. ನಗರ ಪ್ರದೇಶಗಳಲ್ಲೂ ಬದಲಾವಣೆ ಗಾಳಿ ಬೀಸುತ್ತಿದ್ದು, ಅನೇಕ ವಸತಿ ಸಂಘಗಳು ಮಳೆನೀರು ಕೊಯ್ಲು ಮತ್ತು ನೀರಿನ ಮರುಬಳಕೆ ಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಿವೆ. 'ಕರ್ಮಭೂಮಿಯಿಂದ ಮಾತೃಭೂಮಿಗೆ' ಎಂಬಂತಹ ಅಭಿಯಾನಗಳು ಜನರ ಹೊಣೆಗಾರಿಕೆಯನ್ನು ಹೆಚ್ಚಿಸಿವೆ. ತಾವು ಕೆಲಸ ಮಾಡುವ ಊರಿನಲ್ಲಿದ್ದುಕೊಂಡೇ, ತಮ್ಮ ಹುಟ್ಟಿದ ಊರಿನ ಜಲಮೂಲಗಳನ್ನು ರಕ್ಷಿಸಲು ಜನರು ಸ್ವಯಂಪ್ರೇರಿತರಾಗಿ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ.

ಜಲ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಕೈಗಾರಿಕೆ ಮತ್ತು ಕೃಷಿ ವಲಯಗಳ ಪಾತ್ರ ಬಹಳ ದೊಡ್ಡದಿದೆ. ಇಂದು ಅನೇಕ ಕೈಗಾರಿಕೆಗಳು ಸ್ವಯಂಪ್ರೇರಿತವಾಗಿ ನೀರಿನ ಉಳಿತಾಯದ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುತ್ತಿವೆ. ನೀರಿನ ಲೆಕ್ಕಪರಿಶೋಧನೆ, ಬಳಸಿದ ನೀರಿನ ಮರುಬಳಕೆ, 'ಜೀರೋ ಲಿಕ್ವಿಡ್ ಡಿಸ್ಚಾರ್ಜ್' ಮತ್ತು ಮಳೆನೀರು ಕೊಯ್ಲಿನಂತಹ ಕ್ರಮಗಳನ್ನು ಜಾರಿಗೆ ತರುತ್ತಿವೆ. ಇವುಗಳಿಗೆ ನೀರಿನ ತಂತ್ರಜ್ಞಾನದಲ್ಲಿನ ಹೊಸ ಆವಿಷ್ಕಾರಗಳು ಗಣನೀಯವಾಗಿ ಬೆಂಬಲ ನೀಡುತ್ತಿವೆ.

ಕೃಷಿ ಕ್ಷೇತ್ರದಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿಯಂತಹ ಸೂಕ್ಷ್ಮ ನೀರಾವರಿ ಪದ್ಧತಿಗಳು ಜನಪ್ರಿಯವಾಗುತ್ತಿವೆ. ಜಮೀನಿನಲ್ಲಿ ಲಭ್ಯವಿರುವ ನೀರನ್ನು ಪೋಲು ಮಾಡದೆ ಸಮರ್ಪಕವಾಗಿ ನಿರ್ವಹಿಸುವ ಮತ್ತು ಮಿತವಾಗಿ ಬಳಸುವ ವಿಧಾನಗಳನ್ನು ದೇಶಾದ್ಯಂತ ಅಳವಡಿಸಿಕೊಳ್ಳಲಾಗುತ್ತಿದೆ. 'ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಯ ಆಧುನೀಕರಣ'ದಂತಹ ಸರ್ಕಾರಿ ಯೋಜನೆಗಳು ಇದಕ್ಕೆ ದೊಡ್ಡ ಮಟ್ಟದ ಬೆಂಬಲ ನೀಡುತ್ತಿವೆ. ಈ ಪ್ರಯತ್ನಗಳು ಕೇವಲ ನೀರಿನ ಉಳಿತಾಯಕ್ಕೆ ಮಾತ್ರವಲ್ಲದೆ, ರೈತರ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತಿವೆ. ನಗರ ಪ್ರದೇಶಗಳಲ್ಲಿ ವಾಸಿಸುವವರು ಕೂಡ ಮಳೆನೀರು ಕೊಯ್ಲು, ಬಳಸಿದ ನೀರಿನ ಮರುಬಳಕೆ ಮತ್ತು ದೂರದೃಷ್ಟಿಯ ಸುಸ್ಥಿರ ಯೋಜನೆಗಳ ಮೂಲಕ ಜಲ ಸಂರಕ್ಷಣೆಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು. ನೀರಿನ ಜವಾಬ್ದಾರಿಯುತ ಬಳಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರತಿಯೊಂದು ಮನೆ, ಶಾಲಾ-ಕಾಲೇಜುಗಳಂತಹ ಸಂಸ್ಥೆಗಳು ಪ್ರಮುಖ ಪಾತ್ರವನ್ನು ಹೊಂದಿವೆ.

ಭಾರತವನ್ನು 'ವಿಕಸಿತ ಭಾರತ'ವನ್ನಾಗಿ ನಿರ್ಮಿಸುವ ಕನಸು ನನಸಾಗಬೇಕಾದರೆ, ಜಲ ಸುರಕ್ಷತೆಯನ್ನು ಸಾಧಿಸುವುದು ನಮ್ಮೆಲ್ಲರ ಸಾಮೂಹಿಕ ರಾಷ್ಟ್ರೀಯ ಪ್ರಯತ್ನವಾಗಬೇಕು. ಜಲ ಭದ್ರತೆ ಎನ್ನುವುದು ಕೇವಲ ದೊಡ್ಡ ದೊಡ್ಡ ಕಟ್ಟಡಗಳು, ಪೈಪ್‌ಲೈನ್‌ಗಳು ಅಥವಾ ಸರ್ಕಾರದ ನೀತಿಗಳಿಂದ ಮಾತ್ರ ಸಾಧ್ಯವಿಲ್ಲ; ಬದಲಿಗೆ ಅದು ನಮ್ಮೆಲ್ಲರ ದೈನಂದಿನ ನಡವಳಿಕೆಯಲ್ಲಿ ಬರುವ ಬದಲಾವಣೆಯ ಮೇಲೆ ಅಂತಿಮವಾಗಿ ಅವಲಂಬಿತವಾಗಿದೆ.

ಈ ವಿಶ್ವ ಜಲ ದಿನದಂದು, ನಾವು ಮಾತಿನಿಂದ ಕೃತಿಯತ್ತ ಸಾಗೋಣ. ನಮ್ಮ ದೇಶದ ಪ್ರತಿಯೊಬ್ಬ ನಾಗರಿಕನೂ ದಿನಕ್ಕೆ ಕೇವಲ ಒಂದು ಲೀಟರ್ ನೀರನ್ನು ಉಳಿಸಿದರೆ, ನಾವು ದಿನವೊಂದಕ್ಕೆ 140 ಕೋಟಿ ಲೀಟರ್‌ಗಳಿಗಿಂತ ಹೆಚ್ಚು ನೀರನ್ನು ಸಂರಕ್ಷಿಸಬಹುದು! ಇದೊಂದು ಸಣ್ಣ ಕೆಲಸ ಎಂದು ಅನಿಸಬಹುದು, ಆದರೆ ದೇಶದ ಮೇಲೆ ಇದು ಬೀರುವ ಪ್ರಭಾವ ಅಸಾಧಾರಣ. ನೀರನ್ನು ಉಳಿಸುವುದು ಕೇವಲ ಒಂದು ದಿನದ ಆಚರಣೆಯಾಗದೆ ನಮ್ಮ ದೈನಂದಿನ ಅಭ್ಯಾಸವಾಗಲಿ. ಎಲ್ಲಿ ಪ್ರತಿಯೊಂದು ಹನಿ ನೀರಿಗೂ ಮೌಲ್ಯವಿರುತ್ತದೆಯೋ, ಪ್ರತಿಯೊಂದು ಜಲಮೂಲವೂ ಸುಸ್ಥಿರವಾಗಿರುತ್ತದೆಯೋ ಮತ್ತು ಪ್ರತಿಯೊಬ್ಬ ನಾಗರಿಕನೂ ಈ ಅಮೂಲ್ಯ ಸಂಪನ್ಮೂಲದ ರಕ್ಷಕನಾಗುತ್ತಾನೋ, ಅಂತಹ ಭಾರತವೇ ನಿಜವಾದ ಸುಭಿಕ್ಷ ಭಾರತ.

ಕಿರುಸುದ್ದಿ

ಖೋ-ಖೋ ತಂಡಕ್ಕೆ ಆಯ್ಕೆ



◆**ಮುಂಡರಗಿ:** ಪಟ್ಟಣದ ಶ್ರೀ ಜಗದ್ಗುರು ತೋಂಟದಾರ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಹಾವಿದ್ಯಾಲಯದ ಬಿ.ಎ ದ್ವಿತೀಯ ವರ್ಷದ ವಿದ್ಯಾರ್ಥಿ ಭೀಮರಾಜ್ ದೊಡ್ಡಮನಿ 2025-26 ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾಲಯದ ಪುರುಷರ ಖೋ-ಖೋ ತಂಡಕ್ಕೆ ಆಯ್ಕೆಯಾಗಿದ್ದಾರೆ. ಮಾರ್ಚ್ 26ರಿಂದ 29 ರವರೆಗೆ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ದಕ್ಷಿಣ ವಲಯಗಳ ಅಂತರ ವಿಶ್ವವಿದ್ಯಾಲಯಗಳ ಪುರುಷರ ಖೋ-ಖೋ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಕ.ವಿ.ವಿ ಧಾರವಾಡ ಖೋ-ಖೋ ತಂಡವನ್ನು ಪ್ರತಿನಿಧಿಸಲಿದ್ದಾನೆ. ಈ ಕ್ರೀಡಾಪಟುವಿನ ಸಾಧನೆಗೆ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಕಾಲೇಜಿನ ಪ್ರಾಂಶುಪಾಲ ಡಾ. ಉಮಾ ಸಿ. ಕೊಳ್ಳಿ, ಬೋಧಕ ಮತ್ತು ಬೋಧಕೇತರ ವರ್ಗದವರು, ದೈಹಿಕ ಶಿಕ್ಷಣ ನಿರ್ದೇಶಕರು ಹರ್ಷವ್ಯಕ್ತಪಡಿಸಿದ್ದಾರೆ.

ದೇವರ ದಾಸಿಮಯ್ಯನವರ ಜಯಂತಿ ಮಾ.23ಕ್ಕೆ

◆**ಗದಗ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆದ್ಯ ವಚನಕಾರ ನೇಕಾರ ಸಂತ ದೇವರ ದಾಸಿಮಯ್ಯನವರ ಜಯಂತಿ ಮಾ.23 ರಂದು ಬೆಳಗ್ಗೆ 11ಕ್ಕೆ ಬೆಟಗೇರಿಯ ಟರ್ನಲ್ ಪೇಟೆಯ ದೇವರ ದಾಸಿಮಯ್ಯ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಡಾ.ಶಿವರಾಜ ತಂಗಡಗಿ ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಶಾಸಕ ಸಲೀಂ ಅಹ್ಮದ್, ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್.ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಪಿ.ಸಿ.ಗದ್ದಿಗೌಡರ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ ಆಗಮಿಸುವರು. ವಿಶೇಷ ಆಹ್ವಾನಿತರಾಗಿ ಯೋಜನೆ ಕಾರ್ಯಕ್ರಮಗಳು, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ ರಮಣದೀಪ್ ಚೌಧರಿ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ. ಆಗಮಿಸಲಿದ್ದಾರೆ. ಆರೋಗ್ಯ ಇಲಾಖೆಯ ರಾಘವೇಂದ್ರ ಕೊಪ್ಪಳ ಉಪನ್ಯಾಸ ನೀಡುವರು. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ ಭಾಗವಹಿಸುವರು.

ಮಾ.23ಕ್ಕೆ ದತ್ತಿ ಉಪನ್ಯಾಸ

◆**ಮುಂಡರಗಿ:** ತಾಲೂಕು ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ ಮುಂಡರಗಿ ಹಾಗೂ ಪ್ರಿಯದರ್ಶಿನಿ ಶಿಕ್ಷಣ ಮಹಾವಿದ್ಯಾಲಯ ಇವುಗಳ ಸಂಯುಕ್ತ ಆಶ್ರಯದಲ್ಲಿ ಮಾ.23 ರಂದು ಬೆಳಗ್ಗೆ 10.30ಕ್ಕೆ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಕಾಲೇಜಿನ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ದತ್ತಿಯ ಹೆಸರು ಶಂಕ್ರಮ್ಮ ಲಿಂ ಮುದಕಪ್ಪ ಮಡಿವಾಳರ, ದತ್ತಿ ದಾಸೋಹಿಗಳು ವೀರಣ್ಣ ಮಡಿವಾಳರ, ಉದ್ಘಾಟನೆಯನ್ನು ಕಸಾಕ ತಾಲೂಕು ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ನೆರವೇರಿಸುವರು. ಅಧ್ಯಕ್ಷತೆಯನ್ನು ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಸೀತಾ ಬಸಾಪೂರ ವಹಿಸುವರು. ಮುಖ್ಯ ಅತಿಥಿಗಳಾಗಿ ಪ್ರಾ.ಎಸ್.ಕೆ.ಚುರ್ಚಿಹಾಳಮಠ ಆಗಮಿಸುವರು. ಮಡಿವಾಳ ಮಾಚಿದೇವರು ಕುರಿತು ಉಪನ್ಯಾಸವನ್ನು ಶಶಿಕಲಾ ಕುಕನೂರ ನೀಡುವರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	4910-7815
ಅಜವಾನ	5169-8219
ಅಲಸಂದಿಕಾಳು	3079-6269
ಕಡಲೆ	1011-5379
ಹತ್ತಿ	7601-7601
ಹೆಸರು	2669-7191
ಹುರಳಿ	3807-4374
ಜೋಳ	1629-4557
ಗೋವಿನಜೋಳ	1419-1765
ಉದ್ದು	1712-5112
ಸಬ್ಬಸಗಿ	7121-7121
ಕುಸಬಿ	4169-1765
ಸೂರ್ಯಕಾಂತಿ	3014-6719
ತೊಗರಿ	1221-5579
ಗೋಧಿ	1579-5209



ಮುಂಡರಗಿ: ಇಲ್ಲಿನ ಕೋಟೆ ಭಾಗದ ಕೋಟೆ ಆಂಜನೇಯ ಸ್ವಾಮಿಯ ಮಹಾರಥೋತ್ಸವವು ಯುಗಾದಿ ಹಬ್ಬದಂದು ಸಂಭ್ರಮ ಹಾಗೂ ಸಡಗರದಿಂದ ಗುರುವಾರ ಜರುಗಿತು.

ಸುಸ್ಥಿರ ಅಭಿವೃದ್ಧಿ ಯೋಜನೆ ಮಾಹಿತಿ ಸಲ್ಲಿಸಿ

◆**ಗದಗ:** ಜಿಲ್ಲಾ ಮಾನವ ಅಭಿವೃದ್ಧಿ ವರದಿ-2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ-2031 ರ ವರದಿ ತಯಾರಿಕೆಗೆ ಜಿಲ್ಲಾ ಮಟ್ಟದ ವಲಯವಾರು ಉಪಸಮಿತಿಗಳ ಸಮಿತಿ ಸಭೆಯು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜರುಗಿತು.

ಜಿಲ್ಲಾಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿ.ಎನ್. ಶ್ರೀಧರ್ ಮಾತನಾಡಿ, ಜಿಲ್ಲಾ ಮಾನವ ಅಭಿವೃದ್ಧಿ ವರದಿಯು ಸಮಗ್ರ ಅಭಿವೃದ್ಧಿ ಮತ್ತು ಜನರ ಜೀವನಮಟ್ಟ ಸುಧಾರಣೆಗೆ ಸಹಕಾರಿಯಾಗಲಿದೆ. ಮಾನವ ಅಭಿವೃದ್ಧಿ ವರದಿಯು ಇಡೀ ಜಿಲ್ಲೆಯ ಸಾರ್ವಜನಿಕರ ಅಭಿವೃದ್ಧಿಯ ಕುರಿತಂತೆ ಎಲ್ಲಾ ಅಂಶಗಳು ಮತ್ತು ಜಿಲ್ಲೆಯಲ್ಲಿನ ಜನರ ಜೀವನ ಸ್ಥಿತಿ ಮತ್ತು ಅದನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವ ಉದ್ದೇಶವನ್ನು ಹೊಂದಿದೆ. ಇದರಿಂದ ಹೊಸ ಯೋಜನೆಗಳ ಅನುಷ್ಠಾನ ಮಾಡಲು ಅನುಕೂಲವಾಗುತ್ತದೆ. ಜಿಲ್ಲೆಯ 2031ರಲ್ಲಿ ಸುಸ್ಥಿರ ಅಭಿವೃದ್ಧಿ ಯೋಜನೆ ಕುರಿತಂತೆ ತಮ್ಮ ಇಲಾಖಾ ವ್ಯಾಪ್ತಿಯ ಮಾಹಿತಿಯನ್ನು ಜಿಲ್ಲಾ ಪಂಚಾಯತ್‌ಗೆ ಸಲ್ಲಿಸಬೇಕು ಎಂದರು.

ಜಿಪಂ ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ ಮಾತನಾಡಿ, ಸುಸ್ಥಿರ ಅಭಿವೃದ್ಧಿ ಯೋಜನೆ ವರದಿ ತಯಾರಿಕೆಗೆ ಜಿಲ್ಲಾ ಮಟ್ಟದ ಉಪಸಮಿತಿಗಳು ತಮ್ಮ ಇಲಾಖೆಯ ಮಾಹಿತಿಯನ್ನು ಸಲ್ಲಿಸಲು ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪದ್ಮಾವತಿ ಜಿ., ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ ಸೇರಿದಂತೆ ಇತರರಿದ್ದರು.



ಲಕ್ಷ್ಮೇಶ್ವರ: ಪಟ್ಟಣದ ಬಸ್ತಿಬಣದ ಮಾರುತಿ ದೇವಸ್ಥಾನದ ರಥೋತ್ಸವವು ಯುಗಾದಿಯಂದು ಗುರುವಾರ ಅದ್ದೂರಿಯಾಗಿ ಜರುಗಿತು. ಯುಗಾದಿ ನಿಮಿತ್ತ ಮಾರುತಿ ದೇವರಿಗೆ ವಿಶೇಷ ಪೂಜೆ, ಅಲಂಕಾರ ಮಾಡಲಾಗಿತ್ತು. ಸಂಜೆ ರಥೋತ್ಸವ ಸಕಲ ವಾದ್ಯ, ವೈಭವಗಳೊಂದಿಗೆ ನೆರವೇರಿತು. ಜಾತ್ರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳಿಗೆ ಪಟ್ಟಣದ ಕರೆವಾಡಿಮಠದ ಮಳೆ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಲಿಂಬೆ ಬಲು ದುಬಾರಿ | ಎರಡು ಪಟ್ಟು ಏರಿಕೆ | ಒಂದು ಹಣ್ಣಿಗೆ 7 ರಿಂದ 10 ರೂ.

ಲಿಂಬೆಹಣ್ಣಿನ ಇಳುವರಿ ಕುಂಠಿತ

▶ರುದ್ರಗೌಡ ಪಾಟೀಲ

ದಿಗಂತ ವಿಶೇಷ

◆**ಗದಗ:** ಬಿಸಿಲ ಝಳದಿಂದ ದಾಹ ತೀರಿಸಲು ಜನ ನಿಂಬೆ ಪಾನೀಯವನ್ನು ಬೇಸಿಗೆಯಲ್ಲಿ ಕುಡಿಯುವುದು ಸಾಮಾನ್ಯ. ಆದರೆ ಈ ಬಾರಿ ಪೂರೈಕೆ ಕೊರತೆಯಿಂದ ಲಿಂಬೆ ಹಣ್ಣಿನ ಬೆಲೆ ಏರಿಕೆಯಾಗಿದೆ.

ಇತ್ತೀಚಿನ ದಿನಗಳಲ್ಲಿ ನಿತ್ಯ ಬಳಕೆ ಮಾಡುವ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಬೆನ್ನಲ್ಲೆ ಲಿಂಬೆಹಣ್ಣಿನ ದರದಲ್ಲೂ ದಿಢೀರ್ ಏರಿಕೆ ಕಂಡಿದೆ. ನಿಂಬೆಹಣ್ಣಿನ ಇಳುವರಿ ಕುಂಠಿತ ಹಾಗೂ ಆಮದು ಪ್ರಮಾಣದಲ್ಲಿ ತೀವ್ರ ಇಳಿಕೆಯಾಗಿದ್ದರ ಪರಿಣಾಮವಾಗಿ ಲಿಂಬೆಹಣ್ಣಿನ ದರದಲ್ಲಿ ವ್ಯತ್ಯಾಸ ಕಂಡು ಬಂದಿದೆ. ಮೊದಲೆಲ್ಲ 100 ಲಿಂಬೆಹಣ್ಣಿಗೆ 250ರಿಂದ 300 ರೂ., ಪ್ರತಿ ಲಿಂಬೆಹಣ್ಣಿಗೆ 3 ರಿಂದ 5 ರೂ.ಗೆ ಸಿಗುತ್ತಿದ್ದ ನಿಂಬೆ ಹಣ್ಣು ಸಧ್ಯ ಮಾರುಕಟ್ಟೆಯಲ್ಲಿ ಸಗಟು ದರವು 100 ಲಿಂಬೆಹಣ್ಣಿಗೆ 600 ರಿಂದ 850 ರೂ.,ಚಿಲ್ಲರೆ ದರದಲ್ಲಿ ಪ್ರತಿ ನಿಂಬೆಹಣ್ಣಿಗೆ 8 ರಿಂದ 10 ರೂ. ನಿಗದಿಯಾಗಿದೆ. ಅಂದರೆ ದರದಲ್ಲಿ ಎರಡು ಪಟ್ಟು ಏರಿಕೆಯಾದಂತಾಗಿದೆ.

ಅವಧಿಗೂ ಮುನ್ನವೇ ತಾಪಮಾನ ಏರಿಕೆಯ ಪರಿಣಾಮವಾಗಿ ಎಲ್ಲೆಡೆ ವಿಪರೀತ ಬಿಸಿಲು, ಬಿಸಿ ಹವೆಯಿಂದ ಸಾರ್ವಜನಿಕರು ತಲ್ಲಣಗೊಂಡಿರುವ ಬೆನ್ನಲ್ಲೆ ಲಿಂಬೆಹಣ್ಣಿನ ದರವೂ ಕೊಂಚ ಬಿಸಿ ತೆಲಿ ಬಿಸಿ ಮಾಡಿದೆ. ಬಿಸಿಲ ಝಳದಿಂದ ದಾಹ ತೀರಿಸಲು ಜನ ನಿಂಬೆ ಪಾನೀಯವನ್ನು ಬೇಸಿಗೆಯಲ್ಲಿ ಕುಡಿಯುವುದು ಸಾಮಾನ್ಯ. ಆದರೆ, ಈ ಬಾರಿ ಇಳುವರಿ ಹಾಗೂ ಪೂರೈಕೆ ಕೊರತೆಯಿಂದ ಲಿಂಬೆಹಣ್ಣಿನ ಬೆಲೆ ಏರಿಕೆಯಾಗಿದೆ.

ಲಿಂಬೆ ಜ್ಯೂಸ್‌ಗೆ ಬೇಡಿಕೆ



ಪ್ರತಿ ಬೇಸಿಗೆಯಲ್ಲಿ ಲಿಂಬೆ ಹಣ್ಣಿನ ಬೇಡಿಕೆ ಮತ್ತು ಬೆಲೆ ಹೆಚ್ಚಾಗುವುದು ಸಹಜ. ಆದರೆ ಕಳೆದ ಬಾರಿ ರಾಜ್ಯಾದ್ಯಂತ ಬರಗಾಲ ಆವರಿಸಿದ್ದ ಈ ಬಾರಿ ಇಳುವರಿಯೂ ಕಡಿಮೆಯಾಗಿದೆ. ಇದರಿಂದಾಗಿ ಲಿಂಬೆ ಜ್ಯೂಸ್‌ಗೆ 15-20ರೂ., ಲಿಂಬು ಸೋಡ 20-25 ರೂ.ಆಗಿದೆ. 10 ರೂ. ಇದ್ದ ಬೀದಿ ಬದಿ ಮಾರುವ ಗೋಲಿ ಸೋಡ ಈಗ 25 ರೂ. ಏರಿದೆ. ಬೇಸಿಗೆ ಮಸಯದಲ್ಲಿ ಲಿಂಬು ಸೋಡ ಕುಡಿಯುವ ಸಂಖ್ಯೆ ಹೆಚ್ಚು ಇದ್ದಾರೆ. ಹೀಗಾಗಿ ಲಿಂಬು ಬೆಲೆಯಲ್ಲಿ ಏರಿಕೆಯಿಂದ ವ್ಯಾಪರಸ್ಥರಿಗೆ ಹಾಗೂ ಗ್ರಾಹಕರಿಗೆ ತೊಂದರೆಯಾಗಿದೆ.

- ಬೇರೆ ಜಿಲ್ಲೆಗಳಿಂದ ನಾವು ತರುವ ಲಿಂಬೆ ಹಣ್ಣು ತುಂಬಿದ ಚೀಲವೊಂದಕ್ಕೆ 7,500-10,000 ರೂ.
- ಸಣ್ಣ ಲಿಂಬೆ ಆದರೆ 1,500 ಹಣ್ಣು, ದೊಡ್ಡ ನಿಂಬೆಗಳಾದರೆ 1,100 ಲಿಂಬೆ ಹಣ್ಣು
- ಮಿಶ್ರ ಹಣ್ಣುಗಳಿದ್ದರೆ ಚೀಲಕ್ಕೆ 8,600 ರೂ.



ನಿಂಬೆಹಣ್ಣಿನ ದೀಪ

ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಭಕ್ತರು ಅಮಾವಾಸ್ಯೆ, ಹುಣ್ಣಿಮೆ ಸೇರಿದಂತೆ ಶುಕ್ರವಾರ, ಮಂಗಳವಾರ ಹಾಗೂ ಭಾನುವಾರಗಳಂದು ರಾಹುಕಾಲ ಸಮಯದಲ್ಲಿ ಶಕ್ತಿ ದೇವತೆಯರಿಗೆ ಲಿಂಬೆಹಣ್ಣಿನ ದೀಪ ಹಚ್ಚುವುದು ವಾಡಿಕೆ. ಹೀಗಾಗಿ ದೇವಸ್ಥಾನಗಳ ಸುತ್ತಮುತ್ತಲಿನ ಕೆಲ ವ್ಯಾಪಾರಿಗಳು ಈ ದಿನಗಳಂದು ಲಿಂಬೆಹಣ್ಣಿನ ಬೆಲೆಯನ್ನು ಮತ್ತಷ್ಟು ಹೆಚ್ಚಿಸುವುದೂ ಚಾಲ್ತಿಯಲ್ಲಿದೆ. ಕೆಲವರು ಸಮಾರಂಭಗಳಲ್ಲಿ ಅತಿಥಿಗಳಿಗೆ ಹೂವಿನೊಂದಿಗೆ ನಿಂಬೆಹಣ್ಣನ್ನೂ ಕೊಡುವುದು ವಾಡಿಕೆ.

“ಪ್ರಸಕ್ತ ಬೇಸಿಗೆಯಲ್ಲಿ ಲಿಂಬೆಹಣ್ಣಿನ ಇಳುವರಿ ಹಾಗೂ ಪೂರೈಕೆ ಕುಂಠಿತಗೊಂಡಿದ್ದರಿಂದ ಲಿಂಬೆಹಣ್ಣಿನ ದರದಲ್ಲಿ ಏರಿಕೆ ಕಂಡುಬಂದಿದ್ದು, ಮಳೆಗಾಲದ ಆರಂಭವಾಗುವವರೆಗೂ ಲಿಂಬೆಹಣ್ಣಿನ ದರದಲ್ಲಿ ಇಳಿಕೆಯಾಗುವುದು ಕಷ್ಟ.

■ ದ್ಯಾಮಣ್ಣ, ಲಿಂಬೆಹಣ್ಣಿನ ವ್ಯಾಪಾರಿ

“ಬಾಯಾರಿಕೆ ಆದಾಗ ಲಿಂಬೆ ಪಾನೀಯ ಕುಡಿದರೆ ಬಾಯಾರಿಕೆ ಕಡಿಮೆಯಾಗುವುದು, ದೇಹಕ್ಕೂ ಚೈತನ್ಯ ತುಂಬುತ್ತದೆ, ದೇಹವನ್ನೂ ತಂಪಾಗಿಡುತ್ತದೆ. ಸಾಮಾನ್ಯವಾಗಿ ಬೇಸಿಗೆಯ ದಿನಗಳಲ್ಲಿ ದೇಹವು ನಿರ್ಜಲೀಕರಣದಿಂದ ತಪ್ಪಿಸಲು ಲಿಂಬೆ ಹಣ್ಣನ್ನು ಬಹಳವಾಗಿ ಬಳಸುತ್ತೇವೆ. ಇದು ದೇಹವನ್ನು ತಂಪಾಗಿ ಇಡುವಲ್ಲಿಯೂ ಸಹಕಾರಿ. ದೇಹಕ್ಕೆ ಚೈತನ್ಯವನ್ನೂ ನೀಡುತ್ತದೆ.

■ ಡಾ.ವೀರೇಶ ಸತ್ತಿಗೇರಿ, ವೈದ್ಯ

ವಿಪತ್ತಿನ ವೇಳೆ ಭಯ ಬಿಟ್ಟು ಜಾಗೃತಿ ವಹಿಸಿ

◆**ಗದಗ:** ವಿಪತ್ತು ಸಂಭವಿಸಿದಾಗ ಕ್ಷಣಾರ್ಧದಲ್ಲೇ ಸರಿಯಾದ ಕ್ರಮ ಕೈಗೊಳ್ಳುವುದು ಎಷ್ಟು ಮುಖ್ಯ ಎಂಬುದನ್ನು ಜನರಿಗೆ ಮನದಟ್ಟು ಮಾಡುವ ಉದ್ದೇಶದಿಂದ ವಿಪತ್ತು ನಿರ್ವಹಣಾ ಪ್ರಾತ್ಯಕ್ಷಿಕೆ ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನಿಗಳ ಸಂಸ್ಥೆಯಲ್ಲಿ ಆಯೋಜಿಸಲಾಯಿತು.

ಪ್ರಾತ್ಯಕ್ಷಿಕೆಯ ಪ್ರಮುಖ ಆಕರ್ಷಣೆ ಎಂದರೆ ಕಮಲೇಶ್‌ಸಿಂಗ್ ನೇತೃತ್ವದ ಎನ್‌ಡಿಆರ್‌ಎಫ್ (ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ) ತಂಡದ ಕಾರ್ಯಚಟುವಟಿಕೆ. ಜಿಲ್ಲಾಸ್ಪತ್ರೆಯ ಒಂದು ಭಾಗದಲ್ಲಿ ಕಟ್ಟಡ ಕುಸಿದಂತ ಅಣಕು ಪರಿಸ್ಥಿತಿ ನಿರ್ಮಿಸಿ, ಅದರೊಳಗೆ ಸಿಲುಕಿರುವವರನ್ನು ರಕ್ಷಿಸುವ ಕಾರ್ಯವನ್ನು ನೈಜ ರೀತಿಯಲ್ಲಿ ಪ್ರದರ್ಶಿಸಲಾಯಿತು. ತಂಡವು ವಿಶೇಷ ಸಾಧನಗಳನ್ನು ಬಳಸಿ ಅವಶೇಷಗಳೊಳಗಿನ ಜೀವಂತ ವ್ಯಕ್ತಿಗಳನ್ನು ಪತ್ತೆಹಚ್ಚುವುದು, ಗಾಯಾಳುಗಳನ್ನು ಸುರಕ್ಷಿತವಾಗಿ ಹೊರತೆಗೆದು ತುರ್ತು ಚಿಕಿತ್ಸೆಗಾಗಿ ಸಾಗಿಸುವ ಕ್ರಮಗಳನ್ನು ಹಂತ ಹಂತವಾಗಿ ತೋರಿಸಿತು. ಕಟ್ಟಡ ಕುಸಿದಾಗ ಗಾಬರಿಯಾಗದೆ ಸುರಕ್ಷಿತ ಸ್ಥಳಕ್ಕೆ ಸರಿಯುವುದು. ತಕ್ಷಣ ತುರ್ತು ಸೇವೆಗಳಿಗೂ ಮಾಹಿತಿ ನೀಡುವುದು. ಅವಶೇಷಗಳ ಬಳಿ ಅನಗತ್ಯವಾಗಿ ಗುಂಪಾಗದೆ ರಕ್ಷಣಾ ಕಾರ್ಯಕ್ಕೆ ಸಹಕರಿಸುವುದು. ಗಾಯಾಳುಗಳಿಗೆ ಪ್ರಾಥಮಿಕ ಚಿಕಿತ್ಸೆ ನೀಡುವ ಮೂಲ ವಿಧಾನಗಳ ಕುರಿತು ವಿವರಿಸಲಾಯಿತು. ಈ ಕಾರ್ಯಕ್ರಮದ ಮೂಲಕ ವಿಪತ್ತು ಬಂದಾಗ ಮಾತ್ರ ಸಿದ್ಧರಾಗುವುದಕ್ಕಿಂತ ಮುಂಚಿಯೇ ಜಾಗೃತರಾಗಬೇಕು ಎಂಬ ಸಂದೇಶ ಜಿಲ್ಲಾಡಳಿತ ಹಾಗೂ ಎನ್‌ಡಿಆರ್‌ಎಫ್ ಸ್ಪಷ್ಟವಾಗಿ ಸಾರಿತು.

ಅವಶೇಷಗಳಡಿ ಸಿಲುಕಿರುವವರನ್ನು ಪತ್ತೆಹಚ್ಚುವಲ್ಲಿ ನಾಯಿ ತನ್ನ ಅದ್ಭುತ ಘ್ರಾಣ ಶಕ್ತಿಯನ್ನು ಬಳಸಿಕೊಂಡು ತಂಡಕ್ಕೆ ಸಹಕಾರ ನೀಡಿತು. ಕಣ್ಣಿಗೆ ಕಾಣದ ಸ್ಥಳದಲ್ಲಿರುವ ವ್ಯಕ್ತಿಯ ಅಸ್ತಿತ್ವವನ್ನು ಕೂಡ ಅದು ಶೀಘ್ರವಾಗಿ ಗುರುತಿಸಿ, ರಕ್ಷಣಾ ಸಿಬ್ಬಂದಿಗೆ ಸೂಚನೆ ನೀಡುವ ದೃಶ್ಯ ಎಲ್ಲರನ್ನೂ ಆಶ್ಚರ್ಯಚಕಿತಗೊಳಿಸಿತು. ತುರ್ತು ಸಂದರ್ಭಗಳಲ್ಲಿ ಬಳಸುವ ಸಾಮಗ್ರಿಗಳ ಕುರಿತು ಸಾರ್ವಜನಿಕರಿಗೆ ಉಪಯುಕ್ತ ಮಾಹಿತಿ ನೀಡಲಾಯಿತು. ನಾಯಿಯ ಕಾರ್ಯಕ್ಷಮತೆ ಮತ್ತು ತರಬೇತಿಯ ಮಟ್ಟವನ್ನು ನೋಡಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು. ರಕ್ಷಣಾ ಕಾರ್ಯದಲ್ಲಿ ಪ್ರಾಣಿಗಳ ಪಾತ್ರವೂ ಎಷ್ಟು ಮಹತ್ವದ್ದು ಎಂಬುದು ಸ್ಪಷ್ಟವಾಯಿತು.



ರಸ್ತೆ ನಿರ್ಮಾಣದ ಮೊದಲೇ ಪೈಪ್ ಅಳವಡಿಸಿ

◆**ನರಗುಂದ:** ನದಿ ಹಾಗೂ ಬೋರವೆಲ್‌ಗಳು ಇರುವ ಕಡೆ ರಸ್ತೆಗಳಲ್ಲಿ ಅಡ್ಡಲಾಗಿ ಬೆಳೆಗೆ ನೀರು ಹಾಯಿಸಲು ರೈತರು ಪೈಪ್‌ಗಳನ್ನು ಹಾಕಿರುತ್ತಾರೆ. ರಸ್ತೆ ನಿರ್ಮಾಣದ ಮೊದಲೇ ರೈತರು ನೀರಿನ ಪೈಪ್‌ಗಳನ್ನು ಹಾಕಿಕೊಂಡರೆ ರಸ್ತೆಗಳು ಸುರಕ್ಷಿತವಾಗಿ ಬಹಳ ದಿವಸ ಬಾಳಿಕೆ ಬರುತ್ತವೆ. ಉತ್ತಮ ರಸ್ತೆಗಳ ಬಗ್ಗೆ ರೈತರ ಕಾಳಜಿ ಇರಬೇಕಾಗುತ್ತದೆ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ತಾಲೂಕಿನ ಕೊಣ್ಣೂರ ಗ್ರಾಮದಲ್ಲಿ ಪಿಎಂಶ್ರೀ ಯೋಜನೆಯಡಿ ಹಿರಿಯ ಪ್ರಾಥಮಿಕ ಶಾಲಾ ಕೊಠಡಿಯನ್ನು 21.70 ಲಕ್ಷ ರೂ. ವೆಚ್ಚದಲ್ಲಿ ಹಾಗೂ ಕೊಣ್ಣೂರ-ಹದಲಿ ವರೆಗಿನ 1.50 ಕಿಮೀ ವರೆಗಿನ ರಸ್ತೆ ಸುಧಾರಣೆಗೆ 90 ಲಕ್ಷ ರೂ. ವೆಚ್ಚದಲ್ಲಿ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಉತ್ತಮ ರಸ್ತೆಗಳು ಎಲ್ಲ ವರ್ಗದ ಜನರಿಗೂ ಅನುಕೂಲ ಹಾಗೂ ವಾಹನ ಸವಕಳಿ, ಸಮಯ, ಇಂಧನ ಉಳಿತಾಯ ಆಗಲಿದೆ. ಹಿಂದಿನ ಬಿಜೆಪಿ ಸರ್ಕಾರದಲ್ಲಿ ನಾನು ಲೋಕೋಪಯೋಗಿ ಸಚಿವನಾಗಿದ್ದಾಗ ಮತಕ್ಷೇತ್ರದಾದ್ಯಂತ ಸಿಸಿ ರಸ್ತೆಗಳನ್ನು ಮಾಡಿ, ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದೆ. ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅವಧಿ ನನ್ನ ಪಾಲಿಗೆ ಸುವರ್ಣ ಯುಗ ಆಗಿತ್ತು. ಆದರೀಗ ನಮ್ಮ ಸರ್ಕಾರ ಇಲ್ಲ. ಈಗಿನ ಸರ್ಕಾರದ ಹತ್ತಿರ ಅಭಿವೃದ್ಧಿಗೆ ಹಣ ಇಲ್ಲ, ಯಾರಿಗೂ ಅನುದಾನ ನೀಡುತ್ತಿಲ್ಲ. ಆದ್ದರಿಂದ ಅಭಿವೃದ್ಧಿ ಬಗ್ಗೆ ಯಾರಿಗೂ ಭರವಸೆ ನೀಡಲ್ಲ, ಅನುದಾನ ತರಲು ಪ್ರಯತ್ನಿಸುವೆ. ಗುತ್ತಿಗೆದಾರರು ನಿರ್ಮಿಸುವ ಶಾಲಾ ಕೊಠಡಿ ಗುಣಮಟ್ಟದಿಂದ ಕೂಡಿರಲಿ. ಕಾಮಗಾರಿ ಕೆಲಸಕ್ಕೆ ಮಣ್ಣು ಮಿಶ್ರಿತ ಮರಳನ್ನು ಉಪಯೋಗಿಸಬೇಡಿ. ಮಲಪ್ರಭಾ ನದಿ ದಡದಲ್ಲಿನ ಮರಳು ಮಣ್ಣು ಮಿಶ್ರಿತವಾಗಿದೆ. ಹೀಗಾಗಿ ಎಚ್ಚರಿಕೆಯಿಂದ ಕಾಮಗಾರಿ ಮಾಡಬೇಕೆಂದು ಹೇಳಿದರು.

ಗ್ರಾಪಂ ಮಾಜಿ ಸದಸ್ಯ ಕೊಟ್ರೇಶ ಕೊಟ್ರಶೆಟ್ಟಿ ಹಾಗೂ ಶಂಕರಗೌಡ ಯಲ್ಲಪ್ಪಗೌಡ್ರ ಮಾತನಾಡಿದರು. ಬಸಯ್ಯ ಚಿಕ್ಕಮಠ, ಶಂಕರಗೌಡ ಯಲ್ಲಪ್ಪಗೌಡ್ರ, ಎನ್.ಕೆ. ಸೋಮಾಪೂರ, ಪ್ರಕಾಶಗೌಡ ತಿರಕನಗೌಡ್ರ, ಕೊಟ್ರೇಶ ಕೊಟ್ರಶೆಟ್ಟಿ, ಶೇಖರಗೌಡ್ರ, ಸಾಲಿಗೌಡ್ರ, ಪರಪ್ಪ ಸಾಹುಕಾರ, ದೇವೇಂದ್ರಪ್ಪ ವಜ್ರಂಗಿ, ಬಿ.ಎಂ. ಕೊರಗನ್ನವರ, ಭೀಮಶಿ ಗೋವನಕೊಪ್ಪ, ಪಡಿಯಪ್ಪ ಚವನ್ನವರ, ಪರ್ವತಗೌಡ ಕೆಂಚನಗೌಡ್ರ, ರಾಜೇಸಾಬ ಬಾಳಪ್ಪನವರ, ಬಸವ್ವ ತಳವಾರ, ರುಕ್ಮೀಣಿ ಮ್ಯಾಗಲಮನಿ, ರೇಖಾ ದೊಡಮನಿ, ಬಾಳವ್ವ ಜಾಲಿಕಟ್ಟಿ, ಶಿವಕುಮಾರ ಕೆಲವಡಿ ಸೇರಿದಂತೆ ಅನೇಕರಿದ್ದರು.



ಲಕ್ಷ್ಮೇಶ್ವರದಲ್ಲಿ ಯುಗಾದಿ ಹಬ್ಬದ ಸಂಭ್ರಮ: ಭಕ್ತರಿಂದ ದೇವರ ದರ್ಶನ

◆**ಲಕ್ಷ್ಮೇಶ್ವರ:** ಪಟ್ಟಣದಲ್ಲಿ ಗುರುವಾರ ಯುಗಾದಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಪಟ್ಟಣದ ಸೋಮೇಶ್ವರ ದೇವಸ್ಥಾನ, ದ್ಯಾಮವ್ವ ದೇವಿ ದೇವಸ್ಥಾನ, ಬನಶಂಕರಿ ದೇವಸ್ಥಾನ, ಲಿಂಬಯ್ಯಸ್ವಾಮಿಮಠ, ಹಾವಳಿ ಆಂಜನೇಯ ದೇವಸ್ಥಾನ ಸೇರಿದಂತೆ ಅನೇಕ ದೇವಸ್ಥಾನಗಳಿಗೆ ಜನರು ತೆರಳಿ ದರ್ಶನ ಪಡೆದರು.

ಯುಗಾದಿಯಂದು ಕಷ್ಟ, ಸುಖಗಳನ್ನು ಸಮನಾಗಿ ಸ್ವೀಕರಿಸುವ ನಿಟ್ಟಿನಲ್ಲಿ ಬೇವು ಬೆಲ್ಲ ಎಲ್ಲ ಮನೆಗಳಲ್ಲಿ ಮಾಡಿ ಸ್ವೀಕರಿಸುವ ಸಂಪ್ರದಾಯ ನಡೆಯಿತು. ಈ ನಿಟ್ಟಿನಲ್ಲಿ ಪಟ್ಟಣದ ತಾಲೂಕ ಪಕ್ಷಾತೀತ ಹೋರಾಟ ವೇದಿಕೆ ಅಧ್ಯಕ್ಷ ಹಾಗೂ ಪುರಸಭೆ ಮಾಜಿ ಸದಸ್ಯ ಮಹೇಶ ಹೊಗೆಸೊಪ್ಪಿನ ಅವರ ನೇತೃತ್ವದಲ್ಲಿ ವಿವಿಧ ದೇವಸ್ಥಾನಗಳಿಗೆ ತೆರಳಿ ಅಲ್ಲಿ ಸೇರಿದ ಜನರಿಗೆ ಬೇವು ಬೆಲ್ಲವನ್ನು ವಿತರಿಸುವ ಮೂಲಕ ಯುಗಾದಿ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಮಹೇಶ ಹೊಗೆಸೊಪ್ಪಿನ ಅವರು, ನಮ್ಮಲ್ಲಿ ಅನೇಕ ವೈರುದ್ಯಗಳು, ವೈಮನಸ್ಸುಗಳು ನಡೆದಿರುತ್ತದೆ. ಅದರಂತೆ ಜೀವನದಲ್ಲಿ ಅನೇಕ ಕಹಿ ಮತ್ತು ಸಿಹಿ ಘಟನೆಗಳು ನಡೆದಿರುತ್ತವೆ. ಅವುಗಳನ್ನು ಸಮಾನವಾಗಿ ಸ್ವೀಕರಿಸಿ ಜೀವನದಲ್ಲಿ ಸಾಗಬೇಕು ಎಂದರು. ಈ ಸಂದರ್ಭದಲ್ಲಿ ಮುರುಗೇಂದ್ರಯ್ಯ ಹಿರೇಮಠ, ಕಿರಣ ನವಲೆ, ಗಂಗಾಧರ ಮ್ಯಾಗೇರಿ, ಶಿವಣ್ಣ ಲಿಂಗಶೆಟ್ಟಿ, ರಾಜು ಗುಡಗೇರಿ, ಲಕ್ಷ್ಮಣ ನಾವಿ ಸೇರಿದಂತೆ ಅನೇಕರಿದ್ದರು.



ಯುಗಾದಿ ಆಚರಣೆ: ರಾಮರಾಜ್ಯ ಸ್ಥಾಪನೆಗೆ ಸಾಮೂಹಿಕ ಪ್ರತಿಜ್ಞೆ

◆**ಲಕ್ಷ್ಮೇಶ್ವರ:** ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಯುಗಾದಿ ಹೊಸ ವರ್ಷದಂದು ಗುರುವಾರ ಪಟ್ಟಣದ ವಿವಿಧ ದೇವಸ್ಥಾನಗಳಲ್ಲಿ ಬ್ರಹ್ಮಧ್ವಜವನ್ನು ಏರಿಸುವ ಮೂಲಕ ರಾಮರಾಜ್ಯದ ಸ್ಥಾಪನೆಗಾಗಿ ಸಾಮೂಹಿಕ ಪ್ರಾರ್ಥನೆ, ಪ್ರತಿಜ್ಞೆ ಮತ್ತು ಹೊಸ ವರ್ಷದ ಆಚರಣೆಯನ್ನು ನೆರವೇರಿಸಿದರು.

ಯುಗಾದಿಯಂದು ಪಟ್ಟಣದ ಸೋಮೇಶ್ವರ ದೇವಸ್ಥಾನ, ಹಾವಳಿ ಆಂಜನೇಯ ದೇವಸ್ಥಾನ, ಈಶ್ವರ ನಗರದ ಈಶ್ವರ ದೇವಸ್ಥಾನ, ಶಿಗ್ಲಿಯ ಬಸವೇಶ್ವರ ದೇವಸ್ಥಾನ ಮತ್ತು ಇತರ ದೇವಸ್ಥಾನಗಳಲ್ಲಿ ಬ್ರಹ್ಮಧ್ವಜವನ್ನು ಏರಿಸುವುದರ ಮೂಲಕ ಮತ್ತು ರಾಮರಾಜ್ಯ ಸ್ಥಾಪನೆಗಾಗಿ ಸಾಮೂಹಿಕವಾಗಿ ಪ್ರತಿಜ್ಞೆಯನ್ನು ಮಾಡಲಾಯಿತು.

ಈ ವೇಳೆ ಮಾತನಾಡಿದ ಸಮಿತಿ ಸದಸ್ಯರು ಧರ್ಮ, ಪಾವಿತ್ರ್ಯತೆ ಮತ್ತು ಜಯದ ಸಂಕೇತವಾಗಿರುವ ಬ್ರಹ್ಮಧ್ವಜವನ್ನು ಯುಗಾದಿಯ ದಿನದಂದು ಬ್ರಹ್ಮಾಂಡದಲ್ಲಿನ ಪ್ರಜಾಪತಿ ಲಹರಿಗಳು ಭೂಮಿಯ ಮೇಲೆ ಹೆಚ್ಚು ಬರುತ್ತವೆ ಆ ಲಹರಿಗಳು ಕಲಶದ ಮೂಲಕ ನಮ್ಮ ಮನೆಯೊಳಗೆ ಪ್ರವೇಶಿಸಿ ವರ್ಷಪೂರ್ತಿ ಅದರ ಲಾಭ ನಮಗೆ ಸಿಗುವುದರ ಕಾರಣ ಬ್ರಹ್ಮ ಧ್ವಜವನ್ನು ಏರಿಸಲಾಗುತ್ತದೆ. 500 ವರ್ಷಗಳ ತಪಸ್ಸಿನ ನಂತರ ಆಯೋಧ್ಯೆಯಲ್ಲಿ ಭವ್ಯ ರಾಮಮಂದಿರದ ನಿರ್ಮಾಣವಾಗಿದೆ, ಆದರಂತೆ ಭಾರತದಲ್ಲಿ ಹಿಂದೂರಾಷ್ಟ್ರ ಸ್ಥಾಪನೆಯಾಗುವ ತನಕ ನಾವೆಲ್ಲರೂ ಒಗ್ಗಟ್ಟಾಗಿ ಹಿಂದೂ ಸಮಾಜ ಎದುರಿಸುತ್ತಿರುವ ಅಪಮಾನ, ಅತ್ಯಾಚಾರ, ಮತಾಂತರದ ವಿರುದ್ಧ ಹೋರಾಡುವುದು ಅವಶ್ಯಕವಾಗಿದೆ ಮತ್ತು ಸನಾತನ ಧರ್ಮದ ಜೀವಾಳವಾಗಿರುವ ದೇವಸ್ಥಾನಗಳ ರಕ್ಷಣೆ ಮತ್ತು ಅಲ್ಲಿ ಸಂಸ್ಕೃತಿ ಪರಂಪರೆ ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಪ್ರತಿಜ್ಞೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಕಾರ್ಯಕರ್ತರು, ಧರ್ಮಪ್ರೇಮಿಗಳು, ಹಿಂದುತ್ವನಿಷ್ಠರು, ಭಕ್ತಾದಿಗಳು ಪಾಲ್ಗೊಂಡರು.



ಧರ್ಮಸ್ಥಳ ಸಂಘದಿಂದ ಸಹಾಯಧನ



◆**ಲಕ್ಷ್ಮೇಶ್ವರ:** ಹೃದಯಾಘಾತ ದಿಂದ ಚಿಕಿತ್ಸೆ ಪಡೆದ ಮಹಿಳೆಗೆ ಧರ್ಮಸ್ಥಳ ಸಂಘದಿಂದ 10 ಸಾವಿರ ರೂ. ಚೆಕ್ ವಿತರಿಸಲಾಯಿತು.

ಸಮಾಜದಲ್ಲಿ ಜನರಿಗೆ ವಿವಿಧ ಮಾಶಾಸನಗಳನ್ನು ನೀಡುವುದರ ಜೊತೆಗೆ, ನಿರ್ಗತಿಕರಿಗೆ ನಿರ್ಮಾಣ, ಅಪಘಾತಕ್ಕೊಳಗಾದವರಿಗೆ ಚಿಕಿತ್ಸೆ, ಕೆರೆ ಹೂಳೆತ್ತುವ, ಹೀಗೆ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನ ಮತ್ತು ಆಶೀರ್ವಾದಿಂದ ಯಶಸ್ವಿಯಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ ನಿರ್ವಹಿಸಲಾಗುತ್ತಿದೆ ಎಂದು ಜಿಲ್ಲಾ ಜನಜಾಗೃತಿ ಸದಸ್ಯ ರಾಜು ಕುಂಬಿ ಫಕೀರೇಶ ಮ್ಯಾಟನವರ ಹೇಳಿದರು.

ಅವರು ಪಟ್ಟಣದ ಹಿರೇಬಣದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ರೋಜಾ ಸಂಘದ ಸದಸ್ಯೆ ಸಹನಾಜಬಾನು ಸವಣೂರ ಅವರು ಹೃದಯಾಘಾತದಿಂದ ಚಿಕಿತ್ಸೆ ಪಡೆದುಕೊಂಡಿದ್ದು, ಡಾ. ಡಿ ವೀರೇಂದ್ರ ಹೆಗ್ಗಡೆ ಅವರು ಸದಸ್ಯರಿಗೆ ಕ್ರಿಟಿಕಲ್ ಇಲ್ನಸ್ ಅಡಿಯಲ್ಲಿ 10,000 ರೂಪಾಯಿ ಸಹಾಯಧನ ಮಂಜೂರು ಚೆಕ್ ವಿತರಿಸಿ ಮಾತನಾಡಿದರು. ಧರ್ಮಸ್ಥಳ ಸಂಘದಿಂದ ಸ್ವಾವಲಂಬನೆ ಜೀವನ ನಡೆಸಲು ಅನೇಕ ಜನರಿಗೆ ಸಹಾಯ ಹಸ್ತ ನೀಡಿದೆ ಅದೆ ರೀತಿ ಅನಾರೋಗ್ಯ ದಿಂದ ಬಳಲುವ ಬಡವರಿಗೆ ಸಹಾಯ ಮಾಡುತ್ತಿದೆ ಎಂದು ಹೇಳಿದರು. ಬಸಾಪುರ ಗ್ರಾಮದ ಜಗದೀಶ್, ತಾಲೂಕು ಯೋಜನಾಧಿಕಾರಿ ಪುನೀತ ಓಲೆಕಾರ್, ವಲಯದ ಮೇಲ್ವಿಚಾರಕ ನಿಂಗಪ್ಪ ಪಾಟೀಲ್ ಸ್ಥಳೀಯ ಒಕ್ಕೂಟದವರು, ಸಂಘದವರು ಹಾಗೂ ಸ್ಥಳೀಯ ಸೇವಾ ಪ್ರತಿನಿಧಿಗಳಾದ ಸಹನಾ ಮತ್ತು ನಿರ್ಮಲಾ ಉಪಸ್ಥಿತಿಯಲ್ಲಿ ಮಂಜೂರಾತಿ ಪತ್ರ ವಿತರಣೆ ಮಾಡಲಾಯಿತು.

ಕವಿಯಾಗಲು ಬೇರೆ ಕವಿಗಳ ಕವಿತೆ ಆಲಿಸಲಿ

◆**ಮುಂಡರಗಿ:** ಕವಿಗಳಾಗಲು ಬಯಸುವವರು ಮೊದಲು ಬೇರೆ ಕವಿಗಳ ಕವಿತೆಗಳನ್ನು ಆಲಿಸುವ ಮತ್ತು ಆಸ್ವಾದಿಸುವುದನ್ನು ರೂಢಿಸಿಕೊಳ್ಳಬೇಕು. ಕಾವ್ಯವು ಕೇವಲ ಆನಂದಕ್ಕಲ್ಲ ಆಯಾ ಕಾಲಘಟ್ಟದ ನಿರೀಕ್ಷಿತ ಸಾಮಾಜಿಕ ಬದಲಾವಣೆಗೆ ಪ್ರೇರಕ ಶಕ್ತಿಯಾಗಬೇಕು ಎಂದು ಕವಿ, ನಾಟಕಕಾರ ಡಾ.ನಿಂಗು ಸೊಲಗಿ ಹೇಳಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ ಮುಂಡರಗಿ ಇದರ ಆಶ್ರಯದಲ್ಲಿ ಶ್ರೀ ಜಗದ್ಗುರು ಅನ್ನದಾನೀಶ್ವರ ಕನ್ನಡ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ ಯುಗಾದಿ ಸಂಭ್ರಮ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾನತಾಡಿದರು. ಭಾಷೆಯ ಸೊಗಸುಗಾರಿಕೆ, ಕಲ್ಪನಾಶಕ್ತಿ, ಪ್ರಯೋಗಶೀಲ ಗುಣ ಹಾಗೂ ಭಾವನಾತ್ಮಕ ಆಳ ಕವಿಯಾಗುವವರಿಗೆ ಇರಬೇಕಾದ ಮುಖ್ಯ ಗುಣಗಳು. ಸದಾ ಮಾನವೀಯ ಮೌಲ್ಯಗಳಿಗೆ ತುಡಿಯುತ್ತ ಆಯಾ ಕಾಲಘಟ್ಟದ ಸನ್ನಿವೇಶ-ಸಂದರ್ಭಗಳಿಗೆ ಮುಖಾಮುಖಿಯಾಗಬೇಕಾದವರು ಕವಿಗಳು ಎಂದರು.

ಹಿರಿಯ ಕವಿ ಶಂಕರ ಕುಕನೂರ ಅಧ್ಯಕ್ಷತೆ ವಹಿಸಿ ಮಾತನಾಡಿ, ಕವಿಗಳಾದವರಿಗೆ ಕವನಗಳನ್ನು ಕೇಳುವ ಗುಣವೂ ಇರಬೇಕು. ಅನುಭವ-ಸತತ ಓದು ಮತ್ತು ಬೇರೆಯವರ ಕವನಗಳನ್ನು ತಾಳ್ಮೆಯಿಂದ ಕೇಳಿದರೆ ಮಾತ್ರ ಕವಿಗಳಿಗೆ ಒಂದು ಉತ್ತಮವಾದ ಕವನಗಳನ್ನು ರಚಿಸಲು ಸಾಧ್ಯವಾಗುತ್ತದೆ ಎಂದರು. ಮುಖ್ಯ ಅತಿಥಿಗಳಾಗಿ ಪ್ರೊ. ಸಿ.ಎಸ್.ಅರಸನಾಳ ಉಪಸ್ಥಿತರಿದ್ದರು.

ಕವಿಗೋಷ್ಠಿಯಲ್ಲಿ ಈರಮ್ಮ ಕುಂದಗೋಳ, ಕೊಟ್ರೇಶ ಜವಳಿ, ನಾಜಿಯಾ ನೂರ್ ಭಾಷಾ, ಮಂಜುಳಾ ಇಟಗಿ, ವಿಶಾಲಾಕ್ಷಿ ಬಿಚ್ಚಾಲಿ, ಕಳಕಪ್ಪ ಜಲ್ಲಿಗೇರಿ, ಎಸ್.ವಿ.ಪಾಟೀಲ, ಗಿರಿಜಾ ಸೂಡಿ,ರವಿ ದೇವರಡ್ಡಿ, ಪಾರ್ವತಿ ಕುಬಸದ, ಜಯಶ್ರೀ ಅಳವಂಡಿ, ಮಂಜುನಾಥ ಮುಧೋಳ, ಸಿ.ಕೆ. ಗಣಪ್ಪನವರ, ವೀಣಾ ಪಾಟೀಲ, ಎಂ.ಎಸ್. ಶೀರನಹಳ್ಳಿ, ರವಿಗೌಡ ಪಾಟೀಲ, ಪ್ರತಿಭಾ ಹೊಸಮನಿ, ಶರಣಪ್ಪ ಕುಬಸದ, ಗಿರಿಜಾ ಕಡ್ಡಿ, ಸುಪ್ರಿಯಾ ಇಟಗಿ, ಎಸ್.ಪಿ.ಕಲಾಲ್, ವೀರೇಶ ಬಾಗೋಡಿ, ಶಂಕರ ಕುಕನೂರ ಕವನ ವಾಚನ ಮಾಡಿದರು.

ರಾಯನಗೌಡ ಪಾಟೀಲ, ಅವಿನಾಶ ಗೊಟಕಿಂಡಿ, ಕೃಷ್ಣಾ ಸಾವುಕಾರ,ಹರ್ನಾಳಗಿ, ಆರ್.ಬಿ.ಹಕ್ಕಂಡಿ ಮುಂತಾದವರಿದ್ದರು. ಸಿ.ಕೆ.ಗಣಪ್ಪನವರ ಸ್ವಾಗತಿಸಿದರು. ಮಂಜುನಾಥ ಮುಧೋಳ ಪ್ರಾಸ್ತಾವಿಸಿದರು. ವೀಣಾ ಪಾಟೀಲ ನಿರೂಪಿಸಿ , ವಂದಿಸಿದರು.



ಮನೆ ಕಳ್ಳತನ: ಆರೋಪಿ ಬಂಧನ



◆**ಲಕ್ಷ್ಮೇಶ್ವರ:** ತಾಲೂಕಿನ ಶಿಗ್ಲಿ ಗ್ರಾಮದಲ್ಲಿ ಫೆ.2ರಂದು ಹಾಗೂ ಶಿರಹಟ್ಟಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳ್ಳಟ್ಟಿಯಲ್ಲಿ ಡಿ.2ರಂದು ಹಗಲಿನಲ್ಲಿ ಮನೆ ಕಳ್ಳತನ ಮಾಡಿದ್ದ ಕಳ್ಳನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಹಾವೇರಿ ಜಿಲ್ಲೆಯ ರಾಮಾಪುರ ಗ್ರಾಮದ ಚಮನಸಾಬ್ ಚಮನಗೌಡ ಪಾಟೀಲ ಆರೋಪಿಯಾಗಿದ್ದು, ಇವರಿಂದ ಒಟ್ಟು 21ಗ್ರಾಂ. ಬಂಗಾರ ಆಭರಣಗಳು, 100 ಗ್ರಾಂ ಬೆಳ್ಳಿ ಆಭರಣಗಳು ಹಾಗೂ 14 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ. ಜಿಲ್ಲಾ ಪೊಲೀಸ್ ಅಧೀಕ್ಷಕ ರೋಹನ ಜಗದೀಶ ಗದಗ ಉತ್ತರ ವಿಭಾಗದ ಡಿಎಸ್‌ಪಿ ಮಾರ್ಗದರ್ಶನದಲ್ಲಿ ಸಿಪಿಐ ಬಿ.ವಿ. ನ್ಯಾಮಗೌಡ, ಲಕ್ಷ್ಮೇಶ್ವರ ಪಿಎಸ್‌ಐ ನಾಗರಾಜ ಗಡದ ಹಾಗೂ ಅಪರಾಧ ವಿಭಾಗದ ಪಿಎಸ್‌ಐ ಟಿ.ಕೆ. ರಾಠೋಡ ಇವರಗಳನ್ನೊಳಗಂಡ ತಂಡ ರಚಿಸಿ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದು ಲಕ್ಷ್ಮೇಶ್ವರ ಠಾಣೆ ಸಿಬ್ಬಂದಿ ಆರ್.ಎಸ್. ಯರಗಟ್ಟಿ, ಎಂ.ಎ. ಶೇಖ, ಎಂ.ಎಸ್. ಬಳ್ಳಾರಿ, ಆನಂದ ಕಮ್ಮಾರ, ಸಿ.ಎಸ್. ಮಠಪತಿ, ಡಿ.ಎಸ್. ನದಾಫ, ಎಚ್.ಐ. ಕಲ್ಲಣ್ಣವರ, ಪಾಂಡುರಂಗರಾವ, ಮದುಚಂದ್ರ ಧಾರವಾಡ, ಮಾರ್ತಾಂಡ ಉಪ್ಪಾರ, ಮಾಂತೇಶ ಐಗಾರ, ಗುರು ಬೂದಿಹಾಳ, ಟೆಕ್ನಿಕಲ್ ಸೆಲ್ ಗದಗ ಸಂಜು ಕೊರಡೂರ ಇವುರುಗಳ ಉತ್ತಮ ಕಾರ್ಯಕ್ಕೆ ಎಸ್.ಪಿ. ರೋಹನ ಜಗದೀಶ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಆಮಿಷ: 10 ಲಕ್ಷ ಮೋಸ

ಕಲಬುರಗಿ: ಷೇರ್ ಮಾರ್ಕೆಟ್‌ನಲ್ಲಿ ಹೆಚ್ಚಿನ ಹಣದ ಆಮಿಷವೊಡ್ಡಿ 10.60 ಲಕ್ಷ ರೂ. ಮೋಸ ಮಾಡಿದ ಬಗ್ಗೆ ಸೈಬರ್ ಕೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಾನಕರ ಲೇಔಟ್‌ನ ಅಭಿಷೇಕ ಮಾಲಿ ಪಾಟೀಲ್ ವಂಚನೆಗೆ ಗೊಳಗಾದವರು. ಷೇರ್ ಮಾರ್ಕೆಟ್‌ನಲ್ಲಿ ಹೆಚ್ಚು ಹಣ ಗಳಿಸಲು ಹುಡುಕಾಡುವಾಗ ''ವಿ ಬುಲ್ ಷೇರ್ ಟ್ರೇಡಿಂಗ್ ಆ್ಯಪ್ ಡೌನ್ಲೋಡ್ ಮಾಡಿಕೊಂಡಿದ್ದು, ಹೆಚ್ಚಿನ ಹಣದ ಆಮಿಷ ವೊಡ್ಡಿದ್ದು, ಆರಂಭದಲ್ಲಿ 2800 ರೂ., 7000 ರೂ., 10,000 ಹಣ ಜಮಾ ಮಾಡಿದ್ದಾರೆ. ಹಂತ ಹಂತವಾಗಿ 10.67 ಲಕ್ಷ ರೂ.ವನ್ನು ಅಭಿಷೇಕ ವಂಚಕರ ಖಾತೆಗೆ ಜಮಾ ಮಾಡಿದ್ದಾರೆ.

ಮುತ್ತಿನ ತೆನೆ ಹಾರಾಡಿತಲೇ ಪರಾಕ್



ಹಟ್ಟಿಚಿನ್ನದಗಣಿ: ರೋಹಿಣಿ, ಮೃಗಶಿರ, ಆರಿದ್ರಾ ಮಳೆ ಆದೀತು, ಮುತ್ತಿನ ತೆನೆ ಹಾರಾಡಿತು, ಒಕ್ಕಲಿಗ ಮಗ ಬಾವಸ್ಯೆ ಆಡ್ಯಾನಲೇ ಪರಾಕ್ ಇದು ಹಟ್ಟಿಚಿನ್ನಿ ಸಮೀಪದ ವಂದಲಿ ಗ್ರಾಮದ ಬಲಭೀಮ ದೇವಸ್ಥಾನದಲ್ಲಿ ಯುಗಾದಿ ಪಾಡ್ಯದ ನಿಮಿತ್ತ ರೈತ ಹಾಗೂ ಕೃಷಿ ವಿಚಾರ ಕುರಿತು ಸಿದ್ದಣ್ಣ ಆದೀಮನಿ ನೀಡಿದ ಹೇಳಿಕೆ. 3 ಉತ್ತಮ ಮಳೆಗಳು ನಿರೀಕ್ಷಿತ, ಮುತ್ತಿನ ತೆನೆ ಹಾರಾಡಿತು ಎಂದರೆ ತೊಗರಿಜೋಳ ಉತ್ತಮ ಬೆಳೆ ಸಮೃದ್ಧಿ ಬೆಳೆಯಿಂದ ರೈತ ಸಂತುಷ್ಟನಾಗುತ್ತಾನೆಂಬ ಹೇಳಿಕೆ ಅನ್ನದಾತನ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಜಿಲ್ಲೆಯಲ್ಲಿ ವಂದಲಿ ಬಲಭೀಮ ಹಾಗೂ ಮುಂಡರಗಿ ಶಿವರಾಯನ ಹೇಳಿಕೆಗಳು ಕೃಷಿ ವಿಷಯದಲ್ಲಿ ಮಹತ್ವ ಪಡೆದುಕೊಂಡಿವೆ. ಯುಗಾದಿ ಪಾಡ್ಯದ ನಿಮಿತ್ತ ಗುರುವಾರ ಬೆಳಿಗ್ಗೆ ಬಲಭೀಮ ದೇವರಿಗೆ ವಿಶೇಷ ಪಂಚಾಮೃತ ಅಭಿಷೇಕ, ಬೆಳ್ಳಿ ಕವಚಧಾರಣೆ, ಎಲೆಪೂಜೆ, ದೀಡ ನಮಸ್ಕಾರ, ಗಂಡಾರ್ತಿ ಹೋರುವುದು, ಮಹಾಮಂಗಳಾರತಿ, ಮಧ್ಯಾಹ್ನ ತೀರ್ಥ ಪ್ರಸಾದ ಕಾರ್ಯಕ್ರಮಗಳು ನಡೆದವು. ಸಂಜೆ ಪರಾಭವ ನಾಮ ಸಂವತ್ಸರದ ಪಂಚಾಂಗ ಶ್ರವಣ ಹಾಗೂ ಉಚ್ಛಾಯ ಮಹೋತ್ಸವ ಸಂಪನ್ನಗೊಂಡಿತು. ಹಟ್ಟಿಚಿನ್ನದಗಣಿ, ಲಿಂಗಸುಗೂರು, ರಾಯಚೂರು, ದೇವದುರ್ಗ, ಆನ್ವರಿ, ಗುರುಗುಂಟಾ ಸೇರಿ ನಾನಾ ಪ್ರದೇಶಗಳಿಂದ ಅಸಂಖ್ಯಾತ ಭಕ್ತರು ನೆರೆದಿದ್ದರು. ದೇವಸ್ಥಾನ ಸಮಿತಿಯವರು ಗ್ರಾಮಸ್ಥರು ಇದ್ದರು.

ನೀತಿ ಸಂಹಿತೆ ಉಲ್ಲಂಘನೆ: 15.50 ಲಕ್ಷ ರೂ. ಹಣ ಜಪ್ತಿ



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ಹಿನ್ನಲೆಯಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸುತ್ತಿರುವ ಅಧಿಕಾರಿಗಳು ನಾಯನೇಗಲಿ ಚೆಕ್‌ಪೋಸ್ಟನಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ 15.50 ಲಕ್ಷ ರೂ.ಗಳ ಹಣವನ್ನು ಜಪ್ತಿ ಮಾಡಲಾಗಿದೆ. ಉಪ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲೆಯಾದ್ಯಂತ ನೀತಿ ಸಂಹಿತೆ ಜಾರಿಯಲ್ಲಿದ್ದು, ಪಿಎಂಜಿಎಸ್‌ವಾಯ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಆಕಾಶಕುಮಾರ ಜಾದವ ನೇತೃತ್ವದ ಎಫ್‌ಎಸ್‌ಟಿ ತಂಡ ಚೆಕ್‌ಪೋಸ್ಟನಲ್ಲಿ ವಾಹನಗಳ ಪರಿಶೀಲನೆ ನಡೆಸುತ್ತಿದ್ದು, ಈ ವೇಳೆ ಅನುಮಾನಾಸ್ಪದವಾಗಿ ಸಾಗಿಸಲಾಗುತ್ತಿದ್ದ ಕಾರನಲ್ಲಿ ನಗದು ಪತ್ತೆಯಾಗಿದೆ. ಬಬಲೇಶ್ವರದಿಂದ ಕುಷ್ಟಗಿ ಕಡೆ ಹೊರಟಿದ್ದ ಕೆಎ-28, ಎಎ-4833 ನಂಬರಿನ ಮಾರುತಿ ಸುಜುಕಿ ಸಿಪ್ಟ ಡಿಸೈಯರ್ ಕಾರನ್ನು ಬುಧವಾರ ಸಂಜೆ ವೇಳೆ ತಪಾಸಣೆಗೆ ಮಾಡಿದಾಗ ದಾಖಲೆ ಇಲ್ಲದ 15.50 ಲಕ್ಷ ರೂ.ಗಳ ಹಣವನ್ನು ಜಪ್ತಿ

ಯುಗಾದಿ ಉತ್ಸವ | ಎಕ್ಕಾ ಚಂದ್ರಶೇಖರ ಹೇಳಿಕೆ

ಜನ ಜಾಗೃತಿಯಿಂದ ಮಾತ್ರ ರಾಷ್ಟ್ರ ಸಂರಕ್ಷಣೆ ಸಾಧ್ಯ



ಬೆಳಗಾವಿ: ಭಾರತ ದೇಶವು ಭಯೋತ್ಪಾದನೆ, ಮತಾಂತರ ಹಾಗೂ ಜಾತೀಯತೆ ಸಮಸ್ಯೆ ಎದುರಿಸುತ್ತಿದೆ. ಪ್ರಜೆಗಳಲ್ಲಿ ರಾಷ್ಟ್ರಾಭಿಮಾನದ ಜನಜಾಗೃತಿ ಮೂಡಿಸಿದಾಗ ಮಾತ್ರ ಭಾರತದ ಸಂರಕ್ಷಣೆ ಸಾಧ್ಯವಾಗುವುದು ಎಂದು ಆರ್‌ಎಸ್ ಎಸ್ ದಕ್ಷಿಣ ಮಧ್ಯ ಕ್ಷೇತ್ರದ ಸೇವಾ ಪ್ರಮುಖ ಎಕ್ಕಾ ಚಂದ್ರಶೇಖರ ಹೇಳಿದರು.

ನಗರದ ಯೂನಿಯನ್ ಜಿಮಖಾನ್ ಮೈದಾನದಲ್ಲಿ ಶುಕ್ರವಾರ ರಾಷ್ಟ್ರೀಯ ಸ್ವಯಂಸೇವಕ ಸಂಘ ಬೆಳಗಾವಿ ಘಟಕವು ಆಯೋಜಿಸಿದ್ದ ಯುಗಾದಿ ಉತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆರ್‌ಎಸ್‌ಎಸ್ ತನ್ನ ದೈನಂದಿನ ಶಾಖೆಗಳ ಮೂಲಕ ವ್ಯಕ್ತಿ ನಿರ್ಮಾಣ ಕಾರ್ಯದಲ್ಲಿ ಕಳೆದ ನೂರು ವರ್ಷದಿಂದ ಕಾರ್ಯ ನಿರ್ವಹಿಸುತ್ತಿದೆ. ಸಂಘದ ಸ್ವಯಂಸೇವಕರು ಅನೇಕ ಸೇವಾ ಮತ್ತು ಸಂಘಟನೆ ಪ್ರಕಲ್ಪಗಳನ್ನು ಕೈಗೊಂಡ ಪರಿಣಾಮ ಆರ್‌ಎಸ್‌ಎಸ್ ಸೇವೆ, ಶಿಕ್ಷಣ, ಕಾರ್ಮಿಕ, ಸಾಂಸ್ಕೃತಿಕ ಹಲವಾರು ಕ್ಷೇತ್ರಗಳಲ್ಲಿ ಗುರುತರ ಕೊಡುಗೆ ನೀಡಲು ಸಾಧ್ಯವಾಗಿದೆ ಎಂದರು.

ಆರ್‌ಎಸ್‌ಎಸ್ ಶತಾಬ್ದಿ ವರ್ಷದಲ್ಲಿ ಐದು ವಿಷಯಗಳಿಗೆ ಆದ್ಯತೆ ನೀಡುವ ಮೂಲಕ ಸಾಮಾಜಿಕ ಪರಿವರ್ತನೆಗೆ ಮುಂದಾಗಿದೆ. ಆ ಪರಿವರ್ತನೆಯ ಕಾರ್ಯಕ್ಕೆ ಪಂಚ ಪರಿವರ್ತನೆ ಎಂದು ಕರೆಯಲಾಗುತ್ತಿದೆ. ಸಮಾಜದಲ್ಲಿ ಜಾತಿ ಮತ ಭಾಷೆ ಎಂಬ ಬೇಧ ಭಾವ ಹೋಗಲಾಡಿಸಿ, ಸಾಮರಸ್ಯದ ಭಾವ ಮೂಡಿಸುವ ಅವಶ್ಯಕತೆಯಿದೆ. ಪರಿಸರ ಸಂರಕ್ಷಣೆ, ಸ್ವದೇಶಿ ಭಾವ ಎಲ್ಲರಲ್ಲೂ ಜಾಗೃತ ಮೂಡಿಸಬೇಕಾಗಿದೆ. ಉತ್ತಮ ಮತ್ತು ಮಾದರಿ ಕುಟುಂಬ ವ್ಯವಸ್ಥೆ ನಿರ್ಮಾಣ ಮತ್ತು ನಾಗರಿಕ ಕರ್ತವ್ಯಗಳ ಪಾಲನೆಗೆ ಆದ್ಯತೆ ನೀಡಲು ತಿಳಿಸಲಾಗುತ್ತಿದೆ. ಪ್ರಬೋಧನದಿಂದ ಸಮಾಜ ಪರಿವರ್ತನೆ ಸಾಧ್ಯವಿಲ್ಲ, ಈ ಐದು ಅಂಶಗಳ ಆಚರಣೆ ಅನುಷ್ಠಾನಕ್ಕೆ ಪ್ರಜೆಗಳು ಸ್ಪಂದಿಸಿದಾಗ ಮಾತ್ರ ಭಾರತ ನವ ಶಕ್ತಿಯಾಗಿ ಹೊರ ಹೊಮ್ಮುವುದು ಎಂದು ತಿಳಿಸಿದರು.

ನಗರದ ಸಂಘಚಾಲಕ ಬಾಳಣ್ಣಾ ಕಗ್ಗಣಗಿ ಇದ್ದರು. ಪ್ರಾಂತ ಕಾರ್ಯವಾಹ ರಾಘವೇಂದ್ರ ಕಾಗವಾಡ ಇತ್ತೀಚೆಗೆ ಹರಿಯಾಣದಲ್ಲಿ ಜರುಗಿದ ಅಖಿಲ ಭಾರತೀಯ ಪ್ರತಿನಿಧಿ ಸಭೆಯ ವರದಿ ವಾಚಿಸಿದರು. ಪ್ರವೀಣ ಆಗಸಗಿ ನಿರೂಪಿಸಿದರು. ಅಭಿಷೇಕ ಪೋರವಾಲ ಪರಿಚಯಿಸಿದರು. ಆರ್‌ಎಸ್‌ಎಸ್ ನಗರ ಕಾರ್ಯವಾಹ ರಮೇಶ ಧೋತ್ರೆ ವಂದಿಸಿದರು.

ಸಂಘಟಿತರಾಗಿರಿ

ಆರ್‌ಎಸ್‌ಎಸ್ ಸಮಾಜದಲ್ಲಿ ಸೇವೆ ಮತ್ತು ಸಂಘಟನೆ ಮೂಲಕ ತನ್ನ ವಿಶಿಷ್ಟವಾದ ಛಾಪು ಮೂಡಿಸಿದೆ. ಜಗತ್ತಿನಲ್ಲಿ ಕ್ರೈಸ್ತರಿಗೆ ಸ್ಪಂದಿಸಲು ನೂರಾರು ದೇಶಗಳು ಮತ್ತು ಮುಸ್ಲಿಂಮರಿಗೆ ಸ್ಪಂದಿಸಲು ಐವತ್ತಕ್ಕೂ ಹೆಚ್ಚು ದೇಶಗಳಿವೆ. ಆದರೆ, ಹಿಂದುಗಳಿಗೆ ಸಮಸ್ಯೆ ಎದುರಾದರೆ ಸ್ಪಂದಿಸಲು ಜಗತ್ತಿನಲ್ಲಿ ಉಳಿದ ಯಾವ ದೇಶವು ಹಿಂದು ಬಾಹುಳ್ಯ ದೇಶವಿಲ್ಲ. ಆದ್ದರಿಂದ ಹಿಂದುಗಳು ಪರಸ್ಪರ ಜಾತೀಯ ಭಾವ ತೊರೆದು ಸಂಘಟಿತರಾಗಲು ಆದ್ಯತೆ ನೀಡಬೇಕು ಎಂದು ಮಾಜಿ ಸಚಿವರು ಮತ್ತು ಗಾಂಧಿ ಭವನದ ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾದ ಎ. ಬಿ. ಪಾಟೀಲರು ಹೇಳಿದರು.

ಕೆಎಂಸಿಆರ್‌ಐಗೆ ಕೇಂದ್ರ ಸರ್ಕಾರದ ಪ್ರಶಸ್ತಿ

ಹುಬ್ಬಳ್ಳಿ: ನಗರದ ಕರ್ನಾಟಕ ವೈದ್ಯಕೀಯ ಕಾಲೇಜ್ ಹಾಗೂ ಸಂಶೋಧನಾ ಸಂಸ್ಥೆ(ಕೆಎಂಸಿಆರ್‌ಐ)ಗೆ ಇತ್ತೀಚೆಗೆ ದೆಹಲಿಯ ಸುಷ್ಮಾ ಸ್ವರಾಜ್ ಭವನದಲ್ಲಿ ನಡೆದ ಮೆಡಿಕಲ್ ಕಾಲೇಜ್ ರಿಸರ್ಚ್ ಕನೆಕ್ಟ್ -2026 ಸಮ್ಮೇಳನದಲ್ಲಿ ಬಹು ಶಿಸ್ತೀಯ ಸಂಶೋಧನಾ ಘಟಕವೆಂದು ಶ್ರೇಷ್ಠತಾ ಪ್ರಶಸ್ತಿ ಹಾಗೂ ಶ್ರೇಷ್ಠತಾ ಪ್ರಮಾಣ ಪತ್ರ ಲಭಿಸಿದೆ.

ಭಾರತದಾದ್ಯಂತ ಇರುವ 123 ಎಂಆರ್‌ಯುಗಳಲ್ಲಿ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಆಧಾರವಾಗಿ 8 ಎಂಆರ್‌ಯು ಗಳಿಗೆ ಕೇಂದ್ರ ಸರ್ಕಾರದಿಂದ ಪ್ರತಿಷ್ಠಿತ ಶ್ರೇಷ್ಠತಾ ಪ್ರಶಸ್ತಿ ಲಭಿಸಿದೆ. ಅದರಲ್ಲಿ ಕೆಎಂಸಿಆರ್‌ಐ ಸಂಸ್ಥೆ ಒಂದಾಗಿದೆ. ರಾಜ್ಯದಲ್ಲಿ ಕೆಎಂಸಿಆರ್‌ಐ ಮೊದಲ ಸ್ಥಾನದಲ್ಲಿ ಇದೆ.

ಭಾರತದ ಆರೋಗ್ಯ ಸಂಶೋಧನಾ ಮೂಲಸೌಕರ್ಯವನ್ನು ಬಲಪಡಿಸುವ ಉದ್ದೇಶದಿಂದ ಈ ಘಟಕಗಳನ್ನು ಸ್ಥಾಪಿ ಸಲಾಗಿದೆ. ಈ ಕಾರ್ಯಕ್ರಮವು ಸಹಕಾರ, ಜ್ಞಾನ ವಿನಿಮಯ ಮತ್ತು ಗುಣ ಮಟ್ಟದ ವೈದ್ಯಕೀಯ ಸಂಶೋಧನೆಯನ್ನು ಉತ್ತೇಜಿಸುವ ಮಹತ್ವದ ವೇದಿಕೆಯಾಗಿತ್ತು.

ಈ ಸಮ್ಮೇಳನವನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಉದ್ಘಾಟಿಸಿದರು. ದೇಶದಾದ್ಯಂತ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ ವೈದ್ಯಕೀಯ ಸಂಶೋಧನಾ ಸಾಮರ್ಥ್ಯವನ್ನು ವೃದ್ಧಿಸುವ ಸರ್ಕಾರದ ಬದ್ಧತೆಯನ್ನು ತಿಳಿಸಿದರು.

ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಡಾ. ಅಭಿಜಾತ್ ಚಂದ್ರಕಾಂತ್ ಶೆಲ್, ಆರೋಗ್ಯ ಸಂಶೋಧನಾ ಇಲಾಖೆಯ ಸಂಯುಕ್ತ ಕಾರ್ಯದರ್ಶಿ ಡಾ. ರಿಚಾ ಖೋಡಾ, ಆರೋಗ್ಯ ಸಂಶೋಧನಾ ಇಲಾಖೆಯ ಕಾರ್ಯದರ್ಶಿ, ಭಾರತೀಯ ಆಯುರ್ವಿಜ್ಞಾನ ಸಂಶೋಧನಾ ಸಂಸ್ಥೆಯ ಮಹಾನಿರ್ದೇಶಕ ಡಾ. ರಾಜೀವ್ ಬಾಹಲ್, ಆರೋಗ್ಯ ಸಂಶೋಧನಾ ಇಲಾಖೆಯ ಸಹಾಯಕ ಉಪ ಕಾರ್ಯದರ್ಶಿ ಡಾ. ಅಲಾ ಶರ್ಮಾ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಕೆಎಂಸಿಆರ್‌ಐ ನಿರ್ದೇಶಕ ಡಾ. ಈಶ್ವರ ಹೊಸಮನಿ, ಡಾ. ರಾಮು ಕೌಲಗುಡ್ಡ, ಡಾ. ಅರುಣ ಶೆಟ್ಟರ ಪ್ರಶಸ್ತಿ ಸ್ವೀಕರಿಸಿದರು. ಕೆಎಂಸಿಆರ್‌ಐನಲ್ಲಿ ನಲ್ಲಿ ಎಂಆರ್‌ಯು 2014 ರಲ್ಲಿ ಮಾರ್ಚ್ 31 ರಂದು ಆರಂಭವಾಗಿದ್ದು, ಇಲ್ಲಿವರೆಗೂ 7 ಕ್ಲಿನಿಕಲ್ ಪ್ರಯೋಗಗಳು, 23 ಸಂಶೋಧನಾ ಪ್ರಕಟಣೆಗಳು, 4 ಹೆಚ್ಚುವರಿ ಅನುದಾನಗಳೊಂದಿಗೆ 52 ಯೋಜನೆಗಳು ಪೂರ್ಣಗೊಂಡಿವೆ.



ಮಾ.23ರಂದು ಬಿಜೆಪಿ ನಾಯಕರ ಜೊತೆ ನಾಮಪತ್ರ ಸಲ್ಲಿಕೆ: ವೀರಣ್ಣ ಚರಂತಿಮಠ

ಬಾಗಲಕೋಟೆ: ಈ ಬಾರಿ ಬಾಗಲ ಕೋಟೆ ವಿಧಾನಸಭೆಯ ಮತಕ್ಷೇತ್ರದಲ್ಲಿ ಬಿಜೆಪಿಯನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಲಿದ್ದಾರೆ ಎಂದು ಬಾಗಲಕೋಟೆ ವಿಧಾನಸಭೆಯ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹೇಳಿದರು.

ನವನಗರದ ಎಸಿಯವರ ಕಚೇರಿಗೆ ತೆರಳಿ ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಮಾ.23ರಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ರಾಜ್ಯ ನಾಯಕ ಜಗದೀಶ ಶೆಟ್ಟರ, ಮಾಜಿ ಸಚಿವ ಬಿ.ಶ್ರೀರಾಮುಲು ಸೇರಿದಂತೆ ಅನೇಕ ನಾಯಕರು ನಗರಕ್ಕೆ ಆಗಮಿಸಲಿದ್ದಾರೆ. ಅವರೊಂದಿಗೆ ಮತ್ತೊಮ್ಮೆ ನಾಮಪತ್ರವನ್ನು ಸಲ್ಲಿಸಲಾಗುವುದು ಎಂದು ಹೇಳಿದರು.


ಕಳೆದ ಬಾರಿ ನಡೆದ ಚುನಾವಣೆಯೇ ಬೇರೆ ಈಗ ನಡೆಯುತ್ತಿರುವ ಚುನಾವಣೆಯೆ ಬೇರೆಯಾಗಿದೆ. ಒಂದು ಚುನಾವಣೆ ಇನ್ನೊಂದು ಚುನಾವಣೆಗೆ ಹೋಲಿಸಲಾಗುವುದಿಲ್ಲ. ಅಂತಹ ವಾತಾವರಣ ಬಾಗಲಕೋಟೆಯಲ್ಲಿದೆ. ಬಿಜೆಪಿ ಪರವಾಗಿ ಜನರ ಒಲವು ಹೆಚ್ಚಿದೆ ಹೆಚ್ಚು ಮತಗಳ ಅಂತರದಿಂದ ಗೆಲ್ಲುತ್ತೇವೆ ಎಂದರು.

ಈ ಉಪ ಚುನಾವಣೆಗೆ ರಾಜ್ಯ ಸರ್ಕಾರದವರು ಠಿಕಾಣಿ ಹೂಡಿದರೆ ನಮ್ಮ ಪಕ್ಷದ ನಾಯಕರು ಕೂಡ ಠಿಕಾಣಿ ಹೂಡುತ್ತಾರೆ. ಆದರೆ, ಕೊನೆಗೆ 24 ಗಂಟೆ ಇರುವಾಗ ಹೊರ ಜಿಲ್ಲೆಯಿಂದ ಬಂದವರು ಕ್ಷೇತ್ರವನ್ನು ಬಿಟ್ಟು ಹೋಗಲೇಬೇಕು ಕೊನೆಯ ಅಂತಿಮವಾಗಿ ಇರುವವರು ಮತದಾರರು ಮಾತ್ರ. ಮತದಾರರು ನಮ್ಮ ಪರವಾಗಿ ಇದ್ದಾರೆ ಎಂದರು.

ಪಕ್ಷದಿಂದ ಹೋರ ಹೋದವರು ಬಿಜೆಪಿ ಬರುತ್ತಿದ್ದಾರೆ ಪಕ್ಷಕ್ಕೆ ಸೇರ್ಪಡೆಯಾಗುವವರ ಮಾಹಿತಿ ಸಂಸದ ಗೋವಿಂದ ಕಾರಜೋಳ,ಚುನಾವಣಾ ಉಸ್ತುವಾರಿ ಅರುಣ್ ಶಹಾಪೂರ ಅವರಿಗೆ ಮಾಹಿತಿ ಇದೆ. ಎಲ್ಲಿಯೂ ದೊಡ್ಡ ಬಹಿರಂಗ ಸಭೆಯನ್ನು ಮಾಡುವುದಿಲ್ಲ. 24ರ ನಂತರ ಮನೆ ಮನಗೆ ಪಾದಯಾತ್ರೆ ಮೂಲಕ ಮತ ಯಾಚಿಸಲಾಗುವುದು. ಮಾಜಿ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪನವರು ಕೂಡ ಕ್ಷೇತ್ರದಲ್ಲಿ ನಾಲ್ಕು ದಿನ ಇದ್ದು, ಬಿಜೆಪಿ ಪರವಾಗಿ ಪ್ರಚಾರ ನಡೆಸಲಿದ್ದಾರೆ ಎಂದರು.

ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಪ್ರಚಾರಕ್ಕೆ ಬರುತ್ತಾರೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಚರಂತಿಮಠ, 24 ರ ನಂತರ ನೋಡಿ ಯಾರ್ಯಾರು ಚುನಾವಣಾ ಪ್ರಚಾರಕ್ಕೆ ಬರುತ್ತಾರೆ ಎಂಬುದು ಕಾದು ನೋಡಿ ಎಂದರು.

ಎಕ್ಸಲಂಟ್ ಸಂಸ್ಥೆಯ 29 ವಿದ್ಯಾರ್ಥಿಗಳು ನವೋದಯ ಶಾಲೆಗಳಿಗೆ ಆಯ್ಕೆ



ವಿಜಯಪುರ: ಪ್ರತಿ ವರ್ಷವೂ ಉತ್ತಮ ಫಲಿತಾಂಶ ನೀಡುವ ಮೂಲಕ ಮನೆ ಮಾತಾಗಿರುವ ಎಕ್ಸಲಂಟ್ ಸಂಸ್ಥೆ 2025-26 ನೇ ಸಾಲಿನ ಜವಾಹರ ನವೋದಯ ಶಾಲೆಗಳ ಪ್ರವೇಶ ಪರೀಕ್ಷೆಯಲ್ಲಿ ತನ್ನ ಫಲಿತಾಂಶದ ಹೆಜ್ಜೆಗುರುತನ್ನು ಮತ್ತಷ್ಟು ಗಟ್ಟಿಗೊಳಿಸಿದ್ದು, ಎಕ್ಸಲಂಟ್‌ನ 29 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆಯುವ ಮೂಲಕ ವಿಶೇಷ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳಾದ ಗಣೇಶ ಪಾಟೀಲ್ (98.75), ಸಮರ್ಥ ಚವ್ಹಾಣ (97.50), ಶ್ರೀಶರ ಗಗನಮಾಳಿ (97.50), ಕಾರ್ತಿಕ ಸತ್ಯಪ್ಪನವರ (97.50), ಸೃಜನ್ ಗೊರೆ (97.50), ಕೃತಿಕೇಶ ಹೊಂಗಲ್ (97.50), ಕರುಣಸಾಗರ ಬಾದವಾಡಗಿ (96.25), ಸಾತ್ವಿಕ್ ಕೊಟ್ಟನ್ನಳ್ಳಿ (96.25), ಅಕ್ಷಯ ಪೊಲೀಸ್ ಪಾಟೀಲ್ (96.25), ವೈಭವ್ ಹಟ್ಟಡದ (96.25), ವೇದಾ ದಾನಮ್ಮನವರ (96.25), ಶ್ರೇಯಸ್ ಅಂಗಡಿ (96.25), ಗೌತಮ್ ಚವ್ಹಾಣ (95.00), ಸೃಜನ್ ನಂದರಗಿ (95.00), ಯಮನಪ್ಪ ಜಮ್ಮನಕಟ್ಟಿ (95.00), ಆಶೀಶ್ ಹತ್ತಿಕಾಳ (95.00), ವೈಭವ್ ಕಾಮಶೆಟ್ಟಿ (95.00), ಸ್ಮಿತಾ ಮೂರಮಾನ (95.00), ಪೃಥ್ವಿರಾಜ್ ಅಂಬಿಗೇರ (93.75), ಪ್ರೇಮ್ ಕಾಸರ್ (93.75), ಸನ್ನಿಧಿ ಎಚ್ಚರಸ್ವಾಮಿಮಠ (93.50), ಭೂಮಿ ವಾಲಿ (92.50), ಭೂಮಿಕಾ ಕೇವಂಟಗಿ (92.50), ವೈ.ಬಿ. ಧನುಶ್ (92.50), ವಿರಾಟ್ ಬಿ. (92.50), ಶ್ರೇಯಸ್ ದೊಡ್ಡಮನಿ (92.50), ಮಹಾಂತಗೌಡ ಪಾಟೀಲ (92.50), ಅಪೂರ್ವ ರಾಠೋಡ (91.25), ಪ್ರದೀಪ್ ಡೊಕ್ಕಣ್ಣವರ (85.00) ಪ್ರತಿಷತ ಅಂಕಗಳನ್ನು ಪಡೆದು ಜವಾಹರ ನವೋದಯ ಶಾಲೆಗಳ ಪ್ರವೇಶಕ್ಕೆ ಆಯ್ಕೆಯಾಗಿದ್ದಾರೆ.

ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಬಸವರಾಜ್ ಕೌಲಗಿ ಮಾತನಾಡಿ, ಗ್ರಾಮೀಣ ಭಾಗದ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ನೆರವಾಗಲಿ ಎನ್ನುವ ಉದ್ದೇಶದಿಂದ ಪ್ರಾರಂಭವಾದ ಜವಾಹರ್ ನವೋದಯ ಶಾಲೆಗಳಲ್ಲಿ ಪ್ರವೇಶ ಪಡೆಯುವುದು ಸುಲಭದ ಮಾತಲ್ಲ, ಇಲ್ಲಿ ಶ್ರದ್ಧೆ ಹಾಗೂ ಸಮರ್ಪಣಾ ಭಾವ ಇದ್ದರೆ ಮಾತ್ರ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಇಂದು ನಮ್ಮ ಕೋಚಿಂಗ್ ಕ್ಲಾಸ್‌ನಿಂದ ಮೊದಲ ಸುತ್ತಿನ ಆಯ್ಕೆಯಲ್ಲಿ 29 ವಿದ್ಯಾರ್ಥಿಗಳು ನೇರ ಪ್ರವೇಶ ಪಡೆದುಕೊಳ್ಳಲು ಅರ್ಹತೆ ಪಡೆದುಕೊಂಡಿದ್ದು ಸಂತಸದ ವಿಷಯ. ಹಾಗೆಯೇ ಇನ್ನೂ ಎರಡರಿಂದ ಮೂರು ಸುತ್ತಿನ ಆಯ್ಕೆ ನಡೆಯಲಿದ್ದು, ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ಆಯ್ಕೆಯಾಗುತ್ತಾರೆ. ಇದೇ ರೀತಿಯ ಫಲಿತಾಂಶವನ್ನು ಸತತ ನೀಡಲು ನೆರವಾಗುತ್ತಿರುವ ನಮ್ಮ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮಕ್ಕಳ ಭವಿಷ್ಯ ಉಜ್ವಲವಾಗಿರಲೆಂದು ಆಶಿಸುತ್ತೇನೆ ಎಂದರು.

ಮಕ್ಕಳ ಈ ಅಮೋಘ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿಯ ಸರ್ವ ಸದಸ್ಯರು ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದರು.

ರಾಷ್ಟ್ರಮಟ್ಟದ ಹ್ಯಾಂಡ್‌ಬಾಲ್ ಕ್ರೀಡಾಕೂಟಕ್ಕೆ ಆಯ್ಕೆ

ಕಲಬುರಗಿ: ರಾಷ್ಟ್ರಮಟ್ಟದ ಹ್ಯಾಂಡ್‌ಬಾಲ್ ಕ್ರೀಡಾಕೂಟಕ್ಕೆ ಜಿಲ್ಲೆಯ ಇಬ್ಬರು ಪ್ರತಿಭಾವಂತ ಕ್ರೀಡಾಪಟುಗಳು ಆಯ್ಕೆಯಾಗಿರುವುದು ಜಿಲ್ಲೆಯ ಕ್ರೀಡಾ ಕ್ಷೇತ್ರಕ್ಕೆ ಹೆಮ್ಮೆಯ ವಿಷಯವಾಗಿದೆ.

ಹ್ಯಾಂಡ್‌ಬಾಲ್ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಹರಿಯಾಣ ರಾಜ್ಯದ ಕುರುಕ್ಷೇತ್ರದಲ್ಲಿ ಆಯೋಜಿಸಲಾಗಿರುವ 54ನೇ ಸೀನಿಯರ್ ಪುರುಷರ ರಾಷ್ಟ್ರೀಯ ಹ್ಯಾಂಡ್‌ಬಾಲ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಶಶಾಂಕ್ ಎಸ್. ಪಾಟೀಲ್ ಹಾಗೂ ಅಂಕುಶ್ ಬಿ. ಯು ಅವರು ಕರ್ನಾಟಕ ತಂಡವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ.

ಈ ಸಾಧನೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸಂಗಮೇಶ್ವರ ಹರ್ಷ ವ್ಯಕ್ತಪಡಿಸಿ ಕ್ರೀಡಾಪಟುಗಳಿಗೆ ಶುಭ ಹಾರೈಸಿದ್ದಾರೆ.ಇದೇ ವೇಳೆ ಜಿಲ್ಲಾ ಹ್ಯಾಂಡ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ಈರಣ್ಣ ಪಾಟೀಲ್ ಝಳಕಿ, ಕಾರ್ಯದರ್ಶಿ ದತ್ತಾತ್ರೇಯ ಕೆ. ಜೇವರ್ಗಿ, ಹಾಕಿ ತರಬೇತಿದಾರ ಸಂಜಯ ಬಾಣದ್ ಹಾಗೂ ಬಾಸ್ಕೆಟ್ ಬಾಲ್ ತರಬೇತಿದಾರ ಪ್ರವೀಣ್ ಪುಣೆ ಸಹ ಕ್ರೀಡಾಪಟುಗಳ ಸಾಧನೆಯನ್ನು ಶ್ಲಾಘಿಸಿ ಶುಭಾಶಯಗಳನ್ನು ತಿಳಿಸಿದ್ದಾರೆ.



ಆಲಿಕಲ್ಲು ಮಳೆ: 29 ಕುರಿ ಸಾವು

ಕೆರೂರ: ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಬುಧವಾರ ರಾತ್ರಿ ಸುರಿದ ಆಲಿಕಲ್ಲು ಮಳೆಗೆ ಯಂಡಿಗೇರಿ ಗ್ರಾಮದಲ್ಲಿ 29 ಕುರಿ ಹಾಗೂ ಆಡುಗಳು ಮೃತಪಟ್ಟಿವೆ. ಸಂಜೆಯಿಂದ ಪಟ್ಟಣದಲ್ಲಿ ಮೋಡ ಕವಿದ ವಾತಾವರಣವಿತ್ತು. ಗ್ರಾಮೀಣ ಭಾಗದಲ್ಲಿ ರಾತ್ರಿ 11 ಗಂಟೆಗೆ ಶುರುವಾದ ಮಳೆಯು ಸುಮಾರು 1 ಗಂಟೆಗೆ ಹೆಚ್ಚು ಕಾಲ ಗುಡುಗು, ಸಿಡಿಲು ಮಿಂಚಿನೊಂದಿಗೆ ಸುರಿದ ಮಳೆಯಿಂದ ಕುರಿಗಳು ಮೃತಪಟ್ಟಿವೆ.

ಸಾನಿಯಾ ಸುಬೇದಾರ ಸಾಧನೆ



ಹುಬ್ಬಳ್ಳಿ: ಇತ್ತೀಚೆಗೆ ಭೂಪಾಲನಲ್ಲಿ ನಡೆದ ದಕ್ಷಿಣ-ಪಶ್ಚಿಮ ವಲಯದ ಅಂತರ ವಿಶ್ವವಿದ್ಯಾಲಗಳ ಕರಾಟೆ ಸ್ಪರ್ಧೆಯಲ್ಲಿ ನಗರದ ಕೆಎಲ್‌ಇ ಸಂಸ್ಥೆ ಜಿ.ಕೆ. ಕಾನೂನು ಕಾಲೇಜ್ ಪ್ರಥಮ ವರ್ಷದ ಕಾನೂನು ವಿದ್ಯಾರ್ಥಿನಿ ಸಾನಿಯಾ ಸುಬೇದಾರ ಅವರು 61 ಕೆಜಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿನಿ ಸಾನಿಯಾ ಗಮನಾರ್ಹ ಸಾಧನೆಗೆ ಕೆಎಲ್‌ಸಂಸ್ಥೆ ಬೆಳಗಾವಿಯ ಚೇರಮನ್, ಆಡಳಿತ ಮಂಡಳಿಯ ಸದಸ್ಯರು ಮತ್ತು ಜಿ. ಕೆ. ಕಾನೂನು ಮಹಾವಿದ್ಯಾಲಯದ ಸ್ಥಾನಿಕ ಆಡಳಿತ

ಮಂಡಳಿಯ ಸದಸ್ಯರು, ಪ್ರಾಚಾರ್ಯರು, ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಅಖಂಡ ಭಜನಾ ಸಪ್ತಾಹಕ್ಕೆ ಚಾಲನೆ

ಭಟ್ಕಳ: ಇಲ್ಲಿನ ಕಿತ್ರೆಯ ಶ್ರೀ ಕ್ಷೇತ್ರ, ದೇವಿಮನೆ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವರ್ಷಂಪ್ರತಿಯಂತೆ ಈ ಸಲವೂ ಸಹ ಯುಗಾದಿಯಂದು ಅಖಂಡ ಭಜನಾ ಸಪ್ತಾಹಕ್ಕೆ ಚಾಲನೆ ನೀಡಲಾಯಿತು.ದೇವಿಮನೆಯಲ್ಲಿ ತಲೆತಲಾಂತರದಿಂದ ಭಜನೆ ಸಪ್ತಾಹ ನಡೆಸಿಕೊಂಡು ಬರಲಾಗುತ್ತಿದೆ. ಯುಗಾದಿಯಂದು ಬೆಳಿಗ್ಗೆ ದೇವರಿಗೆ ಪೂಜೆ ಸಲ್ಲಿಸುವುದರ ಮೂಲಕ ಕಟಗಾರಕೊಪ್ಪ ಗ್ರಾಮದವರು ಭಜನೆ ಆರಂಭಿಸಿದರೆ, ಎರಡನೇ ದಿನ ಕಿತ್ರೆ, ಮೂರನೇ ದಿನ ಕೋಟಖಂಡ, ನಾಲ್ಕನೇ ದಿನ ಹೂತ್ಕಳ, ಐದನೇ ದಿನ ಮಾರುಕೇರಿ, ಆರನೇ ದಿನ ಕೋಣಾರ-ಹದ್ಲೂರು, ಏಳನೇ ದಿನ ಎಲ್ಲಾ ಗ್ರಾಮದವರೂ ಸೇರಿ ಭಜನೆ ಮಾಡುತ್ತಾರೆ. ಭಜನೆ ಏಳೂ ದಿನ ಹಗಲು ರಾತ್ರಿ ನಿರಂತರವಾಗಿ ನಡೆಯುವುದು ವಿಶೇಷ. ಯುಗಾದಿಯಂದು ದೇವಸ್ಥಾನದ ಪ್ರಧಾನ ಅರ್ಚಕ ವೇ.ಮೂ. ಬಾಲಚಂದ್ರ ಭಟ್ಟ, ದೇವಿಮನೆ ಆಡಳಿತ ಕಮಿಟಿಯ ಅಧ್ಯಕ್ಷ ವಿನಾಯಕ ಭಟ್ಟ ಬೆಟ್ಕೂರು ಮುಂತಾದವರು ಭಜನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಅಕ್ರಮ ಗಾಂಜಾ ಮಾರಾಟ: ವ್ಯಕ್ತಿ ಬಂಧನ

ಮುಂಡಗೋಡ: ಪಟ್ಟಣದ ಕೆಎಸ್ಆರ್‌ಟಿಸಿ ಬಸ್ ಡಿಪೋ ಬಳಿ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಇಲ್ಲಿನ ಪೊಲೀಸರು ಬಂಧಿಸಿದ್ದಾರೆ. ಇಂದೂರು ಗ್ರಾಮದ ಕುನ್ನೂರ ಓಣಿಯ ನಿವಾಸಿ ಅಕ್ಬರ್ ಸೈಯದ್‌ಅಲಿ (32) ಬಂಧಿತ ಆರೋಪಿ. ಈತನು ಶಿರಸಿ-ಹುಬ್ಬಳ್ಳಿ ಮಾರ್ಗದ ರಾಜ್ಯ ಹೆದ್ದಾರಿ-69ರ ಬಸ್ ಡಿಪೋ ಬಳಿ ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾಗ ಪೊಲೀಸರು ದಾಳಿ ನಡೆಸಿದ್ದಾರೆ. ದಾಳಿಯ ವೇಳೆ ಸುಮಾರು 12,000 ರೂ. ಮೌಲ್ಯದ 184 ಗ್ರಾಂ ಗಾಂಜಾ ಹಾಗೂ ಆರೋಪಿಯ ಬಳಿಯಿದ್ದ 360 ರೂ. ನಗದು ಹಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.ಜಿಲ್ಲಾ ಪೊಲೀಸ್ ಅಧೀಕ್ಷಕ ದೀಪನ್ ಎಮ್.ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ ಜಿ ಹಾಗೂ ಶಿರಸಿ ಡಿ.ಎಸ್.ಪಿ ಗೀತಾ ಪಾಟೀಲ ಅವರ ಮಾರ್ಗದರ್ಶನದಲ್ಲಿ ಈ ಸಿಪಿಐ ರಂಗನಾಥ ನೀಲಮ್ಮನವರ ನೇತೃತ್ವದಲ್ಲಿ, ಪಿಎಸ್ಐ ಮಂಜುನಾಥ ಗೌಡರ, ಎಎಸ್ಐ ಸೋಮಶೇಖರ ಮೇತ್ರಿ ಹಾಗೂ ಸಿಬ್ಬಂದಿಗಳಾದ ಕೋಟೇಶ ನಾಗರವಳ್ಳಿ, ಅಣ್ಣಪ್ಪ ಬುಡಿಗೇರ, ಮಹಾಂತೇಶ ಮುಧೋಳ, ನಾಗಪ್ಪ ಮೊರಟಗಿ ಮತ್ತು ಬಸವರಾಜ ಒಡೆಯರ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಯಶಸ್ವಿ ಕಾರ್ಯಾಚರಣೆ ನಡೆಸಿದ ತಂಡಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಛಾಯಾಗ್ರಾಹಕ ಪ್ರಶಾಂತ ಕೆ. ನಾಯ್ಕ ನಿಧನ



ಅಂಕೋಲಾ: ತಾಲೂಕಿನ ಲಕ್ಷ್ಮೇಶ್ವರ ಕುಂಬಾರಕೇರಿ ನಿವಾಸಿ ಛಾಯಾಗ್ರಾಹಕ ಪ್ರಶಾಂತ ಕೆ. ನಾಯ್ಕ (43) ಅನಾರೋಗ್ಯದಿಂದ ನಿಧನರಾದರು. ಸುಮಾರು 25 ವರ್ಷಗಳಷ್ಟು ಕಾಲ ತಾಲೂಕಿನ ಛಾಯಾಗ್ರಾಹಕರ ಬಳಿ ಸಹಾಯಕರಾಗಿ ಸೇವೆ ಸಲ್ಲಿಸುವ ಮೂಲಕ ಉತ್ತಮ ಫೋಟೋಗ್ರಾಫರ್ ಆಗಿ ಗುರುತಿಸಿಕೊಂಡಿದ್ದ ಇವರು ವಿಡಿಯೋಗ್ರಾಫಿಯಲ್ಲಿ ಸಹ ತಮ್ಮ ಕೌಶಲ್ಯದಿಂದ ಜನ ಮೆಚ್ಚುಗೆ ಪಡೆದಿದ್ದರು. ಛಾಯಾಗ್ರಾಹಕರ ಸಂಘದ ಸದಸ್ಯರಾಗಿದ್ದರು. ಮೃತರಿಗೆ ತಂದೆ, ತಾಯಿ, ಅಣ್ಣ, ಅತ್ತಿಗೆ, ಅಕ್ಕಂದಿರು, ಭಾವಂದಿರು ಮತ್ತು ಅಪಾರ ಬಂಧು ಬಳಗ, ಸ್ನೇಹಿತರು ಇದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60689	71199
ಬಿಳಿಗೋಟು	26099	39700
ಕೆಂಪುಗೋಟು	24199	36099
ಬೆಟ್ಟೆ	40001	50699
ರಾಶಿ	48598	54099
ಚಾಲಿ	43699	48099

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	70115	98930
ರಾಶಿ	49821	57430
ಬೆಟ್ಟೆ	38969	51290
ಕೆಂಪುಗೋಟು	16899	39399
ಬಿಳಿಗೋಟು	16109	41099
ಚಾಲಿ ಹೊಸದು	38809	48299
ಚಾಲಿ ಹಳೇದು	49709	49709
ಕೋಕಾ	12900	34899
ಕಾಳುಮೆಣಸು	58619	70707



ಭಟ್ಕಳ: ಇಲ್ಲಿನ ಕಿತ್ರೆಯ ಶ್ರೀ ಕ್ಷೇತ್ರ ದೇವಿಮನೆ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವರ್ಷಂಪ್ರತಿಯಂತೆ ಈ ಸಲವೂ ಸಹ ಯುಗಾದಿಯಂದು ಅಖಂಡ ಭಜನಾ ಸಪ್ತಾಹಕ್ಕೆ ದೇವಸ್ಥಾನದ ಪ್ರಧಾನ ಅರ್ಚಕ ವೇ.ಮೂ. ಬಾಲಚಂದ್ರ ಭಟ್ಟ, ದೇವಿಮನೆ ಆಡಳಿತ ಕಮಿಟಿಯ ಅಧ್ಯಕ್ಷ ವಿನಾಯಕ ಭಟ್ಟ ಬೆಟ್ಕೂರು ಮುಂತಾದವರು ಭಜನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮಾ.28ಕ್ಕೆ ಶ್ರೀ ಅಗ್ನಿಬನ್ನಿರಾಯ ಜಯಂತಿ

ಕಾರವಾರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಮಾ.28 ರಂದು ಬೆಳಗ್ಗೆ 10 ಗಂಟೆಗೆ ಶ್ರೀಅಗ್ನಿಬನ್ನಿರಾಯ ಜಯಂತಿಯನ್ನು ಕಾರವಾರದ ಕರ್ನಾಟಕ ರಾಜ್ಯ ಸರಕಾರಿ ನೌಕರರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಉದ್ಘಾಟಿಸಲಿದ್ದು, ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೆ. ಸೈಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಆರ್.ವಿ ದೇಶಪಾಂಡೆ, ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಶಾಸಕರಾದ ಎಸ್. ವಿ.ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಡಿ.ಉಳ್ವೇಕರ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಶಿವಾಜಿ ಕಲಾ ಮತ್ತು ಬಿಸಿಎ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ ಎ.ಬಿ. ಕೆರಲೇಕರ ವಿಶೇಷ ಉಪನ್ಯಾಸ ನೀಡಲಿದ್ದಾರೆ.



ಗೋಕರ್ಣ: ಹೊಸ ವರ್ಷ ಯುಗಾದಿ ಹಬ್ಬವನ್ನ ಪುರಾಣ ಪ್ರಸಿದ್ಧ ಕ್ಷೇತ್ರದಲ್ಲಿ ಗುರುವಾರ ಸಂಭ್ರಮದಿಂದ ಆಚರಿಸಲಾಯಿತು. ಹೊಸ ಸಂವತ್ಸರದ ಋತುಮಾನದಲ್ಲಿ ಪ್ರಥಮವಾಗಿ ಬರುವ ವಿವಿಧ ಹಣ್ಣುಗಳನ್ನ ಖರೀದಿಸಿ, ದೇವಾಲಯಕ್ಕೆ ಹಾಗೂ ಮನೆಗಳಿಗೆ ತಂದು ದೇವರಿಗೆ ಸಮರ್ಪಿಸುವುದು ವಾಡಿಕೆಯಾಗಿದ್ದು ಅದರಂತೆ ಈ ವರ್ಷವೂ ನಡೆಯಿತು. ಈ ಫಲವನ್ನ ಹಲವರು ಇಲ್ಲಿನ ವೆಂಕಟ್ರಮಣ ದೇವಾಲಯಕ್ಕೆ ಅರ್ಪಿಸಿದರು. ಪ್ರತಿ ಮನೆಯಲ್ಲಿ ವಿವಿಧ ಭಕ್ಷ ತಯಾರಿಸಿ ವಿಶೇಷ ಪೂಜೆ ನೆರವೇರಸಿ ನೂತನ ವರ್ಷದಲ್ಲಿ ಒಳಿತಾಗಲಿ ಎಂದು ಪ್ರಾರ್ಥಿಸಲಾಯಿತು.

ಮಧ್ಯವರ್ತಿಗಳು ಕಂಡುಬಂದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ: ಸಚಿವ

ಕಾರವಾರ: ರಾಜ್ಯದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಮಧ್ಯವರ್ತಿಗಳು ಕಂಡುಬಂದಲ್ಲಿ ಸಂಬಂಧಪಟ್ಟ ಆರ್‌ಟಿಓ ಮತ್ತು ಎಆರ್‌ಟಿಓ ಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವ ರಾಮಲಿಂಗ ರೆಡ್ಡಿ ಹೇಳಿದರು.

ಅವರು ಶುಕ್ರವಾರ ದಾಂಡೇಲಿಯಲ್ಲಿ 6.55 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಿದ ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥ ಉದ್ಘಾಟಿಸಿ ಮಾತನಾಡಿದರು.

ರಾಜ್ಯದ ಪ್ರಾದೇಶಿಕ ಕಚೇರಿಗಳಲ್ಲಿನ ಬಹುತೇಕ ಸಾರ್ವಜನಿಕ ಸೇವೆಗಳನ್ನು ಆನ್‌ಲೈನ್ ವ್ಯವಸ್ಥೆಗೊಳಿಸಲಾಗಿದ್ದು, ಸಾರಿಗೆ ಇಲಾಖೆಯಲ್ಲಿ ಮಧ್ಯವರ್ತಿಗಳು ಕಂಡುಬಂದಲ್ಲಿ ಸಂಬಂಧಪಟ್ಟ ಕಚೇರಿಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ರಾಜ್ಯದಲ್ಲಿ ಇದುವರೆಗೂ 20 ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥಗಳು ಕಾರ್ಯಾರಂಭವಾಗಿದ್ದು, ಇನ್ನೂ 25 ಕಡೆಯಲ್ಲಿ ನಿರ್ಮಾಣ ಕಾರ್ಯವು ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲೇ ಪ್ರಾರಂಭವಾಗಲಿದ್ದು, ಇದರಿಂದ ರಾಜ್ಯದ 31 ಜಿಲ್ಲೆಗಳಲ್ಲಿ 45 ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಾಣ ವಾಗಲಿದ್ದು, ಈ ಮೂಲಕ ದೇಶದಲ್ಲೇ ಅತೀ ಹೆಚ್ಚು ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥ ಇರುವ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದ್ದೇವೆ ಎಂದು ತಿಳಿಸಿದರು.

ದಾಂಡೇಲಿಯಲ್ಲಿ ಶೀಘ್ರದಲ್ಲೇ ನೂತನ ಹೈಟೆಕ್ ಬಸ್ ನಿಲ್ದಾಣ ಕಾಮಗಾರಿ ಪ್ರಾರಂಭಿಸಲಾಗುವುದು ಹಾಗೂ ದಾಂಡೇಲಿ-ಬೆಂಗಳೂರು ಪಲ್ಲಕ್ಕಿ ಬಸ್ ನೀಡಲು ಸಂಸ್ಥೆಯ ಎಂ.ಡಿ ಅವರಿಗೆ ಸೂಚನೆ ನೀಡಲಾಗಿದೆ ಎಂದರು.



- 6.55 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಿದ ಸ್ವಯಂ ಚಾಲಿತ ಚಾಲನಾ ಪರೀಕ್ಷಾ ಪಥ ಉದ್ಘಾಟನೆ
- ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವ ರಾಮಲಿಂಗ ರೆಡ್ಡಿ ಹೇಳಿಕೆ

ದಾಂಡೇಲಿಯಲ್ಲಿ ದೇಶಪಾಂಡೆ ಅವರ ಪ್ರಯತ್ನದಿಂದಾಗಿ ಉತ್ತಮವಾದ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಜೊತೆಗೆ ಸ್ವಯಂ ಚಾಲಿತ ಚಾಲನಪರೀಕ್ಷಾಪಥವನ್ನು ನಿರ್ಮಿಸಲಾಗಿದೆ.ಇದರಿಂದಾಗಿ ಈ ಭಾಗದ ಜನರಿಗೆ ತುಂಬಾ ಅನುಕೂಲವಾಗಿದ್ದು, ಉತ್ತಮ ಗುಣಮಟ್ಟದ ಪಥ ನಿರ್ಮಾಣವಾಗಿದ್ದು, ಈ ಪಥವು ಸ್ವಯಂ ಚಾಲಿತವಾಗಿರುವುದರಿಂದ ಎಲ್ಲವೂ ಸೆನ್ಸರ್ ಮೂಲಕ ನಡೆಯಲಿದ್ದು, ಯಾವುದೇ ರೀತಿಯ ಮಾನವ ಹಸ್ತಕ್ಷೇಪ ಇರುವುದಿಲ್ಲ ಎಂದರು.

ಶಾಸಕ ಆರ್.ವಿ. ದೇಶಪಾಂಡೆ ಮಾತನಾಡಿ, ದೇಶ ವಿದೇಶದಿಂದ ಪ್ರವಾಸಿಗರು ದಾಂಡೇಲಿಗೆ ಆಗಮಿಸುತ್ತಿದ್ದಾರೆ ಆ ನಿಟ್ಟಿನಲ್ಲಿ ದಾಂಡೇಲಿ ನಗರವನ್ನು ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿ ಪಡಿಸಲಾಗುವುದು ಹಾಗೂ ಸ್ಥಳೀಯ ಯುವಕರಿಗೆ ಉದ್ಯೋಗ ಸೃಷ್ಟಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ದಾಂಡೇಲಿಯಲ್ಲಿ ಸುಸಜ್ಜಿತ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣವಾಗಬೇಕು ಎಂಬುದು ಈ ಭಾಗದ ಜನರ ಕನಸಾಗಿದೆ ಹಾಗೂ ದಾಂಡೇಲಿಯಿಂದ ಬೆಂಗಳೂರಿಗೆ ಸುಸಜ್ಜಿತ ಬಸ್ ಸಂಚಾರ ಆರಂಭವಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆಯ ಅಪರ ಸಾರಿಗೆ ಆಯುಕ್ತ ಹಾಲಸ್ವಾಮಿ, ಬೆಳಗಾವಿ ವಿಭಾಗದ ಜಂಟಿ ಆಯುಕ್ತ ಸಿದ್ದಪ್ಪ ಕಲ್ಲೇರ, ದಾಂಡೇಲಿ ತಹಶೀಲ್ದಾರ್ ಶೈಲೇಶ್ ಪರಮಾನಂದ, ಪೌರಾಯುಕ್ತ ವಿವೇಕ್ ಬನ್ನೇ, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಟಿ. ಸಿ. ಹಾದಿಮನಿ, ಡಿವೈಎಸ್‌ಪಿ ಶಿವಾನಂದ ಮದರಕಂಡಿ, ದಾಂಡೇಲಿಯ ಎ.ಆರ್.ಟಿ.ಓ. ಅವಿನಾಶ್ ಕಾವೇರಿ ಮತ್ತಿತರರು ಉಪಸ್ಥಿತರಿದ್ದರು.

ಪ್ರಶಿಕ್ಷಣ ವರ್ಗ ಯಶಸ್ವಿಯಾಗಿ ನಡೆಸಲಿ

ಕಾರವಾರ: ಭಾರತೀಯ ಜನತಾ ಪಕ್ಷದ ಪ್ರಶಿಕ್ಷಣ ವರ್ಗ ಅತ್ಯಂತ ಅಚ್ಚುಕಟ್ಟಾಗಿ ನಡೆಯಬೇಕು. ಇದು ಪಕ್ಷದ ಬೆಳವಣಿಗೆಗೆ ಸಹಕಾರಿ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ತಿಳಿಸಿದರು.

ಬಿಜೆಪಿ ಕಾರವಾರ ನಗರ ಮಂಡಳ ವತಿಯಿಂದ ಪಕ್ಷದ ಕಾರ್ಯಾಲಯದಲ್ಲಿ ಪ್ರಶಿಕ್ಷಣ ವರ್ಗ ಕುರಿತು ಪೂರ್ವ ಸಿದ್ಧತಾ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಪ್ರ ಶಿಕ್ಷಣ ವರ್ಗ ಅತ್ಯಂತ ಯಶಸ್ವಿಯಾಗಿ ನಡೆಯಬೇಕು. ಅದರ ಸಿದ್ಧತೆಯ ಬಗ್ಗೆ ಕಾರ್ಯಕರ್ತರು ಗಮನ ಹರಿಸಬೇಕು. ಪ್ರತಿ ಬೂತ್ ಅಧ್ಯಕ್ಷರಿಂದ ಹಿಡಿದು ಪಕ್ಷದ ವಿವಿಧ ಜವಾಬ್ದಾರಿ ಹೊತ್ತ ಕಾರ್ಯಕರ್ತರು ಪಕ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳುವಳಿಕೆಯನ್ನು ಮೂಡಿಸಿ, ಪಕ್ಷವನ್ನು ಸಂಘಟಿಸುವ ಕಾರ್ಯಕ್ರಮ ಪ್ರ ಶಿಕ್ಷಣ ವರ್ಗ ಎಂದು ಹೇಳಿದರು.

ಪಕ್ಷದ ಜಿಲ್ಲಾ ಅಧ್ಯಕ್ಷ ಎನ್.ಎಸ್. ಹೆಗಡೆ ಮಾತನಾಡಿ, ನಮ್ಮ ಕ್ಷೇತ್ರದ ಮೂರೂ ಮಂಡಳದ ಪ್ರ ಶಿಕ್ಷಣ ವರ್ಗ ಅತ್ಯಂತ ಅಚ್ಚುಕಟ್ಟಾಗಿ ಅದ್ದೂರಿಯಾಗಿ ಪಕ್ಷದ ಕಾರ್ಯಕರ್ತರು ಸೇರಿ ಮಾಡಬೇಕು ಮತ್ತು ಪ್ರತಿಯೊಂದು ಅಪೇಕ್ಷಿತರು ಬರುವ ಹಾಗೆ ನೋಡಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ನಗರ ಮಂಡಳ ಅಧ್ಯಕ್ಷ ನಾಗೇಶ್ ಕುರಡೇಕರ ಪ್ರಾಸ್ತಾವಿಕವಾಗಿ ಮಾತನಾಡಿ, ಮುಂಬರುವ ಕಾರ್ಯಕ್ರಮಗಳ ಕುರಿತು ಮಾತನಾಡಿದರು.

ಜಿಲ್ಲಾ ಮಾಧ್ಯಮ ಸಹ ಸಂಚಾಲಕ ಕಿಶನ್ ಕಾಂಬಳೆ, ವಿಶೇಷ ಆಹ್ವಾನಿತರಾದ ನಾಗರಾಜ್ ನಾಯಕ. ಮನೋಜ ಭಟ್. ನಯನಾ ನೀಲಾವರ. ನಗರ ಪ್ರಧಾನ ಕಾರ್ಯದರ್ಶಿಗಳಾದ ಅಶೋಕ್ ಗೌಡ, ದೇವಿದಾಸ ಕಂತ್ರಿಕರ. ಪಕ್ಷದ ವಿವಿಧ ಜವಾಬ್ದಾರಿ ಹೊತ್ತ ಕಾರ್ಯಕರ್ತರು ಪಕ್ಷದ ಹಿರಿಯ, ಕಿರಿಯ ಮುಖಂಡರು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.



ಹಣ ವಸೂಲಿ: ವೈದ್ಯರ ವಿರುದ್ಧ ಆರ್‌ವಿಡಿ ಗರಂ

ದಾಂಡೇಲಿ: ಹೆರಿಗೆ ಬಳಿಕ ಬಡವರಿಂದ ಹಣ ವಸೂಲಿ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪದ ಹಿನ್ನೆಲೆಯಲ್ಲಿ ನಗರದ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆಯ ವೈದ್ಯರ ವಿರುದ್ಧ ಶಾಸಕ ಆರ್.ವಿ. ದೇಶಪಾಂಡೆಯವರು ಗರಂ ಆದ ಘಟನೆ ಶುಕ್ರವಾರ ನಡೆದಿದೆ.

ದಾಂಡೇಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಶಾಸಕ ಆರ್.ವಿ.ದೇಶಪಾಂಡೆಯವರು ಆಸ್ಪತ್ರೆಯ ಸೌಲಭ್ಯಗಳು, ಸೇವಾ ಗುಣಮಟ್ಟ, ಔಷಧಿಗಳ ಲಭ್ಯತೆ ಹಾಗೂ ಮೂಲಸೌಕರ್ಯ ಸೇರಿದಂತೆ ವಿವಿಧ ವಿಷಯಗಳ ಕುರಿತು ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಸಭೆಯಲ್ಲಿ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆಯ ಬಗ್ಗೆ ವಿಷಯ ಪ್ರಸ್ತಾಪವಾಗುತ್ತಿದ್ದಂತೆಯೇ ಹೆರಿಗೆ ಹಾಗೂ ಸಿಜೇರಿಯನ್ ಬಳಿಕ ಬಡ ರೋಗಿಗಳಿಂದ 15 ರಿಂದ 20 ಸಾವಿರ ರೂಪಾಯಿ ಹಣ ಪಡೆಯಲಾಗುತ್ತಿದೆ ಎಂಬ ಬಗ್ಗೆ ಆರೋಪದ ಕುರಿತಂತೆ ಡಾ. ಅಖಿಲ ಕಿತ್ತೂರ ಹಾಗೂ ಡಾ. ಕೀರ್ತಿ ಸಾಳುಂಕೆ ಅವರಿಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಅವರ ವಿರುದ್ಧ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಡಾ.ಅಖಿಲ್ ಕಿತ್ತೂರು ಅವರು ನಾವು ಹಣ ಕೇಳಿ ಪಡೆಯುತ್ತಿಲ್ಲ, ಹಣ ಕೊಟ್ಟಲ್ಲಿ ಮಾತ್ರ ಸ್ವೀಕರಿಸುತ್ತೇವೆ ಎಂದಾಗ ಆರ್.ವಿ. ದೇಶಪಾಂಡೆ ಅವರು ಮತ್ತಷ್ಟು ಗರಂ ಆಗಿ ತೀವ್ರ ತರಾಟೆಗೆ ತೆಗೆದುಕೊಂಡರು. ಮುಂದಿನ ದಿನಗಳಲ್ಲಿ ಯಾರಿಂದಾದರೂ ಹಣ ಸ್ವೀಕರಿಸಿದ್ದು ಕಂಡುಬಂದಲ್ಲಿ ಪೊಲೀಸ್ ದೂರು ದಾಖಲಿಸುವುದಾಗಿ ಖಡಕ್ ಎಚ್ಚರಿಕೆಯನ್ನು ನೀಡಿದ ದೇಶಪಾಂಡೆ ಅವರು ಈವರೆಗೆ ಹಣ ಪಡೆದಿರುವ ಬಗ್ಗೆ ಮಾಹಿತಿ ಸಂಗ್ರಹಿಸಲು ತಹಶೀಲ್ದಾರರಿಗೆ ಸೂಚನೆ ನೀಡಿ, 'ಬಡವರ ಹತ್ತಿರ ಸುಲಿಗೆ ಮಾಡಿದರೆ ಹುಷಾರ್' ಎಂದು ಕಟ್ಟುನಿಟ್ಟಾಗಿ ಎಚ್ಚರಿಕೆ ನೀಡಿದರು.

ತಾಲೂಕು ಆರೋಗ್ಯ ವೈದ್ಯಾಧಿಕಾರಿ ಡಾ.ಅನಿಲ್ ಕುಮಾರ್ ನಾಯ್ಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ ಹಲವಾಯಿ, ಆರೋಗ್ಯ ರಕ್ಷಾ ಸಮಿತಿಯ ಸದಸ್ಯರಾದ ಶಿವಪ್ಪ ನಾಯ್ಕ, ರಫೀಕ್ ಖಾನ್, ರೇಣುಕಾ ಬಂದಂ, ಪ್ರತಾಪ್ ಸಿಂಗ್ ರಜಪೂತ್, ತಹಶೀಲ್ದಾರ್ ಶೈಲೇಶ ಪರಮಾನಂದ, ತಾ.ಪಂ ಕಾರ್ಯನಿರ್ವಹಣಾಧಿಕಾರಿ ಟಿ.ಸಿ.ಹಾದಿಮನಿ, ಪೌರಾಯುಕ್ತ ವಿವೇಕ ಬನ್ನೆ, ಭೂಷಣ್ ಕರಡಿಗುಡ್ಡ ಮೊದಲಾದವರು ಮತ್ತು ಸಾರ್ವಜನಿಕ ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆಯ ವೈದ್ಯರು, ಸಿಬ್ಬಂದಿಗಳು ಉಪಸ್ಥಿತರಿದ್ದರು. ಉತ್ಪಲ್ ಶಿರೋಡ್ಕರ್ ಸ್ವಾಗತಿಸಿ, ವಂದಿಸಿದರು.



ಸಂಭ್ರಮದ ಭವ್ಯ ಶೋಭಾಯಾತ್ರೆ

ಯಲ್ಲಾಪುರ: ಪಟ್ಟಣದಲ್ಲಿ ಹಿಂದೂಗಳ ಹೊಸ ವರ್ಷ ಯುಗಾದಿ ಪ್ರಯುಕ್ತ ನಡೆದ ಭವ್ಯ ಶೋಭಾಯಾತ್ರೆ ಸಂಭ್ರಮದಿಂದ ನಡೆಯಿತು.

ಯುಗಾದಿ ಉತ್ಸವ ಸಮಿತಿಯಿಂದ ಕೋಟೆ ಕರಿಯವ್ವ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಶೋಭಾ ಯಾತ್ರೆಗೆ ಚಾಲನೆ ನೀಡಲಾಯಿತು.

ಮೆರವಣಿಗೆ ದಾರಿಯುದ್ದಕ್ಕೂ ಸೇರಿದ್ದ ಜನಸ್ತೋಮ, ರಸ್ತೆಯ ಅಕ್ಕಪಕ್ಕದಲ್ಲಿ ಕಟ್ಟಡದ ಮೇಲ್ಭಾಗಗಳಲ್ಲಿ ನಿಂತು ಶೋಭಾಯಾತ್ರೆಯನ್ನು ಕಣ್ತುಂಬಿಕೊಂಡರು. ಹಿಂದವಿ ತಾಳ್, ಚೆಂಡೆ ವಾದ್ಯ, ಡೊಳ್ಳು ಹಾಗೂ ನೃತ್ಯ ಭಜನಾ ತಂಡ, ಭಾರತಮಾತೆ,ಯಲ್ಲಮ್ಮ ದೇವಿ, ಕಾಳಿ ಮಾತೆ, ಯಮ ಕಿಂಕರರು,ಹೀಗೆ ಸ್ಥಳೀಯರಿಂದ ಸ್ತಬ್ಧಚಿತ್ರಗಳು ಹಾಗೂ, ಗಾರುಡಿಗೊಂಬೆಗಳು ಜನಾಕರ್ಷಣೆಯ ಕೇಂದ್ರವಾಗಿದ್ದವು. ಡಿಜೆ, ಹಾಡಿಗೆ ಹೆಜ್ಜೆ ಹಾಕುತ್ತ ಯುವಕರು, ಮಹಿಳೆಯರು, ಯುವತಿಯರು ಸಾಗಿದ್ದರು ಶಾಸಕ ಶಿವರಾಮ್ ಹೆಬ್ಬಾರ್ ಹಾಗೂ ಅವರ ಪುತ್ರ ಕೆಪಿಸಿಸಿ ಸದಸ್ಯ ವಿವೇಕ್ ಹೆಬ್ಬಾರ್ ಜನಸಾಮಾನ್ಯರೊಂದಿಗೆ ಹಾಡಿಗೆ ಹೆಜ್ಜೆ



ಹಾಕಿದ್ದು ಗಮನ.ಸೆಳೆಯಿತು.

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ನಂತರ ಗ್ರಾಮ ದೇವಿ ದೇವಸ್ಥಾನದಲ್ಲಿ ಸಂಪನ್ನಗೊಂಡಿತು. ಮಾರ್ಗ ಮಧ್ಯೆ ವಿವಿಧ ಕಾಳಮ್ಮ ನಗರ ಯುವ ಬಳಗದವರು ಜನರಿಗೆ ಎಳ್ಳುನೀರು ಪಾನಕ, ವಿತರಿಸಿದರು. ಪೊಲೀಸರು ಸಂಪೂರ್ಣ ಯಾತ್ರೆಯ ಮೇಲೆ ನಿಗಾ ಇಟ್ಟು ಸಂಚಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿಯಂತ್ರಿಸಿದ್ದರು.

ವಾಣಿಜ್ಯ ಬಳಕೆ ಸಿಲಿಂಡರ್ ಕೊರತೆಯಿಂದ ಹೋಟೆಲ್‌ಗಳ ಪರದಾಟ

ಅಂಕೋಲಾ: ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧ ಪರಿಸ್ಥಿತಿಯಿಂದ ಉದ್ಭವಿಸಿರುವ ಅಡುಗೆ ಅನಿಲ ಕೊರತೆ ತಾಲೂಕಿನ ಹೋಟೆಲ್, ಉಪಹಾರ ಗೃಹಗಳ ಮೇಲೆ ಪರಿಣಾಮ ಬೀರಿದ್ದು ಬಹಳಷ್ಟು ಹೋಟೆಲಗಳು ವಾಣಿಜ್ಯ ಬಳಕೆ ಅಡುಗೆ ಅನಿಲದ ಅಲಭ್ಯತೆಯಿಂದಾಗಿ ತಾತ್ಕಾಲಿಕವಾಗಿ ಬಾಗಿಲು ಮುಚ್ಚುವ ಹಂತ ತಲುಪಿವೆ.



ಪಟ್ಟಣದಲ್ಲಿ ಬಹುತೇಕ ಹೋಟೆಲುಗಳು ಗ್ಯಾಸ್ ಸಿಲಿಂಡರ್ ಪೂರೈಕೆ ಇಲ್ಲದ ಕಾರಣ ತಮ್ಮ ದೈನಂದಿನ ಕಾರ್ಯ ಚಟುವಟಿಕೆ ನಿಲ್ಲಿಸಿದ್ದು ಗ್ರಾಹಕರು ಚಹಾ, ತಿಂಡಿಗಳಿಗೆ ಪರಿತಪಿಸುವಂತಾಗಿದೆ.

ಬೀದಿ ಬದಿಯ ಫಾಸ್ಟ್ ಫುಡ್ ಅಂಗಡಿಗಳಿಗೂ ಸಿಲಿಂಡರ್ ಕೊರತೆಯ ಬಿಸಿ ತಟ್ಟಿದ್ದು ಪ್ರವಾಸಿಗರು, ಗ್ರಾಮೀಣ ಭಾಗಗಳಿಂದ ಕೆಲಸ ಬಂದ ಜನರು ಊಟ, ತಿಂಡಿಗಳಿಗಾಗಿ ಹುಡುಕಾಟ ನಡೆಸುವಂತಾಗಿದೆ.

ಸುಮಾರು ನಾಲ್ಕೈದು ದಿನನಗಳ ಹಿಂದಿನಿಂದಲೇ ತಾಲೂಕಿನ ಹೋಟೆಲುಗಳಲ್ಲಿ ದೋಸೆ ಮೊದಲಾದ ತಿಂಡಿಗಳನ್ನು ತಯಾರಿಸುವುದನ್ನು ಬಂದ್ ಮಾಡಲಾಗಿದ್ದು ಕೆಲವೇ ಬಗೆಯ ತಿಂಡಿಗಳ ಲಭ್ಯತೆ ಇತ್ತು ಇದೀಗ ಸಿಲಿಂಡರ್ ಸಂಪೂರ್ಣ ಖಾಲಿ ಆಗಿದ್ದರಿಂದ ಹೋಟೆಲುಗಳು ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿವೆ.

ಕೆಲವು ಕಡೆಗಳಲ್ಲಿ ಪ್ರತಿದಿನ ಸಾವಿರಕ್ಕೂ ಹೆಚ್ಚು ಬಾಡಿಗೆ ತುಂಬಿ ಹೋಟೆಲ್ ವ್ಯವಹಾರ ನಡೆಸುವ ಹೋಟೆಲ್ ಉದ್ಯಮಿಗಳು ತಾಲೂಕಿನಲ್ಲಿದ್ದು ಅಂಗಡಿಗಳ ಮಾಲಿಕರಿಗೆ ಬಾಡಿಗೆ ಹಣ ನೀಡಲೇಬೇಕಾಗಿರುವುದರಿಂದ ಉದ್ಯಮ ನಡೆಸುವುದು ಅಗತ್ಯವಾಗಿದ್ದು ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಉಂಟಾದ ವ್ಯತ್ಯಯ ಇವರ ಬದುಕಿನ ಮೇಲೆ ಬರೆ ಎಳೆದಂತಾಗಿದೆ.

ಹೋಟೆಲುಗಳಲ್ಲಿ ದಿನಗೂಲಿ ಮಾಡಿ ಜೀವನ ಸಾಗಿಸುವ ಹಲವಾರು ಕಾರ್ಮಿಕರೂ ಹೋಟೆಲ್ ಬಂದ್ ಆಗುವ ಕಾರಣ ತಮ್ಮ ದಿನನಿತ್ಯದ ದುಡಿಮೆ ಕಳೆದುಕೊಳ್ಳಲಿದ್ದಾರೆ.

ವಾಣಿಜ್ಯ ಸಿಲಿಂಡರ್ ಬಳಕೆ ಆರಂಭವಾದ ನಂತರ ಹೋಟೆಲುಗಳಲ್ಲಿ ಕಟ್ಟಿಗೆ ಉರುವಲು ಬಟ್ಟಿಗಳು ತಮ್ಮ ಅಸ್ತಿತ್ವ ಕಳೆದುಕೊಂಡಿದ್ದು ಸಿಲೆಂಡರ್ ಕೊರತೆ ಮತ್ತೆ ಕಟ್ಟಿಗೆ ಒಲೆಯತ್ತ ಮರಳುವಂತೆ ಮಾಡಿದ್ದು ಕೆಲವರು ಈಗಾಗಲೇ ಹಳೆಯ ಪದ್ಧತಿಗೆ ಮೊರೆ ಹೋಗುತ್ತಿದ್ದಾರೆ.

ಸದ್ಯದ ದಿನಗಳಲ್ಲ ವಾಣಿಜ್ಯ ಬಳಕೆಯ ಸಿಲಿಂಡರ್ ಲಭ್ಯತೆ ಕಷ್ಟಕರ ಎಂದೇ ಕೇಳಿ ಬರುತ್ತಿದ್ದು ಹೋಟೆಲುಗಳ ಮಾಲಿಕರು ಕಂಗಾಲಾಗುವಂತಾಗಿದೆ.

ಬೈಕ್ ರ್‍ಯಾಲಿಗೆ ರೂಪಾಲಿ ನಾಯ್ಕ ಚಾಲನೆ

ಅಂಕೋಲಾ: ಯುಗಾದಿ ಹಬ್ಬದ ಪ್ರಯುಕ್ತ ತಾಲೂಕಿನ ಬೊಬ್ರವಾಡದ ಯುಗಾದಿ ಉತ್ಸವ ಸಮಿತಿಯ ವತಿಯಿಂದ ಬೈಕ್ ರ್‍ಯಾಲಿ ನಡೆಸಲಾಯಿತು.

ಬೊಬ್ರವಾಡದ ಶ್ರೀಬೊಬ್ರ ದೇವಾಲಯದಲ್ಲಿ ಬೊಬ್ರದೇವರ ಪೂಜೆ ಸಲ್ಲಿಸಿ ನಂತರ ಭಾರತ ಮಾತೆಗೆ ಆರತಿ ಬೆಳಗಿ ಬೇವು-ಬೆಲ್ಲ ಹಂಚಿ ಪರಸ್ಪರ ಯುಗಾದಿಯ ಶುಭಾಶಯಗಳನ್ನು ಕೋರಲಾಯಿತು.

ಭಾರತೀಯ ಜನತಾ ಪಕ್ಷದ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಅವರು ಕೇಸರಿ ಬಾವುಟ ತೋರಿ ಬೈಕ್ ರ್‍ಯಾಲಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹಿಂದು ಸಂಸ್ಕೃತಿ ಅತ್ಯಂತ ಶ್ರೇಷ್ಠವಾಗಿದ್ದು, ಹಿಂದುಗಳ ಪ್ರತಿಯೊಂದು ಆಚರಣೆ ಲೋಕಕ್ಕೆ ಉತ್ತಮ ಸಂದೇಶವನ್ನು ನೀಡುತ್ತವೆ. ಬೇವು ಬೆಲ್ಲದಂತೆ ಕಷ್ಟ ಸುಖಗಳೆಲ್ಲ ಜೀವನದಲ್ಲಿ ಸಹಜ ಎಂದು ಸಾರುವ ಹಿಂದುಗಳ ಹೊಸ ವರ್ಷ ಅರ್ಥಪೂರ್ಣವಾದುದು ಬೊಬ್ರವಾಡದಲ್ಲಿ ಪ್ರತಿ ವರ್ಷ ದೇವರ ಪೂಜೆಯ ಜೊತೆಗೆ ಭಾರತ ಮಾತೆಯ ಪೂಜೆ ನಡೆಸಿ ಯುಗಾದಿಯನ್ನು ಸ್ವಾಗತಿಸುವುದು ಅತ್ಯುತ್ತಮ ವಿಚಾರ ಎಂದರು.



ಬೊಬ್ರದೇವಾಲಯದಿಂದ ಜೈ ಶ್ರೀರಾಮ್, ಭಾರತ್ ಮಾತಾ ಕಿ ಜೈ ಘೋಷಣೆ ಕೂಗುತ್ತ ಬೈಕ್ ರ್‍ಯಾಲಿ ಹೊರಟು ಪಟ್ಟಣದ ವಿವಿಧ ಭಾಗಗಳಲ್ಲಿ ಸಂಚರಿಸಿ ಕನಸೆಗದ್ದೆ, ಬೇಲಾ ಬಂದರ್, ಶೇಡಿಕುಳಿ ಮಾರ್ಗವಾಗಿ ಬಂದು ಬೊಬ್ರ ದೇವಾಲಯದ ಬಳಿ ಕೊನೆಗೊಳಿಸಲಾಯಿತು.

ರೂಪಾಲಿ ನಾಯ್ಕ, ಯುವ ಮುಖಂಡ ಪರ್ಬತ್ ನಾಯ್ಕ, ಉತ್ಸವ ಸಮಿತಿಯ ಅಧ್ಯಕ್ಷ ಚಂದ್ರಕಾಂತ ನಾಯ್ಕ, ಪ್ರಮುಖರುಗಳಾದ ಭಾಸ್ಕರ ನಾರ್ವೇಕರ, ಸಂಜಯ ನಾಯ್ಕ, ರಾಜೇಂದ್ರ ನಾಯ್ಕ, ಜಗದೀಶ ನಾಯಕ ಮೊಗಟ, ಜಯಾ ನಾಯ್ಕ, ಸೂರಜ ನಾಯ್ಕ, ಮಂಕಾಳ ಗೌಡ, ಶ್ರೀಧರ ನಾಯ್ಕ, ಬಾಲಕೃಷ್ಣ ನಾಯ್ಕ, ದಾಮೋದರ ರಾಯ್ಕರ್, ನಾಗರಾಜ ನಾಯ್ಕ ಮೊದಲಾದವರು ಉಪಸ್ಥಿತರಿದ್ದರು.

ಯುಗಾದಿ ಹಬ್ಬ: ಬೃಹತ್ ಬೈಕ್ ರ್‍ಯಾಲಿ

ಮುಂಡಗೋಡ: ಯುಗಾದಿ ಹಬ್ಬದ ಪ್ರಯುಕ್ತ ಹಿಂದೂ ಜಾಗರಣೆ ವೇದಿಕೆಯ ವತಿಯಿಂದ ಪಟ್ಟಣದಲ್ಲಿ ಗುರುವಾರ ಬೃಹತ್ ಬೈಕ್ ರ್‍ಯಾಲಿ ನಡೆಯಿತು.

ಪಟ್ಟಣದ ಸಾಯಿ ಮಂದಿರದಿಂದ ಆರಂಭವಾದ ಬೈಕ್ ರ್‍ಯಾಲಿಯೂ ಲಮಾಣಿ ತಾಂಡ, ಶಿವಾಜಿ ಸರ್ಕಲ್ ಅಂಬೇಡ್ಕರ್ ನಗರ ಮಾರ್ಗವಾಗಿ ಹಳೂರಿನ ಓಣಿ, ಕಲಾಲ ಓಣಿ, ಆನಂದ ನಗರ, ಇಂದಿರಾ ನಗರ, ಗಾಂಧಿನಗರ ಕಂಬಾರಗಟ್ಟಿ, ಬಸವನ ಬೀದಿ ಮಾರ್ಗ ಮೂಲಕ ಬಸವೇಶ್ವರ ದೇವಸ್ಥಾನದವರೆಗೂ ಬೈಕ್ ರ್‍ಯಾಲಿ ನಡೆಯಿತು.

ಹಿಂದೂ ಜಾಗರಣೆ ವೇದಿಕೆಯ ತಾಲೂಕು ಅಧ್ಯಕ್ಷ ಪ್ರಕಾಶ ಬಡಿಗೇರ, ಪ್ರಮುಖರಾದ ವಿಶ್ವನಾಥ ನಾಯರ, ಶಂಕರ ಲಮಾಣಿ, ಮಂಜುನಾಥ ಎಚ್, ಫಣಿರಾಜ ಹದಳಗಿ, ಮಂಜುನಾಥ ಪಾಟೀಲ, ವಿನಾಯಕ ರಾಯ್ಕರ, ವಿಠಲ ಬಾಳಂಬೀಡ, ರಾಘವೇಂದ್ರ ಶಿರಾಲಿ, ಸುರೇಶ ಕಲ್ಲೊಳ್ಳಿ, ಶೇಖರ ಲಮಾಣಿ, ಮಲ್ಲಿಕಾರ್ಜುನ ಗೌಳಿ, ಕುಮಾರ ತಳವಾರ, ರವಿ ನಾಯಕ ಸೇರಿದಂತೆ ನೂರಾರು ಹಿಂದೂ ಯುವಕರು ಬೈಕ್ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ರ್‍ಯಾಲಿ ಪ್ರಯುಕ್ತ ಸಿಪಿಐ ರಂಗನಾಥ ನೀಲಮ್ಮನವರ ಮತ್ತು ಪಿಎಸೈ ಮಂಜುನಾಥ ಗೌಡರ ನೇತೃತ್ವದಲ್ಲಿ ಬೀಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.



ಸಂಸ್ಕೃತಿ ಅಳವಡಿಕೆಯಿಂದ ಸನಾತನ ಪರಂಪರೆ ಉಳಿವು

ಕುಮಟಾ: ಭಾರತೀಯ ಸಂಸ್ಕೃತಿಯನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸನಾತನ ಪರಂಪರೆ ಉಳಿಯಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಧರ್ಮ ಮಾರ್ಗದಲ್ಲಿ ನಡೆಯುವ ಸಂಕಲ್ಪ ಕೈಗೊಳ್ಳಬೇಕು ಎಂದು ಗದಗದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಪೂಜ್ಯ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಅವರು ಯುಗಾದಿ ಉತ್ಸವ ಸಮಿತಿ ವತಿಯಿಂದ ಕುಮಟಾ ಪಟ್ಟಣದ ಮಣಕಿ ಮೈದಾನದಲ್ಲಿ ಆಯೋಜಿಸಲಾಗಿದ್ದ 18ನೇ ವರ್ಷದ ಯುಗಾದಿ ಉತ್ಸವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸನಾತನ ಹಿಂದೂ ಧರ್ಮವು ವಿಶ್ವದಾದ್ಯಂತ ಗೌರವಿಸಲ್ಪಡುತ್ತಿರುವ ಧರ್ಮವಾಗಿದೆ. ನಮ್ಮ ಸಂಸ್ಕೃತಿ, ಸಂಸ್ಕಾರಗಳು ಇಡೀ ಜಗತ್ತಿಗೆ ದಾರಿದೀಪವಾಗಿದ್ದು, ಅನೇಕ ವಿದೇಶಿಗರೂ ಹಿಂದು ಪರಂಪರೆಯನ್ನು ಮೆಚ್ಚಿ ಅನುಸರಿಸುತ್ತಿರುವುದು ನಮ್ಮ ಪರಂಪರೆಯ ಮಹತ್ವವನ್ನು ಸಾಬೀತುಪಡಿಸುತ್ತದೆ ಎಂದು ಹೇಳಿದರು.

ಯುಗಾದಿ ಉತ್ಸವ ಸಮಿತಿಯ ಆನಂದ ವೈ. ನಾಯಕ ಅವರು, ಈ ವರ್ಷ 18ನೇ ವರ್ಷದ ಕಾರ್ಯಕ್ರಮವನ್ನು ಎಲ್ಲರ ಸಹಕಾರದಿಂದ, ಶ್ರೀಗಳ ಆಶೀರ್ವಾದದೊಂದಿಗೆ ಯಶಸ್ವಿಯಾಗಿ ನಡೆಸಲಾಗುತ್ತಿದೆ ಎಂದರು. ಕಾರ್ಯಕ್ರಮ ಯಶಸ್ವಿಗೆ ಸಹಕರಿಸಿದ ಎಲ್ಲಾ ದಾನಿಗಳು, ಸದಸ್ಯರು ಮತ್ತು ಸಾರ್ವಜನಿಕರಿಗೆ ಅವರು ಕೃತಜ್ಞತೆ ಸಲ್ಲಿಸಿದರು.

ದೇಶ ಸೇವೆಯಲ್ಲಿ ತೊಡಗಿರುವ ಮಹಿಳಾ ಸೈನಿಕರಾದ ಕಲಾವತಿ ಎನ್. ಪಟಗಾರ ಹಾಗೂ ಹಿರಿಯ ಉಪನ್ಯಾಸಕ ರವೀಂದ್ರ ನಾಯ್ಕ ಅವರಿಗೆ ''ಯುಗಾದಿ ಸನ್ಮಾನ'' ನೀಡಿ ಗೌರವಿಸಲಾಯಿತು. ಜೊತೆಗೆ ಮಾತಾ-ಪಿತೃ ಪೂಜೆ ನಡೆಸಿ ಪೋಷಕರಿಗೆ ಗೌರವ ಸಲ್ಲಿಸುವ ವಿಶಿಷ್ಟ ಕಾರ್ಯಕ್ರಮವೂ ನಡೆಯಿತು.



ಆರಂಭದಲ್ಲಿ ಯುಗಾದಿ ಉತ್ಸವ ಸಮಿತಿ ಕಾರ್ಯಾಧ್ಯಕ್ಷ ಗಜಾನನ ಮಡಿವಾಳ ಅವರು ಸ್ವಾಗತಿಸಿದರು. ಖಜಾಂಚಿ ಜಿ. ಎಸ್. ಹೆಗಡೆ ವಂದಿಸಿದರು. ಸಮಿತಿ ಅಧ್ಯಕ್ಷ ಡಾ. ಸುರೇಶ್ ಹೆಗಡೆ, ಗೌರವಾಧ್ಯಕ್ಷ ಎಸ್. ಜಿ. ನಾಯ್ಕ, ಸಂಚಾಲಕ ಮುರಳೀಧರ ಪ್ರಭು ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂತ್ಯದಲ್ಲಿ ಕೊಂಕಣ ಎಜ್ಯುಕೇಶನ್ ಟ್ರಸ್ಟ್‌ನ ವಿದ್ಯಾರ್ಥಿಗಳಿಂದ ನಡೆದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರನ್ನು ರಂಜಿಸಿದವು. ಯುಗಾದಿ ಉತ್ಸವವು ಧಾರ್ಮಿಕತೆ, ಸಂಸ್ಕೃತಿ ಮತ್ತು ಸಾಮಾಜಿಕ ಮೌಲ್ಯಗಳ ಸಂಯೋಜನೆಯಾಗಿ ಯಶಸ್ವಿಯಾಗಿ ನೆರವೇರಿತು.

ಕಿರುಸುದ್ದಿ

ಪಿಎಚ್‌ಡಿ ಪ್ರದಾನ



◆**ಹಾವೇರಿ:** ಜಿಲ್ಲೆಯ ಹಾನಗಲ್ಲ ತಾಲೂಕಿನ ಕರೆಕ್ಯಾತನಹಳ್ಳಿ ಜಾನಮಟ್ಟಿ ತಾಂಡಾ ನಿವಾಸಿ, ಉಪನ್ಯಾಸಕ ಪುನೀತಕುಮಾರ ನಾಯಕ ಅವರಿಗೆ ಮಂಗಳೂರು ವಿಶ್ವವಿದ್ಯಾಲಯ ಪಿಎಚ್‌ಡಿ ಪ್ರದಾನ ಮಾಡಿ ಗೌರವಿಸಿದೆ.

ಪುನೀತಕುಮಾರ ನಾಯಕ ಅವರು 'ಯುವಕರಲ್ಲಿ ಮಾನಸಿಕ ರೋಗನಿರೋಧಕ ಬದಲಾವಣೆಗಳ ಮೇಲೆ ಯೋಗಾಭ್ಯಾಸಗಳ ಪ್ರಭಾವ: ತುಲನಾತ್ಮಕ ಅಧ್ಯಯನ' ಎಂಬ ಶೀರ್ಷಿಕೆಯಡಿ ಸಲ್ಲಿಸಿದ ಮಹಾಪ್ರಬಂಧಕ್ಕಾಗಿ ಮಂಗಳೂರು ವಿಶ್ವವಿದ್ಯಾಲಯವು ಯೋಗ ವಿಜ್ಞಾನದಲ್ಲಿ ಪಿಎಚ್‌ಡಿ ಪದವಿ ನೀಡಿದೆ. ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಕೆ. ಕೃಷ್ಣ ಶರ್ಮಾ ಅವರು ಮಾರ್ಗದರ್ಶನ ನೀಡಿದ್ದರು.

ವಿದ್ಯುತ್ ವ್ಯತ್ಯಯ ನಾಳೆ

◆**ಹಾವೇರಿ:** ಶಿಗ್ಗಾಂವ 110/11 ಕೆವಿ ಹುಲಗೂರು/ಬಂಕಾಪುರ 33/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ವಿದ್ಯುತ್ ನಿರ್ವಹಣಾ ಕಾಮಗಾರಿ ಇರುವುದರಿಂದ ಮಾರ್ಚ್ 22ರಂದು ವಿದ್ಯುತ್ ವ್ಯತ್ಯಯವಾಗಲಿದೆ. ಈ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆ.ವಿ., 33 ಕೆವಿ ಶಿಗ್ಗಾಂವ/ಬಂಕಾಪುರ/ಹುಲಗೂರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಕೆಪಿ ಮಾರ್ಗಗಳು ಹಾಗೂ 33 ಕೆವಿ ಅಂಬುಜಾ ಮಾರ್ಗಗಳಲ್ಲ, ಬಂಕಾಪುರ ಶಹರ, ಹುಲಗೂರು ಶಹರ ಹಾಗೂ ಎಲ್ಲಾ ಗ್ರಾಮಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಆದ್ದರಿಂದ ಈ ವಿದ್ಯುತ್ ವಿತರಣಾ ಕೇಂದ್ರಗಳ ವ್ಯಾಪ್ತಿಗೆ ಬರುವ ಶಿಗ್ಗಾಂವ ತಾಲ್ಲೂಕಿನ ಶಹರ ಹಾಗೂ ಸುತ್ತಾ ಮುತ್ತಲಿನ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಶಿಗ್ಗಾಂವ ಹೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ

◆**ಹಾವೇರಿ:** ತಾಲೂಕಿನ ಸುಕ್ಷೇತ್ರ ಹನುಮನಹಳ್ಳಿ ಹಾಲಸ್ವಾಮಿ ಮಠದಲ್ಲಿ ಸದ್ಗುರು ಶ್ರೀ ಹಾಲಶಿವಯೋಗಿಗಳವರ ಮುಳ್ಳುಗದ್ದುಗೆ ಜಾತ್ರಾ ಮಹೋತ್ಸವ ನಿಮಿತ್ತ ಮಾ.21ರಿಂದ ಮಾ.24ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.ಮಾ.21ರಂದು ಬೆಳಗ್ಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ರಾತ್ರಿ 10ಕ್ಕೆ ಡೊಳ್ಳು ವಾದ್ಯ, ಹಲಗೆ, ಜಾಂಝ್ ಸೇರಿದಂತೆ ಸಕಲ ವಾದ್ಯ ವೈಭವಗಳೊಂದಿಗೆ ಶ್ರೀ ಹಾಲಶಿವಯೋಗಿಗಳವರ ಪರಂಪರೆಯ ಮುಳ್ಳುಗದ್ದುಗೆ ಉತ್ಸವದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜರುಗಲಿದೆ. ಮಾ.22ರಂದು ಸಂಜೆ 5ಕ್ಕೆ ನಿಶಾನೆ ಹರಾಜು ಹಾಗೂ ಹಾಲಶಿವಯೋಗಿಗಳವರ ಮಹಾ ರಥೋತ್ಸವವು ನಡೆಯಲಿದೆ. ನಂತರ ಗ್ರಾಮದ ಯುವಕರಿಂದ ಗ್ರಾಮೀಣ ಕ್ರೀಡೆಗಳು ಜರುಗಲಿವೆ.ಮಾ.23ರಂದು ಬ್ರಾಹ್ಮಿ ಮುಹೂರ್ತದಲ್ಲಿ ಗಂಜಿಗಟ್ಟಿ ಚರಮೂರ್ತೇಶ್ವರಮಠದ ಶಿವಲಿಂಗೇಶ್ವರ ಶಿವಾಚಾರ್ಯರ ಸಾನಿಧ್ಯದಲ್ಲಿ ಶಿವದೀಕ್ಷಾ ಮತ್ತು ಜವಳ ಕಾರ್ಯಕ್ರಮ ಜರುಗಲಿದೆ. ದಿಂಡದಹಳ್ಳಿ ಪಶುಪತಿ ಶಿವಾಚಾರ್ಯ ಸ್ವಾಮೀಜಿ, ಕುರವತ್ತಿಯ ಸಿದ್ಧನಂದೀಶ್ವರ ಶಿವಾಚಾರ್ಯರು, ಆಗಡಿ ಅಕ್ಕಿಮಠದ ಗುರುಲಿಂಗ ಸ್ವಾಮೀಜಿ, ಪ್ರಭುಸ್ವಾಮಿ ಮಠದ ಗುರುಸಿದ್ಧ ಸ್ವಾಮೀಜಿ ಹಾಗೂ ಹಾಲಸ್ವಾಮಿ ಶಾಖಾಮಠಗಳ ಸರ್ವ ಪೂಜ್ಯರ ಸಮ್ಮುಖದಲ್ಲಿ ಸಾಮೂಹಿಕ ವಿವಾಹ ಹಾಗೂ ಧರ್ಮಸಭೆ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ ಅಡ್ಡಪಲ್ಲಕ್ಕಿ ಉತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಶ್ರೀಮಠದ ಪೂಜ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾವೇರಿ: ತಾಲೂಕಿನ ಹಳೇರಿತ್ತಿ ಗ್ರಾಮದ ಶ್ರೀ ಆಂಜನೇಯ ದೇವಸ್ಥಾನದ ರಥೋತ್ಸವ ಯುಗಾದಿಯ ಅಂಗವಾಗಿ ಅತ್ಯಂತ ಸಂಭ್ರಮ ಸಡಗರದಿಂದ ನಡೆಯಿತು.ಎರಡು ದಿನಗಳ ಕಾಲ ನಡೆದ ಜಾತ್ರಾ ಮಹೋತ್ಸವದಲ್ಲಿ ಹಳೇರಿತ್ತಿ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳ ನೂರಾರು ಗ್ರಾಮಸ್ಥರು ಪಾಲ್ಗೊಂಡಿದ್ದರು.



ಹಾವೇರಿ: ತಾಲೂಕಿನ ಬಮ್ಮನಕಟ್ಟಿ ಗ್ರಾಮದಲ್ಲಿ ಗುರುವಾರದಂದು ಮಾರುತಿ ದೇವರ ರಥೋತ್ಸವ ಅದ್ದೂರಿಯಾಗಿ ನಡೆಯಿತು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

◆**ಹಾವೇರಿ:** ಇಲ್ಲಿಯ ಶಿವಾಜಿ ನಗರದ ಮೂರನೇ ಕ್ರಾಸ್‌ನಲ್ಲಿ ಮಹಿಳಾ ಶಕ್ತಿ ಸದನದಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಸಮಾರಂಭವನ್ನು ಜಿಲ್ಲಾ ಕಾನೂನು ಸೇವಾ ಕೇಂದ್ರದ ನ್ಯಾಯಾಧೀಶರಾದ ಶೈಲಜಾ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ಅನೇಕ ಸಂಕಷ್ಟಗಳನ್ನು ಎದುರಿಸುವಾಗ ನಗರದ ಇಡಾರಿ ಸಂಸ್ಥೆಯ ಆಶ್ರಯದಲ್ಲಿ ಮಾರ್ಗದರ್ಶನ ಪಡೆದು ಸಮಾಜದಲ್ಲಿ ಹೊಸ ಬದುಕನ್ನು ನಡೆಸುತ್ತಿರುವುದು ಅಭಿನಂದನೀಯ. ಶಿಕ್ಷಣ ಮತ್ತು ಕಾನೂನು ಮಾತ್ರ ಮಹಿಳೆಯರನ್ನು ಕಾಪಾಡಬಲ್ಲವು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಡಾ.ಮಹಾದೇವಿ ಕಣವಿ ಮಾತನಾಡಿ, ಅನೇಕ ಕಾನೂನಾತ್ಮಕ ರಕ್ಷಣೆಗಳು ಇದ್ದಾಗಲು ಎಷ್ಟೋಸಲ ಅವುಗಳ ಅರಿವು ಇಲ್ಲದೆ ಅನೇಕ ಮಹಿಳೆಯರು ವಿಶೇಷವಾಗಿ ಶಿಕ್ಷಿತರೂ ಕೂಡ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಎಲ್ಲ ಜ್ಞಾನಗಳ ಜೊತೆಗೆ ಲೋಕಜ್ಞಾನವು ಇಂದಿನ ಅಗತ್ಯವಾಗಿದೆ ಎಂದರು.

ಅಲ್ಪಸಂಖ್ಯಾತರ ಆಯೋಗದ ಸದಸ್ಯೆ ಪರಿಮಳಾ ಜೈನ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಎಂಥದೇ ಸಮಸ್ಯೆಗಳು ಬಂದಾಗಲೂ ಕೂಡ ನಮ್ಮ ಇಡಾರಿ ಸಂಸ್ಥೆಯ ಶಕ್ತಿ ಸದನ ಸದಾ ಸಹಾಯ ಹಸ್ತ ಚಾಚುತ್ತದೆಂದು ಹೇಳಿ, ಬದುಕುವ ಕೌಶಲ್ಯವನ್ನು ಕಲಿಸಿಕೊಡುತ್ತದೆಂದು ಹೇಳಿದರು. ಸಮಾರಂಭವನ್ನು ಉದ್ದೇಶಿಸಿ ಶಾಲಿನಿ ಕಮ್ಮಾರ, ಲೇಖಕಿ ಜುಬೇದಾ ನಾಯಕ, ಅಕ್ಕಮಹಾದೇವಿ ನೀರಲಗಿ, ಕಲಾವಿದೆ ಶಶಿಕಲಾ ಅಕ್ಕಿ ಮುಂತಾದವರು ಮಾತನಾಡಿದರು. ಹಾಲಮ್ಮ, ಶೈಲಜಾ ಎ.ಎನ್, ಭಾರತಿ ಯಾವಗಲ್ ಮುಂತಾದವರು ಕಾರ್ಯಕ್ರಮ ನಡೆಸಿಕೊಟ್ಟರು.



ಹಾವೇರಿ: ಇಲ್ಲಿಯ ಶಿವಾಜಿ ನಗರದ ಮೂರನೇ ಕ್ರಾಸ್‌ನಲ್ಲಿ ಮಹಿಳಾ ಶಕ್ತಿ ಸದನದಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾ ಕಾನೂನು ಸೇವಾ ಕೇಂದ್ರದ ನ್ಯಾಯಾಧೀಶರಾದ ಶೈಲಜಾ, ಡಾ.ಮಹಾದೇವಿ ಕಣವಿ ಇತರರು ಇದ್ದರು.

ಹಾವೇರಿ ವಿವಿ ಪತ್ರಿಕೋದ್ಯಮ ವಿಭಾಗಕ್ಕೆ ವಿವಿಧ ಪ್ರಶಸ್ತಿ ಗರಿ

◆**ಹಾವೇರಿ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗಾಗಿ ಧಾರವಾಡದ ಕರ್ನಾಟಕ ವಿವಿಯ ಪತ್ರಿಕೋದ್ಯಮ ವಿಭಾಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಾಧ್ಯಮ ಹಬ್ಬ ಸ್ಪರ್ಧೆಯಲ್ಲಿ ಹಾವೇರಿ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿದ್ಯಾರ್ಥಿಗಳು ಸ್ಪರ್ಧಿಸಿ ವಿವಿಧ ಬಹುಮಾನ ಹಾಗೂ ಪ್ರಶಸ್ತಿ ಗಳಿಸಿ, ಹಾವೇರಿ ವಿವಿಗೆ ಕೀರ್ತಿ ತಂದಿದ್ದಾರೆ.



ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಕನಕ ಅಧ್ಯಯನ ಪೀಠದ ಸಭಾಂಗಣದದಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗಾಗಿ ಎರಡು ದಿನಗಳ ಕಾಲ ನಡೆದ ಮಾಧ್ಯಮ ಹಬ್ಬ ಸ್ಪರ್ಧೆಯಲ್ಲಿ ಹಾವೇರಿ ವಿವಿಯ ಪತ್ರಿಕೋದ್ಯಮ ವಿದ್ಯಾರ್ಥಿಗಳಾದ ರುದ್ರಮುನಿಸ್ವಾಮಿ ಹಿರೇಮಠ ರೇಡಿಯೋ ಜಾಕಿ ಪ್ರಥಮ ಸ್ಥಾನ, ಲಕ್ಷ್ಮೀ ಎಸ್.ಬಿ. ವಾಕ್ ಥ್ರೂ ಮತ್ತು ಪಿಟುಸಿಯಲ್ಲಿ ಪ್ರಥಮ ಸ್ಥಾನ, ಸಂದೀಪ ಎಸ್. ಎಂ. ಮೊಜೋ ಮೊಬೈಲ್ ಜರ್ನಲಿಸಂ ಎರಡನೇ ಸ್ಥಾನ, ಪರಶುರಾಮ ಡೊಗನವರ ಸ್ಕ್ರಿಪ್ಟ್ ಬರವಣಿಗೆಯಲ್ಲಿ ಎರಡನೇ ಸ್ಥಾನ, ದರ್ಶನ್ ಕಾಲ್ವಿಹಳ್ಳಿ ವಾಕ್ ಥ್ರೂ ಮತ್ತು ಪಿಟುಸಿಯಲ್ಲಿ ಮೂರನೇ ಸ್ಥಾನವನ್ನು ಪಡೆದು ಪತ್ರಿಕೋಧ್ಯಮ ವಿಭಾಗಕ್ಕೆ ಮತ್ತು ಹಾವೇರಿ ವಿಶ್ವವಿದ್ಯಾಲಯಕ್ಕೆ ಕೀರ್ತಿಯನ್ನು ತಂದಿದ್ದಾರೆ.

ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಪ್ರಮಾಣ ಪತ್ರ, ಪಾರಿತೋಷಕವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಗುರುನಾಥ ಕಡಬೂರ ನೀಡಿದರು. ಕರ್ನಾಟಕ ವಿಶ್ವವಿದ್ಯಾಲಯ ಕುಲಸಚಿವ ಡಾ.ಶಂಕರಪ್ಪ ವಣಿಕ್ಯಾಳ, ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಎ.ಎಸ್. ಬಾಲಸುಬ್ರಹ್ಮಣ್ಯ, ಹಿರಿಯ ಪತ್ರಕರ್ತರಾದ ಬಂಡು ಕುಲಕರ್ಣಿ, ಮಲ್ಲಿಕಾರ್ಜುನ ಸಿದ್ದಣ್ಣವರ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಸಂಜಯಕುಮಾರ್ ಮಾಲಗತ್ತಿ ಹಾಗೂ ಡಾ.ಚಿದಾನಂದ ಕಮ್ಮಾರ ಉಪಸ್ಥಿತರಿದ್ದರು. ಕಾಂತೇಶ ಹಳ್ಳೇರ್, ಶರಣಪ್ಪ ಎಂ, ಹಾಗೂ ಶಶಾಂಕ ಭೋಗಾವಿ, ಪರಶುರಾಮ ಸಣ್ಣಹನುಮಣ್ಣನವರ, ಶಂಭುಲಿಂಗ ಸವದತ್ತಿ, ಪ್ರವೀಣ ಮಟ್ಟೇರ ಭಾಗವಹಿಸಿದ್ದರು. ಈ ಮಕ್ಕಳ ಸಾಧನೆಗೆ ಹಾವೇರಿ ವಿವಿ ಕುಲಪತಿ ಪ್ರೊ.ಸುರೇಶ ಜಂಗಮಶೆಟ್ಟಿ, ರಜಿಸ್ಟ್ರಾರ್‌ಗಳು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಡಾ.ರವೀಂದ್ರಕುಮಾರ ಬಣಕಾರ, ವಿವಿಧ ವಿಭಾಗಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಸಂತಸ ವ್ಯಕ್ತಪಡಿಸಿದ್ದಾರೆ.

ಸಂಭ್ರಮದ ಯುಗಾದಿ ಹಬ್ಬ ಆಚರಣೆ

◆**ಹಾವೇರಿ:** ವರ್ಷದ ಮೊದಲ ಹಬ್ಬವಾದ ಯುಗಾದಿ ದಿನದಂದು ರೈತರು ಭೂತಾಯಿಗೆ ವಿಶೇಷ ಪೂಜೆ ಸಲ್ಲಿಸಿ, ತಮ್ಮ ಹೊಲಗಳಲ್ಲಿ ನೇಗಿಲು ಹೊಡೆಯುವ ಮೂಲಕ ಈ ವರ್ಷ ಕೃಷಿ ಚಟುವಟಿಕೆಗಳಿಗೆ ಚಾಲನೆ ನೀಡಿ, ಭೂತಾಯಿಗೆ ನಮಿಸಿ, ಹಿಂದೂಗಳ ಹೊಸವರ್ಷವನ್ನು ಸ್ವಾಗತಿಸಿದರು.

ಗುರುವಾರ ಬೆಳಗ್ಗೆ ರೈತರು ತಮ್ಮ ಸಂಗಾತಿಗಳಾದ ಎತ್ತುಗಳು ಸೇರಿದಂತೆ ಎಲ್ಲ ಜಾನುವಾರುಗಳ ಮೈತೊಳೆದು ಪೂಜೆ ಸಲ್ಲಿಸಿ ಅಲಂಕರಿಸಿ, ಬಳಿಕ ತಮ್ಮ ಜಮೀನುಗಳಲ್ಲಿ ನೇಗಿಲು ಹೊಡೆಯುವ ಮೂಲಕ ಕೃಷಿ ಚಟುವಟಿಕೆಗಳನ್ನು ಆರಂಭಿಸಿ ಈ ವರ್ಷವಾದರೂ ಉತ್ತಮ ಮಳೆ, ಬೆಳೆಯಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದರು.

ಯುಗಾದಿ ಹಬ್ಬದ ನಿಮಿತ್ತ ನಗರ, ಗ್ರಾಮೀಣ ಪ್ರದೇಶದ ಎಲ್ಲರ ಮನೆಗಳನ್ನು ಹೊಸದಾಗಿ ಸುಣ್ಣಬಣ್ಣಗಳಿಂದ ಅಲಂಕೃತವಾಗಿದ್ದು, ಹಬ್ಬದ ಹಿನ್ನೆಲೆ ಮನೆಗಳು ತಳಿರು ತೋರಣಗಳಿಂದ ಶೃಂಗಾರಗೊಂಡಿದ್ದವು. ಹೊಸ ವರ್ಷದ ಮೊದಲ ದಿನ ತಮ್ಮ ಹೊಲಗಳಲ್ಲಿ ಉಳುಮೆ ಕಾರ್ಯ ಮಾಡಿದರೆ ವರ್ಷಪೂರ್ತಿ ಉತ್ತಮವಾದ ಮಳೆ ಬೆಳೆ ಬರುತ್ತದೆ ಎಂಬ ನಂಬಿಕೆಯಿಂದ ಜಿಲ್ಲೆಯಾದ್ಯಂತ ರೈತರು ಹೊಸ ಬಟ್ಟೆ ಧರಿಸಿ ಗ್ರಾಮದ ಪ್ರಮುಖ ದೇವಸ್ಥಾನಗಳಿಗೆ ತೆರಳಿ ಆಶೀರ್ವಾದ ಪಡೆದು ಬಳಿಕ ಹೊಲಗಳಿಗೆ ತೆರಳಿ ಹಣ್ಣುಕಾಯಿ ಅರ್ಪಿಸಿ ಪೂಜೆ ಸಲ್ಲಿಸಿ ನೇಗಿಲು ಹೊಡೆದರು.

ಸಂಭ್ರಮದ ಪುರಸಿದ್ಧೇಶ್ವರ ರಥೋತ್ಸವ: ಯುಗಾದಿ ಹಬ್ಬದ ನಿಮಿತ್ತವಾಗಿ ನಗರದ ಪುರಸಿದ್ದೇಶ್ವರ ರಥೋತ್ಸವ ಗುರುವಾರ ಸಂಜೆ ಸಂಭ್ರಮದಿಂದ ನಡೆಯಿತು. ವಿವಿಧ ಹೂವಿನ ಮಾಲೆ, ಝಗಮಗಿಸುವ ವಿದ್ಯುತ್ ದೀಪಗಳಿಂದ ಅಲಂಕೃತ ರಥದಲ್ಲಿ ಪುರಸಿದ್ದೇಶ್ವರ ದೇವರ ಮೂರ್ತಿ ಪ್ರತಿಷ್ಠಾಪಿಸಿ ವಿವಿಧ ಜೈಘೋಷದೊಂದಿಗೆ ರಥೋತ್ಸವ ನಡೆಯಿತು. ಪುರಸಿದ್ದೇಶ್ವರ ದೇವಸ್ಥಾನದ ಬಳಿ ಹುಕ್ಕೇರಿಮಠದ ಸದಾಶಿವ ಶ್ರೀಗಳು ರಥೋತ್ಸವಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಾವಿರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.



ಮಾ.23ರಂದು ಗ್ರಾಹಕರ ಸಂವಾದ ಸಭೆ

◆**ಹಾವೇರಿ:** ಗ್ರಾಹಕರ ಸಂವಾದ ಸಭೆ ಮಾರ್ಚ್ 23ರಂದು ಮಧ್ಯಾಹ್ನ 3 ಗಂಟೆಯಿಂದ ಸಾಯಂಕಾಲ 5.30ರವರೆಗೆ ಹಾವೇರಿ ಹೆಸ್ಕಾಂನ ಕಾರ್ಯ ಮತ್ತು ಪಾಲನಾ ವಿಭಾಗದ ಕಚೇರಿಯಲ್ಲಿ ಆಯೋಜಿಸಲಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಭೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹಾವೇರಿ ಹೆಸ್ಕಾಂನ ಕಾರ್ಯ ಮತ್ತು ಪಾಲನಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

ಅಧಿಕಾರಿಗಳಿಂದ ಮಾವಿನತೋಟ ಪರಿಶೀಲನೆ

◆**ಹಾನಗಲ್:** ತಾಲೂಕಿನಲ್ಲಿ ಮಾವು ಬೆಳೆಯ ನೆನೆ ಉದುರಲು ಹವಾಮಾನದಲ್ಲಿನ ಬದಲಾವಣೆಯೇ ಮುಖ್ಯ ಕಾರಣವಾಗಿದೆ ಎಂದು ಧಾರವಾಡ ಪ್ರಾದೇಶಿಕ ತೋಟಗಾರಿಕೆ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕ ಡಾ. ಜೆ.ಬಿ. ಗೋಪಾಲಿ ತಿಳಿಸಿದರು.

ತಾಲೂಕಿನ ನಾಲ್ಕನೇ ಕ್ರಾಸ್ ಬಳಿಯ ವಂಶಿ ಫಾರ್ಮ್ ಹೌಸ್‌ನಲ್ಲಿ ಬುಧವಾರ ಮಾವು ಬೆಳೆಗಾರರೊಂದಿಗೆ ಮಾವಿನತೋಟ ಪರಿಶೀಲಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಐದು ಸಾವಿರಕ್ಕೂ ಹೆಚ್ಚು ಹೆಕ್ಟರ್ ಪ್ರದೇಶದಲ್ಲಿ ಮಾವು ಬೆಳೆದಿದ್ದು, ಪ್ರಸ್ತುತ ವರ್ಷದಲ್ಲಿ ಮಾವಿನ ಇಳುವರಿ ಹೆಚ್ಚಿಗೆಯಾಗಿ ಹೂವಿನ ಪ್ರಮಾಣ ಹೆಚ್ಚಿದ್ದರು ಇಳುವರಿಯಲ್ಲಿ ಕಡಿಮೆ ಇರುವುದು ಕಂಡು ಬಂದಿದೆ.ಇದಕ್ಕೆ ಹವಾಮಾನ ಬದಲಾವಣೆಯೇ ಮಾರಕವಾಗಿದೆ ಎಂದು ಅವರು ತಿಳಿಸಿದರು.

ಹವಾಮಾನಕ್ಕೆ ತಕ್ಕಹಾಗೆ ಮಾವಿನ ತೊಟಗಳ ನಿರ್ವಹಣೆ ಇಲ್ಲದಿರುವುದು ಬೆಳೆಗಳ ನಷ್ಟಕ್ಕೆ ಕಾರಣವಾಗಿದೆ ಮತ್ತು ಮಾವಿನ ತೋಟಗಳನ್ನ ದಲ್ಲಾಳಿಗಳ ಕೈಯಲ್ಲಿಕೊಡದೆ ಸ್ವತಃ ರೈತರೇ ನಿರ್ವಹಣೆ ಮಾಡುವುದರ ಜೊತೆಗೆ ಸರಿಯಾದ ಸಮಯಕ್ಕೆ ತೊಟಗಾರಿಕಾ ಇಲಾಖೆಯವರನ್ನ ಸಂಪರ್ಕಿಸಿ ಮಾಹಿತಿ ಪಡೆದು ತೋಟಗಳನ್ನ ಪೋಷಣೆ ಮಾಡಬೇಕು ಎಂದು ಅವರು ತಿಳಿಸಿದರು.

ಇದೇ ಸಮಯದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಮರಿಗೌಡ ಪಾಟೀಲ ಮಾತನಾಡಿ, ತಾಲೂಕಿನ ಮಾವು ರಾಷ್ಟ್ರ ಮತ್ತು ಅಂತಾರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿಯಾಗಿದ್ದು, ಪ್ರಸಕ್ತ ವರ್ಷ ಮಾವು ಬೆಳೆಗಾರರು ಸಂಕಷ್ಟದಲ್ಲಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ನಿಯೋಗ ನೇಮಿಸಿ ರೈತರ ನೆರವಿಗೆ ಆಗಮಿಸಿ ಮಾವು ಬೆಳೆಗಾರರಿಗೆ ಸೂಕ್ತ ಪರಿಹಾರ ವಿಮೆ ನೀಡಬೇಕು ಎಂದು ಆಗ್ರಹಿಸಿದರು.

ಈ ಸಮಯದಲ್ಲಿ ಧಾರವಾಡ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಹಣ್ಣು ವಿಭಾಗದ ಅಧಿಕಾರಿಗಳಾದ ಡಾ. ಅರುಣಕುಮಾರ ಕಾಂಬಳೆ, ದೇವಿಹೊಸೂರ ತೋಟಗಾರಿಕಾ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ರತ್ನಾಕರ ಶೇಟ್,ಸಹಾಯಕ ಪ್ರಾಧ್ಯಾಪಕ ಡಾ. ಎಂ. ವಿನಯಕುಮಾರ, ಹಾವೇರಿ ಜಿಲ್ಲಾ ತೋಟಗಾರಿಕಾ ಜಂಟಿ ನಿರ್ದೇಶಕ ಸಿದ್ದರಾಮಯ್ಯ, ತಾಲೂಕು ಹಿರಿಯ ಸಹಾಯಕ ನಿರ್ದೇಶಕ ವೀರಭದ್ರಯ್ಯ, ರೈತ ಮುಖಂಡರಾದ ಅಡಿವೆಪ್ಪ ಆಲದಕಟ್ಟಿ, ನಾಗನಗೌಡ ಪಾಟೀಲ, ಸೋಮಣ್ಣ ಜಡೆಗೊಂಡರ ಸೇರಿದಂತೆ ಹಲವರಿದ್ದರು.



ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವ

◆**ರಾಣೇಬೆನ್ನೂರ:** ಯುಗಾದಿ ಹಬ್ಬದ ಪ್ರಯುಕ್ತ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ತಾಲೂಕಿನ ಚೌಡಯ್ಯದಾನಪುರ ಗ್ರಾಮದಲ್ಲಿ ಸಹಸ್ರಾರು ಭಕ್ತರ ಮಧ್ಯೆ ಬಹು ವಿಜೃಂಭಣೆಯಿಂದ ಶುಕ್ರವಾರ ಸಂಜೆ ನೆರವೇರಿತು.

ಗ್ರಾಮದ ಒಡೆಯರ ಶ್ರೀ ಚಿತ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ರಥೋತ್ಸವವು ನಡೆಯಿತು. ಶ್ರೀ ಬಸವೇಶ್ವರ ದೇವಸ್ಥಾನದಿಂದ ಹೊರಟ ರಥೋತ್ಸವವು ಮುಕ್ತೇಶ್ವರ ದೇವಸ್ಥಾನದ ಬಳಿ ಇರುವ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಭಂದು ತಲುಪಿತು. ನಂತರ ಅಲ್ಲಿ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ನೆರವೇರಿದವು.

ಭಕ್ತರು ಹರಹರ ಮಹಾದೇವ ಎಂಬ ಘೋಷಣೆಯೊಂದಿಗೆ ತೇರನ್ನು ಎಳೆದರು. ಉತ್ತತ್ತಿ, ಬಾಳೆಹಣ್ಣನ್ನು ಎಸೆದು ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಂಡರು. ರಥೋತ್ಸವಕ್ಕೆ ಜಾಂಜ್ ಮೇಳ, ಡೊಳ್ಳು, ಸಮ್ಮಾಳ, ನಂದಿಕೋಲು ಕುಣಿತ ಸೇರಿದಂತೆ ಸಕಲ ವಾದ್ಯ ಮೇಳಗಳು ಮೆರಗು ತಂದವು.

ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ಭಕ್ತರು, ಮಹಿಳೆಯರು ಮಕ್ಕಳು ಸೇರಿದಂತೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.



20 ಲಕ್ಷ ರೂ. ವೆಚ್ಚದಲ್ಲಿ ಶಿಬಾರ ಜೀರ್ಣೋದ್ಧಾರಕ್ಕೆ ಚಾಲನೆ

◆**ಬ್ಯಾಡಗಿ:** ಪಟ್ಟಣದ ಕಾಕೋಳು ರಸ್ತೆಯಲ್ಲಿರುವ ಶ್ರೀ ಮಾಲತೇಶ ಶಿಬಾರದ ಜೀರ್ಣೋದ್ಧಾರಕ್ಕೆ ಶುಕ್ರವಾರದಂದು ಉಮೇಶ ಕರಿಗಾರ ಅವರು ಭೂಮಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.



ನಂತರ ಮಾತನಾಡಿದ ಅವರು, ಕಾಕೋಳು ರಸ್ತೆಯಲ್ಲಿರುವ ಮಾಲತೇಶನ ಶಿಬಾರವು ಅತಿ ಪುರಾತನವಾಗಿದ್ದು, ಸದರಿ ಶಿಬಾರಕ್ಕೆ ಬಹಳ ಪುರಾತನ ಇತಿಹಾಸವಿದೆ. ದೇವರ ಗುಡ್ಡಕ್ಕೆ ಹೋಗುವ ಎಲ್ಲಾ ಭಕ್ತಾದಿಗಳು ಮೊದಲು ಈ ಶಿಬಾರಕ್ಕೆ ಬಂದು ಪೂಜೆ ಸಲ್ಲಿಸಿ ಹೋಗುತ್ತಾರೆ. ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

ಇದೇ ವೇಳೆ ಸರ್ಕಾರದ ಗ್ಯಾರಂಟಿ ಯೋಜನೆಯ ರಾಜ್ಯ ಉಪಾಧ್ಯಕ್ಷ ಎಸ್.ಆರ್. ಪಾಟೀಲ ಮಾತನಾಡಿ, ಶಿಬಾರವು ಬಹಳ ಪುರಾತನವಾಗಿದ್ದು, ಇದರ ಪುನಃ ಚೇತನ ಹಾಗೂ ಜೀರ್ಣೋದ್ಧಾರ ಅತ್ಯವಶ್ಯ ಆಗಿದೆ. ಸದ್ಭಕ್ತರು ನೂತನ ಶಿಬಾರ ಕಟ್ಟಡ ಕಾರ್ಯವನ್ನು ಪ್ರಾರಂಭಿಸಲು ತಾವುಗಳು ಹೆಚ್ಚಿನ ಪ್ರಮಾಣದಲ್ಲಿ ದೇಣಿಗೆಯನ್ನು ನೀಡುವುದರ ಮೂಲಕ ಶಿಬಾರ ಕಟ್ಟಡ ಪೂರ್ಣಗೊಳಿಸಲು ಸಹಕರಿಸಿ ಶ್ರೀ ಮಾಲತೇಶ ದೇವರ ಕೃಪೆಗೆ ಪಾತ್ರರಾಗಲು ಸೂಚಿಸಿದರು.

ಕಾರ್ಯಕ್ರಮದಲ್ಲಿ ಬಿ.ಎಂ. ಚತ್ರದ. ಮಲ್ಲೇಶ್ ಚಿಕ್ಕಣ್ಣನವರ್, ಶಿವ ನಾಗಪ್ಪ ಹದ್ದಪ್ಪನವರ್, ರಾಜಣ್ಣ ಮಡಿವಾಳರ, ದಿಳ್ಳೆಪ್ಪ ಭಂಡಾರಿ, ಗಣೇಶ ಅಚ್ಚಲ್ಲರ್, ಮಲ್ಲೇಶ ಭಂಡಾರಿ, ರಾಮಚಂದ್ರ ಸೋಮನಕಟ್ಟಿ ,ಅಶೋಕ್ ಪಾರ್ಕಿ, ಸುರೇಶ್ ಬಿರಾದರ್, ಚಂದ್ರು ಸೋಮನಕಟ್ಟಿ, ಬೀರಪ್ಪ ಭಂಡಾರಿ, ಗುಡ್ಡಪ್ಪ ಕನ್ನಮ್ಮನವರ್, ನಿಂಗಪ್ಪ ಹೆಗಡೆ ಹಾಗು ಅನೇಕರು ಉಪಸ್ಥಿತರಿದ್ದರು.

ಸಾಮೂಹಿಕ ವಿವಾಹಗಳಿಂದ ಸಾಮಾಜಿಕ ಸಾಮರಸ್ಯ ಸಾಧ್ಯ

◆**ಶಿಗ್ಗಾವಿ:** ವಿವಿಧ ಜಾತಿ ಮತ್ತು ಸಮುದಾಯದವರು ಒಂದೇ ವೇದಿಕೆಯಲ್ಲಿ ಮದುವೆಯಾಗುವುದರಿಂದ ಸಾಮಾಜಿಕ ಸಾಮರಸ್ಯ ಮತ್ತು ಸಮಾನತೆ ಮೂಡುತ್ತದೆ ಎಂದು ಶಿಗ್ಗಾವಿ ವಿರಕ್ತಮಠದ ಸಂಗನಬಸವ ಸ್ವಾಮೀಜಿ ಹೇಳಿದರು.



ಶಿಗ್ಗಾವಿ ತಾಲೂಕಿನ ಹಿರೇಬೆಂಡಿಗೇರಿ ಗ್ರಾಮದ ಹಿರೇಮಠದಲ್ಲಿ ಹಮ್ಮಿಕೊಂಡ 17ನೇ ವರ್ಷದ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಸ್ಕಾರ ಬದ್ಧ ಮದುವೆಗಳು ಸಾಮೂಹಿಕ ವಿವಾಹಗಳಲ್ಲಿ ಸಾಧ್ಯವಿದ್ದು ಹರಗುರು ಚರಮೂರ್ತಿಗಳ ಆಶೀರ್ವಾದ ಸಿಗಲು ಸಾಧ್ಯವಾಗುತ್ತದೆ, ಮದುವೆ ಮಾಡಿಕೊಂಡು ಸಾಲ ಮಾಡಿಕೊಳ್ಳುವವರೇ ಹೆಚ್ಚಾಗಿರುವ ಇಂದಿನ ಕಾಲದಲ್ಲಿ ದುಂದುವೆಚ್ಚವಿಲ್ಲದೇ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ನಡೆಯಬೇಕು ಎಂದರು.

ಹಿರೇಮಣಕಟ್ಟಿ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಗೌರವಪೂರ್ವಕ ಬದುಕಿಗಿಂತ ವಿಚ್ಛೇದನಗಳು ಹೆಚ್ಚಾಗಿರುವುದು ಬಹಳಷ್ಟು ಖೇದಕರ ಎಂದು ವಿಷಾದಿಸಿದ ಶ್ರೀಗಳು, ನಮ್ಮ ಧರ್ಮ ಮತ್ತು ಸಂಸ್ಕೃತಿ ಅರ್ಥದ ಮೇಲೆ ಜೀವನ ನಡೆಸಬೇಕು, ಇದು ನಮ್ಮ ಬದುಕಾಗಬೇಕು, ದುಂದುವೆಚ್ಚಕ್ಕೆ ಕಡಿವಾಣ ಹಾಕಿ, ಸರಳವಾಗಿ ವಿವಾಹ ಕಾರ್ಯಕ್ರಮಗಳು ನೆರವೇರಬೇಕು ಎಂದರು.

ಭಾರತ ಸೇವಾ ಸಂಸ್ಥೆ ಅಧ್ಯಕ್ಷ ಶ್ರೀಕಾಂತ ದುಂಡಿಗೌಡ್ರ ಮಾತನಾಡಿ, ಸಾಮೂಹಿಕ ವಿವಾಹದಲ್ಲಿ ಮೇಲು, ಕೀಳು ಎಂಬುದು ಇಲ್ಲ, ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮಾಡುವ ವಿವಾಹಗಳಿಗೆ ಕಡಿವಾಣ ಹಾಕಲಾಗಿದೆ ಎಂದರು.

ಕೆಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಗಂಗಣ್ಣ ಸಾತಣ್ಣವರ ಮಾತನಾಡಿ, ಸತತ 17 ವರ್ಷಗಳಿಂದ ಈ ಸಾಮೂಹಿಕ ವಿವಾಹ ಮಾಡಿಕೊಂಡು ಬರುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಶಿವಾನಂದ ಮ್ಯಾಗೇರಿ ಮಾತನಾಡಿ, 17 ವರ್ಷಗಳ ಯಶಸ್ವಿ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಸರ್ವರ ಸಹಕಾರ ಅಗತ್ಯವಾಗಿದ್ದು ಹೀಗಾಗಿ ಯಶಸ್ವಿಯಾಗಲು ಸಾಧ್ಯವಾಗಿದೆ ಎಂದರು.

ಗಂಜೀಗಟ್ಟಿ ಶಿವಲಿಂಗೇಶ್ವರ ಶಿವಾಚಾರ್ಯರು, ಅಸೂಟಿಯ ರೇವಣಸಿದ್ಧೇಶ್ವರ ಸ್ವಾಮೀಜಿ, ಹಿರೆಂಬೇಂಡಿಗೇರಿ ಹಿರೇಮಠದ ವಿಶ್ವೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು. ಸಾಮೂಹಿಕ ವಿವಾಹದಲ್ಲಿ 10 ಜೋಡಿಗಳು ನವದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಮೌಲಾಸಾಬ್ ತಹಶೀಲ್ದಾರ್ ಹಾಗೂ ಶಿವಾನಂದ ಮ್ಯಾಗೇರಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖಂಡರಾದ ಗುರುನಾಥ ಅಂಚಟಗೇರಿ, ಮೃತ್ಯುಂಜಯ ವಡಯರಮಠ, ಅರ್ಜುನಹಂಚಿನಮನಿ, ಮಂಜುನಾಥ ಕಾರಡಗಿ, ಮಹೇಶ ಹಿರೇಮಠ, ಎಂ.ಎಚ್. ಪಠಾಣ್, ಪಕ್ಕೀರಪ್ಪ ಸಂಗಣ್ಣವರ, ಧರಿಯಪ್ಪಗೌಡ್ರ ಪಾಟೀಲ, ವಿಶ್ವನಾಥ ಹರಕುಣಿ, ರಮೇಶ ಸಾತಣ್ಣವರ, ಫಯಾಜ್ ಸವಣೂರ ಸೇರಿದಂತೆ ಹಿರೆಬೆಂಡಿಗೇರಿ ಗ್ರಾಮದ ಮುಖಂಡರು ಹಾಗೂ ಸಾಮೂಹಿಕ ವಿವಾಹಕ್ಕೆ ಆಗಮಿಸಿದ ಸಾರ್ವಜನಿಕರು ಇದ್ದರು.

ವಿದ್ಯುತ್ ಶಾರ್ಟ್‌ಸರ್ಕ್ಯೂಟ್ : 12 ಎಮ್ಮೆಗಳ ಸಜೀವ ದಹನ

◆**ಹಾವೇರಿ:** ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದ ಕಿಡಿ ಹಾರಿ ದನದ ಕೊಟ್ಟಿಗೆಯಲ್ಲಿದ್ದ 12ಕ್ಕೂ ಹೆಚ್ಚು ಎಮ್ಮೆಗಳು ಸಜೀವ ದಹನಗೊಂಡ ಮನಕಲುಕುವ ಘಟನೆ ತಾಲೂಕಿನ ಕನವಳ್ಳಿ ಗ್ರಾಮದಲ್ಲಿ ಗುರುವಾರ ತಡರಾತ್ರಿ ನಡೆದಿದೆ.

ಹಾವೇರಿ ತಾಲೂಕು ಕನವಳ್ಳಿ ಗ್ರಾಮದ ಪರಮೇಶಪ್ಪ ಸೋಮಪ್ಪ ಜಾಡರ ಎಂಬುವವರಿಗೆ ಸೇರಿದ ಜಾನುವಾರುಗಳು ಧಗಧಗಿಸುವ ಬೆಂಕಿಯ ಕೆನ್ನಾಲಿಗೆಗೆ ಬಲಿಯಾಗಿವೆ. ಗ್ರಾಮದ ಮೆಹಬೂಬ ನಗರದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಉರ್ದು ಶಾಲೆ ಎದುರಿಗೆ ಈ ದುರ್ಘಟನೆ ಸಂಭವಿಸಿದೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧಗಧಗಿಸಿದ ಬೆಂಕಿ: ಗುರುವಾರ ಸಂಜೆ ಮೋಡ ಕವಿದ ವಾತಾವರಣ, ಗುಡುಗು ಮಿಂಚಿನ ಆರ್ಭಟ ಜೋರಾಗಿದ್ದರೂ, ಎಂದಿನಂತೆ ಹಾಲು ಕರೆದುಕೊಂಡು ಪರಮೇಶಪ್ಪ ಮನೆಗೆ ಬಂದಿದ್ದಾನೆ. ನಂತರ ಜೋರಾಗಿ ಬೀಸಿದ ಮಳೆ ಗಾಳಿಗೆ ದನದ ಕೊಟ್ಟಿಗೆ ಬಳಿ ಇದ್ದ ವಿದ್ಯುತ್ ಲೈನ್‌ಗಳು ಒಂದಕ್ಕೊಂದು ತಾಗಿ, ಬೆಂಕಿಯ ಕಿಡಿ ಹೊತ್ತಿಕೊಂಡು ದನದ ಕೊಟ್ಟಿಗೆ ಮೇಲೆ ಬಿದ್ದಿದೆ. ಅಲ್ಲಿಯೇ ಇದ್ದ ಮೆಕ್ಕೆಜೋಳದ ಹೊಟ್ಟಿಗೂ ಬೆಂಕಿ ಕಿಡಿ ಹೊತ್ತಿಕೊಂಡ ಪರಿಣಾಮ ದನದ ಕೊಟ್ಟಿಗೆ ಸುತ್ತ ವ್ಯಾಪಿಸಿದೆ. ಸ್ಥಳೀಯರು ಬೆಂಕಿ ನಂದಿಸಲು ಹರಸಾಹಸ ಪಟ್ಟರೂ ಪ್ರಯೋಜನವಾಗಲಿಲ್ಲ, ಬಳಿಕ ಬಂದ ಅಗ್ನಿಶಾಮಕದಳದ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಕೊಟ್ಟಿಗೆಯಲ್ಲಿದ್ದ ಮೂಕಪ್ರಾಣಿ ಎಮ್ಮೆಗಳು ಸಂಪೂರ್ಣವಾಗಿ ಬೆಂಕಿಗಾಹುತಿಯಾಗಿದ್ದು, ಇಡೀ ಗ್ರಾಮವನ್ನೇ ಬೆಚ್ಚಿ ಬೀಳಿಸಿದೆ.

ಪರಿಹಾರಕ್ಕೆ ಬೊಮ್ಮಾಯಿ ಆಗ್ರಹ

ತಾಲೂಕಿನ ಕನವಳ್ಳಿ ಗ್ರಾಮದ ಪರಮೇಶಪ್ಪ ಸೋಮಪ್ಪ ಜಾಡರ್ ಅವರಿಗೆ ಸೇರಿದ ದನದಕೊಟ್ಟಿಗೆ ಆಕಸ್ಮಿಕ ಬೆಂಕಿ ತಗುಲಿ ಸುಮಾರು 12ಕ್ಕೂ ಹೆಚ್ಚು ಎಮ್ಮೆಗಳು ಸಜೀವ ದಹನವಾಗಿರುವ ಸುದ್ದಿ ಕೇಳಿ ಅತ್ಯಂತ ನೋವಾಯಿತು. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಮೂಕ ಪ್ರಾಣಿಗಳು ಅನ್ಯಾಯವಾಗಿ ಜೀವ ಕಳೆದುಕೊಂಡಿದ್ದು, ಇದರಿಂದ ರೈತನಿಗೆ ಅಪಾರ ಹಾನಿಯಾಗಿದೆ. ಸಂಕಷ್ಟದ ಪರಿಸ್ಥಿತಿಯಲ್ಲಿರುವ ರೈತನಿಗೆ ರಾಜ್ಯ ಸರಕಾರ ಸೂಕ್ತ ಪರಿಹಾರ ನೀಡಬೇಕೆಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಎಕ್ಸ್ ಮೂಲಕ ಆಗ್ರಹಿಸಿದ್ದಾರೆ.

ಎಮ್ಮೆ ಸಾಕಾಣಿಕೆಯೇ ಕಸುಬು: ಪರಮೇಶಪ್ಪ ಜಾಡರಗೆ ಎಮ್ಮೆ ಸಾಕಾಣಿಕೆಯೇ ಬದುಕಿನಾಸರೆ. ತನ್ನ ಮಕ್ಕಳಂತೆ ಜೋಪಾನ, ಜತನ ಮಾಡಿಕೊಂಡು ತನ್ನ ಕುಟುಂಬದೊಟ್ಟಿಗೆ ಎಮ್ಮೆ ಸಾಕಾಣಿಕೆ ಮಾಡಿಕೊಂಡು ಹೆಂಡತಿ, ಮಕ್ಕಳೊಂದಿಗೆ ವಾಸವಿದ್ದ. ಇತ್ತೀಚೆಗೆ ಸಾಲ ಮಾಡಿ ಮಗಳ ಮದುವೆ ಮಾಡಿದ್ದು, 11 ವರ್ಷದ ಮಗ, ಹೆಂಡತಿಯೊಂದಿಗೆ ವಾಸವಿದ್ದ. ಆದರೆ ಊಹಿಸದ ರೀತಿಯಲ್ಲಿ ಈ ದುರ್ಘಟನೆ ಗುರುವಾರ ರಾತ್ರಿ ನಡೆದಿದ್ದು, ಇಡೀ ಕುಟುಂಬವೇ ಕಣ್ಣೀರಲ್ಲಿ ಕೈತೊಳೆಯುವಂತಾಗಿದೆ. ಆಕಸ್ಮಿಕ ಬೆಂಕಿಗೆ ಸುಮಾರು 8-10ಲಕ್ಷ ಮೌಲ್ಯದ 12 ಎಮ್ಮೆಗಳು ಸಾವನ್ನಪ್ಪಿದ್ದು, ಇನ್ನೂ ಎರಡು ಎಮ್ಮೆಗಳು ತೀವ್ರವಾಗಿ ಅಸ್ವಸ್ಥಗೊಂಡು ಜೀವನ್ಮರಣ ಹೋರಾಟ ನಡೆಸುತ್ತಿವೆ. ಜತೆಗೆ 4-5 ಟ್ರ್ಯಾಕ್ಟರ್‌ನಷ್ಟು ಮೆಕ್ಕೆಜೋಳ ರೌದಿ, ಮೇವು ಹೀಗೆ ಸುಮಾರು 2-3ಲಕ್ಷ ರೂ.ಗಳಷ್ಟು ಮೇವು ಹೀಗೆ ಒಟ್ಟು 10-12 ಲಕ್ಷರೂ.ನಷ್ಟು ನಷ್ಟ ಸಂಭವಿಸಿದೆ ಎಂದು ಸ್ಥಳೀಯರು ಅಂದಾಜಿಸಿದ್ದಾರೆ.

ಅಧಿಕಾರಿಗಳ ಭೇಟಿ: ವಿಷಯ ತಿಳಿದು ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಪರಮೇಶಪ್ಪ ಹುಬ್ಬಳ್ಳಿ, ಬೆಳವಿಗಿ ಪಶುಆಸ್ಪತ್ರೆ ಮುಖ್ಯಾಧಿಕಾರಿ ಡಾ.ವಿಜಯಕುಮಾರ ಹಳಕಟ್ಟಿ, ಕರ್ಜಗಿ ಅಧಿಕಾರಿ ಬಸವರಾಜ ದೊಡ್ಡಮನಿ, ಕನವಳ್ಳಿ ಪಶುಆಸ್ಪತ್ರೆ ಪರೀಕ್ಷಕ ಭರಮಪ್ಪ ಕಟ್ಟೇರ, ಗ್ರಾಮಾಡಳಿತ ಅಧಿಕಾರಿ ಬಸನಗೌಡ ಗೌಡರ ಸೇರಿದಂತೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಂ. ಹಿರೇಮಠ, ಕೆಸಿಸಿ ಬ್ಯಾಂಕಿನ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ ಸೇರಿದಂತೆ ಗಣ್ಯರು ಬಂದು ಮಾಲೀಕನ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು. ಶಾಸಕ ರುದ್ರಪ್ಪ ಲಮಾಣಿ ದೂರವಾಣಿ ಕರೆ ಮಾಡಿ ಸಾಂತ್ವಾನ ಹೇಳಿದರು.

ಕಿರುಸುದ್ದಿ

ಮಾ.24 ರಂದು ಪೂರ್ವಭಾವಿ ಸಭೆ

ಸಂಕೇಶ್ವರ: ಪ್ರತಿ 11 ವರ್ಷಕ್ಕೊಮ್ಮೆ ಜರುಗುವ ಐತಿಹಾಸಿಕ ಮಹಾಲಕ್ಷ್ಮಿ ದೇವಿಯ ಜಾತ್ರಾ ಉತ್ಸವದ ಆಚರಣೆ ಕುರಿತು ಮಾ.24 ರಂದು ಸಂಜೆ 5 ಗಂಟೆಗೆ ಮಹಾಲಕ್ಷ್ಮಿ ದೇವಾಲಯದಲ್ಲಿ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ. ಪಟ್ಟಣದ ಮಹಾಲಕ್ಷ್ಮಿ ದೇವಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಹಾಲಕ್ಷ್ಮಿ ದೇವಾಲಯದ ಹಕ್ಕುದಾರರ ಸಮಿತಿ ತಿಳಿಸಿ. 5 ದಿನಗಳ ಕಾಲ ನಡೆಯುವ ಈ ಉತ್ಸವದ ದಿನಾಂಕ, ರೂಪರೇಷೆ, ವಿವಿಧ ಉಪ-ಸಮಿತಿಗಳ ರಚನೆ ಮತ್ತು ಮುಖ್ಯ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು. ಸಂಕೇಶ್ವರ ಪಟ್ಟಣದ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಹಕ್ಕುದಾರರ ಸಮಿತಿ ತಿಳಿಸಿದೆ. ಈ ಸಂದರ್ಭದಲ್ಲಿ ಪಟ್ಟಣದ ಹಿರಿಯರಾದ ಎಸ್.ಎಸ್.ಶಿರಕೋಳಿ, ಹಕ್ಕುದಾರರಾದ ಕುನಾಲ್ ಪಾಟೀಲ, ಗಿರೀಶ ಕುಲಕರ್ಣಿ, ಬಾಳಕೃಷ್ಣ ಕುಲಕರ್ಣಿ, ಅಪ್ಪಾಸಾಹೇಬ ಶೆಟ್ಟಿಮನಿ, ಸಂತೋಷ ಹವಾಲದಾರ, ಬಸವಣ್ಣಿ ಕರ್ದೇಗೌಡ ಹಾಜರಿದ್ದರು.

ನವೋದಯ ಶಾಲೆಗೆ ಆಯ್ಕೆ



ಕಕಮರಿ: ಸ್ಥಳೀಯ ಶ್ರೀ ವೇದಾಂತ ಕೇಸರಿ ಮಲ್ಲಿಕಾರ್ಜುನ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿರುವ ಜ್ಞಾನಯೋಗಿ ಗುರುಕುಲ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಅಮನ ರಾಜೇಸಾಬ ಮುಜಾವರ 2026-27ನೇ ಸಾಲಿನ ಜವಾಹರ್ ನವೋದಯ ವಿದ್ಯಾಲಯ ಸಮಿತಿ ನಡೆಸುವ ನವೋದಯ ಶಾಲೆಯ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದು, ಶಾಲೆಗೆ ಕೀರ್ತಿ ತಂದಿದ್ದಾನೆ. ಈ ಸಾಧನೆಗೆ ಶಿಕ್ಷಣ ಸಂಸ್ಥೆಯ ಪೀಠಾಧ್ಯಕ್ಷ ಪ.ಪೂ.ಆತ್ಮಾರಾಮ್ ಸ್ವಾಮೀಜಿ, ಹಾಗೂ ಮುಖ್ಯೋಪಾಧ್ಯಾಯ ಮತ್ತು ಗುರುವೃಂದದವರು ಶುಭಹಾರೈಸಿದ್ದಾರೆ.

ನವೋದಯ ವಿದ್ಯಾಲಯಕ್ಕೆ ಆಯ್ಕೆ



ಅಥಣಿ: ಸ್ಥಳೀಯ ನಿವಾಸಿ ಸಿಂಚನಾ ಶಿವಕುಮಾರ ಭಡಕಂಬಿ ವಿದ್ಯಾರ್ಥಿನಿ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದಾಳೆ. ಸಾರ್ಥಕ ನವೋದಯ ಕೋಚಿಂಗ್ ಕ್ಲಾಸ್ ನಲ್ಲಿ ಅಧ್ಯಯನ ಮಾಡಿದ್ದ ವಿದ್ಯಾರ್ಥಿನಿಗೆ ಸಂಸ್ಥೆಯ ಮುಖ್ಯಸ್ಥ ಸಂತೋಷ ಬಡಕಂಬಿ, ಅನ್ನಪೂರ್ಣ ಬಡಕಂಬಿ, ಪಾಲಕರಾದ ಶಿವಕುಮಾರ ಬಡಕಂಬಿ, ಸಂಗೀತಾ ಹಳ್ಳದಮಳ ಸೇರಿದಂತೆ ಇತರರು ಸೇರಿ ಗೌರವಿಸಿ ಅಭಿನಂದಿಸಿದ್ದಾರೆ.

ಮಾ.24ರಂದು ಮೀಸಲಾತಿ ಹೋರಾಟ



ಗೋಕಾಕ: ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾ.24ರಂದು ನಡೆಯಲಿರುವ ಭೋವಿ ವಡ್ಡರ ಸಮುದಾಯದ ಮೀಸಲಾತಿ ಹೋರಾಟ ಕಾರ್ಯಕ್ರಮಕ್ಕೆ ಸಮಾಜ ಭಾಂದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಭೋವಿ ವಡ್ಡರ ವೇಲ್‌ಫೇರ್ ಸೋಸೈಟಿಯ ಜಿಲ್ಲಾಧ್ಯಕ್ಷ ಲಕ್ಷ್ಮಣ ಗಾಡಿವಡ್ಡರ ತಿಳಿಸಿದರು. ನಗರದ ಪ್ರವಾಸಿ ಮಂದಿರದಲ್ಲಿ ಭೋವಿ ವಡ್ಡರ ಸಮಾಜದ ಮೀಸಲಾತಿ ಹೋರಾಟ ಕುರಿತು ಮುಖಂಡರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಭೋವಿ ವಡ್ಡರ ಸಮಾಜಕ್ಕೆ ಒಳ ಮೀಸಲಾತಿ ಹೆಚ್ಚಿಸುವ ಕುರಿತು ಸರಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ರಾಜ್ಯದಾದ್ಯಂತ ಹೋರಾಟಗಳನ್ನು ಆಯೋಜಿಸುವ ನಿಟ್ಟಿನಲ್ಲಿ ಈ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದ್ದು ಸಮಾಜ ಪ್ರತಿಯೊಬ್ಬರು ಈ ಹೋರಾಟದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಕರೆ ನೀಡಿದರು. ಈ ವೇಳೆ ಒಳ ಮೀಸಲಾತಿ ಹೋರಾಟ ಸಮಿತಿ ರಚನೆ ಮಾಡಲಾಯಿತು. ಭೋವಿ ವಡ್ಡರ ಸಮಾಜ ಮುಖಂಡರಾದ ಪರಶುರಾಮ ಕಲಕಟಗಿ, ಭರಮಣ್ಣ ಗಾಡಿವಡ್ಡರ, ಸಂಜಯ ಗಾಡಿವಡ್ಡರ, ಕೆಂಪಣ್ಣ ಕಲಕುಟ್ರಿ, ಯಲ್ಲಪ್ಪ ಗಾಡಿವಡ್ಡರ, ಪರಶುರಾಮ ಬಂಡಿವಡ್ಡರ, ಕಲ್ಲೊಳೆಪ್ಪ ಗಾಡಿವಡ್ಡರ, ಅರ್ಜುನ, ಆನಂದ, ಓಂಕಾರ, ಭೀಮಾ ಸೇರಿದಂತೆ ಅನೇಕರು ಇದ್ದರು.



ಬೆಳಗಾವಿ: ತಾಲೂಕಿನ ಮಾವಿನಕಟ್ಟಿ ಗ್ರಾಮದ ಶ್ರೀ ವಿಠ್ಠಲ ರುಕ್ಮಾಯಿ ಹಾಗೂ ಶ್ರೀ ಲಕ್ಷ್ಮೀ ದೇವಿ ಮಂದಿರಗಳ ಜೀರ್ಣೋದ್ಧಾರದ ಕಾಮಗಾರಿಗಳ ಹಿನ್ನೆಲೆಯಲ್ಲಿ ಶುಕ್ರವಾರ ಗ್ರಾಮದ ಹಿರಿಯರು ಹಾಗೂ ಶ್ರೀ ಲಕ್ಷ್ಮೀ ದೇವಿ ಟ್ರಸ್ಟ್ ಸಮಿತಿಯ ಅಧ್ಯಕ್ಷರಾದ ಉಳವಪ್ಪ ಮಲಣ್ಣವರ ನೇತೃತ್ವದ ಗ್ರಾಮಸ್ಥರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸುಮಾರು 15 ಲಕ್ಷ ರೂ.ಗಳ ಚೆಕ್ ಹಸ್ತಾಂತರಿಸಿದರು.

ಮತದಾರರ ಪಟ್ಟಿ ಮ್ಯಾಪಿಂಗ್ ಪ್ರಕ್ರಿಯೆ ಪ್ರಾರಂಭ

ಬೆಳಗಾವಿ: ಭಾರತ ಚುನಾವಣಾ ಆಯೋಗದ ಸೂಚನೆಯಂತೆ ಮತದಾರರ ಪಟ್ಟಿಯ ಸುಧಾರಣೆಗಾಗಿ ಎಸ್‌ಐಆರ್ ಪ್ರಕ್ರಿಯೆ ಚಾಲನೆ ಪಡೆಯುತ್ತಿದೆ. ಬೆಳಗಾವಿ ದಕ್ಷಿಣ ಮತಕ್ಷೇತ್ರದ ಮತದಾರರು ತಮ್ಮ ಹೆಸರನ್ನು ಬಿಎಲ್‌ಒ ಆ್ಯಪ್‌ನಲ್ಲಿ ಮ್ಯಾಪಿಂಗ್ ಮಾಡಿಸಿಕೊಳ್ಳುವಂತೆ ನೋಡಲ್ ಅಧಿಕಾರಿ ಸಿದ್ದು ಹುಲ್ಲೊಳ್ಳಿ ಮನವಿ ಮಾಡಿಕೊಂಡರು. ಶುಕ್ರವಾರ ಮಹಾನಗರ ಪಾಲಿಕೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗದ ಹೊಸ ಮಾರ್ಗಸೂಚಿಗಳ ಬಗ್ಗೆ ಮಾಹಿತಿ ನೀಡಿದರು. ಭಾರತೀಯ ಪ್ರಜೆಗಳು ಮಾತ್ರ ಮತದಾನದ ಹಕ್ಕನ್ನು ಚಲಾಯಿಸುವುದನ್ನು ಖಚಿತಪಡಿಸಿಕೊಳ್ಳಲು ಪ್ರತಿ 20 ವರ್ಷಕ್ಕೊಮ್ಮೆ ಎಸ್‌ಐಆರ್ ಸರ್ವೆಯನ್ನು ನಡೆಸಲಾಗುತ್ತದೆ. ಈ ಪ್ರಕ್ರಿಯೆಯ ಭಾಗವಾಗಿ ಮತದಾರರ ಪಟ್ಟಿಯಲ್ಲಿರುವ ಪ್ರತಿಯೊಬ್ಬರೂ ತಮ್ಮ ವ್ಯಾಪ್ತಿಯ ಬಿಎಲ್‌ಒಗಳನ್ನು ಭೇಟಿಯಾಗಿ ಹೆಸರನ್ನು ಮ್ಯಾಪಿಂಗ್ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದರು. 2002ರ ನಂತರ ಪಟ್ಟಿಗೆ ಸೇರಿದವರು ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಿದೆ. ಮುಂದಿನ ತಿಂಗಳಿಂದ ಈ ಪ್ರಕ್ರಿಯೆ ಅಧಿಕೃತವಾಗಿ ಆರಂಭವಾಗುವ ಸಾಧ್ಯತೆಯಿದ್ದು, ಮತದಾರರು ತಮ್ಮ ಮತಗಟ್ಟೆ ಅಧಿಕಾರಿಗಳ ಬಳಿ ಹೋಗಿ ಬಿಎಲ್‌ಒ ಆ್ಯಪ್ ಮೂಲಕ ಮ್ಯಾಪ್, ಫೋಟೋ ಮತ್ತು ಸೆಲ್ಫ್ ಪ್ರೋಜೆನಿ ವಿವರಗಳನ್ನು ಅಪ್ಡೇಟ್ ಮಾಡಿಸಿಕೊಳ್ಳಬೇಕು. ಈಗಾಗಲೇ 2002ಕ್ಕೂ ಮೊದಲು ಪಟ್ಟಿಯಲ್ಲಿದ್ದು ಎಸ್‌ಐಆರ್ ಪ್ರಕ್ರಿಯೆ ಪೂರೈಸಿದವರು ನೇರವಾಗಿ ಮ್ಯಾಪಿಂಗ್‌ಗೆ ಒಳಪಡಬಹುದು. ಸಾರ್ವಜನಿಕರು ಯಾವುದೇ ಗೊಂದಲಕ ಒಳಗಾಗದೆ, ತಮ್ಮ ಮತದಾನದ ಹಕ್ಕನ್ನು ಭದ್ರಪಡಿಸಿಕೊಳ್ಳಲು ಈ ತಾಂತ್ರಿಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದರು.



ಚನ್ನಮ್ಮನ ಕಿತ್ತೂರ: ಸಮೀಪದ ಇಟಗಿ ಗ್ರಾಮದ ಶ್ರೀ ಕಲ್ಮೇಶ್ವರ ಜಾತ್ರಾ ಮಹೋತ್ಸವಕ್ಕೆ ಬುಧವಾರ ಚಾಲನೆ ನೀಡಲಾಯಿತು. ಕಳಸಾರೋಹಣ, ಅಭಿಷೇಕ ಹಾಗೂ ಮಹಾ ಪ್ರಸಾದ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬಸವಂತಪ್ಪ ಕರಮಳನವರ, ಶ್ರೀಕಾಂತ ಹಿರೇಮಠ, ಈಶ್ವರ ಶೀಲಿ, ಸಂತೋಷ ಬಳಗಪ್ಪನವರ, ಮಹಾಂತೇಶ ಲಂಗೋಟಿ, ಭರತೇಶ ಗಾಳಿ, ಬಸವರಾಜ ಬಡಿಗೇರ, ಬಸವರಾಜ ಸುಣಗಾರ, ಗ್ರಾಮಸ್ಥರು ಇದ್ದರು.

ಸಾಂಕ್ರಾಮಿಕ ರೋಗ ತಿಳಿವಳಿಕೆ ಕಾರ್ಯಕ್ರಮ | ಡಾ. ದೇವೇಗೌಡರ ಸಲಹೆ

ಪ್ರಥಮ ಚಿಕಿತ್ಸೆ ಬಗ್ಗೆ ತಿಳಿವಳಿಕೆ ಅಗತ್ಯ

ಬೆಳಗಾವಿ: ಇತ್ತೀಚಿನ ದಿನಗಳಲ್ಲಿ ಜನತೆಗೆಯಲ್ಲಿ ಕಾಡುತ್ತಿರುವುದು ಒಂದೇ ಯಾವ ಸಮಯದಲ್ಲಿ ಸಾವು ನೋವುಗಳು ಯಾಗುತ್ತವೆ ಎಂದು. ಅದಕ್ಕಾಗಿ ಎಲ್ಲ ಜನತೆಗೂ ಪ್ರಥಮ ಚಿಕಿತ್ಸೆ ಬಗ್ಗೆ ತಿಳಿದುಕೊಂಡಾಗ ಮಾತ್ರ ಸಮಾಜದಲ್ಲಿ ಆಗುವ ಅಪಘಾತ ಮತ್ತು ಮರಣ ಪ್ರಮಾಣ ಕಡಿಮೆ ಮಾಡುವುದಕ್ಕೆ ಸಾಧ್ಯ. ಅಪಘಾತದ ಸಮಯದಲ್ಲಿ ತುರ್ತು ಪ್ರಥಮ ಚಿಕಿತ್ಸೆ ನೀಡಿ ಅಂಬುಲೆನ್ಸ್ ಸಹಾಯದಿಂದ ಜೀವ ಉಳಿಸುವ ಪ್ರಯತ್ನವನ್ನು ಯುವಕ ಯುವತಿಯರು ಮಾಡಬೇಕು ಎಂದು ಡಾ. ದೇವೇಗೌಡರು ಹೇಳಿದರು.

ಶುಕ್ರವಾರ ನಗರದ ಸಂಗೊಳ್ಳಿ ರಾಯಣ್ಣ ಪ್ರತಿಮೆ ದರ್ಜೆ ಕಾಲೇಜದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ವತಿಯಿಂದ ಆಯೋಜಿಸಲಾದ ಪ್ರಥಮ ಚಿಕಿತ್ಸೆ, ರಕ್ತದಾನ, ಕ್ಯಾನ್ಸರ್, ಸಾಂಕ್ರಾಮಿಕ ರೋಗದ ಕುರಿತು ತಿಳುವಳಿಕೆ ಕಾರ್ಯಕ್ರಮದಲ್ಲಿ ಮಾತನಾಡಿ, ವೈದ್ಯಕೀಯ ವಿದ್ಯಾರ್ಥಿಗಳು ಪ್ರಥಮ ಚಿಕಿತ್ಸೆ ನೀಡುವಾಗ ರಕ್ತ ಕಂಡು ಕುಸಿದು ಬೀಳುತ್ತಾರೆ. ಆದ್ದರಿಂದ ಯುವಕರು ಅಪಘಾತವಾದಾಗ, ನೀರಿನಲ್ಲಿ ಮುಳುಗಿದಾಗ ಬೇರೆ ಬೇರೆ ಪ್ರಕರಣಗಳಲ್ಲಿ ಧೈರ್ಯದಿಂದ ಮುಂದೆ ಬಂದು ಪ್ರಥಮ ಚಿಕಿತ್ಸೆ ನೀಡಿ ಅಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನೀಡಬೇಕು. ಜೀವ ಬದುಕಿಸಿದರೆ ಅದಕ್ಕಿಂತ ದೊಡ್ಡದಾನ ಅಂದರೆ ಜೀವದಾನ. ಅದೇ ನೀವು ಮಾಡುವ ಸಮಾಜ ಸೇವೆ ಎಂದರು.

ಸಂಗೊಳ್ಳಿ ರಾಯಣ್ಣ ಮಹಾವಿದ್ಯಾಲಯ ಪ್ರಾಚಾರ್ಯ ಎಸ್ ಸಿ. ಪಾಟೀಲ ಮಾತನಾಡಿ , ಪ್ರಥಮ ಚಿಕಿತ್ಸೆ ಬಗ್ಗೆ ವಿದ್ಯಾರ್ಥಿಗಳು, ಯುವಕರು



ನೀವೆಲ್ಲರೂ ಕಷ್ಟಕರ ಪರಿಸ್ಥಿತಿಯಲ್ಲಿರುವ ಜನರಿಗೆ ತೊಂದರೆ ಯಾದಾಗ ಏನು ಮಾಡಬೇಕೆಂಬುದರ ಬಗ್ಗೆ ತರಬೇತಿಯನ್ನು ತೆಗೆದುಕೊಂಡು ಯಾರಿಗಾದರೂ ತೊಂದರೆಯಾದಲ್ಲಿ ರಕ್ತ ಬೇಡಿಕೆ ಇದ್ದರೆ ತಕ್ಷಣವೇ ಆಸ್ಪತ್ರೆಗೆ ದಾಖಲಿಸಿ ಸಹಾಯ ಮಾಡುವವರ ಜೊತೆಗೆ ಸಮಾಜಕ್ಕೆ ಧೈರ್ಯ ತುಂಬಿ ಅವರಿಗೆ ಸಹಾಯ, ರಕ್ತದಾನ ಮಾಡಿ ಒಂದು ಜೀವ ಉಳಿಸಲು ಮುಂದಾದರೆ ದೇವರಕ್ಕಿಂತ ಜೀವದಾನ ದೊಡ್ಡದು ಎಂದರು.

ಡಾ. ವ್ಹಿ .ಡಿ. ಡಾಂಗೆ ಮಾತನಾಡಿ, ಎಸ್.ಡಿ. ರೆಡ್ ಕ್ರಾಸ್ ಸಂಸ್ಥೆ ಬೆಳಗಾವಿ ಜಿಲ್ಲೆಯ ಅಧ್ಯಕ್ಷರು, ಜಗತ್ತಿನ 2 ನೇಯ ಮಹಾಯುದ್ಧ ಸಂದರ್ಭದಲ್ಲಿ ಹೆರ್ನಿಡ್ರೋನಾಂಟ 1864 ದಿಲ್ಲಿ ಸಂಸ್ಥೆ ಸ್ಥಾಪಿಸಿದರು ಮುಂದೆ ಜಗತ್ತಿನ್ಯಾದ್ಯಾಂತ ಸಂಸ್ಥೆಗಳು ಸ್ಥಾಪಿಸಿದ್ದಾರೆ 1920 ಜೂನ್ 7 ರಂದು ದೇಶಾದ್ಯಂತ ಸಂಸ್ಥೆಗಳು ಸ್ಥಾಪಿಸಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಚಿಕ್ಕೋಡಿ ತಾಲೂಕಿನ ಡಿ ಎಚ್. ಓ ಆದಾಗ ಚಿಕ್ಕೋಡಿಯ ಸುತ್ತ-ಮುತ್ತ ಕೃಷ್ಣ ನದೀಯ ತೀರದಲ್ಲಿರುವ ಗ್ರಾಮಗಳಿಗೆ ಪ್ರವಾಹ ಬಂದಾಗ ನದಿ ತೀರದ ಗ್ರಾಮಗಳಲ್ಲಿರುವ ಜನರ ಆರೋಗ್ಯ ರಕ್ಷಣೆ, ಸ್ಥಳಾಂತರ ಮತ್ತು ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ ಮಾಡುವುದು ಆರೋಗ್ಯ ಇಲಾಖೆ ಕಂದಾಯ ಉಳಿದ ಇಲಾಖೆ ಅಧಿಕಾರಿಗಳ ಸಹಾಯ ಸಹಕಾರವನ್ನು ನೀಡಿದೆ ರಾಜಕಾರಣಿಗಳು ಜನಪ್ರತಿನಿಧಿಗಳ ಸಹಾಯದಿಂದ ಮೇಲ್ವಿಚಾರಣೆಯಿಂದ ಯಶಸ್ವಿಯಾಗಿ ನಡೆಯಿತು ಎಂದರು.

ಈ ವೇಳೆ ಡಾ. ದೇವತಿ ಗಸ್ತಿ , ರೆಡ ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳಾದ ಅಶೋಕ ಬಾದಾಮಿ, ನಿವೃತ್ತ ಲೆಫ್ಟಿನೆಂಟ್ ಕರ್ನಲ್ ವಿನೋದಿನಿ ಶರ್ಮಾ, ಪ್ರವೀಣ ಹೀರೇಮಠ, ಎಸ್ ಜಿ ಸಿದ್ನಾಳ, ಡಾ. ಡಿ ಎನ್ . ಮಿಸಾಳೆ, ಮೂಲಿಮನಿ, ಪ್ರೀಯಾಂಕಾ ಪುರಾಣಿಕ, ಮಹಾಂತೇಶ ಹಿರೇಮಠ, ಸುನೀಲ್, ಸುನೀತಾ ಮುಡಲಗಿ, ಭುವನೇಶ್ವರಿ ಪಾಟೀಲ, ನೀನಾ ಕಾರಜಗಿ , ಪ್ರವೀಣ ಹೀರೇಮಠ ಸೇರಿದಂತೆ ಹಲವರು ಇದ್ದರು.

ಕುಡಿಯುವ ನೀರಿನ ಸಮಸ್ಯೆಗೆ ಅಗತ್ಯ ಕ್ರಮಕೈಗೊಳ್ಳಿ: ಪಟ್ಟಣ

ರಾಮದುರ್ಗ: ಬೇಸಿಗೆ ಆರಂಭವಾಗಿದ್ದು ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಹಾಗೂ ಜಾನುವಾರಳಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ಅಧಿಕಾರಿಗಳು ಮುಂಜಾಗ್ರತಾ ಕ್ರಮಕೈಗೊಳ್ಳಬೇಕು. ನಿರ್ಲಕ್ಷವಹಿಸಿದರೆ ಕಠಿಣ ಕ್ರಮ ಅನಿವಾರ್ಯ ಎಂದು ವಿಧಾನ ಸಭೆಯ ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಶುಕ್ರವಾರ ತಾಲೂಕಾ ಪಂಚಾಯತಿ ಸಭಾಭವನದಲ್ಲಿ ನಡೆದ ಗ್ರಾಪಂ ಆಡಳಿತಾಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿ ಮಾಹಿತಿ ಪಡೆದ ಶಾಸಕರು 37 ಗ್ರಾಪಂ ವ್ಯಾಪ್ತಿಯಲ್ಲಿ ಬರುವ ಎಲ್ಲ ಜನ ವಸತಿಗಳಿಗೆ ನೀರಿನ ತೊಂದರೆಯಾಗದಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿಗೊಂದಿಗೆ ಸಮನ್ವಯ ಸಾಧಿಸಿ ಅಗತ್ಯವಿರುವಡೆ ಕೊಳವೆ ಬಾವಿ ಕೊರೆಸಲು ಮತ್ತು ಮೇಲ್ಮಟ್ಟದ ಜಲ ಸಂಗ್ರಹ ಟ್ಯಾಂಕ್ ಕಟ್ಟಲು, ಪೈಪಲೈನ್ ಸೇರಿ ಪ್ರಸ್ತಾವಣೆ ಸಿದ್ದಪಡಿಸಿ ಸಲ್ಲಿಸಲು ತಿಳಿಸಿ ಟಾಸ್ಕಫೋರ್ಸ್‌ದಲ್ಲಿ ಎಷ್ಟು ಅನುದಾನ ದೊರೆಯುವದು ನೋಡಿಕೊಂಡು ಉಳಿದ ಅನು ದಾನಕ್ಕೆ ಪರ್ಯಾಯ ವ್ಯವಸ್ಥೆ ಮಾಡುತ್ತೇನೆ ಎಂದರು.

ಕೆಲವು ಗ್ರಾಮಗಳಲ್ಲಿ ಬಹುಗ್ರಾಮ ಕುಡಿ ಯುವ ನೀರಿನ ಯೋಜನೆಯಡಿ ನೀರು ಸರಬರಾಜು ಆಗುತ್ತಿದ್ದರೆ ಇಲ್ಲವೇ ಗ್ರಾಮದಲ್ಲಿ ಕೊಳವೆ ಬಾವಿಗಳಿದ್ದು ನೀರಿನ ಸಮಸ್ಯೆ ಇಲ್ಲದಿದ್ದರೂ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿಗೆ ಹಾಹಾ ಕಾರ ಎದುರಾಗಬಾರದು ಎಂದು ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಗೊತ್ತುಪಡಿಸಿಟ್ಟು ಕೊಳ್ಳಬೇಕು. ಅಗತ್ಯ ಬಿದ್ದರೆ ಖಾಸಗಿ ಕೊಳವೆ ಬಾವಿಗಳನ್ನು ಬಳಸಿಕೊಳ್ಳಲು ಸೂಚಿಸಿದರು.

ತುರುನೂರು ಗ್ರಾಮದಲ್ಲಿ ರಸ್ತೆ ಅಗಲೀಕರಣದಿಂದ ಅಲ್ಲಿದ್ದ ಎರಡು ಕೊಳವೆ ಬಾವಿಗಳು ಹಾಳಾಗಿ ಹೋಗಲಿವೆ. ಅದರ ಬದಲಿಗೆ ಅಲ್ಲಿನ ಸಮಸ್ಯೆ ನಿವಾರಣೆಗೆ ರಸ್ತೆ ಎಷ್ಟು ಅಗಲಗೊಳ್ಳಲಿದೆ ಎಂಬುದನ್ನು ಅಂದಾಜು ಮಾಡಿಕೊಂಡು ಎರಡು ಕೊಳವೆ ಬಾವಿ ಕೊರೆಯಿಸಲು ಸಭೆ ನಿರ್ಧರಿಸಿತು. ಈಗಿರುವ ಪೈಪ್‌ಲೈನ್ ಸಹ ಹಾಳಾಗುತ್ತಿದ್ದು, ಅದರ ಅಳವಡಿಕೆಗೂ ಕ್ರಮ ಜರುಗಿಸಲು ಸಭೆ ಒಪ್ಪಿಗೆ ನೀಡಿತು.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ, ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ ಸೇರಿ ತಾಲೂಕಾ ಮಟ್ಟದ ಅಧಿಕಾರಿಗಳು, ಗ್ರಾಪಂ ಆಡಳಿತಾಧಿಕಾರಿಗಳು, ಪಿಡಿಒಗಳು ಇದ್ದರು.



ನಕಲಿ ಮತದಾರರ ಗುರುತಿಸಲು ಶ್ರಮಿಸಿ

ಹುಕ್ಕೇರಿ: ಪಟ್ಟಣದ ವಿಶ್ವರಾಜ ಭವನದಲ್ಲಿ ಬಿಜೆಪಿ ಪಕ್ಷದ ಹುಕ್ಕೇರಿ ಮಂಡಲ ಆಶ್ರಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ, ವ್ಹಿ. ಬಿ ರಾಮಜೀ ಯೋಜನೆ ತಿಳುವಳಿಕೆ ಮತ್ತು ಬಿ. ಎಲ್. ಎ 2 ಸಭೆ ಜರುಗಿತು.

ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಶಾಸಕ ನಿಖಿಲ ಕತ್ತಿ ಮಾತನಾಡಿ, ಈಗಾಗಲೇ ಕೆಲ ರಾಜ್ಯಗಳಲ್ಲಿ ನಡೆದ ಮತದಾರ ಪಟ್ಟಿ ಪರಿಷ್ಕರಣೆಯಲ್ಲಿ ಕೋಟ್ಯಾಂತರ ಮತದಾರರ ಹೆಸರುಗಳನ್ನು ಚುನಾವಣಾ ಆಯೋಗ ತೆಗೆದು ಹಾಕಿದೆ. ಮೃತ ಪಟ್ಟವರ ಹೆಸರಗಳು, ಎರಡೆರಡು ಕಡೆ ಮತಪಟ್ಟಿಯಲ್ಲಿ ಹೆಸರು ಇರುವುದು ಅಥವಾ ಸರಿಯಾದ ದಾಖಲೆಗಳನ್ನು ಪರಿಶೀಲಿಸದೇ ಮತಪಟ್ಟಿಯಲ್ಲಿ ನಮೂದಾದ ಹೆಸರುಗಳನ್ನು ಪರಿಶೀಲಿಸಿದ ಚುನಾವಣಾ ಆಯೋಗ ಕ್ರಮ ಕೈಗೊಂಡಿದೆ. ನಕಲಿ ಮತದಾರರನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮತ ಪರಿಷ್ಕರಣೆಗೆ ಕಾಂಗ್ರೆಸ್ ವಿರೋಧಿಸುತ್ತಿದೆ ಎಂಬ ಅನುಮಾನ ಎಲ್ಲರಲ್ಲೂ ಬರುತ್ತಿದೆ ಎಂದರು. ಶೀಘ್ರದಲ್ಲಿ ಸ್ಥಳೀಯ ಗ್ರಾಮ, ತಾಲೂಕ , ಜಿಲ್ಲಾ ಪಂಚಾಯತಿ ಚುನಾವಣೆಗಳು ನಡೆಯಲಿವೆ. ಆದ್ದರಿಂದ ಭೂತಮಟ್ಟದ ಪದಾಧಿಕಾರಿಗಳು ಇಂತಹ ನಕಲಿ ಮತದಾರರನ್ನು ಗುರುತಿಸಿ ಆ ಹೆಸರುಗಳನ್ನು ತೆಗೆದು ಹಾಕಲು ಶ್ರಮಿಸಬೇಕು ಎಂದರು.

18 ವರ್ಷ ಪೂರ್ಣಗೊಳಿಸಿದ ಯುವ ಸಮೂಹವನ್ನು ಗುರುತಿಸಿ ಅವರ ಹೆಸರುಗಳನ್ನು ಮತದಾರರ ಪಟ್ಟಿಗೆ ಸೇರಿಸಲು ತಿಳಿಸುವಂತೆ ಭೂತಮಟ್ಟದ ಪದಾಧಿಕಾರಿಗಳಿಗೆ ಸೂಚಿಸಿದರು.

ಬಿಜೆಪಿ ಬೆಳಗಾವಿ ಜಿಲ್ಲಾ ಸಹ ಪ್ರಭಾರಿ ಬಸವರಾಜ ಯಕ್ಕಂಚಿ ಮಾತನಾಡಿ, ಹುಕ್ಕೇರಿ ಮತಕ್ಷೇತ್ರದ 224 ಮತಗಟ್ಟೆಗಳಲ್ಲಿ ಮತದಾರರ ಪರಿಶೀಲನೆಗೆ ಬಿ.ಎಲ್.ಎ 2 ಸಮಿತಿ ಜವಾಬ್ದಾರಿ ವಹಿಸಬೇಕು. ಮತ ಪರಿಷ್ಕರಣೆಯಿಂದ ಅಕ್ರಮ ಮತದಾನ ತಡೆಯಲು ಸಾಧ್ಯವೆಂದರು.

ಮಂಡಲ ಅಧ್ಯಕ್ಷ ರಾಚಯ್ಯಾ ಹಿರೇಮಠ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಖಂಡರಾದ ಪೃಥ್ವಿ ಕತ್ತಿ, ಮಹಾವೀರ ನಿಲಜಗಿ, ಸತೀಶ ಅಪ್ಪಾಜಿಗೋಳ, ಸದಾಶಿವ ಹಳಿಂಗಳಿ, ಸತ್ತೆಪ್ಪಾ ನಾಯಿಕ, ಪ್ರಕಾಶ ಮುತಾಲಿಕ, ಗುರುರಾಜ ಕುಲಕರ್ಣಿ, ವಿರೇಶ ಗಜಬರ, ಗಜಾನನ ಕ್ವಳ್ಳಿ, ಸುನೀಲ ಪರ್ವತರಾವ, ಶೀತಲ ಬ್ಯಾಳಿ ಇದ್ದರು. ದುರ್ಗಪ್ಪಾ ಪಾಟೀಲ ಸ್ವಾಗತಿಸಿ, ಗೋಪಾಲ ಚನಗೌಡರ ನಿರೂಪಿಸಿ, ಶ್ರೀಶೈಲ ಮಠಪತಿ ವಂದಿಸಿದರು.



ಜಾತ್ರೆಗಳು ಭಾರತೀಯ ಸಂಸ್ಕೃತಿಯ ಪ್ರತೀಕ

ಅಡಹಳ್ಳಿ: ಗ್ರಾಮೀಣಪ್ರದೇಶದಲ್ಲಿ ನಡೆಯುವ ಜಾತ್ರೆಗಳು ಭಾರತೀಯ ಸಂಸ್ಕೃತಿಯ ಪ್ರತೀಕಗಳಾಗಿವೆ ಎಂದು ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಅವರು ಸಮೀಪದ ಕೋಹಳ್ಳಿ ಗ್ರಾಮದ ಶ್ರೀ ದೊಂಡಿಭಾ ಮುತ್ಯಾ ದೇವರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಸನ್ಮಾನ ಸ್ವೀಕರಿಸಿ ಮಾತನಾಡಿ, ಮಹಾತ್ಮರ ಸಂಪರ್ಕದಲ್ಲಿರುವ ಜಾತ್ರೆ ಹಾಗೂ ಸತ್ಸಂಗಗಳು ಜೀವ'ಂತಿಕೆ'ಯಿಂದ' ತುಂಬಿರುತ್ತವೆ. ಉತ್ಸವ, ಜಾತ್ರೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಂದ ಜನರಲ್ಲಿ ಪ್ರೀತಿ ವಿಶ್ವಾಸ ಭಾವೈಕ್ಯತೆ ಮೂಡುತ್ತದೆ. ಗ್ರಾಮೀಣ ಭಾಗದಲ್ಲಿ ಜಾತ್ರೆಗಳು ಜರುಗುವುದ್ದರಿಂದ ಅಲ್ಲಿ ಭಾಗವಹಿಸುವ ಪ್ರತಿಯೊಬ್ಬರ ಜನರಲ್ಲಿ ಅನ್ಯೋನ್ಯತೆ ಬೆಳೆದು ಸಂಬಂಧಗಳು ಗಟ್ಟಿಯಾಗುತ್ತದೆ ಎಂದರು.

ಈ ವೇಳೆ ಸದಾಶಿವ ಹರಪಾಳೆ, ತುಕಾರಾಮ ದೇವಖಾತೆ, ಸುರೇಶ ಅವತಾಡೆ, ಬಂದುಸಾಬ ಮುಜಾವರ, ಮೈಬೂಬ ಪಡಸಲಗಿ, ಸಂಗಪ್ಪ ಡಂಬಳಿ, ಕೇದಾರಿ ವಳಸಂಗ, ಮಹಾದೇವ ದೇವಖಾತೆ,



ಮಹಾದೇವ ಸತ್ತಿ, ವಿಠ್ಠಲ ಸರಗರ, ಸಹದೇವ ಸೂರ್ಯವಂಶಿ, ಲಿಂಗರಾಜ ಮುಧೋಳ, ವಿಠ್ಠಲ ಡಂಬಳಿ, ಗಣೇಶ ಪೂಜಾರಿ, ಅರವಿಂದ ಅವತಾಡೆ, ಗಣಪತಿ ಮರಗಾಳೆ, ಸದಾಶಿವ ದೇವಖಾತೆ, ಭೀಮು ಕಂಕಣವಾಡಿ, ರಾಜು ಭೋಸಲೆ ಸೇರಿದಂತೆ ಜಾತ್ರಾ ಕಮೀಟಿಯ ಎಲ್ಲ ಸದಸ್ಯರು, ಗ್ರಾಮಸ್ಥರು ಪಾಲ್ಗೊಂಡಿದ್ದರು.

ಮಾದರಿ ಕಾರ್ಖಾನೆ ರೂಪಿಸಲು ಶ್ರಮ: ಹಟ್ಟಿಹೊಳಿ

ಚನ್ನಮ್ಮನ ಕಿತ್ತೂರು: ಹಳೆಯ ಯಂತ್ರಗಳಿಂದ ಕಬ್ಬಿನ ಹಂಗಾಮಿನಲ್ಲಿ ಕಬ್ಬು ಅರೆಯುವ ಪ್ರಮಾಣ ಕುಂಠಿತವಾಗುತ್ತಿದ್ದು ಅದಕ್ಕಾಗಿ ಸುಮಾರು ರೂ 12 ಕೋಟಿಗೂ ಅಧಿಕ ವೆಚ್ಚದ ಮೂಲಕ ಯಂತ್ರಗಳನ್ನು ಬದಲಾವಣೆಗೊಳಿಸಿ ಹೆಚ್ಚಿನ ಕಬ್ಬನ್ನು ನುರಿಸುವಂತೆ ಮಾಡಿ ರಾಜ್ಯದಲ್ಲಿಯೇ ಮಾದರಿ ಕಾರ್ಖಾನೆಯನ್ನಾಗಿ ಮಾಡುತ್ತೇವೆಂದು ಎಂ.ಕೆ. ಹುಬ್ಬಳ್ಳಿಯ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ, ಎಂ.ಎಲ್.ಸಿ ಚನ್ನರಾಜ ಹಟ್ಟಿಹೊಳಿ ಹೇಳಿದರು.

ತಾಲೂಕಿನ ಎಂ.ಕೆ. ಹುಬ್ಬಳ್ಳಿಯ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಕ್ಕೆ ಬಂಡವಾಳದ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿ ರೈತರಿಗೆ ಕಬ್ಬನ್ನು ಕಟಾವಗೊಳಿಸಲು ಆಗುತ್ತಿರುವ ತೊಂದರೆ ನೀಗಿಸಲು ಸ್ವಂತ ಕಬ್ಬಿನ ಗ್ಯಾಂಗಗಳ ಸಿದ್ದತೆ



ಮಾಡಿಕೊಳ್ಳುತ್ತಿದ್ದೇವೆ. ಕಳೆದ ಸಾಲಿಗಿಂತ 2025-26 ನೇ ಸಾಲಿನಲ್ಲಿ ಆಡಳಿತ ಮಂಡಳಿಯ, ರೈತರ, ಕಾರ್ಮಿಕರ ಸಹಕಾರದಿಂದ ಸುಮಾರು 80 ದಿವಸಗಳಲ್ಲಿ 2,33115 ಮೆಟ್ರಿಕ್ ಟನ್ ಕಬ್ಬನ್ನು ನುರಿಸಿ 2,67344 ಚೀಲ ಸಕ್ಕರೆಯನ್ನು ಉತ್ಪಾದಿಸಿ 11.3.1 ಸಕ್ಕರೆ ಇಳುವರಿ ಬಂದಿದ್ದು ರೈತರಿಗೆ ಪ್ರತಿ ಟನ್‌ಗೆ ರೂ 3250 ರಂತೆ ರೂ 65.84 ಕೋಟಿ ವಿತರಿಸಲಾಗಿದ್ದು ರೂ 9 ಕೋಟಿ ಮಾತ್ರ ಬಾಕಿ ಇದ್ದು ಸದ್ಯದಲ್ಲಿಯೇ ವಿತರಿಸಲು ಕ್ರಮ ಜರುಗಿಸಲಾಗಿದೆ. ಈ ಬಾರಿ 10 ಸಾವಿರ ಟನ್ ಮೊಲ್ಯಾಸಿಸ್ ಹಾಗೂ 16 ಲಕ್ಷ ಲೀಟರ್ ಸ್ಪಿರೀಟ್ ಉತ್ಪಾದಿಸಲಾಗಿದೆ ಕಾರ್ಖಾನೆ ಪ್ರಾರಂಭಿಕ ಹಂತದಲ್ಲಿ ಬಗ್ಯಾಸ್‌ನ್ನು ಬೇರೆ ಕಡೆಯಿಂದ ತಂದು ಪ್ರಾರಂಭಿಸಬೇಕಾಗುತ್ತಿತ್ತು ಆದರೆ ಈ ಬಾರಿ 5 ಸಾವಿರ ಟನ್ ಬಗ್ಯಾಸ್‌ನ್ನು ಉಳಿಸಿ ಒಟ್ಟಾರೆಯಾಗಿ ಕಳೆದ ಸಾಲಿಗಿಂತ ಪ್ರಸಕ್ತ ಹಂಗಾಮಿನಲ್ಲಿ ಹೆಚ್ಚಿನ ಉತ್ಪಾದನೆಯಾಗಿದೆ.

ಈ ಕಾರ್ಖಾನೆಯನ್ನು ಮುಂಬರುವ ದಿವಸಗಳಲ್ಲಿ ಮತ್ತಷ್ಟು ಅಭಿವೃದ್ಧಿ ಪದತ್ತ ಸಾಗಿಸೋಣ ಇದಕ್ಕೆ ರೈತ ಭಾಂದವರ, ಶೇರುದಾರರ ಆಶೀರ್ವಾದ ಕಾರ್ಖಾನೆಯ ಮೇಲೆ, ಆಡಳಿತ ಮಂಡಳಿಯ ಮೇಲೆ ಸದಾ ಇರಲಿ ಎಂದು ಕೇಳಿಕೊಂಡರು.

ಕಾರ್ಮಿಕರಿಗೆ ಉಚಿತ ಸಕ್ಕರೆ ಉಡುಗೋರೆ

ಎಲ್ಲ ರೈತರಿಗೆ ಯುಗಾದಿ ಹಬ್ಬದ ಶುಭಾಶಯಗಳನ್ನು ತಿಳಿಸುತ್ತಾ ಹಬ್ಬದ ಉಡುಗರೆಯಾಗಿ ರೈತರಿಗೆ ಪ್ರತಿ ಟನ್ ಕಬ್ಬಿಗೆ 250 ಗ್ರಾಂ ಸಕ್ಕರೆಯನ್ನು ಪ್ರತಿ ಕೆಜಿ ಸಕ್ಕರೆಗೆ 20 ರೂ. ದರದಂತೆ ಹಾಗೂ ಇನ್ನೂಳಿದ ಶೇರುದಾರರಿಗೆ ಪ್ರತಿ ಕೆಜಿಗೆ 20 ರೂ. ದರದಂತೆ 25 ಕೆಜಿ ಸಕ್ಕರೆಯನ್ನು ಹಾಗೂ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರಿಗೂ ತಲಾ 10 ಕೆಜಿ ಸಕ್ಕರೆಯನ್ನು ಉಚಿತವಾಗಿ ವಿತರಿಸಲು ಕ್ರಮ ಜರುಗಿಸಲಾಗಿದ್ದು ಎಲ್ಲರೂ ಇದರ ಪ್ರಯೋಜನ ಪಡೆಯಬೇಕೆಂದರು. ಈ ಕಾರ್ಖಾನೆಯಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ 2012 ನೇ ಸಾಲಿನಿಂದ ಈಚೆಗೆ ನಿವೃತ್ತರಾದ ಹಲವಾರು ಕಾರ್ಮಿಕರ ರೂ 3 ಕೋಟಿ ಗ್ರ್ಯಾಚೂಟಿ ಹಣ ಬಾಕಿ ಇದ್ದು ಇದನ್ನು ಶೇಕಡಾವಾರು ಮಾದರಿಯಲ್ಲಿ ಹಂತ ಹಂತವಾಗಿ ವಿತರಿಸಲು ಕ್ರಮ ಜರುಗಿಸುತ್ತೇವೆಂದರು. ಕಾರ್ಖಾನೆ ಉಪಾಧ್ಯಕ್ಷ ಶಿವನಗೌಡ ಪಾಟೀಲ, ವ್ಯವಸ್ಥಾಪಕ ನಿರ್ದೇಶಕ ಮೋಹನ ಹಿರೇಮಠ, ನಿರ್ದೇಶಕರಾದ ಶಂಕ್ರೆಪ್ಪ ಹೊಳಿ, ರಾಮನಗೌಡ ಪಾಟೀಲ, ಸುರೇಶ ಹುಲಿಕಟ್ಟಿ, ರಘು ಪಾಟೀಲ, ಭರಮಪ್ಪ ಶಿಗೆಹಳ್ಳಿ, ಬಾಳಪ್ಪ ಪೂಜಾರ, ಕಚೇರಿ ಅಧೀಕ್ಷಕ ಎಸ್ .ಜಿ.ಹೆಗಡೆ, ಇತರರು ಇದ್ದರು.

ಕಿರುಸುದ್ದಿ

ವಿವಿಧೆಡೆ ಬ್ರಹ್ಮಧ್ವಜ ಸ್ಥಾಪನೆ



ರಾಯಬಾಗ : ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಯುಗಾದಿ ಹಬ್ಬದ ನಿಮಿತ್ತ ರಾಯಬಾಗಿನ ಶ್ರೀ ಸೋಮನಾಥ ದೇವಸ್ಥಾನದಲ್ಲಿ ಮತ್ತು ಹಿಂದೂಗಳು ಮನೆ ಮನೆಗಳಲ್ಲಿ ಸಾಮೂಹಿಕ ಬ್ರಹ್ಮಧ್ವಜದ ಸ್ಥಾಪನೆ ಮಾಡಿ ರಾಮರಾಜ್ಯದ ಸ್ಥಾಪನೆಗಾಗಿ ಪ್ರತಿಜ್ಞೆಯನ್ನು ಮಾಡಲಾಯಿತು. ಧರ್ಮಪ್ರೇಮಿಗಳು, ಹಿಂದೂ ಜನಜಾಗೃತಿ ಸಮಿತಿಯ ಕಾರ್ಯಕರ್ತರು ಬ್ರಹ್ಮಧ್ವಜವನ್ನು ಏರಿಸಿ, ಸಮಾಜದಲ್ಲಿ ಧರ್ಮ, ಸತ್ಪ್ರವೃತ್ತಿ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬಲಪಡಿಸುವ ಸಂಕಲ್ಪ ಮಾಡಿದರು. ರಾಮರಾಜ್ಯ ಸ್ಥಾಪನೆಗೆ ಅಗತ್ಯವಾದ ಸತ್ಸಂಕಲ್ಪಗಳನ್ನು ಪಾಲಿಸುವುದಾಗಿ ಪ್ರತಿಜ್ಞೆ ಸ್ವೀಕರಿಸಲಾಯಿತು. ಸಿದ್ದು ದೇಸಾಯಿ, ಶಿವಾನಂದ ಬಂತೆ ಮಾತನಾಡಿ, ಯುಗಾದಿ ಅಂದರೆ ''ಯುಗ + ಆದಿ'' ಎಂಬ ಪದಗಳಿಂದ ರೂಪುಗೊಂಡಿದ್ದು, ಇದು ಹೊಸ ಯುಗದ ಪ್ರಾರಂಭವನ್ನು ಸೂಚಿಸುತ್ತದೆ. ಚೈತ್ರ ಶುಕ್ಲ ಪ್ರತಿಪದೆಯಂದು ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ. ಪುರಾಣಗಳ ಪ್ರಕಾರ, ಈ ದಿನ ಬ್ರಹ್ಮದೇವನು ಸೃಷ್ಟಿ ಕಾರ್ಯವನ್ನು ಪ್ರಾರಂಭಿಸಿದನು. ಯುಗಾದಿಯು ಕೇವಲ ಹಬ್ಬವಲ್ಲ, ಅದು ಜೀವನದಲ್ಲಿ ಹೊಸ ಆಶೆಗಳು, ಹೊಸ ಸಂಕಲ್ಪಗಳು ಮತ್ತು ಸಕಾರಾತ್ಮಕತೆಯನ್ನು ಆರಂಭಿಸುವ ದಿನವಾಗಿದೆ. ವಿಜಯ, ಸೃಷ್ಟಿ ಮತ್ತು ಧರ್ಮದ ಸಂಕೇತವಾಗಿ ಬ್ರಹ್ಮಧ್ವಜವನ್ನು ಏರಿಸಲಾಗುತ್ತದೆ ಎಂದರು. ಈ ಕಾರ್ಯಕ್ರಮದಲ್ಲಿ ಸಮಾಜದಲ್ಲಿ ಧಾರ್ಮಿಕ ಜಾಗೃತಿ, ಏಕತೆ ಮತ್ತು ಸಂಸ್ಕೃತಿಯ ಮಹತ್ವ ಒತ್ತಿ ಹೇಳಲಾಯಿತು. ಯುವಜನತೆ ಧರ್ಮದ ಮಾರ್ಗದಲ್ಲಿ ಸಾಗುವಂತೆ ಪ್ರೇರೇಪಿಸಲಾಯಿತು.

ಮೂವರು ಗಡಿಪಾರು

ಬೆಳಗಾವಿ: ನಗರದಲ್ಲಿ ಕಳೆದ ಕೆಲ ದಿನಗಳಿಂದ ಸಾರ್ವಜನಿಕ ಸ್ಥಳದಲ್ಲಿ, ಮಟಕಾ, ಗಾಂಜಾ ಪ್ರಕರಣದಲ್ಲಿ ಮೂರು ಜನ ಆರೋಪಿಗಳನ್ನು ಬೆಳಗಾವಿ ಪೊಲೀಸರು ಬಂಧಿಸಿದರು. ಇದೀಗ ಮೂರು ಜನ ಆರೋಪಿಗಳನ್ನು ಬೆಳಗಾವಿ ಪೊಲೀಸರು ಬೇರೆ ಜಿಲ್ಲೆಗಳಿಗೆ ಗಡಿಪಾರು ಮಾಡಿದ್ದಾರೆ. ಆರೋಪಿಗಳಾದ ಶಹಾಪುರದ ಸರ್ಫರಾಜ ಶಬ್ಬೀರ ಅಹ್ಮದ್ ಶೇಖ್, ಟಿಳಕವಾಡಿ ಅಯೋಧ್ಯಾ ನಗರದ ವಿನಾಯಕ ಪ್ರಕಾಶ ಕೊಲ್ಲಾಪುರಿ ಮತ್ತು ಶಹಾಪುರ ಹೊಸೂರ ಬಸವನಗಲ್ಲಿಯ ಸಾಗರ ಪಾಂಡುರಂಗ ಸಾಲಗುಡೆ ಬಂಧಿತರು. ಇವರನ್ನು ಮುಂದಿನ ಐದು ತಿಂಗಳ ಅವಧಿಗೆ ವಿಜಯಪುರ, ಕಾರವಾರ ಮತ್ತು ಯಾದಗಿರಿ ಜಿಲ್ಲೆಗಳಿಗೆ ಇವರನ್ನು ಗಡಿಪಾರು ಮಾಡಿ ಆದೇಶಿಸಿದ್ದಾರೆ.

ಕುರಣಿವಾಡಿದಲ್ಲಿ ಜಾತ್ರೆಗಳ ಸಂಭ್ರಮ

ಯಮಕನಮರಡಿ: ಸಮೀಪದ ಕುರಣಿವಾಡಿ ಗ್ರಾಮದ ಪ್ರಭುದೇವರ, ಮಲ್ಲಿಕಾರ್ಜುನ ದೇವರ, ಲಕ್ಷ್ಮೀದೇವಿ ಜಾತ್ರಾ ಮಹೋತ್ಸವ, ಮಾರುತಿದೇವರ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಮಾ.19 ರಿಂದ 24ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸಡಗರ ಸಂಭ್ರಮದಿಂದ ಜರಗುಲಿದೆ. ಮಾ.19ರಂದು ಬೆಳಗ್ಗೆ ಹಂದರ ಕಾರ್ಯಕ್ರಮ, 11ಕ್ಕೆ ಮಹಾಪ್ರಸಾದ, ಸಂಜೆ ಬದನೆ ಕಾರ್ಯಕ್ರಮ ಜರಗುವುದು. 20ರಂದು ಬೆಳಗ್ಗೆ 7:30ಕ್ಕೆ ಕುಂಭಮೇಳದೊಂದಿಗೆ ಮಾರುತಿ ದೇವರ ಮೂರ್ತಿ ಮೆರವಣಿಗೆ, 11ಕ್ಕೆ ಸಿದ್ದಬಸವ ದೇವರು ಹುಣಸಿಕೋಳಮಠ ಪೂಜ್ಯರಿಂದ ಆಶೀರ್ವಚನ, 12ಕ್ಕೆ ಮಹಾಪ್ರಸಾದ, ಸಂಜೆ ಭಜನ ಕಾರ್ಯಕ್ರಮ ಜರಗುವುದು. 21ರಿಂದ ಸೂರ್ಯೋದಯದಲ್ಲಿ ಮಾರುತಿದೇವರ ಪ್ರಾಣ ಪ್ರತಿಷ್ಠಾಪನೆ, ಅಂಬಲಿ ಬಿಂದಿಗೆ ಕಾರ್ಯಕ್ರಮ ಜರಗುವುದು. ಸ್ಯಾನಿಧ್ಯ ಮಹೇಶಾನಂದ ಶ್ರೀಗಳು, ಜಗದ್ಗುರು ರಾಚೋಟೇಶ್ವರ ಶಿವಾಚಾರ್ಯರ ಶ್ರೀಗಳು ಆಶೀರ್ವಚನ, ಮಹಾಪ್ರಸಾದ, ಸಾಂಸ್ಕೃತಿಕ ಕಾರ್ಯಕ್ರಮ ಜರಗುವುದು. 22ರಂದು ವಿವಿಧ ಮನೋರಂಜನ ಸ್ಪರ್ಧೆಗಳು, ಕುದುರೆ ಗಾಡಿ ಷರತ್ತು, ಎತ್ತಿನಗಾಡಿ ಶತು, ಟಗರಿನ ಕಾಳಗ ಜರಗುವುದು. 23ರಂದು ಬೆಳಿಗ್ಗೆ ಸೂರ್ಯೋದಯಕ್ಕೆ ಪ್ರಭುದೇವರ, ಮಲ್ಲಿಕಾರ್ಜುನ ದೇವರಿಗೆ ಅಭಿಷೇಕ, ಸಕಲ ವಾದ್ಯ ಮೇಳಗಳೊಂದಿಗೆ ಅಂಬಲಿ ಬಿಂದಿಗೆ ತರುವುದು, ಸಾನಿಧ್ಯ ಸಿದ್ಧಬಸವ ದೇವರ ಆಶೀರ್ವಚನ, ಅಧ್ಯಕ್ಷತೆ ಸತೀಶ ಜಾರಕಿಹೊಳಿ, ಪ್ರಿಯಾಂಕಾ ಜಾರಕಿಹೊಳಿ, ರಮೇಶಣ್ಣ ಕತ್ತಿ, ಶಶಿಕಾಂತ ಗುರೂಜಿ, ಚೂನ್ನಪ್ಪ ಪೂಜಾರಿ ಭಾಗವಹಿಸುವರು. ಮಹಾಪ್ರಸಾದ, ರಾಧಾಕೃಷ್ಣ ಬೈಲಾಟ ನಡೆಯುವುದು. 24ರಂದು ಬೆಳಿಗ್ಗೆ 6ಕ್ಕೆ ಲಕ್ಷ್ಮೀ ದೇವಿಗೆ ಅಭಿಷೇಕ, ಸಂಜೆ 6:30ಕ್ಕೆ ಲಕ್ಷ್ಮೀ ದೇವಿಗೆ ಉಡಿ ತುಂಬುವ ಕಾರ್ಯಕ್ರಮ, ಮಹಾಪ್ರಸಾದ, ಲವಂಗರಾಜ ತಂಡದಿಂದ ರಸಮಂಜರಿ ಕಾರ್ಯಕ್ರಮ ಸಂಪನ್ನಗೊಳಿಸುವುದು.



ರಾಯಬಾಗ: ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆ ಘಟಪ್ರಭಾ ಹಾಗೂ ಮಣಿಪಾಲ್ ಫೌಂಡೇಶನ್ ಬೆಂಗಳೂರು ಸಂಯುಕ್ತ ಆಶ್ರಯದಲ್ಲಿ ಮಾಜಿ ದೇವದಾಸಿ ಮಹಿಳೆಯರಿಗೆ ದೇವದಾಸಿ ಪದ್ಧತಿ ಬಾಲ್ಯ ವಿವಾಹ ಬಾಲ ಕಾರ್ಮಿಕ ಹಾಗೂ ಸರ್ಕಾರದ ಸೌಲಭ್ಯಗಳ ಬಗ್ಗೆ ಅರಿವು ಕಾರ್ಯಕ್ರಮ ರಾಯಬಾಗ ನೌಕರ ಭವನದಲ್ಲಿ ನಡೆಯಿತು.

2,992 ಮೂಲ ಅಕೌಂಟ್ ಹ್ಯಾಕ್: ಭೂಷಣ್ ಬೊರಸೆ ಮಾಹಿತಿ

ಬೆಳಗಾವಿ : ನಗರದಲ್ಲಿ 2,992 ಮೂಲ ಅಕೌಂಟ್ ಅಪರೇಟ್ ಆಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ಹೇಳಿದರು.



ಶುಕ್ರವಾರ ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. 772 ಅಕೌಂಟ್ ಮೋಸ ಮಾಡಿದ ಅಕೌಂಟ್ ಪ್ರಕರಣದ ಕೆವೈಸಿ ತೆಗೆದುಕೊಂಡು ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅವರ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ನಿಮ್ಮ ಸ್ನೇಹಿತರು, ಪರಿಚಯದವರು, ಮನೆಯ ಕೆಲಸ ಎಂದು ಹೇಳಿ ಟೈಮ್‌ಪಾಸ್ ಜನರ ಅಕೌಂಟ್ ಕೇಳಿ ಸೈಬರ್ ಕ್ರೈಂನಲ್ಲಿ ಸೇರಿಸಿಕೊಳ್ಳುವ ಹುನ್ನಾರ ನಡೆಸುವ ಸಂಚು ರೂಪಿಸುತ್ತಿದ್ದಾರೆ. ಇದರಿಂದ ಎಚ್ಚರಿಕೆಯಿಂದ ಇರಬೇಕು. ಇಲ್ಲದಿದ್ದರೇ ಕೇಸ್ ದಾಖಲಿಸಲಾಗುವುದು ಎಂದು ತಿಳಿಸಿದರು. ಬೇಕಾಬಿಟ್ಟಿಯಾಗಿ ಮೊಬೈಲ್‌ಗೆ ಲಿಂಕ್ ಬಂದ್ರೆ ಎಚ್ಚರಿಕೆಯಿಂದ ಇರಬೇಕು. ನಿಮ್ಮ ಸ್ನೇಹಿತರು ಶುಭಾಶಯ ಮೆಸೇಜ್ ಕಳುಹಿಸುವಾಗ ಜಾಗರೂಕತೆಯಿಂದ ಇರಬೇಕು ಎಂದು ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ಅವರು, ಸಾರ್ವಜನಿಕರಿಗೆ ಎಚ್ಚರಿಕೆಯ ಜೊತೆಗೆ ಮನವಿ ಮಾಡಿಕೊಂಡಿದ್ದಾರೆ.



ಹಾರೂಗೇರಿ: ಯುಗಾದಿ ಹಬ್ಬದ ಪ್ರಯುಕ್ತ ಜನತಾ ಸಹಕಾರ ಬ್ಯಾಂಕಿನ ಅಧ್ಯಕ್ಷ ರಾಜಶೇಖರ ಬ ಪಾಟೀಲ ಅವರು ಹಾಗೂ ಕುಟುಂಬ ವರ್ಗ ಶುಕ್ರವಾರ ಪಟ್ಟಣದ ಆರಾಧ್ಯ ದೈವ ಶ್ರೀ ಮಾರುತಿರಾಯನ ವಿಶೇಷ ಪೂಜೆ ನೆರವೇರಿಸಿದರು. ಧರ್ಮಪತ್ನಿ ಜಯಶ್ರೀ ರಾ.ಪಾಟೀಲ, ಸುಪುತ್ರರಾದ ಆದರ್ಶ ರಾ.ಪಾಟೀಲ, ಆದಿತ್ಯ ರಾ.ಪಾಟೀಲ ಇದ್ದರು.

ಎಸೆಸೆಲ್ಸಿ ವಿದ್ಯಾರ್ಥಿಗಳಿಗೆ 'ಓದುವ ಮನೆ'

▶ವಿಮಲಾ ಸಿ ಚಿನಕೇಕರ

ಚಿಕ್ಕೋಡಿ: ಶೈಕ್ಷಣಿಕ ಜಿಲ್ಲಾ ವ್ಯಾಪ್ತಿಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ''ಓದುವ ಮನೆ'' ತೆರೆಯುವ ಮೂಲಕ ವಿದ್ಯಾರ್ಥಿಗಳ ಪರೀಕ್ಷಾ ಭಯವನ್ನು ದೂರ ಮಾಡಿದ್ದೂ ಅಲ್ಲದೇ, ಹೆಚ್ಚು ಅಂಕಗಳಿಗೆ ಅನುಕೂಲ ಮಾಡಿಕೊಡಲಾಗಿದೆ.

ಚಿಕ್ಕೋಡಿ ಡಿಡಿಪಿಐ ಆರ್ ಎಸ್ ಸೀತಾರಾಮು ಅವರ ಇಚ್ಛಾಶಕ್ತಿಯ ಫಲವಾಗಿ 2 ಸಾವಿರಕ್ಕೂ ಹೆಚ್ಚು ''ಓದುವ ಮನೆ''ಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಓದುವ ಮನೆ ರಾಜ್ಯದಲ್ಲಿಯೇ ವಿನೂತನ ಪ್ರಯೋಗವಾಗಿದ್ದು, ಜನರ ಮೆಚ್ಚುಗೆಗೆ ಪಾತ್ರವಾಗಿವೆ.

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ ಒಟ್ಟು 621 ಪ್ರೌಢಶಾಲೆಗಳಿವೆ. ಇವುಗಳಲ್ಲಿ 240 ಸರ್ಕಾರಿ, 152 ಅನುದಾನಿತ ಹಾಗೂ 229 ಅನುದಾನ ರಹಿತ ಶಾಲೆಗಳು ಇವೆ. ಇವುಗಳಲ್ಲಿ 45 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು 2026ರ ಎಸ್ಸೆಸ್ಸೆಲ್ಸಿ ಪರೀಕ್ಷೆ–1 ಬರೆಯುತ್ತಿದ್ದಾರೆ. ಶೈಕ್ಷಣಿಕ ಜಿಲ್ಲಾ ವ್ಯಾಪ್ತಿಯ ಅಥಣಿ, ಕಾಗವಾಡ, ರಾಯಬಾಗ, ಚಿಕ್ಕೋಡಿ, ನಿಪ್ಪಾಣಿ, ಹುಕ್ಕೇರಿ, ಮೂಡಲಗಿ ಹಾಗೂ ಗೋಕಾಕ ಶಿಕ್ಷಣ ವಲಯಗಳಲ್ಲಿ ಬಹುತೇಕ ಗ್ರಾಮಗಳಲ್ಲಿ ಓದುವ ಮನೆಗಳನ್ನು ತೆರೆಯಲಾಗಿದೆ. ಶಾಲಾ ಕೊಠಡಿ, ಅಂಗನವಾಡಿ ಕೇಂದ್ರ, ಖಾಲಿ ಮನೆಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಾರೆ.

ಓದುವ ಮನೆಗಳು ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ತೆರೆಯಲಾಗಿದ್ದು, ಇವುಗಳ ನಿರ್ವಹಣೆಗೆ ಇಲಾಖೆಗೆ ಯಾವುದೇ ಹೆಚ್ಚುವರಿ ಹಣಕಾಸಿನ ಹೊರೆ ಇಲ್ಲ, ಸ್ವಯಂಸ್ಫೂರ್ತಿಯಾಗಿ ಸ್ಥಳೀಯರು ಸ್ಥಳಾವಕಾಶ ನೀಡಿದ್ದು, ಕೆಲವೊಂದು ಕಡೆಗೆ ಸ್ಥಳೀಯರೇ ಓದುವ ಮನೆಯ ಉಸ್ತುವಾರಿಯನ್ನು ನೋಡಿಕೊಳ್ಳುವ ಮೂಲಕ ಶಿಕ್ಷಣ ಇಲಾಖೆಯ ವಿನೂತನ ಪ್ರಯೋಗಕ್ಕೆ ಸಾಥ್ ನೀಡಿದ್ದಾರೆ. ಓದುವ ಮನೆಗಳು ಪ್ರತಿ ದಿನ ಸಂಜೆ 6ರಿಂದ 9 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತಿವೆ. ಪ್ರಸಕ್ತ ಸಾಲಿನಲ್ಲಿ 10ನೇ ತರಗತಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಓದುವ ಮನೆಯಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶವಿದೆ.



> 10ನೇ ತರಗತಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಓದುವ ಮನೆ ಉಪಯುಕ್ತವಾಗಿವೆ. ಪಾಲಕರು, ವಿದ್ಯಾರ್ಥಿಗಳ ಮೆಚ್ಚುಗೆಗೆ ಓದುವ ಮನೆಗಳು ಪಾತ್ರವಾಗಿವೆ.
>
> ■ ಆರ್. ಎಸ್. ಸೀತಾರಾಮು, ಡಿಡಿಪಿಐ, ಚಿಕ್ಕೋಡಿ

> ಬೇರೊಂದು ಜಿಲ್ಲೆಗೆ ತಂದೆ ಕುರಿ ಮೇಯಿಸಲು ತೆರಳಿದ್ದು, ಮನೆಯಲ್ಲಿ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿತ್ತು. ಅಭ್ಯಾಸದ ಜೊತೆಗೆ ಶಿಕ್ಷಕರ ಮಾರ್ಗದರ್ಶನ ನೀಡುತ್ತಿರುವದು ಹೆಚ್ಚು ಅಂಕಗಳನ್ನು ಪಡೆಯಲು ಸಹಾಯವಾಗಲಿದೆ
>
> ■ ಸಚಿನ ಹರಕೆ, 10ನೇ ತರಗತಿ ವಿದ್ಯಾರ್ಥಿ

ಕೆಲವು ಓದುವ ಮನೆಗಳು ಸಂಜೆ ಕಾರ್ಯನಿರ್ವಹಿಸುತ್ತವೆ. ಕೆಲವು ಕಡೆಗೆ ಬೆಳಿಗ್ಗೆ 5 ರಿಂದ 8 ಗಂಟೆಯವರೆಗೂ ತೆರೆದಿರುತ್ತವೆ. ಇನ್ನು ಕೆಲವು ಕಡೆಗಂತೂ ಬೆಳಿಗ್ಗೆ, ಸಂಜೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಓದುವ ಮನೆಯಿಂದ ಅನುಕೂಲವಾಗಿವೆ. ಕಳೆದ ಒಂದು ತಿಂಗಳಿನಿಂದ ಇಂತಹ ಪ್ರಯೋಗ ಮಾಡಿದ್ದು, ಪರೀಕ್ಷಾ ಅವಧಿಯಲ್ಲಿ ಓದುವ ಮನೆಗಳು ಸಹಾಯಕವಾಗಿವೆ.

ಓದುವ ಮನೆಯನ್ನು ಆಯಾ ಗ್ರಾಮದಲ್ಲಿಯ ಶಿಕ್ಷಕರು, ನಿವೃತ್ತ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು, ಪಾಲಕರು ಸೇರಿದಂತೆ ಆಸಕ್ತರು ನಿರ್ವಹಣೆ ಮಾಡಬಹುದಾಗಿದೆ. ವಿದ್ಯಾರ್ಥಿಗಳು, ಪಾಲಕರು ಇದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಓದುವ ಮನೆಯಲ್ಲಿ ವಿದ್ಯಾಭ್ಯಾಸದಲ್ಲಿ ತೊಡಗುವದರಿಂದ ಗುಂಪು ಚರ್ಚೆ, ಹಳೆಯ ಪ್ರಶ್ನೆ ಪತ್ರಿಕೆಗಳಿಗೆ ಉತ್ತರ, ಸೇರಿದಂತೆ ಅಭ್ಯಾಸ ಮಾಡಲು ಮಕ್ಕಳಿಗೆ ಅನುಕೂಲವಾಗುತ್ತಿದೆ. ಓದುವ ಮನೆಯಲ್ಲಿ ಯಾವೆಲ್ಲ ಚಟುವಟಿಕೆ ವಿದ್ಯಾರ್ಥಿಗಳು ಮಾಡುತ್ತಾರೆ ಎಂಬುವದನ್ನು ಪ್ರತಿ ದಿನವೂ ನಿರ್ವಹಣೆ ಮಾಡುವ ಶಿಕ್ಷಕರು, ಪಾಲಕರು ಆಯಾ ಶಾಲೆಯ ಶಿಕ್ಷಕರ ಮೊಬೈಲ್‌ಗಳಿಗೆ ಫೋಟೊ, ವಿಡಿಯೋ ಕಳುಹಿಸುತ್ತಾರೆ. ಓದುವ ಮನೆ ಹೇಗೆಲ್ಲ ನಿರ್ವಹಣೆಯಾಗುತ್ತದೆ ಎಂಬುವದನ್ನು ತಾಲೂಕು, ಜಿಲ್ಲಾ ಮಟ್ಟದ ಅಧಿಕಾರಿಗಳ ಗಮನಕ್ಕೆ ಬರುತ್ತದೆ.

ಮೌಲ್ಯಗಳ ಬೆಳೆಸುವಲ್ಲಿ ಎನ್‌ಎಸ್‌ಎಸ್ ಸಹಕಾರಿ

ಮೂಡಲಗಿ: ಅಖಂಡ ಭಾರತದ ಮೌಲ್ಯಗಳನ್ನು ಬೆಳೆಸುವಲ್ಲಿ ಎನ್.ಎಸ್.ಎಸ್. ಸಹಕಾರಿಯಾಗಿದೆ. ಇಂದಿನ ದಿನಗಳಲ್ಲಿ ಯಾಂತ್ರಿಕ – ತಾಂತ್ರಿಕ ಜೀವನ ಹೆಚ್ಚಾಗಿ ರೂಪಗೊಳ್ಳುತ್ತಿದ್ದು ಇದರಿಂದ ನಮ್ಮ ಸಾಮಾಜಿಕ ಜೀವನದ ಮೌಲ್ಯಗಳು ಕಡಿಮೆಯಾಗುತ್ತಿದ್ದು ಇಂದಿನ ಯುವಕರಲ್ಲಿ ಸಾಮಾಜಿಕ, ನಾಗರಿಕ, ಸಾಂಪ್ರಾದಾಯಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಎನ್.ಎಸ್.ಎಸ್. ನಂತಹ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ವಿದ್ಯಾರ್ಥಿ ಜೀವನದಲ್ಲಿ ವಿದ್ಯಾರ್ಥಿಗಳು ತೊಡಗಿದಾಗ ಮಾತ್ರ ಸಾಮಾಜಿಕ ಮೌಲ್ಯಗಳು ಬೆಳೆದು ಭಾರತದ ಪ್ರಾಬಲ್ಯತೆ ಹೆಚ್ಚುತ್ತದೆ ಎಂದು ಇಟ್ನಾಳದ ಪಿಡಿಓ ಸವಿತಾ ಪಾಟೀಲ ಹೇಳಿದರು.

ಮೂಡಲಗಿ ಪಟ್ಟಣದ ಸಮೀಪದ ಇಟ್ನಾಳ ಗ್ರಾಮದ ಮಾದವಾನಂದ ದೇವಸ್ಥಾನದಲ್ಲಿ ಆರ್‌ಡಿ.ಎಸ್, ಕಲಾ, ವಾಣಿಜ್ಯ, ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ವಾರ್ಷಿಕ ಎನ್‌ಎಸ್‌ಎಸ್ ಶಿಬಿರದ ಸಮಾರೋಪದಲ್ಲಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಗುಂಪು ಜೀವನ, ಸಾಮಾಜಿಕ ಜೀವನದ ಅರಿವು ಹಲವಾರು ವೃತ್ತಿಗಳ ತಿಳುವಳಿಕೆ ಗ್ರಾಮೀಣ ಜನರ ಬದುಕು ಅರ್ಥಮಾಡಿಕೊಳ್ಳುವಲ್ಲಿ ಎನ್.ಎಸ್.ಎಸ್. ಘಟಕಗಳು ಮಹತ್ವದ ಪಾತ್ರ ವಹಿಸುತ್ತೇವೆ. ಎನ್.ಎಸ್.ಎಸ್. ಶಿಬಿರದಲ್ಲಿ ಪಾಲ್ಗೊಂಡಾಗ ಸಾಮಾಜಿಕ ಚಿಂತನೆಯ ಕೌಶಲ್ಯಗಳು ಬೆಳದು ಬರಲು ಸಹಾಯಕವಾಗಿದೆ ಎಂದರು.

ಕಾಲೇಜಿನ ಎಫ್.ಡಿ.ಸಿ ಸುಭಾಸ ಮಾಲೋಜಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಎನ್.ಎಸ್.ಎಸ್.ಶಿಬಿರಗಳು ಸಮಾಜದ ಬಗ್ಗೆ ಕಾಳಜಿ ನಾಯಕತ್ವದ ಜವಾಬ್ದಾರಿ ಜೊತೆಗೆ ಗ್ರಾಮಗಳ ಸ್ವಚ್ಚತೆಯ ಮಹತ್ವ ಹಾಗೂ ನಮ್ಮ ಹಳ್ಳಿಗಳಲ್ಲಿ ಇರುವ ಧಾರ್ಮಿಕ ಕೇಂದ್ರಗಳ ಕಾರ್ಯವೈಖರಿಯ ಪರಿಚಯವಾಗುತ್ತದೆ ಎಂದರು.

ಕಾಲೇಜು ಪ್ರಾಚಾರ್ಯ ಸತ್ತೆಪ್ಪಾ ಗೋಟೂರೆ ಮಾತನಾಡಿ, ಎನ್.ಎಸ್.ಎಸ್. ಶಿಬಿರಗಳಲ್ಲಿ ಭಾಗವಹಿಸುವದರಿಂದ ನಿಜವಾದ ಬದುಕಿನ ಮೌಲ್ಯ ಪುಸ್ತಕೀಯ ವಿಷಯಗಳಿಗಿಂತ ಪ್ರಾಯೋಗಿಕ ಅನುಭವಗಳನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬಹುದು ಎಂದರು.

ಮಾದು ಮಾರಾಪೂರ, ಕಲಾವತಿ ಹಾಲಳ್ಳಿ, ನಾರಾಯಣ ಸುರಾಣಿ, ಬಸವರಾಜ ಮುತ್ನಾಳ ಬಿ.ಆರ್. ಒಡೆಯರ, ಯು.ಎ.ಮಗದುಮ್ಮ ಉಪನ್ಯಾಸಕರಾದ ಕಿರಣ ಪಟ್ಟಣಶೆಟ್ಟಿ ಸುನೀಲ ಸತ್ತಿ, ಕವಿತಾ ಮಳಲಿ, ಅಕ್ಷತಾ ಹೊಸಮನಿ, ಎನ್.ಎಸ್.ಎಸ್. ಘಟಕಾಧಿಕಾರಿ ರಾಜು ಪತ್ತಾರ ಮತ್ತಿತರರಿದ್ದರು. ಜ್ಯೋತಿ ಗರಗದ ನಿರೂಪಿಸಿ, ಸೌಭಾಗ್ಯ ಸಾಯನ್ನವರ ಸ್ವಾಗತಿಸಿ, ಸುಶ್ಮಿತಾ ತುಪ್ಪದ ವಂದಿಸಿದರು.



ಮಾ.24ರಿಂದ ಅದ್ದೂರಿ ಜಾತ್ರಾ ಮಹೋತ್ಸವ

ಬೈಲಹೊಂಗಲ: ಪಟ್ಟಣದ ಬಸವನಗರದ ಶ್ರೀ ಮಾತಾ ದುರ್ಗಾ ಪರಮೇಶ್ವರಿ ದೇವಸ್ಥಾನದ 17ನೇ ಜಾತ್ರಾ ಮಹೋತ್ಸವವು ಮಾ. 24ರಿಂದ 27ರವರೆಗೆ ಅದ್ದೂರಿಯಾಗಿ ಜರುಗಲಿದೆ.

ನಗರದ ಪ್ರವಾಸಿ ಮಂದಿರದಲ್ಲಿ ಜಾತ್ರಾ ಮಹೋತ್ಸವದ ಆಮಂತ್ರಣ ಪತ್ರಿಕೆಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ದೇವಸ್ಥಾನದ ಧರ್ಮದರ್ಶಿ ಡಾ. ಮಹಾಂತೇಶ ಶಾಸ್ತ್ರೀ ಆರಾದ್ರಿಮಠ, ಕಷ್ಟಪಟ್ಟು ಸಾಧನೆ ಮಾಡಿದ ರೈತರನ್ನು ವಿಶೇಷವಾಗಿ ಗೌರವಿಸಲಾಗುತ್ತದೆ ಎಂದರು.

ಮಾ.24ರಂದು ಬೆಳಿಗ್ಗೆ 10 ಗಂಟೆಗೆ ದೊಡವಾಡ ಹಿರೇಮಠದ ಜಡಿಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಜಿಗಳಿಂದ ಪಂಚಾಚಾರ್ಯ ಧ್ವಜಾರೋಹಣ ನೆರವೇರಲಿದೆ. ವಿವಿಧ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ ಜಾತ್ರಾ ಮಹೋತ್ಸವ ಉದ್ಘಾಟನೆ, ಧರ್ಮಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಉದ್ಘಾಟಿಸಲಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಧ್ವನಿ ಸುರುಳಿ ಬಿಡುಗಡೆಗೊಳಿಸಲಿದ್ದಾರೆ. ಮುರಗೋಡದ ನೀಲಕಂಠ ಸ್ವಾಮಿಜಿ, ರುದ್ರಾಕ್ಷಿಮಠದ ಬಸವಲಿಂಗ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ.

ಮಾ.25ರಂದು ಗೀರಿಜಾ ಕಲ್ಯಾಣ ಮಹೋತ್ಸವ, ಕಂಕಣ ಧಾರಣ ಕಾರ್ಯಕ್ರಮ ನಡೆಯಲಿದೆ. ಸಂಜೆ ಧರ್ಮಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಮಾ.26ರಂದು ಸಾರೋಟು ಉತ್ಸವ, ಅಮ್ಮನವರ ಮೆರವಣಿಗೆ ನಡೆಯಲಿದ್ದು, ಶಾಂಭವಿಶ್ರೀ ಪ್ರಶಸ್ತಿ ಪ್ರಧಾನ ಜರುಗಲಿದೆ.

ಮಾ.27ರಂದು ಮಹಾರಥೋತ್ಸವ, ಧರ್ಮಸಭೆ, ಪ್ರಗತಿಪರ ರೈತರ ಸನ್ಮಾನ, ಸಿಂಗಿಂಗ್ ಸ್ಪರ್ಧೆಯ ಗ್ರ್ಯಾಂಡ್ ಫಿನಾಲೆ ಕಾರ್ಯಕ್ರಮಗಳು ಜರುಗಲಿವೆ. ಉಜ್ಜಯಿನಿ, ಕಾಶಿ, ಶ್ರೀಶೈಲ ಪೀಠಗಳ ಶ್ರೀಗಳು ಸಾನಿಧ್ಯ ವಹಿಸಲಿದ್ದಾರೆ.

ಜಾತ್ರಾ ಮಹೋತ್ಸವಕ್ಕೆ ಕುಂದರಗಿ ಡಾ. ಅಮರಸಿದ್ದೇಶ್ವರ ಸ್ವಾಮೀಜಿ, ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ, ಗಣ್ಯರು ಉಪಸ್ಥಿತರಿದ್ದು, ಪ್ರತಿದಿನ ದುರ್ಗಾಪರಮೇಶ್ವರಿಗೆ ಅಭಿಷೇಕ, ಕುಂಕುಮಾರ್ಚನೆ, ದುರ್ಗಾಹವನ, ಆಶ್ಲೇಷ ಬಲಿ, ನವದುರ್ಗಿ ಹೋಮ, ಉಡಿ ತುಂಬುವ ಕಾರ್ಯಕ್ರಮ, ಲಲಿತಸಹಸ್ರನಾಮಪಾರಾಯಣ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ರಾಜು ಕುಡಸೋಮನ್ನವರ, ವಿಶ್ವಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ, ಪುರಸಭೆ ಮಾಜಿ ಉಪಾಧ್ಯಕ್ಷ ಮಹಾಂತೇಶ ತುರಮರಿ, ಬಸವರಾಜ ಜನ್ಮಟ್ಟಿ, ಶ್ರೀಶೈಲ ಯಡಳ್ಳಿ, ಸೋಮನಾಥ ಸೊಪ್ಪಿಮಠ, ವಿಠ್ಠಲ ಅಂದಾನಿ, ಮಹಾಂತೇಶ ಮತ್ತಿಕೊಪ್ಪ ಇದ್ದರು.



ಪಂಚಾಂಗ ಶ್ರವಣ, ಪಠಣ ಯಶಸ್ವಿ

ಸವದತ್ತಿ: ನಗರದ ಮಧ್ಯೆ ಭಾಗದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಅಖಿಲ ಬ್ರಾಹ್ಮಣ ಸಮಾಜದ ವತಿಯಿಂದ ಯುಗಾದಿ ಹಬ್ಬದ ನಿಮಿತ್ಯವಾಗಿ ಪಂಚಾಂಗ ಶ್ರವಣ ಕಾರ್ಯಕ್ರಮ ಜರುಗಿತು.

ನಂತರ ಪಂಚಾಂಗ ಪಠಣ ಕಾರ್ಯಕ್ರಮವನ್ನು ಶೇಷಗಿರಿಶರ್ಮ ಜೋಶಿಯವರು ನಡೆಸಿಕೊಟ್ಟರು. ಸವದತ್ತಿ ತಾಲೂಕಿನ ಅಖಿಲ ಬ್ರಾಹ್ಮಣ ಸಮಾಜದ ಅಧ್ಯಕ್ಷ, ಶಾಸಕ ವಿಶ್ವಾಸ್ ವಸಂತ ವೈದ್ಯ ಮಾರ್ಗದರ್ಶನದಂತೆ ಶಹರದ ಅಖಿಲ ಬ್ರಾಹ್ಮಣ ಸಮಾಜದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷರಾಗಿ ಗಿರೀಶ್ ಮುನ್ನೂಳ್ಳಿ ಇವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಈ ಮೊದಲು ಸವದತ್ತಿ ಶಹರದ ಅಖಿಲ ಬ್ರಾಹ್ಮಣ ಸಮಾಜದ ಮಾಜಿ ಅಧ್ಯಕ್ಷರಾಗಿದ್ದ ಚಿದಂಬರ ಕುಲಕರ್ಣಿ ನೂತನ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸಿದರು. ಮಾಜಿ ಅಧ್ಯಕ್ಷರಾಗಿದ್ದ ಚಿದಂಬರ ಕುಲಕರ್ಣಿ ಇವರಿಗೆ ಸಮಾಜದ ವತಿಯಿಂದ ಗೌರವ ಸನ್ಮಾನ ಮಾಡಲಾಯಿತು. ಅಶ್ವತ್ಥ ವೈದ್ಯ ಉಪಾಧ್ಯಕ್ಷರಾಗಿ ಹಾಗೂ ರಾಮಚಂದ್ರ ಜೋಶಿ, ಕಾರ್ಯದರ್ಶಿ ಸಂತೋಷ ಸಬನೀಸ ಖಜಾಂಚಿ ಆಯ್ಕೆ ಮಾಡಲಾಯಿತು. ಸಮಾಜದಿಂದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ ಸನ್ಮಾನಿಸಲಾಯಿತು.



ಸವದತ್ತಿ ತಾಲೂಕಿನ ಅಖಿಲ ಬ್ರಾಹ್ಮಣ ಸಮಾಜದ ಮುಖಂಡರಾದ ವೆಂಕಟೇಶ ವೈದ್ಯ ಸುಧೀಂದ್ರ ವೈದ್ಯ ದೇವಸ್ಥಾನದ ಅರ್ಚಕ ಗುರಾಚಾರ್ಯ ಕಟ್ಟಿ ಬೆಡಸೂರು ಚಿದಂಬರೇಶ್ವರ ದೇವಸ್ಥಾನದ ಎಚ್.ಡಿ. ಟಕ್ಕಳಕಿ, ವಿಜಯೇಂದ್ರ ದೇಶಪಾಂಡೆ, ಕೃಷ್ಣಾಜಿ ಕುಲಕರ್ಣಿ, ಡಿ. ಜಿ. ಕಾನಡೆ, ರಾಜು ಕುಲಕರ್ಣಿ, ಸುನಿಲ್ ಗದಗ, ವಿಲಾಸ್ ಪಾಟೀಲ್, ಬ್ರಾಹ್ಮಣ ಸಮಾಜದ ಎಲ್ಲ ಮುಖಂಡರು, ಮಹಿಳಾ ಮುಖಂಡರು, ಭಜನಾ ಮಂಡಳಿ ಸದಸ್ಯರು ಇದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಐಹೊಳೆ ಚಾಲನೆ

ರಾಯಬಾಗ: ತಾಲೂಕಿನ ನಂದುಕುರಳಿ–ಕೆಂಪಟ್ಟಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ರೂ.1 ಕೋಟಿ 25 ಲಕ್ಷ ಅನುದಾನದಲ್ಲಿ ಗುರುವಾರ ಶಾಸಕ ಡಿ. ಎಂ. ಐಹೊಳೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ರಸ್ತೆಗಳ ಅಭಿವೃದ್ಧಿ ನನ್ನ ಪ್ರಮುಖ ಆದ್ಯತೆಯಾಗಿದ್ದು, ಉತ್ತಮ ರಸ್ತೆ ವ್ಯವಸ್ಥೆ ಗ್ರಾಮಗಳ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ನೆರವಾಗುತ್ತದೆ ಎಂದು ಹೇಳಿದರು. ಈ ರಸ್ತೆ ದುರಸ್ಥಿಯಿಂದ ಹಲವು ವರ್ಷಗಳಿಂದ ಕಷ್ಟಪಡುತ್ತಿದ್ದ ಜನರಿಗೆ ಇದೀಗ ನಿರಾಳತೆ ಸಿಗಲಿದೆ ಎಂದರು.

ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಹಾಗೂ ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ರಸ್ತೆ ಪೂರ್ಣಗೊಂಡ ಬಳಿಕ ಸಂಚಾರ ಸುಗಮವಾಗುವುದರ ಜೊತೆಗೆ ಸ್ಥಳೀಯರ ದೈನಂದಿನ ಜೀವನಕ್ಕೂ ಸಹಕಾರಿ ಆಗಲಿದೆ ಎಂದು ತಿಳಿಸಿದರು.



ಬಿಜೆಪಿ ಪಕ್ಷದ ಮಂಡಲ ಅಧ್ಯಕ್ಷ ಪೃಥ್ವಿರಾಜ ಜಾಧವ, ಅಮಿತ ಜಾಧವ ಸದಾಶಿವ್ ಗೋರ್ಪಡೆ, ಶಿವಪ್ಪ ನಾಯಿಕ, ರಾಮು ಸಂಗೋಟೆ, ಕೃಷ್ಣಾ ದತ್ತವಾಡೆ, ಬಾಳು ಕರೋಲೆ, ಅರವಿಂದ ಕುಲಕರ್ಣಿ, ದಶಕೀರ ಮುಲ್ತಾನಿ, ಮಹೇಶ ಸಾವಂತ, ಬೀರಪ್ಪ ಹಿರೇಕುರಬರ, ಕೆಂಚಪ್ಪ ಹಿರೇಕುರಬರ, ವಿಠ್ಠಲ ಮಿರ್ಜಿ ಲೋಕೋಪಯೋಗಿ ಇಲಾಖೆಯ ಎಡಬ್ಲ್ಯೂಇ ರಾಮು ವಡ್ಡರ್ ರಾಜು ದಂಗ ಹಾಗೂ ಗುತ್ತಿಗೆದಾರರು ಇತರರು ಇದ್ದರು.

ಮಹಾನ್ ವ್ಯಕ್ತಿಗಳ ಅರ್ಥಪೂರ್ಣ ಜಯಂತಿ ಆಚರಿಸೋಣ

ಸವದತ್ತಿ: ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಉತ್ಸವ ಹಾಗೂ ಡಾ. ಬಾಬು ಜಗಜೀವನ್ ರಾಮ್ 119ನೇ ಜಯಂತಿ ಉತ್ಸವಗಳನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ನಗರದ ಕೃಷಿ ಇಲಾಖೆಯ ಡಾ.ಎಂ.ಎಸ್.ಸ್ವಾಮಿನಾಥನ್ ಸಭಾಭವನದ ವೇದಿಕೆಯ ಮೇಲೆ ತಾಲೂಕ ಆಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆ ತಾಲೂಕು ಪಂಚಾಯತಿಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ್ ರವರ ಜಯಂತಿ ಉತ್ಸವ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಈ ಮಹಾನ್ ವ್ಯಕ್ತಿಗಳ ಜಯಂತಿ ಉತ್ಸವವನ್ನು ಸಮಾಜದ ಎಲ್ಲ ಮುಖಂಡರ ಉಪಸ್ಥಿತಿಯಲ್ಲಿ ಆಚರಿಸೋಣ. ಈ ಎರಡು ಕಾರ್ಯಕ್ರಮಗಳಲ್ಲಿ ತಾಲೂಕಾ ಮಟ್ಟದ ಎಲ್ಲಾ ಅಧಿಕಾರಿಗಳು ಉಪಸ್ಥಿತರಿರಬೇಕು. ಡಾ. ಬಿಆರ್ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ರವರ ಜೀವನ ಚರಿತ್ರೆ ತಿಳಿಸುವಂತಹ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿ ಮಹನೀಯರ ಜಯಂತಿ ಉತ್ಸವ ಅರ್ಥಪೂರ್ಣ ಆಚರಿಸೋಣ ಎಂದರು.

ಸಮಾಜದ ಎಲ್ಲ ಮುಖಂಡರ ಸಲಹೆ ಮೇರೆಗೆ ಬಾಬು ಜಗಜೀವನ್ ರಾಮ್ ರವರ ಜಯಂತಿ ಉತ್ಸವವನ್ನು ಕೃಷಿ ಇಲಾಖೆಯ ಡಾ. ಎಂ.ಎಸ್. ಸ್ವಾಮಿನಾಥನ್ ವೇದಿಕೆಯ ಮೇಲೆ ಆಚರಿಸುವುದಾಗಿ ನಿರ್ಣಯಿಸಲಾಯಿತು. ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಉತ್ಸವವನ್ನು ಯಾವ ಸ್ಥಳದಲ್ಲಿ ಆಚರಿಸಬೇಕು ಎಂಬುದರ ಬಗ್ಗೆ ಮುಂಬರುವ ದಿನಗಳಲ್ಲಿ ಚರ್ಚಿಸಿ ನಿರ್ಣಯಿಸಲಾಗುವುದು ಎಂದರು

ಈ ವೇಳೆ ತಹಶೀಲ್ದಾರ ಮಲ್ಲಿಕಾರ್ಜುನ ಹೆಗ್ಗಣ್ಣವರ್, ತಾಪಂ ಇಒ ಆನಂದ ಬಡಕುಂದ್ರಿ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶಿವಪ್ರಕಾಶ್ ಪಾಟೀಲ್, ಜಿಪಂ ಅಭಿಯಂತರ ಎಚ್.ಎ. ಖುದ್ರಾಪುರಕರ, ನಗರಸಭೆ ಆಯುಕ್ತ ಸಂಗನಬಸಯ್ಯ ಗದಗಿಮಠ, ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ.ಖಾಜಿ, ನೌಕರರ ಸಂಘದ ಅಧ್ಯಕ್ಷ ಅಶೋಕ್ ಮುರಗೋಡ, ತಾಲೂಕ ಮಟ್ಟದ ಅಧಿಕಾರಿಗಳು, ಸಮಾಜದ ಮುಖಂಡರು ಇದ್ದರು.



ವಸ್ತ್ರ, ಉಡುಗೊರೆ ವಿತರಣೆ



ಅಥಣಿ: ಅನಾಥ ಮತ್ತು ನಿರ್ಗತಿಕ ಮಾನಸಿಕ ಅಸ್ವಸ್ಥರಿಗೆ ವಿಶೇಷ ಮಕ್ಕಳನ್ನು ಸಂರಕ್ಷಣೆ ಮಾಡುವುದರ ಜೊತೆಗೆ ಅವರಿಗೆ ಉಚಿತ ಶಿಕ್ಷಣ, ಅನ್ನ, ವಸತಿ ವ್ಯವಸ್ಥೆ ಕಲ್ಪಿಸಿರುವುದು, ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿರುವ ನಿಜಪ್ಪ ಹಿರೇಮನಿ ದಂಪತಿ ಕಾರ್ಯ ಶ್ಲಾಘನೀಯ ಎಂದು ಸಿಪಿಐ ಸಂತೋಷ ಹಳ್ಳೂರ ಹೇಳಿದರು. ಪಟ್ಟಣದಲ್ಲಿ ನಡೆದ ಕೃಪಾ ಆರೋಗ್ಯ ಮತ್ತು ಸಮಾಜ ಸೇವಾ ಸಂಸ್ಥೆಯಿಂದ ಮಂಗಳಮುಖಿಯರಿಗೆ, ಮಾಜಿ ದೇವದಾಸಿಯರಿಗೆ ವಸ್ತ–ಉಡುಗೊರೆ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಅಥಣಿ ಪಟ್ಟಣದಲ್ಲಿ ಅನೇಕ ವರ್ಷಗಳಿಂದ ವಿಶೇಷ ಪೀಡಿತ ಮಕ್ಕಳಿಗೆ ಸಂರಕ್ಷಣೆ ನೀಡುವುದರ ಜೊತೆಗೆ ಸಮಾಜದಲ್ಲಿ ದೇವದಾಸಿಯರಿಗೆ ಏಡ್ಸ್ ರೋಗದ ಕುರಿತು ಅರಿವು ಮೂಡಿಸುತ್ತಿರುವ ಜನಜಾಗ್ರತೆಯ ಕಾರ್ಯಕ್ರಮವಾಗಿದೆ. ನಿಜಪ್ಪಾ ಹಿರೇಮನಿ ಅವರ ಕಾರ್ಯ ಅನನ್ಯ ಎಂದರು. ಡಾ. ಸಂಗಮೇಶ ಮಮದಾಪುರ ಮಾತನಾಡಿ, ಹಸಿದ ಹೊಟ್ಟೆಗೆ ಅನ್ನ ನೀಡುವ ನಿಜಪ್ಪ ಹಿರೇಮನಿ ಸಮಾಜಮುಖಿ ಸೇವೆ ಅನೇಕ ವರ್ಷಗಳಿಂದ ನಡೆದು ಬಂದಿದೆ. ತಾಯಿಯ ಗುಣ ಹೊಂದಿರುವ ಅವರು ವಿಶೇಷ ಪೀಡಿತ ಮಕ್ಕಳಿಗೆ ಆಶ್ರಯ ನೀಡಿ ಜೀವನದಲ್ಲಿ ಮಹತ್ತರ ಮಾಡಿದ್ದಾರೆ. ಅವರ ಸಾಧನೆ ಅಮೋಘವಾದದ್ದು, ಅವರು 30 ವಿಶೇಷ ಪೀಡಿತ ಮಕ್ಕಳನ್ನು ಸಲುಹುತ್ತಿರುವುದು ಅದ್ಭುತ. ಮಾಜಿ ದೇವದಾಸಿಯರನ್ನು ಕಡೆಗಣಿಸದೇ ಗೌರವದಿಂದ ಕಾಣಬೇಕು ಎಂದರು. ಅಥಣಿ ಕೃಪಾ ಆರೋಗ್ಯ ಮತ್ತು ಸಮಾಜ ಸೇವಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ನಿಜಪ್ಪ ಹಿರೇಮನಿ ಮಾತನಾಡಿ, ಎಲ್ಲರ ಸಹಾಯದಿಂದ ಈ ಸಂಸ್ಥೆ ಮೂಲಕ ಸಾಮಾಜಿಕ ಸೇವಾ ಕಾರ್ಯ ಮಾಡುತ್ತಿದ್ದೇನೆ. ಬಾಡಗಿ ಕಟ್ಟಡ ದಲ್ಲಿದ್ದು ಸಂಸ್ಥೆಯ ಕಾರ್ಯಗಳನ್ನು ನಡೆಸುತ್ತಿದ್ದೇನೆ. ರಾಜ್ಯ ಸರ್ಕಾರದ ಸಹಾಯ ದೊರತರೆ ಮತ್ತಷ್ಟು ಸಮಾಜ ಸೇವೆ ಮಾಡಲು ಅನುಕೂಲವಾಗಲಿದೆ ಎಂದರು. ಸುಶಾಂತ ಪಟ್ಟಣ, ವೇದಾ ಪಟ್ಟಣ, ಸಂಗೀತಾ ಹಿರೇಮನಿ, ಡಾ. ವಿಜಯಾ ಗಸ್ತಿ, ಸಂಗಮೇಶ ಮಮದಾಪುರ, ಸಂಗಮೇಶ ಹಚಡದ ಇದ್ದರು.


ಯಶಸ್ವಿನಿ ಯೋಜನೆ ಸದುಪಯೋಗಪಡಿಸಿಕೊಳ್ಳಿ

ಹಾರೂಗೇರಿ: ಸ್ಥಳೀಯ ಪ್ರಸಿದ್ಧ ವೈದ್ಯಕೀಯ ಮಹಾವಿದ್ಯಾಲಯ ಶ್ರೀ ಜಂಬಗಿ ಚಾರಿಟ್ರೇಬಲ್ ಟ್ರಸ್ಟ್‌ನ ಶ್ರೀ ಸಿದ್ಧಿವಿನಾಯಕ ಆಯುರ್ವೇದ ವೈದ್ಯಕೀಯ ಕಾಲೇಜಿನ ಸಭಾಭವನದಲ್ಲಿ ಜರುಗಿದ ರಾಜ್ಯ ಸರ್ಕಾರ ಅನ್ನದಾತರ ಕುಟುಂಬದ ಆರೋಗ್ಯದ ಸುಸ್ಥಿರಕ್ಕಾಗಿ ಹೊರಡಿಸಿರುವ ಯಶಸ್ವಿನಿ ಯೋಜನೆಯನ್ನು ಪ್ರತಿಯೊಬ್ಬ ರೈತರೂ ಸದುಪಯೋಗಪಡಿಸಿಕೊಳ್ಳಬೇಕು ಎಂದು ಬೆಳಗಾವಿಯ ಜಂಬಗಿ ಮಲ್ಟಿಸ್ಪೆಷಾಲಿಟಿ ನೇತ್ರ ತಜ್ಞರಾದ ಡಾ.ಅಮೋಘ ಎಲ್. ಜಂಬಗಿ ಹೇಳಿದರು.

ಈ ವೇಳೆ ಪ್ರಸಿದ್ಧ ಹೃದಯ ತಜ್ಞ ಡಾ. ಎಲ್.ಎಸ್. ಜಂಬಗಿ ಮಾತನಾಡಿ, ರೈತರ ಕುಟುಂಬದ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರ ನೀಡುತ್ತಿರುವ ಯಶಸ್ವಿನಿ ಯೋಜನೆಯನ್ನು ನಮ್ಮ ಆಸ್ಪತ್ರೆಯಲ್ಲಿ ಲಭ್ಯವಿರುವಂತೆ ಮಾಡಿದ್ದು ಎಲ್ಲಾ ರೈತರು ಅಲ್ಲದೆ ಯಶಸ್ವಿನಿ ಕಾರ್ಡ್ ಹೊಂದಿರುವ ಕುಟುಂಬದವರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ರಾಯಬಾಗ ಸಹಕಾರ ಇಲಾಖೆ ಎಡಿಸಿ ಶಂಕರ ಕರಬಸನವರ ಮಾತನಾಡಿ, ಜಂಬಗಿಯವರು ವೈದ್ಯಕೀಯ ಸೇವೆ ಇದೀಗ ರಾಜ್ಯಾದ್ಯಂತ ವಿಸ್ತರಿಸಿದೆಯಲ್ಲದೆ ಕೆಎಲ್ಇ ಸಂಸ್ಥೆಯಂತೆ ಮುನ್ನುಡಿಯನ್ನು ಸಾಧಿಸಿದೆ. ರೋಗಿಗಳ ಆರೋಗ್ಯದ ಹಿತದೃಷ್ಟಿಯಿಂದ ಸಾಮಾಜಿಕ ಹಿತಚಿಂತನೆಯ ದೃಷ್ಟಿಯಿಂದ ಯಶಸ್ವಿನಿ ಯೋಜನೆಯನ್ನು ಅವರ ಆಸ್ಪತ್ರೆಯಲ್ಲಿ ಲಭ್ಯವಿರುವಂತೆ ಮಾಡಿದ್ದು ನಮ್ಮ ಭಾಗದ ಎಲ್ಲಾ ರೈತರಿಗೆ ಅನುಕೂಲ ಒದಗಿಸಿದೆಯಲ್ಲದೆ, ನೇತ್ರ ವಿಭಾಗ ಮಾತ್ರವಲ್ಲದೆ ಇನ್ನುಳಿದ ರೋಗಗಳಿಗೂ ಇದನ್ನು ಡಾ.ಜಂಬಗಿ ಅವರು ವಿಸ್ತರಿಸಬೇಕು ಎಂದರು.

ಈ ವೇಳೆ ಜಿಲ್ಲಾ ಸಮನ್ವಯಾಧಿಕಾರಿ ಶಿವನಗೌಡ ಪಾಟೀಲ, ಟಿಸಿಒ ರಾಯಣ್ಣವರ, ಡಾ.ಪ್ರಶಾಂತ ರಘುಶೆಟ್ಟಿ, ಡಾ.ಸಚಿನ ಧರ್ಮಟ್ಟಿ, ಎಂ.ಎಸ್. ಮಾವಿನಕಟ್ಟಿ, ಪ್ರಾಚಾರ್ಯ ಆರ್.ಎಸ್. ಕಾಗವಾಡೆ ನಿರೂಪಿಸಿದರು.



ಕಿರುಸುದ್ದಿ



ಬಾದಾಮಿ: ತಾಲೂಕಿನಾದ್ಯಂತ ಬುಧವಾರದಿಂದ ಆರಂಭವಾದ ಎಸ್ಸೆಸ್ಸೆಲ್ಸಿ ಪರೀಕ್ಷೆ-1 ಹಾಜರಾಗುವ ವಿದ್ಯಾರ್ಥಿಗಳಿಗೆ ತಾಲೂಕಿನ ಆಡಗಲ್ ಪರೀಕ್ಷಾ ಕೇಂದ್ರದಲ್ಲಿ ಗುಲಾಬಿ ಹೂ ನೀಡುವ ಮೂಲಕ ಸ್ವಾಗತಿಸಿ, ಶುಭ ಕೋರಿದರು. ಕೇಂದ್ರದ ಮುಖ್ಯ ಅಧೀಕ್ಷಕ ಬಸವರಾಜ ಅಂಗಡಿ, ಪ್ರಶ್ನೆ ಪತ್ರಿಕೆ ಅಭಿರಕ್ಷಕ ಎ.ಪಿ.ಮೇಟಿ, ದೈಹಿಕ ಶಿಕ್ಷಕ ಡಿ.ಕೆ.ಚಿಮಣಿ, ಅರವಿಂದ ರಾಠೋಡ, ಗ್ರಾಮದ ಹಿರಿಯರಾದ ಕೋನಪ್ಪ ಕಾಟನ್ನವರ, ಗಚ್ಚಪ್ಪ ಕಾಟನ್ನವರ, ಪ್ರಕಾಶ ಕೋರಿ, ಹುಚ್ಚಪ್ಪ ಹದ್ದನ್ನವರ, ಆನಂದ ವಾಲ್ಮೀಕಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬಾಗಲಕೋಟೆ: ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಡಾ.ವೀರಣ್ಣ ಸಿ, ಚರಂತಿಮಠ ಅವರು ಬೆಳಗ್ಗೆ ಮನೆಯಲ್ಲಿ ಗೋ ಮಾತೆಗೆ ಪೂಜೆ ಸಲ್ಲಿಸಿ ಕುಟುಂಬ ಸಮೇತ ನಾಮಪತ್ರ ಸಲ್ಲಿಸಿದರು.

ಯುವಕರಿಗೆ ಜಾಗೃತಿ ಅಭಿಯಾನ ಸಹಕಾರಿ

ಹುಲ್ಯಾಳ: ಜಮಖಂಡಿ ತಾಲೂಕಿನ ಹುಲ್ಯಾಳ ಗ್ರಾಮದ ಯುವಕರಲ್ಲಿ ವಿಶೇಷ ಜಾಗೃತಿ ಮೂಡಿಸುವ ಅಭಿಯಾನ ಗುರುದೇವಾಶ್ರಮದ ಹರ್ಷಾನಂದ ಶ್ರೀಗಳ ನೇತೃತ್ವದಲ್ಲಿ ಗ್ರಾಮದ ಹಿರಿಯರೆಲ್ಲರೂ ಒಟ್ಟಾಗಿ ಯುವಕರಿಗೆ ತಿಳುವಳಿಕೆ ಹೇಳುವ ಅಭಿಯಾನ ಆರಂಭಿಸಿದ್ದಾರೆ. ಈ ವೇಳೆ ಮಾತನಾಡಿದ ಶ್ರೀಗಳು, ಇಂತಹ ಜಾಗೃತಿ ಅಭಿಯಾನಗಳು ಪ್ರತಿ ಗ್ರಾಮದಲ್ಲಿ ನಡೆದರೆ ಯುವಕರು ದುಶ್ಚಟಕ್ಕೆ ಬಲಿಯಾಗುವುದನ್ನು ತಪ್ಪಿಸಲು ತುಂಬಾ ಸಹಕಾರಿಯಾಗುತ್ತದೆ. ಇತ್ತೀಚಿಗೆ ಯುವಕರು ಆನ್‌ಲೈನ್ ಗೇಮ್‌ಗೆ ಬಹಳಷ್ಟು ದುಡ್ಡು ಕಳೆದುಕೊಂಡು ಸಾಲಗಾರರಾಗುತ್ತಿದ್ದಾರೆ. ಮದ್ಯ ಸೇವನೆ ಹಾಗೂ ಜುಜಾಟದಿಂದ ಹಣ ಕಳೆದುಕೊಳ್ಳುವುದರ ಜೊತೆಗೆ ಮಾನಸಿಕ ಹಿಂಸೆ ಅನುಭವಿಸುತ್ತಿದ್ದಾರೆ. ಜೊತೆಗೆ ಆತ್ಮಹತ್ಯೆಗೂ ಶರಣಾಗುತಿದ್ದಾರೆ ಎಂದರು. ಬಹುತೇಕ ಕುಟುಂಬದಲ್ಲಿ ತಂದೆ ತಾಯಿಗಳು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಜೊತೆಗೆ ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಬೀಳಬೇಕಿದೆ ಯುವಕರು ಇಂತಹ ಚಟಗಳಿಗೆ ಬಲಿಯಾಗದೆ ಸಮಾಜಕ್ಕೆ ಉತ್ತಮ ಪ್ರಜೆಗಳಾಗುವ ಮೂಲಕ ಇತರರಿಗೆ ಮಾದರಿಯಾಗಬೇಕು ಎಂದರು. ಗ್ರಾಮದ ನಿವೃತ್ತ ತಹಸೀಲ್ದಾರ ಬಸವರಾಜ ಗೋಟೆ, ನ್ಯಾಯವಾದಿ ರಾಜೀವ ಪೂಜಾರ. ಗುರುನಾಥ ಸುತಾರ, ಉಮೇಶ ಕೋರಿ, ಪಿ.ಜಿ.ಕೋರಿ, ಮಂಜುನಾಥ ಗಲಗಲಿ, ಬಸಪ್ಪ ಶಿರೋಳ, ಅರುಣ ಶಿವಶಿಂಪಿ, ನಿಂಗಪ್ಪ ದಬಾಳಿ, ಗಣಪತಿ ಗಲಗಲಿ, ಶ್ರೀಶೈಲ ಪೂಜಾರ, ಭೀಮಾಜಿ ಕುಂಟೆ, ಪರಸಪ್ಪ ಮಿಶನ್ನವರ, ಅಶೋಕ ಝುಲಪಿ, ಬಸಪ್ಪ ಸೊರಗಾವಿ, ಪುಂಡಲೀಕ ಬಾಳಪ್ಪಗೋಳ, ಶಂಭು ಗೊಳಸಂಗಿ ಉಪಸ್ಥಿತರಿದ್ದರು.



ಹುಲ್ಯಾಳ: ಯುವಕರು ದುಶ್ಚಟಕ್ಕೆ ಬಲಿಯಾಗುವುದನ್ನು ತಪ್ಪಿಸಲು ಗ್ರಾಮದ ಯುವಕರಲ್ಲಿ ಗುರುದೇವಾಶ್ರಮದ ಹರ್ಷಾನಂದ ಶ್ರೀಗಳ ನೇತೃತ್ವದಲ್ಲಿ ಗ್ರಾಮದ ಹಿರಿಯರೆಲ್ಲರೂ ಒಟ್ಟಾಗಿ ಯುವಕರಿಗೆ ತಿಳುವಳಿಕೆ ಅಭಿಯಾನ ಆರಂಭಿಸಿದ್ದಾರೆ.

ಚರಂತಿಮಠರಿಗೆ ಟಿಕೆಟ್ ಸ್ವಾಗತಾರ್ಹ: ಹಳೇಗೌಡರ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯಲ್ಲಿ ನಾನು ಕೂಡ ಒಬ್ಬ ಬಿಜೆಪಿಯಿಂದ ಆಕಾಂಕ್ಷಿಯಾಗಿದ್ದೆ, ನನ್ನ ಹೆಸರು ಕೂಡ ಕೇಂದ್ರಮಟ್ಟದಲ್ಲಿ ಚರ್ಚೆಯಾಗಿದ್ದು ನನಗೆ ತುಂಬಾ ಖುಷಿಯಾಗಿದೆ ಆದರೆ ಈಗ ಮಾಜಿ ಶಾಸಕ ವೀರಣ್ಣ ಚರಂತಿಮಠ ಅವರಿಗೆ ಟಿಕೆಟ್ ಸಿಕ್ಕಿದ್ದನ್ನು ಸ್ವಾಗತಿಸುತ್ತೇನೆ ನಾನು ಅವರಿಗೆ ಬೆಂಬಲ ನೀಡುತ್ತೇನೆ ಎಂದು ಓಬಿಸಿ ಘಟಕದ ಬಿಜೆಪಿ ಮಾಜಿ ಅಧ್ಯಕ್ಷ ವೀರಣ್ಣ ಹಳೇಗೌಡರ ಹೇಳಿದರು.



ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಟಿಕೆಟ್ ಕೇಳುವ ಮೊದಲು ಮಾಜಿ ಶಾಸಕ ವೀರಣ್ಣ ಚರಂತಿಮಠ ಅವರ ಜೊತೆ ಚರ್ಚೆ ಮಾಡಿ ಅವರ ಆಶೀರ್ವಾದ ಪಡೆದುಕೊಂಡು ಟಿಕೆಟ್‌ಗೆ ಆಕಾಂಕ್ಷಿಯಾಗಿದ್ದೆ, ಪಕ್ಷವು ಯಾರಿಗೆ ಟಿಕೆಟ್ ನೀಡಿದರು ಪಕ್ಷದಲ್ಲಿಯೇ ಇದ್ದುಕೊಂಡು ಕೆಲಸ ಮಾಡುತ್ತೇನೆ. ಅಭ್ಯರ್ಥಿ ಪರ ಚುನಾವಣೆಯಲ್ಲಿ ಕಾರ್ಯ ನಿರ್ವಹಿಸುತ್ತೇನೆ ಎಂದರು. ಈಗಾಗಲೇ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಾಗಲಕೋಟೆ ಲೋಕಸಭಾ ಕ್ಷೇತ್ರದ ಆಕಾಂಕ್ಷಿಯಾಗಿದ್ದೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನಾನು ಟಿಕೆಟ್ ಆಕಾಂಕ್ಷಿಯಾಗಿರುತ್ತೇನೆ ಎಂದು ಹಳೇಗೌಡರ, ನಾನು ಶಾಸಕನಾದರೆ ಕ್ಷೇತ್ರದಲ್ಲಿ ಅನೇಕ ಬದಲಾವಣೆಯನ್ನು ತರುತ್ತೇನೆ. ದೇವರಾಜು ಅರಸು ಮಾದರಿಯಲ್ಲಿ ಅಧಿಕಾರ ನಡೆಸುತ್ತೇನೆ ಎಂದು ಹೇಳಿದರು.

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ | ಸಾಮಾನ್ಯ ವೀಕ್ಷಕರ ಸಭೆ

ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲೆಗೆ ಆಗಮಿಸಿದ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಅವರ ಅಧ್ಯಕ್ಷತೆಯಲ್ಲಿ ಚುನಾವಣಾ ನೋಡಲ್ ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ಜರುಗಿತು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ವಿವಿಧ ನೋಡಲ್ ಅಧಿಕಾರಿಗಳ ಕಾರ್ಯ, ಮಾದರಿ ನೀತಿ ಸಂಹಿತೆ ಜಾರಿಗೆ ಸಂಬಂಧಿಸಿದ ಕ್ರಮಗಳು, ಮತದಾರರ ಸೌಲಭ್ಯಗಳು ಹಾಗೂ ಮತಗಟ್ಟೆಗಳಲ್ಲಿ ಕೈಗೊಳ್ಳಬೇಕಾದ ಸಿದ್ದತೆಗಳ ಬಗ್ಗೆ ವಿವರವಾಗಿ ಚರ್ಚೆ ನಡೆಸಿದರು. ಎಲ್ಲ ನೋಡಲ್ ಅಧಿಕಾರಿಗಳು ತಮ್ಮ ತಮ್ಮ ಜವಾಬ್ದಾರಿಗಳನ್ನು ಸಮಪಕವಾಗಿ ನಿರ್ವಹಿಸಿ, ಚುನಾವಣೆಯನ್ನು ಪಾರದರ್ಶಕ ಹಾಗೂ ನಿಷ್ಪಕ್ಷಪಾತವಾಗಿ ನಡೆಸುವಂತೆ ಸಾಮಾನ್ಯ ವೀಕ್ಷಕರು ಸೂಚಿಸಿದರು.

ಈವರೆಗೆ ಕೈಗೊಂಡ ಚುನಾವಣಾ ಪೂರ್ವ ಸಿದ್ದತೆ, ಮಾದರಿ ನೀತಿ ಸಂಹಿತೆ, ಕಾನೂನು ಸುವ್ಯಸ್ಥೆ, ಮತಯಂತ್ರಗಳ ಪೂರ್ವಸಿದ್ದತೆ, ಮತದಾರರ ಪಟ್ಟಿ ಪರಿಷ್ಕರಣೆ, ಮತಗಟ್ಟೆ ಸಿಬ್ಬಂದಿ ನಿಯೋಜನೆ, ಜಾಗೃತ ದಳದ ತಂಡಗಳ ನಿರ್ವಹಣೆ ಕುರಿತಂತೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಜಿಲ್ಲೆಯಲ್ಲಿ ನೀತಿ ಸಂಹಿತೆ ಪಾಲನೆ ಮಾಡುವದರ ಜೊತೆಗೆ ಅಧಿಕಾರಿಗಳು ಪಕ್ಷಾತೀತವಾಗಿ ಹಾಗೂ ಯಾರಿಗೂ ಸಂಶಯ ಬಾರದಂತೆ ಪ್ರಾಮಾಣಿಕವಾಗಿ ಕಾರ್ಯ ಮಾಡಬೇಕು. ಯಾವುದೇ ಸಮಸ್ಯೆಗಳಿದ್ದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ತಮ್ಮನ್ನು ನೇರವಾಗಿ ಸಂಪರ್ಕಿಸಬಹುದಾಗಿದೆ ಎಂದರು.

ಜಿಲ್ಲೆಯಲ್ಲಿರುವ ಅಬಕಾರಿ ಡಿಸ್ಟಿಲರಿಗಳ ಮೇಲೆ ಪ್ರತಿದಿನ ಉತ್ಪನ್ನಗಳ ಹಾಗೂ ಹೊರ ಸಾಗಾಟದ ಮೇಲೆ ತೀವ್ರ ನಿಗಾವಹಿಸಬೇಕು. ಬೇರೆ ಜಿಲ್ಲೆಗಳ ಬಾರ್ಡರಗಳಲ್ಲಿ ಅಬಕಾರಿ ಚೆಕ್‌ಪೋಸ್ಟಗಳನ್ನು ಸಹ ಹಾಕಲು ತಿಳಿಸಿದರು. ಕಾಸಿಗಾಗಿ ಸುದ್ದಿ, ಪೇಯಡ್ ನ್ಯೂಸ್, ಸೋಸಿಯಲ್ ಮೇಡಿಯಾ ಹಾಗೂ ಜಾಹೀರಾತುಗಳ ಮೇಲೆ ನಿಗಾವಹಿಸಿ, ವೆಚ್ಚ ವೀಕ್ಷಕರ ಗಮನಕ್ಕೆ ತರುವಂತೆ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ತಿಳಿಸಿದರು. ಕೇಬಲ್ ಟಿವಿ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬರುವ ಜಾಹೀರಾತುಗಳ ಬಗ್ಗೆ ತೀವ್ರ ನಿಗಾವಹಿಸಂತೆ ಎಂಸಿಎಂಸಿ ಸಮಿತಿಗೆ ತಿಳಿಸಿದರು.

ಉಪ ಚುನಾವಣೆಗೆ ಸಂಬಂಧಿಸಿದ 319 ಮತಗಟ್ಟೆ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳು ಇರುವ ಹಾಗೆ ಕ್ರಮಕೈಗೊಳ್ಳಲಾಗಿದೆ. ಚುನಾವಣಾ ಸಿಬ್ಬಂದಿಗಳಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ. ಚುನಾವಣಾ ಅಕ್ರಮ ತಡೆಗೆ 24 ಚೆಕ್ ಪೋಸ್ಟಗಳನ್ನು ಹಾಗೂ 72 ಸ್ಟ್ಯಾಟಿಕ್ ಸರ್ವೆಲನ್ಸ್ ತಂಡಗಳನ್ನು ರಚಿಸಲಾಗಿದೆ. ನೀತಿ ಸಂಹಿತೆ ಉಲ್ಲಂಘಿಸದಂತೆ ಎಲ್ಲ ರಾಜಕೀಯ ಪಕ್ಷಗಳಿಗೆ ಚುನಾವಣಾ ನೀತಿ ಸಂಹಿತೆ ಮಾಹಿತಿಯನ್ನು ನೀಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರು ತಿಳಿಸಿದರು. ಈ ಸಂದರ್ಭದಲ್ಲಿ ವಿಶೇಷ ಮತಗಟ್ಟೆಗಳ ಸ್ಥಾಪನೆ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಜಿ.ಪಂ ಸಿಇಓ ಹಾಗೂ ಜಿಲ್ಲಾ ಎಂಸಿಸಿ ನೋಡಲ್ ಅಧಿಕಾರಿ ಶಶಿಧರ ಕುರೇರ ಸಭೆಗೆ ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ಹಿಂದುತ್ವದ ಗೆಲುವಾಗಲಿ: ವೀರಣ್ಣ ಚರಂತಿಮಠ

ಬಾಗಲಕೋಟೆ: ಬಾಗಲಕೋಟೆಯಲ್ಲಿ ನನ್ನ ಗೆಲುವಲ್ಲ, ಬಿಜೆಪಿ, ಹಿಂದುತ್ವದ ಗೆಲುವಾಗಲಿ ಎಂದು ಮಾಜಿ ಶಾಸಕ ಬಿಜೆಪಿ ಅಭ್ಯರ್ಥಿಯಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ನಗರದ ಶಿವಾನಂದ ಜಿನ್ ನಲ್ಲಿರುವ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಾರ್ಯಾಲಯದಲ್ಲಿ ಗುರುವಾರ ಚುನಾವಣಾ ಪ್ರಚಾರ ಕಾರ್ಯಾಲಯದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ತಮ್ಮನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಿದ ಪಕ್ಷ ಕೇಂದ್ರ ಹಾಗೂ ರಾಜ್ಯದ ಮುಖಂಡರಿಗೆ ಅಭಿನಂದನೆ ತಿಳಿಸಿದ ಅವರು ಯಾವತ್ತಿದ್ದರೂ ಬಾಗಲಕೋಟೆ ಭಾರತೀಯ ಜನತಾ ಪಕ್ಷದ ಭದ್ರ ಕೋಟೆ, ಇಲ್ಲಿ ಧರ್ಮ ಹಾಗೂ ಹಿಂದೂತ್ವ ಗೆಲ್ಲಬೇಕು. ಬಾಗಲಕೋಟೆ ಹಿಂದುತ್ವದ ಭದ್ರಕೋಟೆ ಇಲ್ಲಿ ಕಮಲ ಅರಳಿ ಕಾರ್ಯಕರ್ತರ ಪಕ್ಷದ ಗೆಲುವಾಗಲಿ ಎಂದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಶರಣು ತಳ್ಳಿಕೇರಿ ಮಾತನಾಡಿ, ಭಾರತೀಯ ಜನತಾ ಪಾರ್ಟಿ ಅಧಿಕಾರ ಅವಧಿಯಲ್ಲಿನ ಅಭಿವೃದ್ಧಿ ಕೆಲಸಗಳೆ ನಮಗೆ ಮಾನದಂಡವಾಗಿದ್ದು, ಈ ಚುನಾವಣೆಯಲ್ಲಿ ಅತ್ಯಧಿಕ ಮತಗಳಿಂದ ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠರ ಗೆಲುವು ನಿಶ್ಚಿತ. ಯದ್ದೋಪಹಾದಿಯಲ್ಲಿ ಪ್ರಚಾರ ಕಾರ್ಯ ಮಾಡಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸೋಣ ಎಂದು ಹೇಳಿದರು.

ಚುನಾವಣಾ ಉಸ್ತುವಾರಿ ಅರುಣ ಶಹಾಪುರ ಮಾತನಾಡಿ, ಬಾಗಲಕೋಟೆ ಅಭಿವೃದ್ಧಿ ಖಂಡಿದ್ದು ಬಿಜೆಪಿ ಸರ್ಕಾರದ ಅವಧಿ ಡಾ.ವೀರಣ್ಣ ಚರಂತಿಮಠರು ಶಾಸಕರಾದ ಅವಧಿಯಲ್ಲಿ ಎಂಬುವುದು ಜನಜನಿತ, ಅಭಿವೃದ್ಧಿಯ ಆಧಾರ ಮೇಲೆ ಮನೆ ಮನೆ ಪ್ರಚಾರ ಮಾಡಿ ಬೂತ ಗೆಲ್ಲುವ ಮೂಲಕ ಬಾಗಲಕೋಟೆ ಮತಕ್ಷೇತ್ರ ಗೆದ್ದು ಹೊಸ ವರ್ಷ ಯುಗಾದಿಯ ಶುಭ ಸಂದೇಶ ಸಾರೋಣ ಎಂದರು.



ರಾಜ್ಯಸಭಾ ಸದಸ್ಯರ ನಾರಾಯಣಸಾ ಭಾಂಡಗೆ ಮಾತನಾಡಿ, ಅಭಿವೃದ್ಧಿ ಶೂನ್ಯ ಕಾಂಗ್ರೆಸ್ಸ ಆಡಳಿತದಿಂದ ಜನ ಕಂಗಾಲಾಗಿದ್ದಾರೆ, ಬಿಜೆಪಿ ಗೆಲ್ಲಿಸುವ ಮೂಲಕ ಬಾಗಲಕೋಟೆ ಜನ ಹೊಸ ಸಂದೇಶ ಸಾರಲಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ, ಜನರು ಬಿಜೆಪಿ ಪರವಾಗಿ ಮತ ನೀಡಲು ಸಿದ್ದರಾಗಿದ್ದಾರೆ. ಚುನಾವಣೆ ಎದುರಿಸಲೂ ಪಕ್ಷದ ಕಾರ್ಯಕರ್ತರು ಉತ್ಸಾಹದಲ್ಲಿದ್ದಾರೆ. ಬಿಜೆಪಿಯನ್ನು ಮತ್ತೆ ಗೆಲ್ಲಿಸೋಣ ಎಂದರು. ಮಾಜಿ ಶಾಸಕ ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ, ಸಂಸದ ಪಿ.ಸಿ.ಗದ್ದಿಗೌಡರ, ಡಾ.ಎಂ.ಎಸ್.ದಢ್ಡೆನ್ನವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ ಇದ್ದರು.

ಕಾಳಿದಾಸ ವಿದ್ಯಾರ್ಥಿಗಳ ಸಾಧನೆ



ಬಾದಾಮಿ: ನಗರದ ಕಾಳಿದಾಸ ಎಜುಕೇಶನ್ ಸೊಸೈಟಿಯ ಕಾಳಿದಾಸ ನರ್ಸಿಂಗ್ ಕಾಲೇಜಿನ ಬಿ.ಎಸ್‌ಸಿ ನರ್ಸಿಂಗ್ ದ್ವಿತೀಯ ಸೆಮಿಸ್ಟರ್ ಫಲಿತಾಂಶವು ಪ್ರಕಟಗೊಂಡಿದ್ದು, ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಫಲಿತಾಂಶವು ಪ್ರತಿಶತ 100% ಆಗಿದೆ. ಪ್ರಥಮ ಸ್ಥಾನ ಅನಿಲ್ ಕುಮಾರ್ ಗಾಜಿ (80%) ದ್ವಿತೀಯ ಸ್ಥಾನ ಕಾವೇರಿ ಮೇಲಪ್ಪಗೌಡರ್(78.33%) ಹಾಗೂ ಅಂಜೂಮಾ ಕುಡ್ಡೆನವರ್ (78.33%) ತೃತೀಯ ಸ್ಥಾನವನ್ನು ಆಫಿಯಾ ಶೈಖ್ (75.06%) ಗಳಿಸಿದ್ದಾರೆ. ವಿದ್ಯಾರ್ಥಿಗಳ ಈ ಉತ್ತಮ ಸಾಧನೆಗೆ ಕಾಳಿದಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ಬಿ.ಚಿಮ್ಮನಕಟ್ಟಿ, ಕಾರ್ಯದರ್ಶಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಸಂಪರ್ಕಾಧಿಕಾರಿ, ಸಂಸ್ಥೆಯ ಪದಾಧಿಕಾರಿಗಳು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಇಂದು ಚೈತ್ರ ನಿನಾದ ಸಂಗೀತ ಕಾರ್ಯಕ್ರಮ

ಬಾದಾಮಿ: ಪಟ್ಟಣದ ಸಿರಿಗಂಧ ಸಂಸ್ಕೃತಿ ಬಳಗದ ವತಿಯಿಂದ ಮಾ.21ರಂದು ಶನಿವಾರ ಸಂಜೆ 6.30 ಗಂಟೆಗೆ ಯುಗಾದಿ ಸಂಭ್ರಮ ಚೈತ್ರ ನಿನಾದ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬಾಗಲಕೋಟೆಯ ಆಕಾಶವಾಣಿ ಸಂಗೀತ ಕಲಾವಿದ ಜಯತೀರ್ಥ ತಾಸಗಾಂವ ಗಾಯನ ಪ್ರಸ್ತುತ ಪಡಿಸುವರು ತಬಲಾ ಪ್ರಸಾದ ಕುಲಕರ್ಣಿ ಹಾರ್ಮೋನಿಯಂ ಚಂದ್ರಶೇಖರ್ ಆಲೂರ ಬಾಗಲಕೋಟೆ ಇವರು ಭಾಗವಹಿಸಲಿದ್ದಾರೆ. ವೇದಿಕೆಯಲ್ಲಿ ಕುಮಾರಿ ಶ್ರೀಲಕ್ಷ್ಮೀ ಕುಲಕರ್ಣಿ ಹಾಗೂ ವೈಷ್ಣವಿ ಜಾಡಗೌಡ ಇವರ ಭರತನಾಟ್ಯ ಕಾರ್ಯಕ್ರಮ ಜರುಗಲಿದೆ ಎಂದು ಸಿರಿಗಂಧ ಬಳಗದ ಅಧ್ಯಕ್ಷ ಜೆ. ದಾಜಿಬಾ ಜಗದಾಳೆ ತಿಳಿಸಿದ್ದಾರೆ.

ಮಾ.24ರ ವರೆಗೆ ಜಾತ್ರಾ ಮಹೋತ್ಸವ

ಕಲಾದಗಿ: ಸಮೀಪದ ಶಾರದಾಳ ಗ್ರಾಮದಲ್ಲಿ ಮಾ.20ರಿಂದ 24ರ ವರೆಗೆ ಸದ್ಗುರು ಯಲ್ಲಾಲಿಂಗೇಶ್ವರ ಪ್ರಭು ಮಹಾರಾಜರ ಜಾತ್ರಾ ಮಹೋತ್ಸವ ನಡೆಯಲಿದ್ದು, ಪ್ರತಿದಿನ ಸಂಜೆ 7ರಿಂದ 9ರ ವರೆಗೆ ಅಭಿನವ ವೆಂಕಟೇಶ ಶ್ರೀಗಳ ಸಮ್ಮುಖದಲ್ಲಿ ಕೋಲಾರ ತಾಲೂಕಿನ ಮಸೂತಿ ಗ್ರಾಮದ ಡಾ.ಶಿವಲಿಂಗಯ್ಯ ಶರಣರು ಪುರಾಣಿಕ ಮಠ ಅವರಿಂದ ಶಿವಶರಣೆ ಅಕ್ಕಮಹಾದೇವಿ ಮಹಾಪುರಾಣ ಜರುಗಲಿದೆ. ಮಾ.21ರಂದು ಬೆಳಗ್ಗೆ 10 ಗಂಟೆಗೆ 55ಎಚ್‌ಪಿ ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ ನಡೆಯಲಿದೆ. ಮಾ.23ರಂದು ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆ ನಡೆಯಲಿವೆ. ಹಾಗೂ ರಾತ್ರಿ 10 ಗಂಟೆಯಿಂದ ವಿವಿಧ ಭಜನಾ ಮೇಳದವರಿಂದ ಶಿವಭಜನೆ ಕಾರ್ಯಕ್ರಮ ನಡೆಯಲಿದೆ. ಮಾ.24ರಂದು ಬೆಳಗ್ಗೆ 8 ಗಂಟೆಗೆ ಸಕಲ ಮಂಗಳ ವಾದ್ಯಗಳೊಂದಿಗೆ ಕುಂಭ, ಆರತಿ ಹಿಡಿದು ಗಂಗಾ ದರ್ಶನ ಹಾಗೂ ಪ.ಪೂ ಡಾ.ಮುರುಘರಾಜೇಂದ್ರ ಶ್ರೀಗಳ ಪುರಪ್ರವೇಶ ನಂತರ ಮಣ್ಯಾಶ್ರಮದಿಂದ ಯಲ್ಲಾಲಿಂಗ ಮಹಾರಾಜರ ಭಾವಚಿತ್ರ ಮೆರವಣಿಗೆಯೊಂದಿಗೆ ಮಠಕ್ಕೆ ಬಂದು ಶ್ರೀಗಳ ಪಾದಪೂಜೆ ಶಾರದಾಳ ಗ್ರಾಮದ ಭಕ್ತರಿಂದ ನೆರವೇರುವುದು ನಂತರ ಆಶೀರ್ವಚನ ಮಹಾಪ್ರಸಾದ ನಡೆಯುವುದು. ರಾತ್ರಿ 10 ಗಂಟೆಗೆ ಸುಂದರ ಸಾಮಾಜಿಕ ನಾಟಕ ಜರುಗುವುದು ಎಂದು ಜಾತ್ರಾ ಸಮಿತಿಯವರು ತಿಳಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ 75 ಲಕ್ಷ ರೂ.ಲಾಭ

ಬಾದಾಮಿ: ಬಾದಾಮಿ ತಾಲೂಕಿನ ಪ್ರತಿಷ್ಠಿತ ಸಹಕಾರ ಬ್ಯಾಂಕಿನಲ್ಲಿ ಒಂದಾದ ಗುರು ಸದಾಶಿವ ಪತ್ತಿನ ಸೌಹಾರ್ದ ಸಹಕಾರಿ ನಿ. ದಶಮಾನೋತ್ಸವವನ್ನು ಪ್ರಧಾನ ಕಚೇರಿ ಹಾಗೂ ಎಲ್ಲ ಶಾಖೆಗಳಲ್ಲಿ ರುದ್ರಾಭಿಷೇಕ, ಸದಾಶಿವ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಣೆ ಮಾಡಲಾಯಿತು.

ಬ್ಯಾಂಕ್‌ನ ಅಧ್ಯಕ್ಷ ಮಹಾಂತೇಶ ಮಮದಾಪುರ ಮಾತನಾಡಿ ಸಹಕಾರಿ ಕ್ಷೇತ್ರದಲ್ಲಿ ನಾವುಗಳು ಗ್ರಾಹಕರ ಸಹಕಾರ ಪ್ರೀತಿ ವಿಶ್ವಾಸ ಬೆಳೆಸಿಕೊಂಡು 100 ಕೋಟಿಗೂ ಅಧಿಕ ದುಡಿಯುವ ಬಂಡವಾಳ ಹೊಂದಿ ಆರ್ಥಿಕ ಸದೃಢತೆಯ ಜತೆಗೆ ಹತ್ತು ವರ್ಷಗಳಲ್ಲಿ ಉತ್ತಮ ಹಣಕಾಸಿಕ ವಹಿವಾಟು ನಡೆಸಿ ಪ್ರಸಕ್ತ ಸಾಲಿನಲ್ಲಿ 75 ಲಕ್ಷ ರೂ. ಲಾಭ ಗಳಿಸಿದ್ದು ಸಂತಸ ತಂದಿದೆ.

ಇದಕ್ಕೆ ಪ್ರತಿಯಾಗಿ ಗ್ರಾಹಕರಿಗೆ ಶೇ 12 ರಷ್ಟು ಡಿವಿಡೆಂಡ್ ಹಂಚಲು, ಮತ್ತು ಹಿರಿಯ ನಾಗರಿಕರು, ಮಾಜಿ ಸೈನಿಕರು, ವಿಧವೆಯರು, ವಿಕಲಚೇತನರಿಗೆ ಶೇ.0.50 ರಷ್ಟು ಹೆಚ್ಚುವರಿ ಬಡ್ಡಿಯನ್ನ ಠೇವಣಿಗೆ ನೀಡಲು ಆಡಳಿತ ಮಂಡಳಿ ತೀರ್ಮಾನಿಸಿದೆ. ಇದರ ಜತೆಗೆ ಗ್ರಾಹಕರ ಠೇವಣಿಗೆ ಕೇವಲ 9 ವರ್ಷಗಳಲ್ಲಿ ತ್ರಿಗುಣ(ಮೂರುಪಟ್ಟು) ಗೊಳಿಸಿ ನೀಡಲಾಗುತ್ತದೆ. ಉಪಾಧ್ಯಕ್ಷ ಬಸವರಾಜ ಪಾಟೀಲ, ನಿರ್ದೇಶಕರಾದ ಕುಮಾರಗೌಡ ಜನಾಲಿ, ಶಿವಮೂರ್ತಿ ಚನಿವಾಲರ, ವಿದ್ಯಾನಂದ ಪೂಜಾರ, ಭೀಮನಗೌಡ ಪಾಟೀಲ, ಸಿದ್ದಣ್ಣ ಟೆಂಗಿನಕಾಯಿ, ಆಡಳಿತಾಧಿಕಾರಿ ಎಸ್.ಎಸ್.ಹಿರೇಮಠ, ಮುಕಾನಿ ಅಧಿಕಾರಿ ಅಣ್ಣಯ್ಯ ಕಂಬಿ, ಮುಖಂಡರಾದ ಗುಂಡಪ್ಪ ತೀರ್ಥಪ್ಪನವರ, ರಾಮನಗೌಡ, ಹೊನ್ನಯ್ಯ ಹಿರೇಮಠ, ಎಫ್.ಆರ್.ಪಾಟೀಲ, ಡಾ.ಸಿ.ಕೆ.ದೇವಗಿರಿಕರ ಹಾಗೂ ಸಿಬ್ಬಂದಿ ಇದ್ದರು.

> **ಮಾರ್ಚ್ ತಿಂಗಳು ಮತ್ತು ಚುನಾವಣೆ ನೀತಿ ಸಂಹಿತೆ ಇರುವ ಹಿನ್ನಲೆಯಲ್ಲಿ ಪ್ರಧಾನ ಕಚೇರಿ ಸೇರಿದಂತೆ ಎಲ್ಲ ಶಾಖೆಗಳಲ್ಲಿಯೂ ಸರಳ ಪೂಜೆ ನೆರವೇರಿಸಿ ವಾರ್ಷಿಕೋತ್ಸವ ಆಚರಿಸಲಾಗಿದೆ. ನಮ್ಮ ಬ್ಯಾಂಕ್ ಇಂದಿಗೆ ಕಾರ್ಯಾರಂಬಗೊಂಡು ಹತ್ತು ವರ್ಷ ಗತಿಸಿದ ಹಿನ್ನಲೆಯಲ್ಲಿ ಬರಲಿರುವ ದಿನಗಳಲ್ಲಿ ದಶಮಾನೋತ್ಸವ ಸಮಾರಂಭ ಅದ್ದೂರಿಯಾಗಿ ಆಚರಿಸಲಾಗುವುದು.**
> ■ ಮಹಾಂತೇಶ ಮಮದಾಪೂರ, ಅಧ್ಯಕ್ಷ, ಗುರು ಸದಾಶಿವ ಪತ್ತಿನ ಸೌಹಾರ್ದ ಸಹಕಾರ ಬ್ಯಾಂಕ್



ಬಿಜೆಪಿಯಿಂದ ಸಾಮಾಜಿಕ ನ್ಯಾಯ ಕಲ್ಪಿಸಲು ಸಾಧ್ಯ: ರಾಜು

ಬಾಗಲಕೋಟೆ: ಬಾಗಲಕೋಟೆ, ದಾವಣಗೆರೆ ದಕ್ಷಿಣ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಗಳಿಸಲಿದ್ದಾರೆಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ವಾಲ್ಮೀಕಿ ಸಮಾಜದ ಮುಖಂಡ ರಾಜು ನಾಯ್ಕರ ಹೇಳಿದರು.

ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಉಪ ಚುನಾವಣೆಗೆ ಮಾಜಿ ಶಾಸಕ ವೀರಣ್ಣ ಚರಂತಿಮಠ ಅವರಿಗೆ ಟಿಕೆಟ್ ನೀಡಿದ್ದು ವಾಲ್ಮೀಕಿ ಸಮಾಜದ ಸ್ವಾಗತಿಸುತ್ತದೆ.ದಾಣಗೆರೆಯಲ್ಲಿ ವಾಲ್ಮೀಕಿ ಸಮಾಜದ ನಾಯಕ ದಾಸಕರಿಯಪ್ಪ ಅವರಿಗೆ ಟಿಕೆಟ್ ನೀಡುವ ಮೂಲಕ ಬಿಜೆಪಿ ಸಾಮಾಜಿಕ ನ್ಯಾಯವನ್ನು ಕಲ್ಪಿಸಿದೆ ಅದನ್ನು ಕಾಂಗ್ರೆಸ್ ಪಕ್ಷದಲ್ಲಿ ಕಾಣಲು ಸಾಧ್ಯವಿಲ್ಲ. ಬಿಜೆಪಿ ಪಕ್ಷ ಎಂದರೆ ಬ್ರಾಹ್ಮಣ, ಲಿಂಗಾಯತರ ಪಕ್ಷವೆಂದು ಆರೋಪ ಮಾಡುವವರಿಗೆ ಈ ಭಾರಿ ಬಿಜೆಪಿ ರಾಜ್ಯ, ರಾಷ್ಟ್ರೀಯ ನಾಯಕರು ಸಾಮಾಜಿಕ ನ್ಯಾಯ ನೀಡಿದೆ ಎಂದರು.

ನಾಗೇಂದ್ರ ಹಾಗೂ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ಕೈ ಬಿಟ್ಟು ವಾಲ್ಮೀಕಿ ಜನಾಂಗವನ್ನು ತುಳಿಯುವಂತ ಕೆಲಸ ಕಾಂಗ್ರೆಸ್ ಮಾಡುತ್ತಿದೆ ಎಂದು ದೂರಿದರು.

ವಾಲ್ಮೀಕಿ ಸಮಾಜದ ಮುಖಂಡರಾದ ಪ್ರಕಾಶ ನಾಯ್ಕರ ಮಾತನಾಡಿ, ಬಿಜೆಪಿ ಪಕ್ಷಕ್ಕೆ ನಮ್ಮ ಸಮಾಜದ ಸಂಪೂರ್ಣ ಬೆಂಬಲವಿದ್ದು, ನಮ್ಮ ಸಮಾಜದ ಅಭಿವೃದ್ದಿಗಾಗಿ ಬಿಜೆಪಿ ಪಕ್ಷವು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದು, ವಾಲ್ಮೀಕಿ ಸಮಾಜಕ್ಕೆ ಬಿಜೆಪಿಯಲ್ಲಿ ಮಾತ್ರ ಬೆಂಬಲವಿದೆ. ಕಾಂಗ್ರೆಸ್ ಪಕ್ಷ ಯಾವ ರೀತಿ ನಡೆಸಿಕೊಳ್ಳುತ್ತಿದೆ ಎಂದು ಎಲ್ಲರಿಗೂ ಗೊತ್ತಿರುವ ಸಂಗತಿ ಎಂದು ಹೇಳಿದರು. ಯಲ್ಲಪ್ಪ ಕ್ಯಾದಿಗೇರಿ, ಹಣಮಂತ ಲೋಕಾಪೂರ ಇದ್ದರು.



ಗುಬ್ಬಚ್ಚಿಗಳೂ ಜೀವಿಸುವ ಹಕ್ಕಿದೆ



ಮುಧೋಳ: ಎಲ್ಲ ಜೀವಿಗಳಂತೆ ಗುಬ್ಬಚ್ಚಿಗಳೂ ಜೀವಿಸುವ ಹಕ್ಕಿದೆ. ಅವುಗಳಿಗೆ ಮನೆ ಮಾಳಗಿಗಳ ಮೇಲೆ ನೀರು, ಕಾಳು-ಕಡಿ ಇಟ್ಟು ಸಂರಕ್ಷಿಸುವ ಹೊಣೆ ನಮ್ಮೆಲರದು ಇದೆ. ಎಂದು ಜಿಲ್ಲಾ ರಾಜ್ಯೋತ್ಸವ ಪುರಸ್ಕೃತ ಪರಿಸರ ಪ್ರೇಮಿ ಯಲ್ಲಪ್ಪ ಶಿಂಧೆ ಹೇಳಿದರು. ತಾಲೂಕಿನ ಉತ್ತೂರ ಗ್ರಾಮದ ಸರಕಾರಿ ಶಾಲೆಯಲ್ಲಿ ವಿಶ್ವ ಗುಬ್ಬಚ್ಚಿಗಳ ದಿನಾಚರಣೆಯಲ್ಲಿ ಪಾರಿವಾಳ ಹಾರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ತಾವು ಮಕ್ಕಳ ದಿನಾಚರಣೆ ಹೇಗೆ ಆಚರಿಸಿಕೊಳ್ಳುತ್ತಿರೊ ಹಾಗೆಯೇ ಇಂದು ಗುಬ್ಬಚ್ಚಿ ದಿನಾಚರಣೆ ವಿಶ್ವಾದ್ಯಂತ ಆಚರಿಸುತ್ತಾರೆ, ವನ್ಯಜೀವಿಗಳ ಕುರಿತು, ಅರಿತು ತಾವೆಲ್ಲ ಗಿಡ-ಮರ, ಪಕ್ಷಿ-ಪ್ರಾಣಿಗಳ ಪಾಲನೆ, ಪೋಷಣೆ ಮಾಡಿ ಬೆಳೆಸುವ ಕಾರ್ಯ ಮಾಡಬೇಬೆಕೆಂದರು. ಮುಖ್ಯೋಪಾಧ್ಯಯ ಹೊಳಬಸು, ಗ್ರಾಪಂ ಮಾಜಿ ಸದಸ್ಯ ಮುತ್ತಪ್ಪ ಗುರಕೇರ, ಗ್ರಾಮಸ್ಥರು, ಶಿಕ್ಷಕರು ಇತರರಿದ್ದರು.

ಮಾರುತೇಶ್ವರ ರಥೋತ್ಸವ ಅದ್ದೂರಿ

ಕೆರೂರ: ಸಮೀಪದ ಮತ್ತಿಕಟ್ಟಿ ಗ್ರಾಮದ ಮಾರುತೇಶ್ವರ ರಥೋತ್ಸವವು ಗುರುವಾರ ಸಂಜೆ ಮಳೆಯ ನಡುವೆ ಸಂಭ್ರಮದಿಂದ ಜರಗಿತು. ಬೆಳಗ್ಗೆ ದೇವಸ್ಥಾನದಲ್ಲಿ ಮಾರುತೇಶ್ವರ ದೇವರ ಅಬಿಷೇಕ, ಮಹಾಬಿಷೇಕ, ಎಲೆ ಪೂಜೆ ಹಾಗೂ ವಿವಿಧ ಪೂಜಾ ಕಾರ್ಯಗಳು ನಡೆದವು. ಜಾತ್ರೆಯ ಅಂಗವಾಗಿ ರಥೋತ್ಸವ ಹಾಗೂ ದೇವಸ್ಥಾನವನ್ನು ಬಾಳೆಕಂಬ, ತಳಿರು-ತೋರಣಗಳಿಂದ ಶೃಂಗರಿಸಲಾಗಿತ್ತು. ಸಂಜೆ ರಥೋತ್ಸವಕ್ಕೂ ಮುಂಚೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮುತ್ತೈದೆಯರ ಆರತಿಯೊಂದಿಗೆ ಮಾರುತೇಶ್ವರ ಕಳಸ, ಪಲ್ಲಕ್ಕಿಯ ಮೆರವಣಿಗೆ ಸಕಲ ಮಂಗಲವಾದ್ಯಗಳೊಂದಿಗೆ ನಡೆಯಿತು. ಸಂಜೆ ಗೋಧೂಳಿ ಮುಹೂರ್ತದಲ್ಲಿ ರಥೋತ್ಸವ ನಡೆಯಿತು. ಯಂಕಪ್ಪ ಪೂಜಾರಿ, ಬಿ.ಬಿ.ಪೂಜಾರಿ, ಸುಭಾಸ್ ಆರೇರಿ, ಬಸವರಾಜ ಗಾಡಗೂಳಿ, ಸುರೇಶ ಹೂಲಗೇರಿ, ಬಸವರಾಜ ಅಲಬನ್ನವರ, ಬಸವರಾಜ ಬನ್ನಿದಿನ್ನಿ, ಎಚ್.ಸಿ.ಪಾಟೀಲ, ಮಲ್ಲು ಕಂಠೆಪ್ಪನವರ, ಕುಮಾರ ಬನ್ನಿದಿನ್ನಿ, ಯಮನೂರ ಬನ್ನಿದಿನ್ನಿ ಇದ್ದರು.



ನಾಲಿಗೆ ಹರಿಬಿಟ್ಟು ಮಾತನಾಡಬೇಡಿ: ಟವಳಿ

ಬಾಗಲಕೋಟೆ: ಯಾರೇ ಇರಲಿ ಹಿರಿಯರಿಗೆ ಗೌರವ ಕೊಟ್ಟು ಮಾತನಾಡುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು. ಇನ್ನೊಬ್ಬರ ತೇಜೋವಧೆ ಮಾಡುವುದನ್ನು ಬಿಡಬೇಕು. ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರ ಬಗ್ಗೆ ಮಾತನಾಡುವ ನೈತಿಕತೆ ನಿಮಗೆ ಇಲ್ಲವೆಂದು ಕಾಂಗ್ರೆಸ್ ಪಕ್ಷದವರಿಗೆ ಬಿಟಿಡಿಎ ಮಾಜಿ ಸದಸ್ಯ ಶಿವಾನಂದ ಟವಳಿ ಖಡಕ್ ಎಚ್ಚರಿಕೆಯನ್ನು ನೀಡಿದರು.



ನವನಗರದ ಪತ್ರಿಕಾಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ರಮೇಶ ಬದ್ನೂರ ಚರಂತಿಮಠವರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಬಿಡಬೇಕು. ಇದೇ ಬದ್ನೂರ 2009-10 ರಲ್ಲಿ ಬಿಜೆಪಿ ಯುವ ಮೋರ್ಚಾ ಜಿಲ್ಲಾ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರೆ ಬಿಜೆಪಿ ಪಕ್ಷಕ್ಕೆ ಬರುತ್ತೇನೆ ಎಂದು ಚರಂತಿಮಠರ ಬಳಿ ಬಂದು ಕೇಳಿಕೊಂಡಿದ್ದನ್ನು ಮರೆತಿದ್ದಾರೆ. ಪಕ್ಷದಲ್ಲಿ ಒಂದು ತಿಂಗಳು ಕಾಲ ಇದ್ದುಕೊಂಡು ನಂತರ ಆಮ್ ಆದ್ಮಿ ಹೀಗೆ ವಿವಿಧ ಪಕ್ಷಕ್ಕೆ ಹೋಗಿದ್ದು ಈಗ ನಮ್ಮ ನಾಯಕರ ಬಗ್ಗೆ ಮಾತನಾಡುವ ನೈತಿಕತೆ ಅವರಿಗಿಲ್ಲ ಎಂದರು.

ಹೋರಾಟ ಮಾಡುವವರಿಗೆ ವಿರೋಧವಿಲ್ಲ ಆದರೆ ನಮ್ಮ ನಾಯಕರನ್ನು ತೇಜೋವಧೆ ಮಾಡುವುದು ಸರಿಯಲ್ಲ ಹೀಗೆ ಮುಂದುವರೆದರೆ ಕಾರ್ಯಕರ್ತರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮುತ್ತಣ್ಣ ಬೆಣ್ಣೂರ ಮಾತನಾಡಿ, ಉಡಾಫೆ ಮಾತುಗಳನ್ನಾಡುವುದನ್ನು ಬಿಡಬೇಕು. ಸ್ವಾಭಿಮಾನ ಕೆಣಕುವುದನ್ನು ಬಿಡಿ. ಚರಂತಿಮಠರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಕಾಂಗ್ರೆಸ್ ಕೈ ನಾಯಕರು ಬಿಡಬೇಕು. ಸಂಸ್ಕಾರ ಇಲ್ಲದಂತ ಪಕ್ಷದ ಕಾಂಗ್ರೆಸ್ ಆಗಿದೆ. ಅಭಿವೃದ್ಧಿಯನ್ನು ಮುಂದಿಟ್ಟು ಮಾತನಾಡಿ, ಚರಂತಿಮಠ ಕುರಿತು ಮಾತನಾಡುವ ನೈತಿಕಗೆ ಕಾಂಗ್ರೆಸ್ ನಾಯಕರಿಗೆ ಇಲ್ಲವೆಂದು ಹೇಳಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ ಮಾತನಾಡಿ, ಬಾಗಲಕೋಟೆ ಮತಕ್ಷೇತ್ರಕ್ಕೆ ವೀರಣ್ಣ ಚರಂತಿಮಠವರು ಶಾಸಕರಾಗಿದ್ದ ಸಂದರ್ಭದಲ್ಲಿ 6ಸಾವಿರ ಕೋಟಿ ರೂ.ಅನುದಾನ ತಂದಿದ್ದಾರೆ. ದಾಖಲೆ ಸಮೇತ ಉತ್ತರ ನೀಡುತ್ತೇವೆ. ಬಿಜೆಪಿ ಯಾವತ್ತೂ ಚುನಾವಣೆಗೋಸ್ಕರ ಹೋರಾಟ ಮಾಡುವುದಿಲ್ಲ, ಸದಾ ಜನರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಹೋರಾಟ ಮಾಡುತ್ತದೆ ಎಂದರು. ಯಲ್ಲಪ್ಪ ಬೆಂಡಿಗೇರಿ, ಯಲ್ಲಪ್ಪ ನಾರಾಯಣಿ ಇದ್ದರು.

ಗುಬ್ಬಿಗಳ ಸಂರಕ್ಷಣೆಗೆ ಮುಂದಾಗಿ

ಗುಳೇದಗುಡ್ಡ: ಅತೀಯಾದ ನಗರೀಕರಣ, ಮರಗಳ ನಾಶ, ಮಾಲಿನ್ಯ ಹಾಗೂ ರೈತರು ಬೆಳೆಗಳಿಗೆ ವಿಷಕಾರಿ ಕ್ರಿಮಿನಾಶಕಗಳನ್ನು ಅತೀಯಾಗಿ ಬಳಸುತ್ತಿರುವುದರಿಂದ ಗುಬ್ಬಿಗಳ ಸಂತತಿ ಅವನತಿ ಹೊಂದುತ್ತಿದ್ದು, ಪ್ರಕೃತಿಯ ಸುಂದರ ಜೀವಿಗಳಾದ ಗುಬ್ಬಿಗಳು ಕಾಣೆಯಾಗುತ್ತಿರುವುದು ವಿಷಾಧನೀಯ. ಗುಬ್ಬಿಗಳ ಸಂರಕ್ಷಣೆಗೆ ವಿದ್ಯಾರ್ಥಿಗಳು ತಮ್ಮ ಮನೆಗಳ ಮೇಲ್ಛಾವಣಿ ಮೇಲೆ ಮಣ್ಣಿನ ಪಾತ್ರೆಗಳಲ್ಲಿ ಕಾಳು ಹಾಗೂ ಕುಡಿಯಲು ನೀರು ಇಡಬೇಕು ಎಂದು ರಾಠಿ ಹಾಗೂ ಕಾವಡೆ ಆಂಗ್ಲ ಮಾಧ್ಯಮ ಶಾಲೆಯ ಶಾಲೆಯ ಚೇರಮನ್ ಅಶೋಕ ಹೆಗಡಿ ಹೇಳಿದರು.

ಶುಕ್ರವಾರ ಸ್ಥಳೀಯ ರಾಠಿ ಹಾಗೂ ಕಾವಡೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಗುಬ್ಬಿ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ನಮ್ಮ ಪರಿಸರದಿಂದ ಗುಬ್ಬಿಗಳ ರಕ್ಷಣೆಗೆ ಮಕ್ಕಳು ಮುಂದಾಗಬೇಕು ಎಂದು ಹೇಳಿದರು.



ರೂಪಾ ಅಗ್ರೋಯಾ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಗುಬ್ಬಿಗಳ ಚಿತ್ರಕಲೆ ಸ್ಪರ್ಧೆಯನ್ನು ಮೆಚ್ಚಿಕೊಂಡು ವಿಜೇತರಿಗೆ ಬಹುಮಾನ ವಿತರಿಸಿದರು. ಶಾಲೆಯ ಮುಖ್ಯ ಗುರುಮಾತೆ ವೀಣಾ ಹಳ್ಳೂರ ಗುಬ್ಬಿಗಳ ಜೀವನ ಕುರಿತು ಮಾತನಾಡಿದರು. ಮುಖ್ಯೋಪಾಧ್ಯಾಯ ಆರ್.ಎಸ್.ಜಿರ್ಲಿ, ಶಿಕ್ಷಕ ಎಸ್.ಬಿ.ಗಾಜಿ, ಶಿಕ್ಷಕಿ ಎಸ್.ಎ.ಮಕಾಂದಾರ, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಎಲ್ಲರೂ ಸಮಾನರೆಂಬ ಮನೋಭಾವ ಹೊಂದಿ

ಜಮಖಂಡಿ: ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಅನೇಕ ರಂಗಗಳಲ್ಲಿ ಸಾಧಿಸಿ ತೋರಿಸಿದ್ದಾರೆ. ಮಹಿಳೆ ಮತ್ತು ಪುರುಷ ಎಂಬ ಲಿಂಗ ಬೇಧತೊರೆದು ಎಲ್ಲರೂ ಸಮಾನರೆಂಬ ಮನೋಭಾವ ಹೊಂದಿದಾಗ ಮಾತ್ರ ಸುಂದರ ಸಮಾಜ ನಿರ್ಮಾಣ ಸಾಧ್ಯ ಎಂದು ಬಂಜಾರಾ ಕಸೂತಿ ಸಂಘಟನೆ ಸಂಸ್ಥಾಪಕಿ ಆಶಾ.ಎಂ.ಪಾಟೀಲ ಹೇಳಿದರು.

ಸ್ಥಳೀಯ ದರ್ಬಾರ್ ಹಾಲ್ ನಲ್ಲಿ ಬಿಎಲ್‌ಡಿಇ ಸಂಸ್ಥೆಯ ಮಹಾವಿದ್ಯಾಲಯದ ಮಹಿಳಾ ವೇದಿಕೆ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಕೋಶದ ಆಶ್ರಯದಲ್ಲಿ ಆಯೋಜಿಸಿದ್ದ ಸಿಂಚನ ಮಾರ್ಕೆಟ್ ಮೇಳ-ಮಹಿಳಾ ಉದ್ಯಮಿಗಳ ಸಮಾಗಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜೈವಿಕ ವ್ಯತ್ಯಾಸಗಳನ್ನು ಹೊರತುಪಡಿಸಿ ಧೈರ್ಯ, ಆತ್ಮವಿಶ್ವಾಸ ಮತ್ತು ಸ್ವಾಭಿಮಾನಕ್ಕೆ ಯಾವುದೇ ಲಿಂಗ ಭೇದವಿಲ್ಲ, ಪುರುಷ ಮತ್ತು ಮಹಿಳೆಯರ ನಡುವಿನ ಸಂಬಂಧವು ಸುಂದರವಾಗಬೇಕಾದರೆ, ಇಬ್ಬರೂ ಪರಸ್ಪರರ ದಣಿವನ್ನು ಅರ್ಥಮಾಡಿಕೊಂಡು ಬೆಂಬಲವಾಗಿ ನಿಲ್ಲಬೇಕು. ಪುರುಷರು ಮಹಿಳೆಯರ ಸಾಧನೆ ಗುರುತಿಸಿದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ ಎಂದರು.



ಕವಿವಿ ಧಾರವಾಡದ ಪ್ರಾಧ್ಯಾಪಕ ಡಾ.ಉತ್ತಮ ಕಿನಂಗೆ, ಕಾಲೇಜಿನ ಪ್ರಾಚಾರ್ಯ ಡಾ.ಪಿ.ಡಿ.ಪೋಳ, ಅರುಣಕುಮಾರ ಶಹಾ ಮಾತನಾಡಿದರು. ಆಡಳಿತಾಧಿಕಾರಿ ಪ್ರೊ.ಎಸ್.ಎಚ್.ಲಗಳಿ, ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಗಿರಿಜಾ ಮೇತ್ರಿ, ಅರ್ಬನ್ ಬ್ಯಾಂಕ್ ನಿರ್ದೇಶಕಿ ವೈಶಾಲಿ ಗೊಂದಿ, ಆಶಾ ಗುಡಗುಂಟಿ, ಕೀರ್ತಿ ನ್ಯಾಮಗೌಡ, ಅರ್ಚನಾ ಶಹಾ, ಮಾಧುರಿ ಹಮಾಬಳಶೆಟ್ಟಿ, ನಂದಿನಿ ಬಾಂಗಿ, ಕಲ್ಯಾಣಿ ಗೋಖಲೆ, ಪ್ರಿಯಂಕಾ ಆಪ್ಟೆ, ಶಾರದಾ ಪಾಟೀಲ, ಸುನಂದಾ ಕಲ್ಯಾಣಶೆಟ್ಟಿ, ಅಮೃತಾ ಮೇಟಿ, ರಾಜೇಶ್ವರಿ ಹಿರೇಮಠ, ಉಪಪ್ರಾಚಾರ್ಯ ಡಾ.ಡಿ.ಎಸ್.ನಿಟ್ಟೂರ, ಪ್ರೊ.ಮಲ್ಲಿಕಾರ್ಜುನ ಬೀರಣ್ಣ, ಡಾ.ರವಿಶಂಕರ, ಪ್ರೊ.ಪಿಸಿ.ಸುರಪುರ, ಡಾ.ಆನಂದ ಉಪ್ಪಾರ ಇದ್ದರು. ಪ್ರೊ.ದೀಪಾ ತಳವಾರ ಸ್ವಾಗತಿಸಿದರು. ವಿದ್ಯಾರ್ಥಿನಿ ಸಾಕ್ಷಿ ಹಾಗೂ ಆಯಿಶಾ ನಿರೂಪಿಸಿ, ದೀಪಾ ಲಕ್ಕಪಗೋಳ ವಂದಿಸಿದರು.

ಕಿರುಸುದ್ದಿ

ನೀರು ಪೂರೈಕೆಯಲ್ಲಿ ವ್ಯತ್ಯಯ

◆**ಬಸವನಬಾಗೇವಾಡಿ:** ಪಟ್ಟಣಕ್ಕೆ ಆಲಮಟ್ಟಿಯಿಂದ ಪೂರೈಕೆಯಾಗುವ ಕುಡಿಯುವ ನೀರಿನಲ್ಲಿ ವ್ಯತ್ಯಯವುಂಟಾಗಲಿದ್ದು, ದಕ್ಷಿಣ ಪಶ್ಚಿಮ ರೈಲ್ವೆ ಹುಬ್ಬಳ್ಳಿ ಇಲಾಖೆ ಆಲಮಟ್ಟಿ, ವಂದಾಲ ರೈಲ್ವೆ ನಿಲ್ದಾಣಗಳ ನಡುವೆ ರೈಲ್ವೆ ಮಾರ್ಗವನ್ನು ದ್ವಿಗುಣಗೊಳಿಸುವ ಯೋಜನೆಯಡಿ ಹೊಸ ನೀರು ಸರಬರಾಜು ಪೈಪ್‌ಲೈನ್ ಸೇತುವೆಯನ್ನು ನಿರ್ಮಿಸಲಾಗುತ್ತಿದ್ದು, ಕಾರಣ ಈ ಭಾಗದಲ್ಲಿ ರೈಲ್ವೆ ಹಳಿಯ ಮೇಲಿರುವ ಹಳೆಯ ಸೇತುವೆಯನ್ನು ತೆರವುಗೊಳಿಸಿ, ಹೊಸದಾಗಿ ಪೈಪ್‌ಲೈನ್ ಜೋಡಿಸುವ ಸಲುವಾಗಿ ಹಳೆಯ ಪೈಪ್‌ಲೈನ್ ಸಂಪರ್ಕ ಕಡಿತಗೊಳಿಸಿ, ಹೊಸ ಪೈಪ್‌ಲೈನ್‌ಗೆ ಸಂಪರ್ಕ ಕಲ್ಪಿಸಲಾಗುತ್ತಿದ್ದ ಕಾರಣ ಮಾ.21ರಿಂದ 24ರವರೆಗೆ 4 ದಿನಗಳ ಕಾಲ ನೀರು ಪೂರೈಕೆಯಲ್ಲಿ ವ್ಯತ್ಯಯವುಂಟಾಗುತ್ತದೆ ಕಾರಣ ಪಟ್ಟಣದ ಸಾರ್ವಜನಿಕರು ಪುರಸಭೆಯೊಂದಿಗೆ ಸಹಕರಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿ ವಿದ್ಯಾಧರ ಕಲಾದಗಿ ಹಾಗೂ ಅಭಿಯಂತರಾದ ಮಹಾದೇವ ಜಂಬಗಿ ತಿಳಿಸಿದ್ದಾರೆ.

ಧರ್ಮಸಭೆ ಇಂದು

◆**ಮುದ್ದೇಬಿಹಾಳ:** ತಾಲೂಕಿನ ಕಿಲಾರಹಟ್ಟಿ ಗ್ರಾಮದ ಬೀರಲಿಂಗೇಶ್ವರ ಹಾಗೂ ಕಾಡಸಿದ್ದೇಶ್ವರ ಜಾತ್ರೆಯ ಅಂಗವಾಗಿ ಮಾ.21ರಂದು ಶನಿವಾರ ಸಾಮೂಹಿಕ ವಿವಾಹ ಮಹೋತ್ಸವ ಹಾಗೂ ಧರ್ಮ ಸಭೆ ಹಮ್ಮಿಕೊಳ್ಳಲಾಗಿದೆ. ಈ ಕುರಿತು ಮಾಹಿತಿ ನೀಡಿರುವ ತಾಲೂಕು ಹಾಲುಮತ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ ಮಾದರಿ ಅವರು, ಸುರಪುರ ತಾಲೂಕಿನ ಮಾರನಾಳ ಗ್ರಾಮದ ಬೀರಲಿಂಗೇಶ್ವರ ಗುಡಿಯನ್ನು ಕಟ್ಟಿಸಿದ್ದು ಅಂದು ತಾಲೂಕಿನ ಕಣಕಾಲ, ಇವಣಗಿ, ಒಡವಡಗಿ ನಾಗರಾಳ ಕಿಲಾರಹಟ್ಟಿ, ನಾಗರಬೆಟ್ಟ, ದೇವರ ಹುಲಗಬಾಳ ಅಡವಿ ಸೋಮನಾಳ, ಗೋನಾಳ, ಅಮರಗೋಳ ಎಣ್ಣೆವಡಗೇರ ಗ್ರಾಮಗಳಿಂದ ಕಿಲಾರಹಟ್ಟಿ ಗ್ರಾಮಕ್ಕೆ ಪಲ್ಲಕ್ಕಿ ಮೆರವಣಿಗೆ ಇರುತ್ತದೆ. ಆಗತೀರ್ಥದ ರೇವಣಸಿದ್ದೇಶ್ವರ ಶಾಂತಮಯ ಸ್ವಾಮೀಜಿ, ಅಂಕಲಿ ಮಠದ ವೀರಭದ್ರ ಸ್ವಾಮೀಜಿ, ಸಿದ್ದನಕೊಳ್ಳದ ಶಿವಕುಮಾರ ಸ್ವಾಮೀಜಿ, ತಾಳಿಕೋಟೆಯ ಸಿದ್ದಲಿಂಗ ದೇವರು ಧರ್ಮಸಭೆಯಲ್ಲಿ ಭಾಗವಹಿಸುವರು. ಯರಝರಿ ಗ್ರಾಮದ ಮಲ್ಲಾಲಿಂಗ ಸ್ವಾಮೀಜಿ. ಸರೂರು ಗ್ರಾಮದ ಶಿವಯ್ಯ ಗುರುವಿನ, ಕಿಲಾರ ಹಟ್ಟಿಯ ರಮಾನಂದ ಸ್ವಾಮೀಜಿ, ಸಿದ್ದಾಪುರದ ಅರವಿಂದ ಒಡೆಯರ ಸೇರಿದಂತೆ ರಾಜಕೀಯ ನಾಯಕರು, ಧಾರ್ಮಿಕ ಮುಖಂಡರು ಸಭೆಯಲ್ಲಿ ಭಾಗವಹಿಸುವರು. ಮಾ.22ರಂದು ವಿವಿಧ ಕ್ರೀಡೆಯ ಸ್ಪರ್ಧೆಗಳು ಹಾಗೂ ಮನರಂಜನಾ ಕಾರ್ಯಕ್ರಮಗಳು ನಡೆಯುವದು ಎಂದು ತಿಳಿಸಿದ್ದಾರೆ.

ಮಾ.23ರಂದು ಅಂಗನವಾಡಿ ನೌಕರರ ಹೋರಾಟ

◆**ವಿಜಯಪುರ:** ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮಾ.23ರಂದು ಬೆಂಗಳೂರಿನ ಫ್ರೀಡ್‌ಂ ಪಾರ್ಕ್‌ನಲ್ಲಿ ರಾಜ್ಯ ಅಂಗನವಾಡಿ ನೌಕರರ ಹಮ್ಮಿಕೊಂಡ ಬೃಹತ್ ಹೋರಾಟದಲ್ಲಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಂಗನವಾಡಿ ನೌಕರರ ಪಾಲ್ಗೊಳ್ಳಬೇಕು ಎಂದು ಸಂಘದ ಜಿಲ್ಲಾಧ್ಯಕ್ಷೆ ಸುನಂದಾ ನಾಯಕ ಹೇಳಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ, ಯುಕೆಜಿ ಪ್ರಾರಂಭಿಸಿ ಶಿಕ್ಷಣ ಇಲಾಖೆ ಪ್ರಾರಂಭಿಸಿರುವ ಎಲ್‌ಕೆಜಿ– ಯುಕೆಜಿಯನ್ನು ನಿಲ್ಲಿಸುವುದು, ಕನಿಷ್ಠ ವೇತನ ನೀಡುವುದು, ಎಫ್‌ಆರ್‌ಎಸ್ ನಿಲ್ಲಿಸಬೇಕೆಂದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಾ.23ರಿಂದ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಎಲ್ಲ ಅಂಗನವಾಡಿ ನೌಕರರು ಈ ಅನಿರ್ದಿಷ್ಟ ಬೃಹತ್ ಹೋರಾಟದಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಅವರು ತಿಳಿಸಿದ್ದಾರೆ.

ಬಂಡಿ ಉತ್ಸವ ಅದ್ದೂರಿ



◆**ದೇವರಹಿಪ್ಪರಗಿ:** ಪಟ್ಟಣದ ಐತಿಹಾಸಿಕ ಮಾರ್ತಾಂಡ ಭೈರವ ರಾವುತರಾಯ ದೇವರ ಅಲಂಕಾರ(ಬಣ್ಣ)ಕ್ಕಾಗಿ ಕಾರ್ಣಿಕರ ನುಡಿಯಂತೆ ಬಂಡಿ ಉತ್ಸವವನ್ನು ಪಟ್ಟಣದ ಹೊರವಲಯದಲ್ಲಿರುವ ಮಲ್ಲಯ್ಯನ ದೇವಸ್ಥಾನಕ್ಕೆ ಬಂಡಿಯಲ್ಲಿ ಡೊಳ್ಳು ವಾದ್ಯಗಳೊಂದಿಗೆ ಅತ್ಯಂತ ಶ್ರದ್ಧಾಭಕ್ತಿಯಿಂದ ಉತ್ಸವ ಮೆರವಣಿಗೆಯಲ್ಲಿ ಸಹಸ್ರಾರು ಭಕ್ತರು ಭಾಗವಹಿಸಿ ಭಕ್ತಿ ಮೆರೆದರು. ಬೆಳಗಿನ ಜಾವ ಸೂರ್ಯೋದಯಕ್ಕೂ ಮುನ್ನವೇ ರಾವುತರಾಯನ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಶಾಸ್ತ್ರೋಕ್ತವಾಗಿ ಪ್ರಾರಂಭವಾದವು. ನಂತರ ತೆರೆದ ಬಂಡಿಯಲ್ಲಿ ಅಶ್ವರೂಢನಾಗಿ ಆಸೀನನಾಗುವುದರ ಮೂಲಕ ಬಂಡಿ ಮೆರವಣಿಗೆ ಛತ್ರಿ ಚಾಮರಗಳೊಂದಿಗೆ ರಾವುತರಾಯನ ದೇವಸ್ಥಾನದಿಂದ ಮಲ್ಲಯ್ಯನ ದೇವಸ್ಥಾನಕ್ಕೆ ಅದ್ದೂರಿ ಮೆರವಣಿಗೆ ಸಹಸ್ರಾರು ಭಕ್ತರ ಮಧ್ಯೆ ನಡೆಯಿತು.



ಮುದ್ದೇಬಿಹಾಳ: ಯುಗಾದಿ ಹಬ್ಬದ ಪ್ರಯುಕ್ತ ಹಿಂದೂ ಸಮಾಜದ ಸಮಸ್ತ ನಾಗರಿಕರು ಯುವ ಮಿತ್ರರು ಸೇರಿಕೊಂಡು ಬೇವು ಬೆಲ್ಲವನ್ನು ಸೇವಿಸುವ ಕಾರ್ಯಕ್ರಮ ನೆರವೇರಿಸಲಾಯಿತು. ಮುಖಂಡರಾದ ಪ್ರಭು ಕಡಿ ಮಾಣಿಕ್ ದಂಡಾವತಿ, ಸಿದ್ದರಾಜ ಹೊಳಿ, ಮಾಂತು ಬೂದಿಹಾಳ ಮಠ, ಪ್ರಭು ನಂದಪ್ಪನವರ, ಕಾಶಿನಾಥ ಹುಗ್ಗಿ ಭಾಗವಹಿಸಿದ್ದರು.

ಕನ್ನಡವೆಂದರೆ ನಾವಾಡುವ ಪ್ರತಿ ಭಾವನೆ

◆**ಸಿಂದಗಿ:** ಜಗತ್ತಿನಲ್ಲಿ ಸುಮಾರು 6000ಕ್ಕೂ ಅಧಿಕ ಭಾಷೆಗಳಿದ್ದು ಅವುಗಳಲ್ಲಿ 2500ಕ್ಕೂ ಹೆಚ್ಚು ಭಾಷೆಗಳು ಭಾರತದಲ್ಲಿವೆ. ಇನ್ನು ಕೆಲವು ಭಾಷೆಗಳು ಅಳಿವಿನಂಚಿನಲ್ಲಿವೆ. ಇವುಗಳ ಮಧ್ಯದಲ್ಲಿ ಸಾವಿಲ್ಲದ ಕೊನೆಯಿಲ್ಲದ ಭಾಷೆ ಎಂದರೆ ಅದು ನಮ್ಮ ಕನ್ನಡ ಭಾಷೆ ಎಂದು ಸಿಂದಗಿಯ ಜಿ.ಪಿ.ಪೋರವಾಲ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ನಾಗರಾಜ ಮುರಗೋಡ ಹೇಳಿದರು. ನಗರದ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಕನ್ನಡ ಸಂಘದ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕನ್ನಡವೆಂದರೆ ಕೇವಲ ನುಡಿ, ಭಾಷೆಯಲ್ಲ ನಾವಾಡುವ ಪ್ರತಿ ಭಾವನೆಯಾಗಿದೆ. ಉದ್ಯೋಗಕ್ಕಾಗಿ ಅನ್ಯ ಭಾಷೆಗಳನ್ನು ಕಲಿಯಿರಿ ಆದರೆ ಮನೆ ಮಾತು ಶಿಕ್ಷಣದ ಮಾಧ್ಯಮ ಕನ್ನಡವಾಗಿರಲಿ ಎಂದರು. ಸಾರಂಗಮಠದ ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಲಬುರಗಿಯ ಸರ್ಕಾರಿ ಪಪೂ ಕಾಲೇಜಿನ ಉಪನ್ಯಾಸಕ ಡಾ.ಶಿವುಕುಮಾರ ಹುಣಚಾಳ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಜೆ.ಸಿ.ನಂದಿಕೋಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕನ್ನಡ ಸಂಘದ ಅಧ್ಯಕ್ಷ ದಾನಯ್ಯ ಮಠಪತಿ ಹಾಗೂ ಕಾರ್ಯದರ್ಶಿ ಪುಂಡಲೀಕ ದೊಡಮನಿ, ಡಾ.ಶರಣಬಸವ ಜೋಗೂರ, ಎನ್.ಬಿ.ಪೂಜಾರಿ, ಪಿ.ವಿ.ಮಹಲಿನಮಠ, ಸುಧಾಕರ ಚವ್ಹಾಣ, ಪ್ರಶಾಂತ ಕುಲಕರ್ಣಿ, ಆರ್.ಎ.ಹಾಲಕೇರಿ, ಭಾಗ್ಯಜ್ಯೋತಿ ದಸ್ಮಾ, ನಾಜೀಯಾ ಮುಲ್ಲಾ, ಚನ್ನು ಕತ್ತಿ, ಅರುಣಾ ಹಿರೇಮಠ, ಶ್ವೇತಾ ರಬಿನಾಳ ಸೇರಿದಂತೆ ಪ್ರಶಿಕ್ಷಣಾರ್ಥಿಗಳು ಇದ್ದರು.



ಸಿಂದಗಿ: ನಗರದ ಪದ್ಮರಾಜ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಕನ್ನಡ ಸಂಘದ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಸಿಂದಗಿಯ ಜಿ.ಪಿ.ಪೋರವಾಲ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ನಾಗರಾಜ ಮುರಗೋಡ ಚಾಲನೆ ನೀಡಿದರು. ಸಾರಂಗಮಠದ ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು, ಕಲಬುರಗಿಯ ಸರ್ಕಾರಿ ಪಪೂ ಕಾಲೇಜಿನ ಉಪನ್ಯಾಸಕ ಡಾ.ಶಿವುಕುಮಾರ ಹುಣಚಾಳ ಇದ್ದರು.

ಜನಾಂದೋಲನದ ರೂಪ ಪಡೆದ ಧರಣಿ | ಬಂಜಾರ ಸಮಾಜದಿಂದ ಬೆಂಬಲ

ಪ್ರಜಾಸೌಧಕ್ಕೆ ಗುರುತಿಸಿದ ಸ್ಥಳಕ್ಕೆ ವಿರೋಧ

◆**ತಾಳಿಕೋಟೆ:** ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಜಾಸೌಧ ಕಟ್ಟಡ ಪಟ್ಟಣದಲ್ಲಿಯೇ ನಿರ್ಮಿಸಬೇಕೆಂಬ ಒತ್ತಾಯ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದ್ದು, ತಾಲೂಕಿನ ಮೇಲೆಶ್ವರ ಗ್ರಾಮದ ಸಮೀಪ ಗುರುತಿಸಲಾದ ಸ್ಥಳವನ್ನು ವಿರೋಧಿಸಿ ತಾಳಿಕೋಟೆಯಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು 25ನೇ ದಿನಕ್ಕೆ ಕಾಲಿಟ್ಟಿದೆ. ಜನರ ಹಿತಕ್ಕಾಗಿ ಆರಂಭವಾದ ಈ ಹೋರಾಟ ಇದೀಗ ಸಾಮೂಹಿಕ ಜನಾಂದೋಲನದ ರೂಪ ಪಡೆದುಕೊಂಡಿದೆ.

ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಈ ಸತ್ಯಾಗ್ರಹಕ್ಕೆ ಪ್ರತಿದಿನವೂ ವಿವಿಧ ಸಂಘಟನೆಗಳು, ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಬೆಂಬಲ ವ್ಯಕ್ತಪಡಿಸುತ್ತಿದ್ದು, ಶುಕ್ರವಾರ ಬಂಜಾರ ಸಮಾಜದವರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಹೊಸ ಶಕ್ತಿ ತುಂಬಿದರು. ಬಂಜಾರ ಸಮಾಜ ತಾಳಿಕೋಟೆ ಈ ಹೋರಾಟಕ್ಕೆ ಬೆಂಬಲ ನೀಡಿರುವುದು ಗಮನಾರ್ಹವಾಗಿದೆ.

ಬಂಜಾರ ಸಮಾಜದ ಅಧ್ಯಕ್ಷರಾದ ಶಂಕರ ಚವ್ಹಾಣ ಮತ್ತು ಶಿವಾನಂದ ಚವ್ಹಾಣ ಮಾತನಾಡಿ, ಪ್ರಜಾಸೌಧಕ್ಕೆ ನಿಗದಿಪಡಿಸಿರುವ ಸ್ಥಳವು ತಾಳಿಕೋಟೆ ಪಟ್ಟಣದಿಂದ ನಾಲ್ಕು– ಐದು ಕಿಲೋಮೀಟರ್ ದೂರದಲ್ಲಿದ್ದು, ಈ ಸ್ಥಳ ಸಂಪೂರ್ಣ ನಿರ್ಜನ ಪ್ರದೇಶವಾಗಿರುವುದು ಸಾರ್ವಜನಿಕರ ಸುರಕ್ಷತೆ ಮತ್ತು ಸೌಲಭ್ಯಗಳ ದೃಷ್ಟಿಯಿಂದ ತೀರ ಅನಾನುಕೂಲಕರವಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ವಿಶೇಷವಾಗಿ ವಯೋವೃದ್ಧರು, ಮಹಿಳೆಯರು, ಅಂಗವಿಕಲರು



ಮತ್ತು ವಿದ್ಯಾರ್ಥಿನಿಯರಿಗೆ ಆ ಸ್ಥಳ ತಲುಪುವುದು ಕಷ್ಟಕರವಾಗಿದ್ದು, ಭದ್ರತೆಯ ಕೊರತೆಯೂ ಉಂಟಾಗುತ್ತದೆ ಎಂದು ಅವರು ಹೇಳಿದರು.

ಜನರಿಂದ ಭಾರೀ ಮತಗಳೊಂದಿಗೆ ಆಯ್ಕೆಯಾದ ಶಾಸಕರು ಸಾರ್ವಜನಿಕರ ಮನೋಭಾವವನ್ನು ಗೌರವಿಸಬೇಕು. ಪಟ್ಟಣದ ಜನತೆಗೆ ನ್ಯಾಯ ಒದಗಿಸಬೇಕಾದ ಹೊಣೆಗಾರಿಕೆ ಅವರ ಮೇಲಿದೆ. ತಾಳಿಕೋಟೆ ಪಟ್ಟಣದಲ್ಲಿಯೇ ಲಭ್ಯವಿರುವ ಸರ್ಕಾರಿ ಜಾಗದಲ್ಲಿ ಪ್ರಜಾಸೌಧ ನಿರ್ಮಾಣ ಮಾಡುವುದೇ ಜನಹಿತದ ನಿರ್ಧಾರವಾಗುತ್ತದೆ ಎಂದು ಅವರು ಸ್ಪಷ್ಟವಾಗಿ ಹೇಳಿದರು.

ಈ ಹೋರಾಟದಲ್ಲಿ ಭಾಗವಹಿಸುತ್ತಿರುವವರಲ್ಲಿ ಯಾವುದೇ ಸ್ವಾರ್ಥವಿಲ್ಲ, ಸಾರ್ವಜನಿಕ ಹಿತವೇ ಏಕೈಕ ಉದ್ದೇಶವಾಗಿದೆ. ಹೋರಾಟ ಯಶಸ್ವಿಯಾಗುವವರೆಗೆ ಬಂಜಾರ ಸಮಾಜದವರು ಪ್ರತಿದಿನವೂ ಸಕ್ರಿಯವಾಗಿ ಭಾಗವಹಿಸುವುದಾಗಿ ಘೋಷಿಸಿದರು. ಅವರ ಘೋಷಣೆಗಳಿಂದ ಧರಣಿ ಸ್ಥಳದಲ್ಲಿ ಹೋರಾಟದ ಉತ್ಸಾಹ ಮತ್ತಷ್ಟು ಹೆಚ್ಚಾಯಿತು.

ಚಂದ್ರು ಚೌಹಾಣ್ ಸಂಜೀವ್ ಕುಮಾರ್ ರಾಥೋಡ್ ಲಕ್ಷ್ಮಣ್ ಚೌಹಾನ್ ನೇಮು ರಾಥೋಡ್ ವಸಂತ್ ಚೌಹಾನ್ ರಾಜು ಚೌಹಾನ್ ಚಂದ್ರಶೇಖರ್ ಪವಾರ್ ಧರ್ಮೇಂದ್ರ ಪವಾರ್ ಅಂಬಿ ರಾಥೋಡ್ ಹೇಮು ಚೌಹಾಣ್ ಮೂತಿಲಾಲ್ ರಾಥೋಡ್ ಲಕ್ಷ್ಮಣ್ ಚೌಹಾನ್ ಶಿವರಾಜ್ ನಾಯಕ್ ಶೇಖಪ್ಪ ಲಿಂಗದಳ್ಳಿ ಪರಶುರಾಮ್ ಲಿಂಗದಳ್ಳಿ ಶಂಕರ್ ನಾಯಕ್ ಶಿವಾಜಿ ಚೌಹಾನ್ ಅಭಿಷೇಕ್ ರಾತೋಡ್ ರಾಮು ಚೌಹಾನ್ ಹಾಗೂ ಎಲ್ಲಾ ಬಂಜಾರದ ಸಮಾಜದ ಅನೇಕ ಮುಖಂಡರು, ಯುವಕರು ಹಾಗೂ ಹಿರಿಯರು ಉಪಸ್ಥಿತರಿದ್ದು, ಹೋರಾಟ ಸಮಿತಿಯ ಪದಾಧಿಕಾರಿಗಳಾದ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಮುತ್ತಪ್ಪ ಚಮಲಾಪುರ, ಮೆಹಬೂಬ ಚೋರಗಸ್ತಿ, ಕಾಶಿನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ, ಪ್ರಕಾಶ ಹಜೇರಿ, ಮಯೂರ ಪಾಟೀಲ ಸೇರಿದಂತೆ ಹಲವರು ಹಾಜರಿದ್ದರು.

ಹೊಸ ಜಾಹೀರಾತು ನೀತಿ ಖಂಡಿಸಿ ಮನವಿ

◆**ವಿಜಯಪುರ:** ರಾಜ್ಯ ಸರ್ಕಾರ 2026– 27ನೇ ಹಣಕಾಸು ವರ್ಷದಿಂದ ಜಾರಿಗೆ ತರಲು ಉದ್ದೇಶಿಸಿರುವ ಕರ್ನಾಟಕ ಜಾಹೀರಾತು ನೀತಿ– 2026 ಅನ್ನು ಖಂಡಿಸಿ ಸ್ಥಳೀಯ ದಿನ ಪತ್ರಿಕೆಗಳ ಸಂಪಾದಕರು ನಗರದಲ್ಲಿ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಲವು ದಶಕಗಳಿಂದ ಜನರ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಹಾಗೂ ಪ್ರಾದೇಶಿಕ ಪತ್ರಿಕೆಗಳು ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿವೆ. ಆದರೆ ಹೊಸ ಜಾಹೀರಾತು ನೀತಿಯಲ್ಲಿ ಈ ಪತ್ರಿಕೆಗಳ ಹಿತಾಸಕ್ತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಈ ನೀತಿ ರೂಪಿಸುವ ವೇಳೆ ಯಾವುದೇ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸದೆ ಏಕಪಕ್ಷೀಯವಾಗಿ ತಯಾರಿಸಿರುವುದು ವಿಷಾದನೀಯವಾಗಿದೆ. ಪ್ರಾದೇಶಿಕ ಪತ್ರಿಕೆಗಳನ್ನು ಅವೈಜ್ಞಾನಿಕವಾಗಿ ಪಂಗಡ ಎ ಮತ್ತು ಬಿ ಎಂದು ವರ್ಗೀಕರಿಸಿರುವುದು, ಜಾಹೀರಾತು ದರ ಪರಿಷ್ಕರಣೆಯನ್ನು ಸಮರ್ಪಕವಾಗಿ 6 ವರ್ಷಗಳಿಂದ ಮಾಡದೇ ಇರುವುದನ್ನು ಸಂಘಟನೆಗಳು ಗುರುತಿಸಿವೆ.

ಎಲ್ಲ ಬೆಲೆಗಳು ಗಗನಕ್ಕೆ ಏರುತ್ತಿರುವಾಗ ಜಾಹೀರಾತು ದರಗಳನ್ನು ಇಳಿಸುವ ಕ್ರಮ ಯಾವ ನ್ಯಾಯ, ಪತ್ರಿಕೆಗಳ ಅಭಿವೃದ್ಧಿಗಾಗಿ ಪ್ರೋತ್ಸಾಹ ರೂಪದ ಜಾಹೀರಾತುಗಳನ್ನು ನೀಡುತ್ತಿರುವಾಗ ಪ್ರೋತ್ಸಾಹ ರೂಪದ ಜಾಹೀರಾತುಗಳನ್ನು ಸನ್ಸೆಟ್ ಕ್ಲಾಜ್ ಅಳವಡಿಸಿ ಜಾಹೀರಾತು ನಿಲ್ಲಿಸುವ ಕ್ರಮ ಹಾಗೂ ಟೆಂಡರ್ ಜಾಹೀರಾತುಗಳ ಹಂಚಿಕೆಯಲ್ಲಿ ಕಡಿತ ಮಾಡುವ ಕ್ರಮಗಳು ಸಣ್ಣ ಪತ್ರಿಕೆಗಳ ಆದಾಯಮೂಲಗಳನ್ನು ಕುಂಠಿತಗೊಳಿಸಲಿವೆ. ಕರ್ನಾಟಕ ಜಾಹೀರಾತು ನೀತಿ–2026 ಅನ್ನು ತಕ್ಷಣ ಸ್ಥಗಿತಗೊಳಿಸಿ, ಜಿಲ್ಲಾ ಹಾಗೂ ಪ್ರಾದೇಶಿಕ ಪತ್ರಿಕೆಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯಿಸಲಾಗಿದೆ. ಕಾನಿಪ ಜಿಲ್ಲಾಧ್ಯಕ್ಷ ಅಶೋಕ ಯಡಳ್ಳಿ, ಇರ್ಫಾನ್ ಶೇಖ, ಹಿರಿಯ ಸಂಪಾದಕ ಪಾಂಡುರಂಗ ಮಮದಾಪುರ, ಮೋಹನ ಕುಲಕರ್ಣಿ, ರಶ್ಮಿ ಪಾಟೀಲ, ಮಹೇಶ ಶೆಟಗಾರ, ಮಾಧವರಾವ ಕುಲಕರ್ಣಿ, ಸುಶೀಲೇಂದ್ರ ನಾಯಕ, ಸೀತಾರಾಮ ಕುಲಕರ್ಣಿ, ಇಂದುಶೇಖರ ಮಣೂರ, ಸಂಜೀವ ಕುಲಕರ್ಣಿ, ಶರದ ಅರ್ಜುಣಗಿ, ಸಿದ್ದಣ್ಣ ವಿಜಾಪುರ, ಅವಿನಾಶ ಬಿದರಿ, ಚಿದಂಬರ ಕುಲಕರ್ಣಿ, ಶರಣು ಮಸಳಿ, ಕೆ.ಕೆ. ಕುಲಕರ್ಣಿ, ಗುರು ಗದ್ದನಕೇರಿ, ಫಯಾಜ್ ಕಲಾದಗಿ, ಕೌಶಲ್ಯ ಪನಾಳಕರ, ರಾಜು ಥವಳಗಿ, ಸಂಜಯ ಕೊಂಡಗೂಳಿ, ಪುಂಡಲಿಕ ಮುರಾಳ ಇದ್ದರು.



ದೇಶದ ಭವಿಷ್ಯಕ್ಕೆ ಶಿಕ್ಷಕರ ಪಾತ್ರ ಮುಖ್ಯ: ನಿಂಬರಗಿ

◆**ವಿಜಯಪುರ:** ದೇಶ ಕಾಯುವ ಸೈನಿಕರು ಜೈ ಜವಾನ್, ಅನ್ನ ನೀಡುವ ರೈತರು ಜೈ ಕಿಸಾನ್, ಅದೇ ರೀತಿ ದೇಶ ಕಟ್ಟುವ ಶಿಕ್ಷಕರು ಜೈ ಶಿಕ್ಷಕ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ನಗರದ ಬಿಎಲ್‌ಡಿಇ ಸಂಸ್ಥೆಯ ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬುಧವಾರ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶ ಕಟ್ಟುವುದು ಮತ್ತು ದೇಶದ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮುಖ್ಯವಾಗಿದೆ. ಪಾಲಕರನ್ನು ಹೊರತುಪಡಿಸಿದರೆ ಮಕ್ಕಳು ಶಿಕ್ಷಕರ ಹತ್ತಿರವೇ ಹೆಚ್ಚು ಬೆಳೆಯುತ್ತವೆ. ಹೀಗಾಗಿ ಭಾವಿ ಶಿಕ್ಷಕರಾಗಿ ಹೊರಹೊಮ್ಮುವ ಬಿಇಡಿ ವಿದ್ಯಾರ್ಥಿಗಳು ಮಗುವಿನ ಸರ್ವತೋಮುಖ ಬೆಳವಣಿಗೆಗಾಗಿ ನಿರಂತರ ಶ್ರಮಿಸಬೇಕು. ರಾಜ್ಯದಲ್ಲಿ ಶಿಕ್ಷಣವು ಅತ್ಯುನ್ನತ ಸ್ಥಾನದಲ್ಲಿರಲು ಬಿಎಲ್‌ಡಿಇ ಸಂಸ್ಥೆಯೂ ಮಹತ್ವದ ಕೊಡುಗೆ ನೀಡಿದೆ ಎಂದರು.

ಬಿಎಲ್‌ಡಿಇ ಸಂಸ್ಥೆಯ ಎಸ್.ಎಸ್. ಆವರಣದ ಆಡಳಿತಾಧಿಕಾರಿ ಐ.ಎಸ್. ಕಾಳಪ್ಪನವರ ಮಾತನಾಡಿ, ಶಿಕ್ಷಕ ವೃತ್ತಿಯು ಅತ್ಯಂತ ಪವಿತ್ರವಾಗಿದ್ದು, ಬಯಸಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಉತ್ತಮ ಶಿಸ್ತು, ಆರೋಗ್ಯ, ಪ್ರಯತ್ನ ಮತ್ತು ಕರ್ತವ್ಯಶೀಲ ಗುಣಗಳನ್ನು ಅಳವಡಿಸಿಕೊಂಡು ಆದರ್ಶ ಶಿಕ್ಷಕರಾಗಿ ಬೆಳೆಯಬೇಕು ಎಂದು ಹೇಳಿದರು.

ಬಿಎಲ್‌ಡಿಇ ಆಡಳಿತ ಅಧಿಕಾರಿಗಳು ಪ್ರೊ.ವಿ.ಎಸ್. ಬಗಲಿ ಮಾತನಾಡಿ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯವು ಶಿಕ್ಷಕರನ್ನು ತಯಾರಿಸುವ ಒಂದು ಅತ್ಯುತ್ತಮ ಕಾರ್ಖಾನೆಯಾಗಿದ್ದು, ಇಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಉತ್ತಮ ಕೌಶಲ್ಯಭರಿತ ಶಿಕ್ಷಕರಾಗಿ ಹೊರಹೊಮ್ಮಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯೆ ಡಾ. ಭಾರತಿ ಖಾಸನೀಸ್ ಅವರು ವಿದ್ಯಾರ್ಥಿ ಪ್ರತಿನಿಧಿಗಳಿಗೆ ಪ್ರಮಾಣ ವಚನ ಬೋಧಿಸಿದರು.

ಸಹ ಉಪಾಧ್ಯಕ್ಷ ಡಾ.ಎಂ.ಎಸ್.ಹಿರೇಮಠ, ಡಾ.ಜ್ಯೋತಿ ಪಟ್ಟಣಶೆಟ್ಟಿ, ಡಾ.ಬಿ.ಎಸ್.ಹಿರೇಮಠ, ಎಸ್.ಎಸ್.ಪಾಟೀಲ, ಡಾ.ಎಸ್.ಪಿ.ಶೇಗುಣಸಿ, ಎಂ.ಪಿ. ಕುಪ್ಪಿ, ಸುರೇಶ ಬಗಲಿ, ಸುಜಾತಾ ದೇಸಾಯಿ, ಎ.ಎಸ್.ಬರಡ್ಡಿ, ವಿದ್ಯಾ ಭಮಗೊಂಡ ಇದ್ದರು. ಪ್ರವೀಣ ಹೊಸಮನಿ, ಐಶ್ವರ್ಯ ಜೋಶಿ ಮತ್ತು ಸಂಗಡಿಗರು ಸಂಸ್ಥಾಪನಾ ಗೀತೆ ಹಾಡಿದರು. ಸಹಾಯಕ ಪ್ರಾಧ್ಯಾಪಕ ಪಿ.ಡಿ.ಮುಲ್ಲಾನಿ ನಿರೂಪಿಸಿದರು. ಎಸ್.ಎಸ್.ಪಾಟೀಲ ಪರಿಚಯಿಸಿದರು. ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಮತ್ತು ಸಹಪ್ರಾಧ್ಯಾಪಕ ಡಾ.ಎಂ.ಬಿ.ಕೋರಿ ವಂದಿಸಿದರು.



ರಾಂಪುರ ಸಿಂದಗಿ ಪ್ರಮುಖ ರಸ್ತೆ ಸುಧಾರಣೆಗೆ ರೂ.4 ಕೋಟಿ ಅನುದಾನ

◆**ಸಿಂದಗಿ:** ರಾಂಪುರ ಬೆನಕೋಟಗಿ, ಮಲಘಾಣ ಸೇರುವ ರಸ್ತೆಗೆ ರೂ.2 ಕೋಟಿ ಅನುದಾನ ಮಂಜೂರು ಮಾಡಲಾಗಿದೆ. ಅತೀ ಶೀಘ್ರದಲ್ಲಿಯೇ ಭೂಮಿ ಪೂಜೆ ಮಾಡಲಾಗುವುದು. ರಾಂಪುರ ಸಿಂದಗಿ ಪ್ರಮುಖ ರಸ್ತೆ ಸುಧಾರಣೆಗೆ ರೂ.4 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ಶಾಸಕ ಅಶೋಕ ಹೇಳಿದರು.

ತಾಲೂಕಿನ ರಾಂಪುರ ಪಿಎ ಗ್ರಾಮದ ಆರೂಢ ಸಂಗನಬಸವೇಶ್ವರ ಮಠದಲ್ಲಿ ಸಿಂದಗಿ ಲೋಕೋಪಯೋಗಿ ಇಲಾಖೆಯ 2025–26ನೆಯ ಸಾಲಿನ ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರೂ. 25 ಲಕ್ಷ ಸಮುದಾಯ ಭವನ ನಿರ್ಮಾಣ ಭೂಮಿ ಪೂಜೆ ಸಮಾರಂಭ ನೆರವೇರಿಸಿ ಮಾತನಾಡಿದ ಅವರು, ವಿರೋಧ ಪಕ್ಷದವರು ಟೀಕೆ ಟಿಪ್ಪಣಿಗಳನ್ನು ಮಾಡುತ್ತಾರೆ ಅದಕ್ಕೆ ಕಿವಿಗೊಡದೆ ನಾನು ಅಭಿವೃದ್ಧಿಗೆ ಮೊದಲ ಆದ್ಯತೆ ನೀಡುತ್ತಾ ಹೋಗುತ್ತೇನೆ. ಅಭಿವೃದ್ಧಿಯೇ ನನ್ನ ಮೂಲ ಮಂತ್ರ. ಸಿಕ್ಕ ಅವಕಾಶವನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡು ಪ್ರಾಮಾಣಿಕವಾಗಿ ಜನರ ಸೇವೆ ಮಾಡುತ್ತೇನೆ. ಗ್ಯಾರಂಟಿಯಿಂದಾಗಿ ರಾಜ್ಯ ಸರಕಾರದಲ್ಲಿ ಹಣವಿಲ್ಲ ಎಂದು ಬೊಬ್ಬೆ ಹೊಡೆಯುವ ವಿರೋಧ ಪಕ್ಷದವರಿಗೆ ಒಂದು ಬಾರಿ ಸಿಂದಗಿ ಸುತ್ತಿ ನೋಡಲಿ ಎಂದರು.



ನಿತ್ಯಾನಂದ ಮಹಾರಾಜರು ಸಾನ್ನಿಧ್ಯ ವಹಿಸಿದ್ದರು. ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ತಾಲೂಕಾಧ್ಯಕ್ಷ ವೈ.ಸಿ.ಮಯೂರ, ಕುಮಾರ ದೇಸಾಯಿ, ಗುರುಗೌಡ ಬಿರಾದಾರ, ಡಾ.ಮಹಾಂತೇಶ ಹಿರೇಮಠ, ಅಮಿರಂಚಾನ ಮುಜಾವರ, ನಾಗೇಶ ಪತ್ತಾರ, ಶಶಿ ಗಾಯಕವಾಡ, ರಮೇಶ ಭಂಟನೂರ, ಗುರಣ್ಣ ಹುಮನಾಬಾದ, ಶಶಿಕಲಾ ಅಂಗಡಿ, ಶೇಕಪ್ಪ ಅಂಗಡಿ, ಕುಪೇಂದ್ರಗೌಡ ಬಿರಾದಾರ, ಅನಿಲಕುಮಾರ ದೊಡಮನಿ, ವಿಜಯ ಚವ್ಹಾಣ, ಶರಣಪ್ಪ ವಾರದ, ಶಿವಬಸವ ಅಂಗಡಿ, ಪುಟ್ಟು ದೇಸಾಯಿ, ಮಹೇಶ ಸಾವಳಸಂಗ, ಮಹಾಂತೇಶ ಪೂಜಾರಿ, ಈರಯ್ಯ ಹಿರೇಮಠ, ಅಪ್ಪು ರಾಠೋಡ, ಈರಣ್ಣ ನಾಯ್ಕೋಡಿ ಸೇರಿದಂತೆ ಶ್ರೀಮಠದ ಭಕ್ತರು ಇದ್ದರು.

ಜ್ಞಾನಾರ್ಜನೆ ಪ್ರತಿಯೊಬ್ಬರ ಆಸ್ತಿ

◆**ಚಡಚಣ:** ಶಿಕ್ಷಣದಿಂದ ಸಿಗುವ ಜ್ಞಾನಾರ್ಜನೆಯು ಪ್ರತಿಯೊಬ್ಬರ ಅಮೂಲ್ಯ ಆಸ್ತಿಯಾಗಿದೆ. ವಿದ್ಯಾರ್ಥಿ ಜೀವನವು ವ್ಯಕ್ತಿತ್ವ ರೂಪಿಸುವ ಅತ್ಯಂತ ಪ್ರಮುಖ ಹಂತವಾಗಿದ್ದು, ಈ ಅವಧಿಯಲ್ಲಿ ಮೌಲ್ಯಾಧಾರಿತ ಶಿಕ್ಷಣ ಅಗತ್ಯವೆಂದು ಕ್ಷೇತ್ರ ಸಂಪನ್ಮೂಲ ವ್ಯಕ್ತಿ ರಾಜೇಶ್ವರಿ ಕಾಮುಗೊಂಡ ಹೇಳಿದರು.

ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ–2 ಮರಡಿ ಶಾಲೆಯಲ್ಲಿ ಆಯೋಜಿಸಿದ್ದ ಏಳನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪಾಲಕರ ಪ್ರೀತಿ, ಗುರುಗಳ ಮಾರ್ಗದರ್ಶನ ಹಾಗೂ ವಿದ್ಯಾರ್ಥಿಗಳ ನಿರಂತರ ಪರಿಶ್ರಮದಿಂದ ಗುರಿ ಸಾಧನೆ ಸಾಧ್ಯ ಎಂದರು. ಬರುವ ಶೈಕ್ಷಣಿಕ ವರ್?ದಿಂದ ಎಲ್‌ಕೆಜಿ ತರಗತಿ ಆರಂಭವಾಗಲಿದ್ದು, ಪಾಲಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಯಲ್ಲಿ ದಾಖಲಿಸಲು ಮನವಿ ಮಾಡಿದರು.

ಸಮೂಹ ಸಂಪನ್ಮೂಲ ವ್ಯಕ್ತಿ ಭೀಮಾಶಂಕರ ವಾಘಮೋರೆ ಮಾತನಾಡಿ, ಸರ್ಕಾರಿ ಶಾಲೆಗಳು ಯಾವುದೇ ವಿಷಯದಲ್ಲಿ ಖಾಸಗಿ ಶಾಲೆಗಳಿಗೆ ಕಡಿಮೆಯಿಲ್ಲ, ಅನುಭವಸಂಪನ್ನ ಶಿಕ್ಷಕರು ಮತ್ತು ಸಮರ್ಪಕ ಸೌಲಭ್ಯಗಳಿವೆ. ವಿದ್ಯಾರ್ಥಿಗಳು ಉತ್ತಮ ಶಿಕ್ಷಣದೊಂದಿಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಉತ್ತಮ ನಾಗರಿಕರಾಗಬೇಕು ಎಂದರು. ತಾನೂ ಇದೇ



ಶಾಲೆಯ ಹಳೆಯ ವಿದ್ಯಾರ್ಥಿಯಾಗಿದ್ದು, ಗುರುಗಳ ಆಶೀರ್ವಾದದಿಂದ ಈ ಹಂತಕ್ಕೆ ಬಂದಿದ್ದೇನೆ ಎಂದು ತಿಳಿಸಿದರು.

ಶಿಕ್ಷಕ ಜಗದೀಶ ಚಲವಾದಿ ಮಾತನಾಡಿ, ಮಕ್ಕಳನ್ನು ಪ್ರಾಥಮಿಕ ಹಂತದಿಂದಲೇ ರೂಪಿಸಿ, ಉತ್ತಮ ವ್ಯಕ್ತಿಗಳನ್ನಾಗಿ ಮಾಡುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದರು. ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸದಲ್ಲಿ ಉತ್ತಮ ಸಾಧನೆ ಮಾಡಿ ಶಾಲೆ ಹಾಗೂ ಪೋ?ಕರಿಗೆ ಕೀರ್ತಿ ತರಬೇಕು ಎಂದು ಹಾರೈಸಿದರು.

ಶಾಲಾ ಮುಖ್ಯ ಶಿಕ್ಷಕ ಮಹಾಂತೇಶ ಉಮರಾಣಿ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಅಧ್ಯಕ್ಷ ಬಾಲಾಜಿ ಗಾಡಿವಡ್ಡರ, ಉಪಾಧ್ಯಕ್ಷೆ ಮಹಾದೇವಿ ಕೇಶಟ್ಟಿ, ಸದಸ್ಯರು, ಶಿಕ್ಷಕರು, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಿಕ್ಷಕಿ ವಿ.ಎಸ್.ಪತ್ತಾರ ಪ್ರಾರ್ಥಿಸಿದರು, ಡಿ.ಎಸ್.ಬಗಲಿ ಸ್ವಾಗತಿಸಿದರು, ಬಸವರಾಜ ಕರಜಗಿ ನಿರೂಪಿಸಿದರು, ಮಹಾದೇವ ಐಹೊಳಿ ವಂದಿಸಿದರು.

ಪ್ರಜಾಸೌಧ ನಿರ್ಮಾಣದಲ್ಲಿ ಹಸ್ತಕ್ಷೇಪ: ನಾಡಗೌಡರ ಆಕ್ಷೇಪ

◆**ಮುದ್ದೇಬಿಹಾಳ:** ಮತಕ್ಷೇತ್ರದ ತಾಳಿಕೋಟಿ ತಾಲೂಕಿನಲ್ಲಿ ನೂತನ ಪ್ರಜಾಸೌಧ ನಿರ್ಮಾಣದ ವಿಚಾರವಾಗಿ ಉದ್ಭವಿಸಿರುವ ವಿವಾದಗಳಿಗೆ ಸಂಬಂಧಿಸಿ ಮಂಜೂರಾದ ಅನುದಾನ ಹಿಂತಿರುಗುವ ಪರಿಸ್ಥಿತಿ ಉಂಟಾಗಬಾರದು. ಸರ್ಕಾರದ ನಿಯಮಾನುಸಾರ ನಿರ್ಮಾಣ ಕಾರ್ಯ ಮುಂದುವರಿಸಲು ಪ್ರಯತ್ನಿಸುತ್ತಿದ್ದೇವೆ. ಆದರೆ ಕೆಲವರು ಜನರಲ್ಲಿ ಗೊಂದಲ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಶಾಸಕ ಸಿ.ಎಸ್. ನಾಡಗೌಡ ಪ್ರತಿಕ್ರಿಯಿಸಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಸೌಧ ನಿರ್ಮಾಣಕ್ಕಾಗಿ ಎಂಬ ಕಾರಣಕ್ಕೆ ಸರ್ಕಾರವೇ ತ್ವರಿತವಾಗಿ ಜಾಗೆ ಗುರುತಿಸಲು ಸೂಚನೆ ನೀಡಿತ್ತು. ಈ ಹಿನ್ನಲೆಯಲ್ಲಿ ಪ್ರಭುಗೌಡ ಮದರಕಲ್ ಸೇರಿದಂತೆ ಕೆಲವರು ಎರಡು ಎಕರೆ ಜಮೀನು ದಾನವಾಗಿ ನೀಡಿದ್ದಾರೆ. ಇದಕ್ಕೆ ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ, ಪಿಡಬ್ಲ್ಯುಡಿ ಮತ್ತು ಕೆಇಬಿ ಇಲಾಖೆಗಳು ಜಾಗೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದ ಹಿನ್ನೆಲೆಯಲ್ಲಿ, ದಾನಿಗಳ ಸಹಕಾರದೊಂದಿಗೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಂಡಿದ್ದಾಗಿ ತಿಳಿಸಿದ ಅವರು, ಮೈಲೇಶ್ವರ ರಸ್ತೆಯಲ್ಲಿರುವ ಸ್ಥಳವನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿದ್ದು, ಅಗತ್ಯ ಮೂಲ ಸೌಕರ್ಯಗಳ ಕುರಿತು ಸೂಚನೆ ನೀಡಿದ್ದಾರೆ ಎಂದು ವಿವರಿಸಿದರು.

ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ವಿರುದ್ಧ ವಾಗ್ದಾಳಿ ನಡೆಸಿದ ನಾಡಗೌಡ, ತಮ್ಮ ಅಧಿಕಾರಾವಧಿಯಲ್ಲಿ



ಪ್ರಜಾಸೌಧ ನಿರ್ಮಾಣಕ್ಕೆ ಯಾವುದೇ ಸ್ಪಷ್ಟ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ. ಮಾಜಿ ಶಾಸಕರು ಬಹುಚನದಿಂದ ಮಾತನಾಡುವದನ್ನು ಕಲಿಯಲಿ, ನಮ್ಮ ಮನೆಗೆ ಬಂದು ಸಾಷ್ಟಾಂಗ ಹಾಕಿ, ನೀವು ದೊಡ್ಡವರು ಎಂದು ಮಾತನಾಡಿದನ್ನು ಮರೆತಂತಿದೆ ಎಂದು ಟೀಕಿಸಿದರು. ತಮ್ಮ ಆಸ್ತಿ ಸಂಬಂಧಿತ ಆರೋಪಗಳ ಕುರಿತು ಪ್ರತಿಕ್ರಿಯಿಸಿದ ಅವರು, ಯಾವುದೇ ಆರೋಪಗಳಿಗೆ ದಾಖಲೆಗಳನ್ನು ಒದಗಿಸಿ, ಆಧಾರರಹಿತ ಆರೋಪಗಳನ್ನು ಮುಂದುವರಿಸಿದರೆ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಎಚ್ಚರಿಸಿದರು.

ಸಾರ್ವಜನಿಕರ ಹಿತದೃಷ್ಟಿಯಿಂದ ಯಾರಾದರೂ ಉಚಿತವಾಗಿ ಜಮೀನು ನೀಡಲು ಮುಂದೆ ಬಂದರೆ, ಸ್ಥಳ ಬದಲಾವಣೆಯನ್ನೂ ಪರಿಗಣಿಸಲಾಗುವುದು ಎಂದು ಹೇಳಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಪ್ರಭುಗೌಡ ಮದರಕಲ್ ಪ್ರಭುರಾಜ್ ಕಲ್ಬುರ್ಗಿ, ಶಂಕರಾಗೌಡ ಹಿರೇಗೌಡರ, ಮಹೆಬೂಬ ಗೊಳಸಂಗಿ, ವೈ.ಎಚ್. ವಿಜಯಕರ, ಗೋಪಿ ಮಡಿವಾಳರ ಉಪಸ್ಥಿತರಿದ್ದರು.

ಶ್ರೀಸಾಕ್ಷಿ ಪಂಚಾಂಗ ಬಿಡುಗಡೆ

◆**ವಿಜಯಪುರ:** ಸನಾತನ ಕಾಲಗಣನೆ ಪದ್ಧತಿ, ಜ್ಯೋತಿರ್ವಿಜ್ಞಾನ ಸೇರಿದಂತೆ ಬದುಕಿನ ಪ್ರತಿ ಹಂತದಲ್ಲೂ ಮಾನವನಿಗೆ ಅನುಕೂಲವಾಗುವ ಜ್ಞಾನದ ಭಂಡಾರವೇ ಪಂಚಾಂಗ ಎಂದು ಶ್ರೀಕಾಂತ ಆಚಾರ್ಯ ಆಶ್ರಿತ ಗುರುಗಳು ಹೇಳಿದರು.

ನಗರದ ಕನಕದಾಸ ಬಡಾವಣೆಯ ಆಂಜನೇಯ ದೇವಸ್ಥಾನದಲ್ಲಿ ಯುಗಾದಿಯಂದು ಪರಾಭವನಾಮ ಸಂವತ್ಸರದ ಶ್ರೀಸಾಕ್ಷಿ ಪಂಚಾಂಗ ಲೋಕಾರ್ಪಣೆಗೊಳಿಸಿ ಅವರು ಆಶೀರ್ವಚನ ನೀಡಿದರು.

ಪಂಚಾಂಗಕರ್ತ ಗುರುರಾಜ ಆಚಾರ್ಯರು ಕಳೆದ 14 ವರ್ಷಗಳಿಂದ ಶ್ರೀಸಾಕ್ಷಿ ಪಂಚಾಂಗವನ್ನು ಹೊರತರುತ್ತಿದ್ದಾರೆ. ಪಂಚಾಂಗ ರಚನೆ ಸಾಮಾನ್ಯ ಕೆಲಸವಲ್ಲ, ಅಪರಿಮಿತ ಜ್ಞಾನ, ತಾಳ್ಮೆ, ಧ್ಯಾನಾಸಕ್ತ ಮನಸ್ಥಿತಿ ಹಾಗೂ ನಿಷ್ಕಲ್ಮಶ ಮನಸ್ಸು ಬೇಕು. ಆ ಎಲ್ಲ ಗುಣಗಳು ಗುರುರಾಜ ಆಚಾರ್ಯರಲ್ಲಿವೆ ಎಂದರು.

ಯುಗಾದಿ ಸಂದರ್ಭದಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಸತ್ಯನಾರಾಯಣ ಸ್ವಾಮಿ



ಪೂಜೆ, ಕಥಾ ಶ್ರವಣ, ಪಂಚಾಂಗ ಕರ್ತರಿಂದಲೇ ಪಂಚಾಂಗ ಶ್ರವಣ ಮೊದಲಾದ ಕಾರ್ಯಕ್ರಮಗಳು ಜರುಗಿದವು.

ಹಲಗಣೇಶ ಪ್ರಕಾಶನದ ವತಿಯಿಂದ ಶ್ರೀಕಾಂತಾಚಾರ್ಯರಿಗೆ ಹಾಗೂ ರಾಮಾಚಾರ್ಯರಿಗೆ ವಿಶೇಷ ಸನ್ಮಾನ ಮಾಡಿ ಗೌರವಿಸಲಾಯಿತು. ಶಶಿಧರ ಆಚಾರ್ಯ ಜೋಶಿ, ಜ್ಯೋತಿಷಿ ಅಚ್ಯುತ ಆಚಾರ್ಯ ಪುರೋಹಿತ, ಮುರುಳಿ ಕುಲಕರ್ಣಿ, ಡಾ.ಬಾಬುರಾಜೇಂದ್ರ ನಾಯಕ, ಎನ್. ವೆಂಕಟೇಶ, ಪತ್ರಕರ್ತ ವಾಸುದೇವ ಹೆರಕಲ್, ವನಮಾಲಾ ಕುಲಕರ್ಣಿ, ವೀಣಾ ದೇಶಪಾಂಡೆ, ಪ್ರದೀಪ ಜೋಶಿ, ಜಯಶ್ರೀ ಜೋಶಿ, ಅಂಜನಾ ಕುಲಕರ್ಣಿ, ಶ್ವೇತಾ ಕೆಂಭಾವಿ, ಮಹಾದೇವಿ ಬಿರಾದಾರ, ಕವಿತಾ ಕೊಳ್ಳಿ ಇದ್ದರು.

ಭವಿಷ್ಯದ ಭರವಸೆ ನಾಯಕ ಅಭಿನವ ಪ್ರಶಸ್ತಿ ಪ್ರದಾನ

◆**ಇಂಡಿ:** ನಗರದ ಸದಾಶಿವ ನಗರದ ಮಠದಲ್ಲಿ ಅಭಿನವ ಮುರುಗೇಂದ್ರ ಶಿವಾಚಾರ್ಯರರ ಜನ್ಮ ದಿನೋತ್ಸವ ಗುರುವಂದನಾ ಹಾಗೂ ಹುಣ್ಣಿಮೆ ಬೆಳದಿಂಗಳ ಕಾರ್ಯಕ್ರಮದ ಪ್ರಯುಕ್ತ ಜರುಗಿದ ಸಮಾರಂಭದಲ್ಲಿ ಭವಿಷ್ಯದ ಭರವಸೆ ನಾಯಕ ಅಭಿನವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಪ್ರಶಸ್ತಿಯನ್ನು ಸತ್ಯಜೀತ ಶಿವಾನಂದ ಪಾಟೀಲ, ಅಭಿನವ ದೇವಾನಂದ ಚವ್ಹಾಣ, ಮಂಜುನಾಥ ವಂದಾಲ, ಸಂಕೇತ ಸಾರ್ವಭೌಮ ಬಗಲಿ, ವೀರಾಜ ರವಿಕಾಂತ ಮಾಟೀಲ ಸೇರಿದಂತೆ ಇತರರಿಗೆ ನೀಡಿ ಗೌರವಿಸಿದ್ದಾರೆ. ಸಮಾರಂಭದ ದಿವ್ಯ ಸಾನಿದ್ಯ ಶಿರಾಶ್ಯಾಡ ಹಿರೇಮಠದ ಅಭಿನವ ಮುರುಗೇಂದ್ರ ಶಿವಾಚಾರ್ಯರು ವಹಿಸಿದ್ದರು. ಮಮದಾಪೂರ ವಿರಕ್ತ ಮಠದ ಮುರುಗೇಂದ್ರ ಸ್ವಾಮಿಜಿಗಳು, ಕಾಸುಗೌಡ ಬಿರಾದಾರ, ದಯಾಸಾಗರ ಪಾಟೀಲ, ಬಿ.ಡಿ.ಪಾಟೀಲ, ಸುಧಾಕರಗೌಡ ಬಿರಾದಾರ, ಮಲ್ಲಿಕಾರ್ಜುನ ಬರುಕುಲ್ಲೆ ಉಪಸ್ಥಿತರಿದ್ದರು.



ದಯಾನಂದ ನೇಮಕ



◆ **ಬಸವನಬಾಗೇವಾಡಿ:** ವಿಶ್ವ ಹಿಂದೂ ಪರಿಷತ್ ಜಿಲ್ಲಾ ಧರ್ಮಾಚಾರ್ಯ ಪ್ರಮುಖರನ್ನಾಗಿ ಬಸವನಬಾಗೇವಾಡಿಯ ದಯಾನಂದ ಆದಿಗೊಂಡ ಅವರನ್ನು ನಿಯುಕ್ತಿ ಮಾಡಲಾಯಿತು ಎಂದು ವಿಎಚ್‌ಪಿ ತಾಲೂಕಾಧ್ಯಕ್ಷ ಮಹೇಶ ಸಾಲವಾಡಗಿ, ಕಾರ್ಯದರ್ಶಿ ಅಶ್ವಿನಕುಮಾರ ಪಟ್ಟಣಶೆಟ್ಟಿ ತಿಳಿಸಿದ್ದಾರೆ. ವಿಜಯಪುರ ನಗರದ ಫ.ಗು. ಹಳಕಟ್ಟಿ ಸಭಾಭವನದಲ್ಲಿ ನಡೆದ ವಿಶ್ವ ಹಿಂದೂ ಪರಿಷತ್ತಿನ ವಿಜಯಪುರ ಜಿಲ್ಲಾ ವಿಶೇಷ ಬೈಠಕ್‌ನಲ್ಲಿ ಆದಿಗೊಂಡ ಅವರನ್ನು ನಿಯುಕ್ತಿ ಮಾಡಲಾಯಿತು. ವಿಎಚ್‌ಪಿ ಪ್ರಾಂತ್ ಉಪಾಧ್ಯಕ್ಷ ಗೋವರ್ಧನ ಜಿ. ಉಪಸ್ಥಿತರಿದ್ದರು.

ಕಿರುಸುದ್ದಿ

ಹಟ್ಟಿಯಲ್ಲಿ ಚಿಣ್ಣರ ಓಕುಳಿ ಸಂಭ್ರಮಾಚರಣೆ



◆**ಹಟ್ಟಿಚಿನ್ನದಗಣಿ:** ಹಟ್ಟಿಚಿನ್ನದಗಣಿಯ ಜತ್ತಿ ಕಾಲನಿ, ಗುಂಡುರಾವ್, ಗಾಂಧಿ ಮೈದಾನ್, ಜೆ.ಪಿ.ಶರ್ಮಾ ಕಾಲನಿ ಹಾಗೂ ಹಟ್ಟಿ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಮತ್ತು ಸುತ್ತಮುತ್ತಲಿನ ಗುರುಗುಂಟಾ, ಕೋಠಾ, ಪೈದೊಡ್ಡಿ, ರೋಡಲಬಂಡಾ, ಆನ್ವರಿ, ಗೆಜ್ಜಲಗಟ್ಟಾ ಗ್ರಾಪಂ ವ್ಯಾಪ್ತಿಯ ಹಳ್ಳಿಗಳಲ್ಲಿ ಬಣ್ಣದ ಹಬ್ಬದ ಆಚರಣೆ ಅದ್ದೂರಿಯಾಗಿ ಶುಕ್ರವಾರ ಜರುಗಿತು.

ಚಿಣ್ಣರು, ಯುವಕರು, ಪುರುಷರು, ಮಹಿಳೆಯರಾದಿಯಾಗಿ ಸರ್ವರೂ ಪರಸ್ಪರ, ಗುಲಾಲು, ಬಣ್ಣದೋಕುಳಿ ಎರಚಿ ಸಂಭ್ರಮಿಸಿದರು. ಶಿಕ್ಷಣ ಸಂಸ್ಥೆಗಳು ಸ್ಥಳಿಯ ರಜೆ ಘೋಷಿಸಿದರೆ, ಓಕುಳಿ ಆರ್ಭಟಕ್ಕೆ ಅಂಗಡಿ ಮುಂಗಟ್ಟುಗಳು ಸ್ವಯಂ ಘೋಷಿತ ಬಂದ್ ಎಂಬಂತೆ ಮುಚ್ಚಿದ್ದವು.

ಅಭಯ ಆಂಜನೇಯ ಸ್ವಾಮಿಯ ಅದ್ದೂರಿ ಜಾತ್ರೆ



◆**ಶ್ರೀರಾಮನಗರ:** ಗ್ರಾಮದ 2ನೇ ವಾರ್ಡ್ ಗುಂತಕಲ್ ಕ್ಯಾಂಪ್‌ನ ಶ್ರೀಅಭಯ ಆಂಜನೇಯ ಸ್ವಾಮಿಯ 13ನೇ ವರ್ಷದ ಜಾತ್ರಾ ಮಹೋತ್ಸವವು ಗುರುವಾರದಂದು ಅದ್ದೂರಿಯಾಗಿ ನಡೆಯಿತು. ಗುರುವಾರ ಬೆಳಗ್ಗೆಯಿಂದಲ್ಲೂ ವಿವಿಧ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಮುತ್ತೈದೆ ಮಹಿಳೆಯರಿಂದ ಕುಂಬ-ಕಳಸ ಹೊತ್ತು ಡೊಳ್ಳು ಶಬ್ದದೊಂದಿಗೆ ಮೆರವಣಿಗೆ ಸಾಗಿ ಗಂಗಾ ಪೂಜೆಯನ್ನು ನೆರವೇರಿಸಲಾಯಿತು. ಗ್ರಾಮದ ಈರಣ್ಣ ಸ್ವಾಮಿ, ತಾಯಮ್ಮದೇವಿ, ಸುಂಕಲಮ್ಮ ದೇವಿ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿಗೆ ಮೆರವಣಿಗೆ ಮೂಲಕ ಪೂಜೆ ಸಲ್ಲಿಸಲಾಯಿತು. ನಂತರ ನೆರೆದಿದ್ದ ಭಕ್ತ ಸಮೂಹಕ್ಕೆ ಮಹಾ ಪ್ರಸಾದದ ವ್ಯವಸ್ಥೆ ಏರ್ಪಡಿಸಲಾಗಿತ್ತು. ದೇವಸ್ಥಾನ ಸಮಿತಿಯ ನೀಲಕಂಠ ಮೇಸ್ತ್ರಿ, ಮಾರುತಿ ಮೇಸ್ತ್ರಿ, ಮೆಂಬರ್ ಸುಂಕಣ್ಣ, ಹನುಮಂತು, ಈಶ್ವರ್, ನಾಗರಾಜ್ ನಾಯಕ್, ಚಿನ್ನ, ಪೇಟ್ ಶ್ರೀನು ಸೇರಿದಂತೆ ಗ್ರಾಮದ ಮುಖಂಡರು, ಮಹಿಳೆಯರು, ಮಕ್ಕಳು ಹಾಗೂ ಸುತ್ತಲಿನ ಗ್ರಾಮಸ್ಥರಿದ್ದರು.

ಯುಗಾದಿ: ಬೇವುಬೆಲ್ಲ ವಿತರಣೆ



◆**ಮಾನ್ವಿ:** ಪಟ್ಟಣದ ಸಿಂಧನೂರು ರಸ್ತೆಯಲ್ಲಿ ಶ್ರೀಬಸವೇಶ್ವರ ಯುವಕ ಸಂಘ ಜಯನಗರ ವತಿಯಿಂದ ಹಿಂದೂಗಳ ಹೊಸ ವರ್ಷದ ಯುಗಾದಿ ಹಬ್ಬದ ಅಂಗವಾಗಿ ಹಮ್ಮಿಕೊಳ್ಳಲಾದ ಬೇವುಬೆಲ್ಲ ವಿತರಣೆ ಕಾರ್ಯಕ್ರಮಕ್ಕೆ ಕಲ್ಮಠದ ಸಂಗಯ್ಯಸ್ವಾಮೀಜಿ ಬೇವಿನ ಮಡಿಕೆಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಹಿಂದೂಗಳ ಹೊಸವರ್ಷ ಪ್ರಾರಂಭವಾಗುವುದು ಯುಗಾದಿ ಹಬ್ಬದ ದಿನವಾಗಿದ್ದು ಪರಾಭವ ನಾಮ ಸಂವತ್ಸರವು ಎಲ್ಲಾರಿಗೂ ಉತ್ತಮ ಫಲಗಳನ್ನು ನೀಡಲಿ ಎಂದು ಶುಭಹಾರೈಸಿದರು. ಸಾರ್ವಜನಿಕರಿಗೆ ಯುಗಾದಿ ಹಬ್ಬದ ಅಂಗವಾಗಿ ಬೇವನ್ನು ಹಂಚಲಾಯಿತು. ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ಗಂಗಾಧರನಾಯಕ, ತಾಲೂಕು ವೀರಶೈವ ಲಿಂಗಾಯಾತ ಸಮಾಜದ ಗೌರವಧ್ಯಕ್ಷ ಶ್ರೀಧರಸ್ವಾಮಿ, ತಾ.ಅಧ್ಯಕ್ಷರಾದ ಹರಿಹರಪಾಟೀಲ, ಬಸವೇಶ್ವರ ಯುವಕ ಸಂಘದ ಅಧ್ಯಕ್ಷರಾದ ರಾಜಶೇಖರಸ್ವಾಮಿ, ಸಿದ್ದಯ್ಯಸ್ವಾಮಿ ಕಳಿಮಠ, ಅಮರೇಗೌಡ ನಕ್ಕುಂದಿ, ದೇವರೆಡ್ಡಿ, ಹನುಮೇಶ ನಾಯಕ, ಎಚ್.ಮೌನೇಶ, ಗುರುಸಿದ್ದಯ್ಯಕಣ್ಣೂರು, ಈರಣ್ಣ, ಜೆ.ಸುಧಕರ್, ಶಿವಲಿಂಗಾಯ್ಯ, ಜಗದೀಶ ಒತ್ತೂರ್ ಇದ್ದರು.



ಯಲಬುರ್ಗಾ: ಯುಗಾದಿ ಹಬ್ಬದ ಪ್ರಯುಕ್ತ ಪಟ್ಟಣದ ಐತಿಹಾಸಿಕ ತೋಪಿನ ಹನುಮಪ್ಪನ ಜಾತ್ರೆ, ಗುರುವಾರ ಸಂಜೆ ಅತ್ಯಂತ ಸಡಗರ ಸಂಭ್ರಮದಿಂದ ಅಪಾರ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ರಥೋತ್ಸವ ಜರುಗಿತು. ತಾಲೂಕಿನ ವಿವಿಧ ಗ್ರಾಮಗಳಿಂದ ಅಪಾರ ಭಕ್ತರು ಆಗಮಿಸಿ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದರು.

ಜೋಳ ಖರೀದಿ ಕೇಂದ್ರಕ್ಕೆ ವಿಧ್ಯುಕ್ತ ಚಾಲನೆ

◆**ಸಿಂಧನೂರು:** ನಗರದ ಟಿಎಪಿಸಿಎಂಎಸ್ ಆವರಣದಲ್ಲಿ ಮಂಗಳವಾರ 4 ಜೋಳ ಖರೀದಿ ಕೇಂದ್ರಗಳಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನಿರ್ದೇಶಕ ಉಪ ನಿರ್ದೇಶಕ ನಜೀರ್ ಅಹ್ಮದ್ ವಿಧ್ಯುಕ್ತವಾಗಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಜೋಳ ಖರೀದಿ ಕೇಂದ್ರಗಳಲ್ಲಿ ಜೋಳ ಕೊಡಬೇಕೆಂದರೆ ಶೇ.13ರಷ್ಟು ತೇವಾಂಶ ದಾಟಬಾರದು. ಕಸ ಕಡ್ಡಿ ಇದ್ದರೆ ಸ್ವಚ್ಛಗೊಳಿಸಿ ಹಾಕಬೇಕು. ಒಟ್ಟು 36 ಖರೀದಿ ಕೇಂದ್ರಗಳಲ್ಲಿ 130 ಲಾರಿಗಳ ವ್ಯವಸ್ಥೆ ಮಾಡಲಾಗಿದೆ. ಖರೀದಿಯಾದ ಜೋಳ ಸಂಗ್ರಹಿಸಲು 9 ದಾಸ್ತಾನು ಮಳಿಗೆಗಳನ್ನು ವ್ಯವಸ್ಥೆ ಮಾಡಲಾಗಿದೆ. ನಿಯಮಗಳ ಪ್ರಕಾರ ರೈತರು ಜೋಳವನ್ನು ಖರೀದಿ ಕೇಂದ್ರಗಳಿಗೆ ತರಬೇಕು ಎಂದು ಹೇಳಿದರು. ತಹಶೀಲ್ದಾರ್ ಅರುಣ್ ದೇಸಾಯಿ ಮಾತನಾಡಿ, ಬ್ಲಾಕ್ ಆದ ಎಫ್ ಐಡಿಯಿಂದ ಜೋಳ ಖರೀದಿ ಮಾಡಿಕೊಳ್ಳಬಾರದು. ಹಾಗೇನಾದರೂ ಮಾಡಿದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಟಿಎಪಿಸಿಎಂಎಸ್ ನಿರ್ದೇಶಕ ಪಂಪನಗೌಡ ಬಾದರ್ಲಿ, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಬಸವರಾಜ ನಾಡಗೌಡ, ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ ಮಾತನಾಡಿದರು. ಆಹಾರ ಇಲಾಖೆ ಜಿಲ್ಲಾ ವ್ಯವಸ್ಥಾಪಕ ಬಾನುಪ್ರಕಾಶ, ಟಿಎಪಿಸಿಎಂಎಸ್ ಅಧ್ಯಕ್ಷ ಶರಣಪ್ಪ ರಡ್ಡೆರ, ಕಾರ್ಯದರ್ಶಿ ಹನುಮರಡ್ಡಿ, ಪಿಎಸಿಎಸ್ ಅಧ್ಯಕ್ಷ ಅಮರೇಶ, ಕೃಷಿಕ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಹೊನ್ನನಗೌಡ ಬೆಳಗುರ್ಕಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರುದ್ರಗೌಡ, ಎಪಿಎಂಸಿ ಸಹಾಯಕ ಕಾರ್ಯದರ್ಶಿ ನಾಗರತ್ನ, ಆಹಾರ ಇಲಾಖೆ ಶಿರಸ್ತೇದಾರ ಆನಂದ, ಗೊಡಾನ್ ವ್ಯವಸ್ಥಾಪಕ ದೌಲಸಾಬ ಇದ್ದರು.



ಸಿಂಧನೂರು: ನಗರದ ಟಿಎಪಿಸಿಎಂಎಸ್ ಆವರಣದಲ್ಲಿ ಮಂಗಳವಾರ 4 ಜೋಳ ಖರೀದಿ ಕೇಂದ್ರಗಳಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನಿರ್ದೇಶಕ ಉಪ ನಿರ್ದೇಶಕ ನಜೀರ್ ಅಹ್ಮದ್ ವಿಧ್ಯುಕ್ತವಾಗಿ ಚಾಲನೆ ನೀಡಿದರು. ಟಿಎಪಿಸಿಎಂಎಸ್ ನಿರ್ದೇಶಕ ಪಂಪನಗೌಡ ಬಾದರ್ಲಿ, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಬಸವರಾಜ ನಾಡಗೌಡ, ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ, ಆಹಾರ ಇಲಾಖೆ ಜಿಲ್ಲಾ ವ್ಯವಸ್ಥಾಪಕ ಬಾನುಪ್ರಕಾಶ, ಟಿಎಪಿಸಿಎಂಎಸ್ ಅಧ್ಯಕ್ಷ ಶರಣಪ್ಪ ರಡ್ಡೆರ, ಕಾರ್ಯದರ್ಶಿ ಹನುಮರಡ್ಡಿ ಇತರರಿದ್ದರು.

ವೈಭವಮಯ ರಾಮೋತ್ಸವ | ಶೋಭಾಯಾತ್ರೆಗೆ ಕ್ಷಣಗಣನೆ

15 ಅಡಿ ರಾಮನ ದರ್ಶನಕ್ಕೆ ನಗರ ಸಜ್ಜು

▸ರಾಚಪ್ಪಾ ಜಂಬಗಿ

◆**ಕಲಬುರಗಿ:** ರಾಮನವಮಿ ಅಂಗವಾಗಿ ನಗರದಲ್ಲಿ ಈ ಬಾರಿ ಅದ್ದೂರಿ ಮತ್ತು ವೈಭವಮಯ ರಾಮೋತ್ಸವಕ್ಕೆ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ರಾಮನವಮಿ ಉತ್ಸವ ಸಮಿತಿ ಕಲಬುರಗಿ ವತಿಯಿಂದ ಮಾ.26ರಂದು ರಾಮನವಮಿ ಉತ್ಸವ ಸಮಿತಿಯೂ ತನ್ನ 11ನೇ ವರ್ಷದ ರಾಮೋತ್ಸವವನ್ನು ವಿಶಿಷ್ಟವಾಗಿ ಆಚರಿಸುತ್ತಿರುವುದರಿಂದ ಕಲಬುರಗಿ ಸಂಪೂರ್ಣ ರಾಮಮಯವಾಗಲು ಸಜ್ಜಾಗಿದೆ. ಈ ವರ್ಷದ ಉತ್ಸವದ ಪ್ರಮುಖ ಆಕರ್ಷಣೆವೆಂದರೆ 17 ಅಡಿ ಎತ್ತರದ ಬೃಹತ್ ಶಿವಲಿಂಗ ಜೊತೆಗೆ 15 ಅಡಿ ಎತ್ತರದ ಪ್ರಭು ಶ್ರೀರಾಮನ ಭವ್ಯ ಮೂರ್ತಿಯ ಅದ್ದೂರಿ ಶೋಭಾಯಾತ್ರೆ, ನಗರಕ್ಕೆ ಕಳೆ ತರಲಿದ್ದು, ಶೋಭಾಯಾತ್ರೆಗೆ ನಗರದ ಹೊರವಲಯದ ಆಳಂದ ಚೆಕ್ ಪೋಸ್ಟ್‌ನ ರಾಮತೀರ್ಥ ಮಂದಿರದಿಂದ ಚಾಲನೆನೀಡಲಾಗುತ್ತಿದ್ದು, ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಹಾಗೂ ಜಿಲ್ಲೆಯ ವಿವಿಧ ಮಠಾಧೀಶರ ಸಮ್ಮುಖದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದೆ.

ದಾರಿಯುದ್ದಕ್ಕೂ ಅನ್ನ ಸಂತರ್ಪಣೆ: ಶೋಭಾಯಾತ್ರೆಯ ಮಾರ್ಗದುದ್ದಕ್ಕೂ ರಾಮಭಕ್ತರಿಂದ ಅನ್ನಸಂತರ್ಪಣೆ, ತಂಪು ಪಾನೀಯ ಗಳ ವ್ಯವಸ್ಥೆ ಮಾಡಲಾಗಿದ್ದು, ಸಾವಿರಾರು ಭಕ್ತರಿಗೆ ಊಟದ ಅನುಕೂಲ ಕಲ್ಪಿಸಲಾಗಿದೆ. ನಗರದ ಚೆಕ್ ಪೋಸ್ಟ್, ದೇವಿ ನಗರ, ಖರ್ಗೆ ಸ್ಕೂಲ್, ಮಾರವಾಡಿ ಸಮಾಜದಿಂದ ಮಾಯಮಂದಿರ ಬಳಿ ಭಕ್ತರಿಗಾಗಿ ಊಟದ ವ್ಯವಸ್ಥೆ ಮಾಡಲಾಗಿದೆ. ವಿಶೇಷವಾಗಿ ಈ ಬಾರಿ ರಾಮನವಮಿ ಅಂಗವಾಗಿ ನಗರದಲ್ಲಿ ಒಟ್ಟು ನಾಲ್ಕು ಕಡೆಗಳಲ್ಲಿ ಅದ್ದೂರಿ ರಾಮನ ಶೋಭಾಯಾತ್ರೆಗಳು ನಡೆಯಲಿದ್ದು, ಚೆಕ್ ಪೋಸ್ಟ್‌ನಿಂದ ಎರಡು ಶೋಭಾಯಾತ್ರೆ ಹೊರಟರೆ, ನೆಹರು ಗಂಜ್ ಪ್ರದೇಶದಿಂದ ಒಂದು, ರಾಮ ಮಂದಿರದಿಂದ ಒಂದು ಶೋಭಾಯಾತ್ರೆ ನಡೆಯಲಿದೆ. ಇದರಿಂದ ಕಲಬುರಗಿ ಸಂಪೂರ್ಣವಾಗಿ ರಾಮ ಮಯವಾಗಲಿದ್ದು, ಭಕ್ತಿ, ಸಂಭ್ರಮ ಮತ್ತು ವೈಭವದ ಸಂಯೋಜನೆಯಾಗಿ ಈ ಬಾರಿಯ ರಾಮೋತ್ಸವ ಬಿಸಿಲುನಾಡಿನ ರಂಗೇರಿಸುವ ಪ್ರಮುಖ ಹಬ್ಬವಾಗಿ ರೂಪುಗೊಂಡಿದೆ.

ರಾರಾಜಿಸಲಿವೆ ಭಗವಾ ಧ್ವಜ: ರಾಮೋತ್ಸವದ ಹಿನ್ನಲೆಯಲ್ಲಿ ನಗರವನ್ನು ಮದುವಣಗಿತ್ತಿಯಂತೆ ಶೃಂಗಾರಗೊಳಿಸುವ ಕಾರ್ಯ ಜೋರಾಗಿ ನಡೆಯುತ್ತಿದ್ದು, ಸುಮಾರು 3000 ಕೇಸರಿ ಭಗವಾ ಧ್ವಜಗಳಿಂದ ನಗರ ಸಿಂಗಾರಗೊಳ್ಳುತ್ತಿದೆ. ಜೊತೆಗೆ ನಗರದ ಪ್ರಮುಖ ವೃತ್ತಗಳಲ್ಲಿ ರಾಮನ ಕಟೌಟ್, ಬ್ಯಾನರ್, ಉತ್ಸವದ ಕರಪತ್ರಗಳನ್ನು ಅಂಟಿಸುವ ಕಾರ್ಯ ಭರದಿಂದ ಸಾಗಿದೆ. ಚೆಕ್ ಪೋಸ್ಟ್ ನಿಂದ ಜಗತ್ ವೃತ್ತದವರೆಗೂ ಕೇಸರಿ ಭಗವಾ ಧ್ವಜಗಳು ಹಾರಾಡುತ್ತಿದ್ದು, ಭಕ್ತಿಭಾವವನ್ನು ಮತ್ತಷ್ಟು ಉಕ್ಕಿಸುವ ವಾತಾವರಣ ನಿರ್ಮಾಣವಾಗಿದೆ.



ದಿಗಂತ ವಿಶೇಷ

> ಕಳೆದ 10 ವರ್ಷಗಳಿಂದ ಯಶಸ್ವಿಯಾಗಿ ನಡೆದ ಪ್ರಭು ಶ್ರೀರಾಮನ 15 ಅಡಿ ಎತ್ತರದ ಮೂರ್ತಿಯ ಅದ್ದೂರಿ ಶೋಭಾಯಾತ್ರೆ ಇಡೀ ರಾಜ್ಯದ ಗಮನ ಸೆಳೆದಿದ್ದು, ಈ ಬಾರಿಯ 11ನೇ ವರ್ಷದ ಶೋಭಾಯಾತ್ರೆ ಇತಿಹಾಸ ಸೃಷ್ಟಿಸಲಿದೆ. ಈಗಾಗಲೇ ಸಮಿತಿಯ ಸದಸ್ಯರು, ಪೂರ್ವ ತಯಾರಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಏ.26ರಂದು ಕಲಬುರಗಿ ನಗರ ಸಂಪೂರ್ಣ ಭಗವಾ ಧ್ವಜಗಳಿಂದ ರಾರಾಜಿಸಲಿದೆ.
>
> ■ ಚೆಂದು ಪಾಟೀಲ, ಸಮಿತಿ ಸದಸ್ಯ

ಶೋಭಾಯಾತ್ರೆಗೆ ಉಡುಪಿಯ ಅಘೋರಿ ತಂಡ

ಶೋಭಾಯಾತ್ರೆಗೆ ವಿಶೇಷ ಮೆರುಗು ನೀಡಲು ನೆರೆಯ ಮಹಾರಾಷ್ಟ್ರದ ಸೋಲಾಪುರದಿಂದ ನಾಸಿಕ್ ಡೋಲು ವಾದ್ಯ, 50 ಜನರ ಲೇಜಿಮ್ ತಂಡ ಭಾಗವಹಿಸುತ್ತಿದೆ. ಅದಲ್ಲದೆ, ಕೆರಿ ಅಂಬಲಗಿಯ 30 ಸದಸ್ಯರ ತಂಡದಿಂದ ಹಲಗಿ ನಾದ, ಉಡುಪಿಯಿಂದ ಕಾಲಭೈರವ, ನಂದಿ ಹಾಗೂ ಅಘೋರಿಗಳ ತಂಡದಿಂದ ಮನಮೋಹಕ ನೃತ್ಯ ಪ್ರದರ್ಶನಗಳು ನಡೆಯಲಿದ್ದು, ಯುವಕರ ಕುಣಿತಕ್ಕೆ ಪುಣೆಯ ಆರ್‌ಆರ್ ಸೌಂಡ್ ಶೋಭಾಯಾತ್ರೆಗೆ ಮತ್ತಷ್ಟು ವೈಭವ ಹೆಚ್ಚಿಸಲಿವೆ.

» ಏ.26ಕ್ಕೆ ಭಕ್ತಿ ಜ್ವಾಲೆಯಲ್ಲಿ ರಾಮನವಮಿ ಸಂಭ್ರಮ

ಗಣತಿದಾರರು, ಮೇಲ್ವಿಚಾರಕರಿಗೆ ತರಬೇತಿ ನೀಡಿ

◆**ಕೊಪ್ಪಳ:** ಜನಗಣತಿ ಕಾರ್ಯಕ್ಕೆ ಗಣತಿದಾರರು ಹಾಗೂ ಮೇಲ್ವಿಚಾರಕರ ಪಾತ್ರ ಮುಖ್ಯವಾಗಿದ್ದು, ಅವರಿಗೆ ಫೀಲ್ಡ್ ಟ್ರೇನರಗಳು ಸಮರ್ಥವಾದ ತರಬೇತಿ ನೀಡಿ, ಕೆಲಸ ಆರಂಭಿಸಬೇಕು ಎಂದು ಡಿಸಿ ಸುರೇಶ್ ಬಿ.ಇಟ್ನಾಳ ಹೇಳಿದರು.

ಜಿಪಂ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಭಾರತದ ಜನಗಣತಿ-2027 ಕಾರ್ಯದ ಅಂಗವಾಗಿ ಫೀಲ್ಡ್ ಟ್ರೇನರಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇಶದ ಅಭಿವೃದ್ಧಿ ಯೋಜನೆಗಳ ರೂಪಿಸುವಿಕೆಯಲ್ಲಿ ಜನಗಣತಿ ಅಂಕಿ-ಅಂಶಗಳು ಅಡಿಪಾಯವಾಗಿದ್ದು, ಈ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಅಧಿಕಾರಿಗಳು ರಾಷ್ಟ್ರ ನಿರ್ಮಾಣದ ಅಳಿಲು ಸೇವೆಯಲ್ಲಿ ಭಾಗಿಗಳಾಗುತ್ತಿದ್ದೇವೆ ಎಂಬ ಭಾವನೆಯೊಂದಿಗೆ ಪ್ರಾಮಾಣಿಕವಾಗಿ ಹಾಗೂ ಸಮರ್ಪಕವಾಗಿ ಕೆಲಸ ಮಾಡಬೇಕು. ಈ ಬಾರಿಯ ಜನಗಣತಿಯು ಹಳೆಯ ಮ್ಯಾನುಯಲ್ ಪದ್ಧತಿ ಕೈಬಿಟ್ಟು, ಸಂಪೂರ್ಣವಾಗಿ ಮೊಬೈಲ್ ಆ?ಯಪ್ ಮೂಲಕ ನಡೆಯಲಿದ್ದು, ಇದು ನಿಖರತೆ ಮತ್ತು ಪಾರದರ್ಶಕತೆ ಹೆಚ್ಚಿಸಲಿದೆ. ಪ್ರತಿ ವಾರ್ಡ್ ಅಥವಾ ಗ್ರಾಮ ಮಟ್ಟದಲ್ಲಿ 150 ರಿಂದ 200 ಕುಟುಂಬಗಳನ್ನು ಒಳಗೊಂಡ 'ಬ್ಲಾಕ್'ಗಳನ್ನು ಗುರುತಿಸಿ, ನಿಖರವಾದ ಬ್ಲಾಕ್ ನಕ್ಷೆ ಮತ್ತು ಪಟ್ಟಿಗಳನ್ನು ಸಿದ್ಧಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನಗಣತಿ ಕಾರ್ಯವು ಯಶಸ್ವಿಯಾಗಲು ಬ್ಲಾಕ್‌ಗಳ ರಚನೆ ಅತ್ಯಂತ ಪ್ರಮುಖವಾಗಿದೆ. ಬ್ಲಾಕ್ ರಚನೆಯಲ್ಲಿ ಸಣ್ಣ ತಪ್ಪುಗಳಾದರೂ ಇಡೀ ಪ್ರಕ್ರಿಯೆ ಹಳಿ ತಪ್ಪುತ್ತದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಪ್ರತಿ ಬ್ಲಾಕ್‌ಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕ್ಷೇತ್ರ ಮಟ್ಟದಲ್ಲಿ ಕೆಲಸ ಮಾಡುವ ವಾರ್ಡ್ ಬಿಲ್ ಕಲೆಕ್ಟರ್ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯ ನಿರ್ವಹಿಸಬೇಕು. ಗಣತಿದಾರರನ್ನು ನೇಮಿಸುವಾಗ ಅವರು ವಾಸಿಸುವ ಅಥವಾ ಕೆಲಸ ಮಾಡುವ ಬ್ಲಾಕ್‌ಗಳಲ್ಲೇ ನಿಯೋಜಿಸಬೇಕು. ಒಂದು ವೇಳೆ ಅನಿವಾರ್ಯ ಸಂದರ್ಭಗಳಲ್ಲಿ ಸ್ಥಳೀಯರು ಲಭ್ಯವಿಲ್ಲದಿದ್ದರೆ, 200 ಮೀಟರ್ ವ್ಯಾಪ್ತಿಯಲ್ಲಿರುವ ಸರ್ಕಾರಿ ನೌಕರರನ್ನು ಮಾತ್ರ ಬಳಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಡಿಸಿ ಸಿದ್ರಾಮೇಶ್ವರ, ಜನಗಣತಿ ಕೇಂದ್ರ ಕಚೇರಿ ಬೆಂಗಳೂರಿನ ಮಾಸ್ಟರ್ ಟ್ರೈನರ್ ಫಣಿ ಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮಂಗಳೂರಲ್ಲಿ ಕಡಲೆ ಖರೀದಿ ಕೇಂದ್ರ ಪ್ರಾರಂಭ

◆**ಕುಕನೂರ:** ತಾಲೂಕಿನ ಮಂಗಳೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳ ಇವರ ಸಹಯೋಗದಲ್ಲಿ ಕಡಲೆ ಖರೀದಿ ಕೇಂದ್ರ, ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಪ್ರಾರಂಭ ಮಾಡಲಾಯಿತು.

ತಾಪಂ ಮಾಜಿ ಉಪಾಧ್ಯಕ್ಷ ವಿಶ್ವನಾಥ ಮರಿಬಸಪ್ಪನವರ ಮಾತನಾಡಿ, ರೈತರಿಗೆ ಅನುಕೂಲವಾಗಲು ಬೆಂಬಲ ಬೆಲೆಯಲ್ಲಿ ಕಡಲೆ ಖರೀದಿ ಕೇಂದ್ರ ಆರಂಭವಾಗಿದೆ ಇದರ ಸದುಪಯೋಗವನ್ನು ರೈತರು ಪಡೆದುಕೊಳ್ಳಬೇಕು ಎಂದು ಹೇಳಿದರು.

ನಮ್ಮ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಶೇರು ಅಭಿಯಾನ, ಉಚಿತ ಆರೋಗ್ಯ ತಪಾಸಣಾ ಶಿಬಿರ ಇನ್ನು ಅನೇಕ ಕಾರ್ಯಕ್ರಮಗಳನ್ನು ಮಾಡಿರುವುದು ರೈತರಿಗೆ ತುಂಬಾ ಸಹಕಾರಿಯಾಗಿದೆ ಎಂದು ಹೇಳಿದರು.

ಶರಣಪ್ಪ ಹ್ಯಾಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಮಾತನಾಡಿ, ನಮ್ಮ ಎಲ್ಲಾ ನಿರ್ದೇಶಕರ ಸಹಕಾರದಿಂದ ನಮ್ಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕಡಲೆ ಖರೀದಿ ಕೇಂದ್ರ ಪ್ರಾರಂಭ ಮಾಡಲಾಗಿದೆ ಹಾಗೂ ಈ ಗ್ರಾಮದ ಹಾಗೂ ಸುತ್ತಮುತ್ತಲಿನ ರೈತರು ಕಡಲೆ ಬೆಳೆಯನ್ನು ಇಲ್ಲಿ ಬಂದು ಮಾರಾಟ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು. ಕರ್ನಾಟಕ ಸಹಕಾರ ಮಾರಾಟ ಮಹಾ ಮಂಡಳ ಕೊಪ್ಪಳ, ಮಹಾಂತೇಶ ಕೊಪ್ಪಳ, ವಿಶಾಲ ಹೊಸಮನಿ ಇವರ ಸಹಕಾರ ನಮ್ಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸದಾ ಇರುತ್ತದೆ ಎಂದು ಹೇಳಿದರು.

ರಾಮಣ್ಣ ಮ್ಯಾಗಳೇಶಿ ಉಪಾಧ್ಯಕ್ಷರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ನಿರ್ದೇಶಕರಾದ ಈರಣ್ಣ ಉಮಚಗಿ, ಮಂಜುನಾಥ ಬಂಡಿ, ಶಂಕ್ರಪ್ಪ ಉಳ್ಳಾಗಡ್ಡಿ, ಗಂಗಾಧರ ಬಡಿಗೇರ, ಶರಣಪ್ಪ ತೊದ್ಲ, ಸಿಇಓ ಹನುಮಗೌಡ್ರ ಈಳಗೇರ, ರುದ್ರಗೌಡ್ರ ಪಾಟೀಲ, ಮೃತ್ಯುಂಜಯ ಪಾಟೀಲ, ಶರಣಪ್ಪ ಎಮ್ಮಿ, ಮಂಗಳಪ್ಪ ಭಟ್ಟಿ, ಪ್ರಶಾಂತ ಅಳವಂಡಿ, ಇಂದ್ರಜ್ ರೋಣದ, ಪರಶುರಾಮ ಮೂಲಿಮನಿ, ವಿರುಪಾಕ್ಷಪ್ಪ ಗಿಣಿಗೇರಿ, ಮಂಗಳೇಶಪ್ಪ ತೋದ್ಲ, ಮುದಿಯಪ್ಪ ಎಮ್ಮಿ, ಗಟ್ಟೆಪ್ಪ ಉಮಚಗಿ, ನೀಲಪ್ಪ ವಕ್ರ, ಈರಪ್ಪ ಕುರಿ ಮುತ್ತಾಳ, ಶರಣಪ್ಪ ಬಿನ್ನಾಳ, ಶಿವನಗೌಡ್ರ ಕೀರ್ತಿಗೌಡ್ರು, ಮಲ್ಲಪ್ಪ ಗಾಣಿಗೇರ ಜಗದೀಶಪ್ಪ ಉಮಚಗಿ, ರವಿ ಶೆಲೂಡಿ, ರವೀಂದ್ರನಾಥ ಕೊಟ್ರಪ್ಪ ತೋಟದ, ಪ್ರಭು ಇಲ್ಲಕಲ್, ಮುದಕಪ್ಪ ತೊದ್ಲ ಇದ್ದರು.



ಮೊಗ್ಗಿಬಸವೇಶ್ವರ ದೇವಸ್ಥಾನ ಸಮಿತಿಗೆ ಪದಾಧಿಕಾರಿಗಳ ಆಯ್ಕೆ

◆**ಯಲಬುರ್ಗಾ:** ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗಣ್ಯ ಮುಖಂಡರು ಸಭೆ ಸೇರಿ ಶ್ರೀಮೊಗ್ಗಿಬಸವೇಶ್ವರ ದೇವಸ್ಥಾನದ ಸಮಿತಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಶೇಖರಗೌಡ ಉಳ್ಳಾಗಡ್ಡಿ ಮತ್ತು ಬಸವಲಿಂಗಪ್ಪ ಭೂತೆ (ಗೌರವಾಧ್ಯಕ್ಷರು), ಮಂಜುನಾಥ ಅಧಿಕಾರಿ(ಅಧ್ಯಕ್ಷರು), ಕರಿಸಿದ್ದಪ್ಪ ಮುಳುಗುಂದ, ಉಮೇಶಗೌಡ ಮಾಲಿಪಾಟೀಲ (ಉಪಾಧ್ಯಕ್ಷರು), ಶರಣಗೌಡರು ಕೊಡಗಲಿ (ಪ್ರಧಾನ ಕಾರ್ಯದರ್ಶಿ), ಬಸವರಾಜ ಸಾದರ್, ಮಂಜುನಾಥ ಹಳ್ಳಿಕೇರಿ, ಕೃಷ್ಣಮೂರ್ತಿ ಚಾಲಗಾರ, ಗುರುಲಿಂಗ ಪಾಟೀಲ(ಸಹ ಕಾರ್ಯದರ್ಶಿಗಳು), ಕಲ್ಲನಗೌಡ ಓಜನಹಳ್ಳಿ (ಖಜಾಂಚಿ) ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಬಳಿಕ ವೀರಣ್ಣ ಹುಬ್ಬಳ್ಳಿ, ಸುರೇಶಗೌಡ ಶಿವನಗೌಡ್ರ ಮತ್ತು ವೀರನಗೌಡ ಬನ್ನಪ್ಪಗೌಡ್ರ ಮಾತನಾಡಿ, ಆಯ್ಕೆಯಾದ ಎಲ್ಲ ನೂತನ ಪದಾಧಿಕಾರಿಗಳು ಕ್ರೀಯಶೀಲರಾಗಿ ಮುಂಬರುವ ಯಲಬುರ್ಗಾ ಪಟ್ಟಣದ ಮೊಗ್ಗಿಬಸವೇಶ್ವರ ಜಾತ್ರಾತೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಮುಂದಾಗಬೇಕು ಮತ್ತು



ಸಾಮೂಹಿಕ ಮದುವೆಗೆ 30100 ನಿಗದಿ ಮಾಡಲಾಯಿತು. ಪ್ರತಿವರ್ಷದಂತೆ ಐದು ದಿನಗಳ ಕಾರ್ಯಕ್ರಮ ವಿಜೃಂಭಣೆಯಿಂದ ಸಭೆಯಲ್ಲಿ ತಿರ್ಮಾನಿಸಲಾಯಿತು ಎಂದರು. ನಿವೃತ್ತ ಪ್ರಾಚಾರ್ಯ ಶರಣಪ್ಪ ಬೆಲೇರಿ, ವಿಜಯ ಕರಂಡಿ, ದೊಡ್ಡ ಗುರುವಿನ್, ಸಿದ್ದರಾಮೇಶ್ವರ ಬೇಲೇರಿ, ಅಮರೇಶ ಹುಬ್ಬಳ್ಳಿ, ಬಸವಂತಪ್ಪ ಹಳ್ಳಿ, ಶ್ರೀಕಾಂತ ನರೇಗಲ್, ಸಿದ್ದಪ್ಪ ಹಕ್ಕಿಗುಣಿ, ಮಲ್ಲಿಕಾರ್ಜುನ ಉಳ್ಳಾಗಡ್ಡಿ, ನವೀನ್ ಮಾಟುರ, ಮಾಂತೇಶ ಭಾಸ್ಕರ್, ಚಮದ್ರು ಬನ್ನಪ್ಪಗೌಡ್ರು, ಆದರ್ಶ ಅಧಿಕಾರಿ ಮತ್ತಿತರರು ಇದ್ದರು.

ಕುರ್ವಕಲಾಕ್ಕೆ ಶಾಸಕ ದದ್ದಲ್ ಭೇಟಿ

◆**ರಾಯಚೂರು:** ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಶುಕ್ರವಾರ ರಾಯಚೂರು ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ರಾಯಚೂರು ಡಿಸಿ ನಿತೀಶ ಕೆ. ನೇತೃತ್ವದಲ್ಲಿ ಕುರ್ವಕಲಾ ಗ್ರಾಮಕ್ಕೆ ಭೇಟಿ ನೀಡಿ, ಸೇತುವೆ ಕಾಮಗಾರಿಯ ವೀಕ್ಷಣೆ ನಡೆಸಿದರು.

ಭೇಟಿ ಸಂದರ್ಭದಲ್ಲಿ ಶಾಸಕರು, ದೇವಸ್ಥಾನ ಸುತ್ತಲು ಸಂಚರಿಸಿ ವೀಕ್ಷಣೆ ನಡೆಸಿ, ರಸ್ತೆಗಳು, ಕುಡಿಯುವ ನೀರು, ಸಮುದಾಯ ಭವನ, ಕಲ್ಯಾಣ ಮಂಟಪ ಹಾಗೂ ಹಲವಾರು ಅಭಿವೃದ್ಧಿ ಕಾಮಗಾರಿಗಳ ನೀಲಿ ನಕ್ಷೆ ತಯಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಯಚೂರು ಸೇರಿದಂತೆ ಸುತ್ತಲಿನ ಜಿಲ್ಲೆಗಳ ಮತ್ತು ಬೇರೆ ಬೇರೆ ರಾಜ್ಯಗಳ ಬಹಳಷ್ಟು ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಹಾಗಾಗಿ ಗ್ರಾಮ ಸಂಪರ್ಕದ ಎಲ್ಲ ರಸ್ತೆಗಳು ಅಚ್ಚುಕಟ್ಟಾಗಿ ಇರಬೇಕು. ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ದೇವಸ್ಥಾನದ ಅಭಿವೃದ್ಧಿಯ ಜೊತೆಗೆ ಇಲ್ಲಿಗೆ ಆಗಮಿಸುವ ಭಕ್ತರಿಗೆ ಮೂಲ ಸೌಲಭ್ಯ ಒದಗಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಧಾರ್ಮಿಕ ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂಬುದನ್ನು ಅರಿತು ಅಧಿಕಾರಿಗಳು ರಸ್ತೆ ಅಭಿವೃದ್ಧಿ, ಕುಡಿಯುವ ನೀರು ಸರಬರಾಜು, ಸಮುದಾಯ ಭವನ ನಿರ್ಮಾಣ, ಕಲ್ಯಾಣ ಮಂಟಪ ನಿರ್ಮಾಣ ಸೇರಿದಂತೆ ಅಗತ್ಯ ಅಭಿವೃದ್ಧಿ ಕಾಮಗಾರಿಗಳ ನೀಲಿನಕ್ಷೆಯನ್ನು ಕೂಡಲೇ ಸಿದ್ಧಪಡಿಸಬೇಕು ಎಂದು ನಿರ್ದೇಶನ ನೀಡಿದರು.

ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ವೆಂಕಟೇಶ ಗಲಗ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರಾಘವೇಂದ್ರ, ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ದತ್ತಾತ್ರೇಯ ಸ್ವಾಮಿಯ ದರ್ಶನ: ಗ್ರಾಮೀಣ ಪ್ರವಾಸ ಸಂದರ್ಭದಲ್ಲಿ ಶಾಸಕರು ಗ್ರಾಮಸ್ಥರೊಂದಿಗೆ ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಕರ್ವಕಲಾ ಗ್ರಾಮದ ಆರಾಧ್ಯ ದೇವರಾದ ದತ್ತಾತ್ರೇಯ ಸ್ವಾಮಿಯ ಆಶೀರ್ವಾದ ಪಡೆದರು.



ಖೋಖೋ: ಎಸ್‌ಕೆಎನ್‌ಐ ಕಾಲೇಜ್ ತಂಡ ವಿಜೇತ

◆**ಗಂಗಾವತಿ:** ನಗರದ ಶ್ರೀಕೊಲ್ಲಿ ನಾಗೇಶ್ವರ ರಾವ್ ಕಾಲೇಜು ಆವರಣದಲ್ಲಿ ನಡೆದ ಎರಡು ದಿನಗಳ ಅಂತರ ಮಹಾವಿದ್ಯಾಲಯ ಖೋಖೋ ಪಂದ್ಯಾವಳಿ ಹಾಗೂ ವಿಶ್ವವಿದ್ಯಾಲಯ ತಂಡದ ಆಯ್ಕೆ ಮುಕ್ತಾಯಗೊಂಡಿದೆ.

ಕೊಪ್ಪಳ ವಿಶ್ವವಿದ್ಯಾಲಯ, ಎಸ್‌ಕೆಎನ್‌ಐ ಕಾಲೇಜು, ಆಂತರಿಕ ಗುಣಮಟ್ಟ ಭರವಸಾ ಕೋಶದ ಸಹಯೋಗದಲ್ಲಿ ನಡೆದ ಈ ಅಂತರ ಮಹಾವಿದ್ಯಾಲಯ ಖೋಖೋ (ಪುರುಷ ಹಾಗೂ ಮಹಿಳಾ) ಪಂದ್ಯಾವಳಿಯಲ್ಲಿ ನಗರದ ಶ್ರೀಕೊಲ್ಲಿ ನಾಗೇಶ್ವರಾವ್ ಮಹಾವಿದ್ಯಾಲಯದ ಪುರುಷರ ಖೋಖೋತಂಡವು (ವಿಜೇತ) ಪ್ರಥಮ ಸ್ಥಾನವನ್ನು ಪಡೆದರೆ, ಕೊಪ್ಪಳದ ಶ್ರೀಗವಿಸಿದ್ದೇಶ್ವರ ಕಾಲೇಜಿನ ಪುರುಷರ ಖೋ ಖೋ ತಂಡವು (ರನ್ನರ್ ಅಪ್) ಎರಡನೇ ಸ್ಥಾನವನ್ನು ಪಡೆದುಕೊಂಡಿದೆ.

ಮಹಿಳಾ ವಿಭಾಗದಲ್ಲಿ ಶ್ರೀಗವಿಸಿದ್ದೇಶ್ವರ ಕಾಲೇಜಿನ ಖೋಖೋ ತಂಡವು ಪ್ರಥಮ ಸ್ಥಾನವನ್ನು ಪಡೆದಿದ್ದರೆ, ಕನಕಗಿರಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಖೋಖೋ ತಂಡವು ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದೆ.

ದೈಹಿಕ ಶಿಕ್ಷಣ ವಿಭಾಗದ ಕೊಪ್ಪಳ ವಿಶ್ವವಿದ್ಯಾಲಯದನಿರ್ದೇಶಕರಾದಮಂಜುನಾಥ್, ನೇತೃತ್ವದಲ್ಲಿ ಕ್ರೀಡಾ ನಿರ್ದೇಶಕರುಗಳಾದ ಶೋಭಾ ಕೆ.ಎಸ್., ಅನಿಲ್ ಎಡ್ವರ್ಡ, ಶಾಂತಾ, ಜಯರಾಮ್, ಇನ್ನಿತರರ ನೇತೃತ್ವದಲ್ಲಿ ಹಾಗೂ ಕಾಲೇಜಿನ ಪ್ರಾಚಾರ್ಯರಾದ ಡಾ.ಶಿವರಾಜ್ ಗುರಿಕಾರ್ ಪ್ರಾಧ್ಯಾಪಕರುಗಳಾದ ಡಾ.ಮಂಜುನಾಥ್ ಕೆ.ಎಚ್. ಡಾ.ಫಣಿರಾಜ್, ಡಾ.ಮಾರುತಿ, ಡಾ.ಬಸವರಾಜ್ ಗಡಾದ ಇನ್ನಿತರರ ಸಹಕಾರದೊಂದಿಗೆ ಪಂದ್ಯಾವಳಿಗಳು ಮುಕ್ತಾಯಗೊಂಡಿವೆ.

ಅಭಿನಂದನೆ: ಅಂತರ್ ವಿಶ್ವವಿದ್ಯಾಲಯ ಖೋಖೋ ಪಂದ್ಯಾವಳಿಯಲ್ಲಿ ಎಸ್ ಕೆಎನ್‌ಜಿ, ಮಹಾವಿದ್ಯಾಲಯದ ಖೋಖೋ ತಂಡವು ವಿಜೇತ ತಂಡವಾಗಿ ಪ್ರಥಮ ಸ್ಥಾನ ಪಡೆದಿರುವುದಕ್ಕೆ ಕೊಲ್ಲಿ ನಾಗೇಶ್ವರಾವ್ ಕಾಲೇಜಿನ ಪ್ರಾಚಾರ್ಯರಾದ ಡಾ.ಶಿವರಾಜ್ ಗುರಿಕಾರ, ಐಕ್ಯೂಎಸಿ ಸಂಚಾಲಕರಾದ ಮಂಜುನಾಥ್ ಕೆ.ಎಚ್. ಇತರೆ ಪ್ರಾಧ್ಯಾಪಕರು ಹಾಗೂ ಸಿಬ್ಬಂಧಿ ಹರ್ಷ ವ್ಯಕ್ತಪಡಿಸಿದ್ದು, ವಿಜೇತ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಬಹುಮಾನ ವಿತರಣೆ: ವಿಜೇತ ತಂಡಗಳಿಗೆ ಬಹುಮಾನ ವಿತರಣೆ ಸಮಾರಂಭ ಸಂಜೆ ಜರುಗಿದ್ದು, ವಿಶ್ವವಿದ್ಯಾಲಯ ರಜಿಸ್ಟ್ರಾರ್ ಕೆ.ರಮೇಶ. ಪ್ರಾಚಾರ್ಯರಾದ ಡಾ. ಶಿವರಾಜ ಗುರಿಕಾರ, ವಿಶ್ವವಿದ್ಯಾಲಯದ ದೈಹಿಕ ನಿರ್ದೇಶಕರಾದ ಮಂಜುನಾಥ್, ಎಸ್. ಕೆನ್.ಜಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕಿ ಶೋಭಾ ಕೆ.ಎಸ್. ಮಾತನಾಡಿದರು. ಕಾಲೇಜಿನ ವಿವಿಧ ಪ್ರಾಧ್ಯಾಪಕರು, ವಿವಿಧ ಕ್ರೀಡಾ ನಿರ್ದೇಶಕರು, ಕ್ರೀಡಾ ಶಿಕ್ಷಕರು, ಕ್ರೀಡಾ ಪಟುಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ರೈತರಿಗೆ ಸಕಾಲಕ್ಕೆ ರಸಗೊಬ್ಬರ ಪೂರೈಸಿ: ಸಿದ್ದೇಶ್ವರ

◆**ಕುಷ್ಟಗಿ:** ಪಟ್ಟಣದ ಕೃಷಿ ಇಲಾಖೆಯ ಸಭಾಂಗಣದಲ್ಲಿ ಕೃಷಿ ಇಲಾಖೆಯ ವತಿಯಿಂದ ಕೃಷಿ ಪರಿಕರಗಳ ಮಾರಾಟಗಾರರ ಸಭೆ ಮಂಗಳವಾರ ಜರುಗಿತು.

ಕೃಷಿ ಇಲಾಖೆಯ ಉಪ ನಿರ್ದೇಶಕ ಸಿದ್ದೇಶ್ವರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೃಷಿ ಪರಿಕರಗಳ ಮಾರಾಟಗಾರರು ಕಾನೂನು ಪಾಲಿಸಬೇಕು. ಬಿತ್ತನೆ ಸಮಯದಲ್ಲಿ ರೈತರಿಗೆ ಸಕಾಲಕ್ಕೆ ಅವರಿಗೆ ರಸಗೊಬ್ಬರ ಪೂರೈಕೆ ಮಾಡಬೇಕು. ರಸಗೊಬ್ಬರ ಅತಿಯಾದ ಬಳಕೆಯಿಂದ ಭೂಮಿ ತನ್ನ ಸತ್ವವನ್ನು ಕಳೆದುಕೊಳ್ಳುತ್ತದೆ. ರೈತರಿಗೆ ತಿಳುವಳಿಕೆ ಮತ್ತು ಅರಿವು ಮೂಡಿಸುವಂತ ಕೆಲಸ ಮಾಡಬೇಕು. ರೈತರು ನಿಮ್ಮೊಂದಿಗೆ ವ್ಯವಹಾರ ಮಾಡುತ್ತಿರುವವದರಿಂದ ನಿಮ್ಮಮಾತನ್ನು ರೈತರು ಕೇಳುತ್ತಾರೆ. ಅತಿಯಾದ ರಸಗೊಬ್ಬರ ಬಳಕೆಮಾಡುವುದರಿಂದ ಕಾನ್ಸರ್‌ನತಹ ಮಾರಕ ರೋಗಳಗಳು ಹರಡುವ ಸಾಧ್ಯತೆ ಇರುತ್ತದೆ. ರೈತರಿಗೆ ಸರಿಯಾದ ಸಮಯಕ್ಕೆ ಸಮರ್ಪಕವಾಗಿ ಬೀಜ ಗೊಬ್ಬರ ವಿತರಣೆ ಮಾಡಬೇಕು. ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಇದಕ್ಕೆಲ್ಲ ನಿಮ್ಮ ಸಹಕಾರ ಇರಬೇಕು ಎಂದರು.



ಜಾಗೃತಿ ದಳದ ಜಿಲ್ಲಾ ಪರಿವೀಕ್ಷಕ ಸುನೀಲ್ ಮಾತನಾಡಿ, ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಬಾರದು. ಅಂತವರು ಕಂಡು ಬಂದರೆ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಮಾರಾಟವಾದ ನಂತರ ಬಿಲ್ ನೀಡಬೇಕು. ದಾಖಲೆಗಳನ್ನು ಸರಿಯಾಗಿ ಇಟ್ಟಿರಬೇಕು. ಲೈಸನ್ಸ್ ಸೇರಿದಂತೆ ದರ ನಾಮ ಫಲಕಗಳನ್ನು ಅಳವಡಿಸಬೇಕು. ಕೃಷಿ ಇಲಾಖೆಯ ನಿಯಮಗಳನ್ನು ಎಲ್ಲರೂ ಪಾಲಿಸ ಮಾಡಬೇಕು. ಅಧಿಕೃತ ಕಂಪನಿಯಿಂದ ಗುಣಮಟ್ಟದ ವಸ್ತುಗಳನ್ನು ಮಾರಾಟ ಮಾಡಬೇಕು. ಅವಧಿ ಮುಗಿದ ವಸ್ತುಗಳನ್ನು ಮಾರಾಟ ಮಾಡಬಾರದು. ಅಂತದು ಕಂಡು ಬಂದರೆ ಕಾನೂನು ಶಿಸ್ತು ಕ್ರಮ ತಗೆದುಕೊಳ್ಳಲಾಗುವುದು ಎಂದರು.

ಸಹಾಯಕ ಕೃಷಿ ನಿರ್ದೇಶಕ ನಾಗರಾಜ ಕಾತರಕಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೃಷಿ ಪರಿಕರ ವಿತರಣೆಯಲ್ಲಿ ಯಾವುದೇ ತೊಂದರೆ ಆಗದಂತೆ ಸುಗಮವಾಗಿ ನಡೆಸಬೇಕು. ರಸಗೊಬ್ಬರ ಮಾರಾಟ ಮಾಡುವವರು ರೈತರು ಕೇಳಿದ ಗೊಬ್ಬರ ನೀಡುತ್ತಾ ಬಂದಿದ್ದಿರಿ ಆದರೆ ಈ ಸಲ ಬೆಳೆಗಳಿಗೆ ಅನುಕೂಲವಾಗುವಂತೆ ಗೊಬ್ಬರವನ್ನು ಮಾತ್ರ ನೀಡಬೇಕು. ಸಾರಜನಕ ಗೊಬ್ಬರವನ್ನು ಅತಿ ಹೆಚ್ಚಾಗಿ ಬಳಕೆ ಮಾಡುವದರಿಂದ ಇಳುವರಿ ಕಡಿಮೆ ಆಗುತ್ತದೆ ಈ ಕುರಿತು ರೈತರಿಗೆ ನೀವು ಜಾಗೃತಿ ಮೂಡಿಸಬೇಕು ಎಂದರು.

ಕೃಷಿ ಪರಿಕರಗಳ ಬಗ್ಗೆ ಮಾರಾಟಗಾರರ ಸಂಘದ ಜಿಲ್ಲಾ ಅಧ್ಯಕ್ಷ ಸುರೇಶ ಸಂಕನೂರು , ಕುಷ್ಟಗಿ ತಾಲೂಕಾ ಅಧ್ಯಕ್ಷ ಬಿ.ವಿ. ಕುಂಬಾಳವತಿ ಮಾತನಾಡಿದರು.

ರಾಜಶೇಖರ, ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳಾದ ಪ್ರಮೋದ ಹಾದಿಮನಿ, ಆಶಾ ರಾಠೋಡ್, ನಾರಾಯಣಗೌಡ, ನಾಗನಗೌಡ ಸೇರಿದಂತೆ ತಾಲೂಕಿನ ಎಲ್ಲ ಕೃಷಿ ಪರಿಕರಗಳ ಮಾರಾಟಗಾರರು ಹಾಗೂ ಕೃಷಿ ಇಲಾಖೆಯ ಸಿಬ್ಬಂದಿ ಇದ್ದರು.

ಸಿಬ್ಬಂದಿ ಆಕಾಶ ದಾನಿ ನಿರ್ವಹಿಸಿದರು.

ಕಿರುಸುದ್ದಿ



ಕೊಟ್ಟೂರು: ಪಂಚ ಪೀಠಗಳಲ್ಲಿ ಒಂದಾದ ತಾಲೂಕಿನ ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ ಪೀಠದ ಜಗದ್ಗುರು ಸಿದ್ದಲಿಂಗ ಶಿವಾಚಾರ್ಯ ದೇಶಿ ಕೇಂದ್ರ ಭಗವತ್ಪಾದ ಸ್ವಾಮೀಜಿ ನೂತನ ಪರಾಭವನಾಮ ಸಂವತ್ಸರದ ವರ್ಷದ ಪಂಚಾಂಗ ಪಠಣ ಮಾಡಿ ಭಕ್ತರಿಗೆ ಆಶೀರ್ವಚನ ನೀಡಿದರು.

ನವೋದಯ ಪರೀಕ್ಷೆ: ಜಿಲ್ಲೆಗೆ ಪ್ರಥಮ



◆**ಹುಣಸಗಿ:** ಜವಾಹರ ನವೋದಯ ವಿದ್ಯಾಲಯ ನಡೆಸುವ ಪ್ರಸಕ್ತ ಸಾಲಿನ ಪ್ರವೇಶ ಪರೀಕ್ಷೆಯಲ್ಲಿ ತಾಲೂಕಿನ ಚಿಕನಹಳ್ಳಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ 5 ನೇ ತರಗತಿ ವಿದ್ಯಾರ್ಥಿನಿ ಸಿಂಧು ಆರ್ ಬಿರಾದಾರ ಉತ್ತಮ ಅಂಕಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. 100 ಅಂಕಗಳಿಗೆ 98.75 ಪ್ರತಿಶತ ಅಂಕ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾಳೆ. ಪಾಲಕರು, ಗ್ರಾಮಸ್ಥರು ಶಿಕ್ಷಕ ವೃಂದ ಸೇರಿದಂತೆ ಇನ್ನಿತರರು ಹರ್ಷ ವ್ಯಕ್ತಪಡಿಸಿದ್ದಾರೆ.

ರಾಜೇಂದ್ರ ಪೂಜಾರಿ ನೇಮಕ



◆**ಬೀದರ:** ಜಿಲ್ಲಾ ಬಿಜೆಪಿ ಘಟಕದಲ್ಲಿ ಸಂಘಟನೆ ಬಲವರ್ಧನೆಗೆ ಹೆಜ್ಜೆಯಾಗಿ ಹೊಸ ನೇಮಕಾತಿಗಳು ನಡೆದಿದ್ದು, ರಾಜೇಂದ್ರ ಪೂಜಾರಿ ಅವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ. ಈ ಕುರಿತು ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ ಪ್ರಕಟಣೆ ನೀಡಿದ್ದು, ಪಕ್ಷದ ಕೋರ್ ಸಮಿತಿಯಲ್ಲಿ ಚರ್ಚಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ರಾಜೇಂದ್ರ ಪೂಜಾರಿ ಅವರು ಹಲವು ವರ್ಷಗಳಿಂದ ಪಕ್ಷದ ವಿವಿಧ ಹಂತಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಂಘಟನಾ ಕಾರ್ಯಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಈ ಹಿಂದೆ ಗ್ರಾಮಾಂತರ ಮಂಡಳದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಪಕ್ಷವನ್ನು ತಳಮಟ್ಟದಲ್ಲಿ ಬಲಪಡಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದರು. ಅವರ ಅನುಭವ, ಸಂಘಟನೆ ಕೌಶಲ್ಯ ಹಾಗೂ ಕಾರ್ಯಪಟುತೆಯನ್ನು ಪರಿಗಣಿಸಿ ಜಿಲ್ಲಾ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ ಎಂದು ತಿಳಿಸಲಾಗಿದೆ. ಈ ನೇಮಕಾತಿಯಿಂದ ಜಿಲ್ಲಾ ಮಟ್ಟದಲ್ಲಿ ಪಕ್ಷದ ಚಟುವಟಿಕೆಗಳಿಗೆ ಮತ್ತಷ್ಟು ಚೈತನ್ಯ ಬರಲಿದೆ ಎಂಬ ವಿಶ್ವಾಸವನ್ನು ಪಕ್ಷದ ಮುಖಂಡರು ವ್ಯಕ್ತಪಡಿಸಿದ್ದಾರೆ.

ಬಿಳಿ ಕಲ್ಲರಾಯನ ಸಂಭ್ರಮದ ಮಹಾರಥೋತ್ಸವ



◆**ಕುರುಗೋಡು:** ಸಮೀಪದ ಮುದ್ದಟ್ಟನೂರು ಗ್ರಾಮದ ಬಿಳಿ ಕಲ್ಲರಾಯನ ಆರಾಧ್ಯ ದೇವರಾದ ಶ್ರೀರಥೋತ್ಸವವು ಹಿಂದೂಗಳ ಪವಿತ್ರ ಹಬ್ಬ ಹಾಗೂ ನೂತನ ವರ್ಷಾಚರಣೆಯ ಗ್ರಾಮದ ಮೊದಲ ವರ್ಷದ ದಿನವಾದ ಶುಕ್ರವಾರ ಸಂಜೆ ಸಡಗರ ಸಂಭ್ರಮಗಳಿಂದ ಜರುಗಿತು. ಅಂದು ಆಕರ್ಷಕ ಹೂವಿನ ಪಲ್ಲಕ್ಕಿ ಉತ್ಸವ ಹಾಗೂ ಸೋಮವಾರ ಬೆಳಿಗ್ಗೆ ಹೋಮಹವನಗಳನ್ನು ಸ್ವಾಮಿಗೆ ವಿವಿಧ ಅಭಿಷೇಕಗಳನ್ನು ನೆರವೇರಿವೇರಿಸಿದ ನಂತರ ಸಕಲ ಸದ್ಭಕ್ತರು ಮಡಿ ತೇರನ್ನು ಎಳೆದರು. ರಥೋತ್ಸವವು, ಭಕ್ತಾದಿಗಳ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಗ್ರಾಮದ ರಾಜಬೀದಿಯಲ್ಲಿ ವಿಜೃಂಭಣೆಯಿಂದ ಜರುಗಿತು. ರಥೋತ್ಸವದಲ್ಲಿ ತಾಷಾರಾಂ ಡೋಲ್, ಮಂಗಳ ವಾದ್ಯಗಳು ಭಾಗವಹಿಸಿದ್ದವು. ಮಹಿಳೆಯರು ಮಕ್ಕಳು ಹೊಸ ಬಟ್ಟೆಗಳನ್ನು ಧರಿಸಿ ಭಾಗವಹಿಸಿ ತೇರುಗಳಿಗೆ ಉತ್ತತ್ತಿ, ಬಾಳೆಹಣ್ಣು, ಹೂಗಳನ್ನು ಎಸೆದು ತಮ್ಮ ಹರಕೆಗಳನ್ನು ತೀರಿಸಿದರು ಹಾವಿನಹಾಳ್, ಶಿರಿಗೇರಿ, ಚನ್ನಪಟ್ಟಣ, ಸೂಗೂರು, ಮಣ್ಣೂರು, ಎಮ್ಮಿಗನೂರು, ಸೋಮಲಾಪುರ, ಎಚ್.ವೀರಾಪುರ, ನೆಲ್ಲುಡಿ, ರ್‍ಾವಿ, ಗುತ್ತಿಗನೂರು ಮತ್ತಿತರರಿದ್ದರು.



ಸಿರುಗುಪ್ಪ: ತಾಲೂಕಿನ ತೆಕ್ಕಲಕೋಟೆ ಪಟ್ಟಣದಲ್ಲಿ ಶ್ರೀಕಾಡಸಿದ್ದೇಶ್ವರ ಸ್ವಾಮಿ ದೇವಾಲಯದಲ್ಲಿ ಗದಗಿನ ಶ್ರೀವೀರೇಶ್ವರ ಪುಣ್ಯಾಶ್ರಮದ ಶ್ರೀಕಲ್ಲಯ್ಯಜ್ಜ ಅವರಿಗೆ ತುಲಾಭಾರ ಕಾರ್ಯಕ್ರಮವನ್ನು ಭಕ್ತರ ಆಶ್ರಯದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ದೊಡ್ಡಯ್ಯ ಗವಾಯಿಗಳು, ನೂರಾರು ಭಕ್ತರು, ವಿವಿಧ ಗಣ್ಯರು, ಉಪಸ್ಥಿತರಿದ್ದರು.

ಕೊಟ್ಟೂರೇಶ್ವರ ಸ್ವಾಮಿಯ ತೇರುಗಡ್ಡೆ ಒಳ ಹಾಕಿದ ಭಕ್ತರು

◆**ಕೊಟ್ಟೂರು:** ನಾಡಿನ ಹೆಸರಾಂತ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಕೊಟ್ಟೂರಿನ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥದ ತೇರುಗಡ್ಡೆಯನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಒಳಹಾಕಲಾಯಿತು. ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವವು ಫೆ.12ರಂದು ಜರುಗಿದ್ದು, ಆ ರಥದತೇರುಗಡ್ಡೆಯನ್ನು ಇಂದುತೇರು ಗಡ್ಡೆಯಮನೆಯೊಳಗೆ ಸೇರಿಸಲಾಯಿತು. ರಥೋತ್ಸವ ಜರುಗಿ ಒಂದು ತಿಂಗಳ ನಂತರ ಅಂದರೆ ಯುಗಾದಿ ಪಾಡ್ಯದಂದು ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ತೇರುಗಡ್ಡೆಯನ್ನು ಒಳಹಾಕುವುದು ಮೊದಲಿನಿಂದಲೂ ನಡೆದು ಬಂದ ಪದ್ಧತಿಯಾಗಿದೆ. ಶ್ರೀಗುರು ಕೊಟ್ರೇಶ್ವರ ಸ್ವಾಮಿಯ ಮಧ್ಯಾಹ್ನದ 3:30ರ ಪೂಜಾ ಸಮಯದ ನಂತರದಲ್ಲಿ ಕ್ರಿಯಾಮೂರ್ತಿಗಳಾದ ಶಿವಪ್ರಕಾಶ್ ಸ್ವಾಮೀಜಿ ನೇತೃತ್ವದಲ್ಲಿ ಪ್ರಧಾನ ಧರ್ಮಕರ್ತ ಎಂ.ಕೆ.ಶೇಖರಯ್ಯ ಅವರ ಪೂಜಾ ಬಳಗದ ನೇತೃತ್ವದಲ್ಲಿ ತೇರು ಗಡ್ಡೆಯನ್ನು ಏರುತ್ತಿದ್ದಂತೆ ನೆರೆದಿದ್ದ ಭಕ್ತರೆಲ್ಲರೂ ಜಯ ಘೋಷಗಳೊಂದಿಗೆ ಮಿಣಿ ಎಳೆಯುವುದರ ಮೂಲಕ ತೇರುಗಡ್ಡೆ ಎಳೆದು ತೇರಿನ ಮನೆ ಸೇರಿಸಲಾಯಿತು. ನೂತನ ಸಂವತ್ಸರದ ಪಂಚಾಂಗ ಪಠಣ: ತೇರುಗಡ್ಡೆಯನ್ನು ಒಳಹಾಕಿದ ಬಳಿಕ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ಹಿರೇಮಠದಲ್ಲಿ ನೂತನ ಪರಾಭವ ನಾಮ ಸಂವತ್ಸರದ ಪಂಚಾಂಗ ಪಠಣವನ್ನು ನಡೆಸಲಾಯಿತು. ಪರಾಭವ ನಾಮ ಸಂವತ್ಸರದ ವರ್ಷದ ಮಳೆ, ಬೆಳೆಗಳ ಕುರಿತು ಹೇಳಲಾಯಿತು.



ಕೊಟ್ಟೂರು: ನಾಡಿನ ಹೆಸರಾಂತ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಕೊಟ್ಟೂರಿನ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥದ ತೇರುಗಡ್ಡೆಯನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಒಳಹಾಕಲಾಯಿತು. ಈ ಪಂಚಾಂಗ ಪಠಣವನ್ನು ಮಠದ, ದೊಡ್ಡ ವೀರಯ್ಯ ಶಾಸ್ತ್ರಿ, ಮೃತ್ಯುಂಜಯ ಶಾಸ್ತ್ರಿ, ಎ.ಎಂ. ಗುರುಸ್ವಾಮಿ ಶಾಸ್ತ್ರಿ ನಡೆಸಿ ಕೊಟ್ಟರು. ಕೊಟ್ಟೂರಿನ ಸಮಸ್ತ ಕಟ್ಟೆ ಮನೆ ದೈವಸ್ಥರು, ಆಯಗಾರ ಬಳಗದವರು ಮತ್ತು ಭಕ್ತರು ಉಪಸ್ಥಿತರಿದ್ದರು.

ಟಾಸ್ಕ್ ಫೋರ್ಸ್ ಸಭೆ | ಶಾಸಕ ಕಂದಕೂರ ಸೂಚನೆ
ಬೋರ್‌ವೆಲ್ ಕೊರೆಸಲು ಪ್ರಸ್ತಾವನೆ ಸಲ್ಲಿಸಿ

◆**ಯಾದಗಿರಿ:** ಮುಂಬರುವ ಬೇಸಿಗೆಯ ಎರಡು ತಿಂಗಳ ಕಾಲ ಗ್ರಾಮೀಣ ಭಾಗದ ಜನತೆಗೆ ಶುದ್ಧ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಅಗತ್ಯ ಕ್ರಮ ವಹಿಸುವಂತೆ ಗುರಮಠಕಲ್ ಶಾಸಕ ಶರಣಗೌಡ ಕಂದಕೂರ ತಹಶೀಲ್ದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶುಕ್ರವಾರ ನಗರದ ಶಾಸಕರ ಜನಸಂಪರ್ಕ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಗುರಮಠಕಲ್ ಮತ್ತು ಯಾದಗಿರಿ ತಾಲುಕುಗಳ ಕುಡಿಯುವ ನೀರಿನ ಟಾಸ್ಕ್ ಫೋರ್ಸ್ ಸಭೆ ನಡೆಸಿ ಮಾತನಾಡಿ, ಕುಡಿಯುವ ನೀರಿನ ನಿರ್ವಹಣೆಗೆ ಸರ್ಕಾರದಿಂದ ಇದುವರೆಗೂ ಯಾವುದೇ ಹಣ ಬಿಡುಗಡೆಯಾಗಿಲ್ಲ, ಕಳೆದ ಸಾಲಿನಲ್ಲಿ ಕ್ಷೇತ್ರದಲ್ಲಿ ಬೋರವೆಲ್ ಕೊರೆಸಿದ್ದ ಸುಮಾರ 1 ಕೋಟಿ ರೂ.ಗಳಿಗಿಂತ ಹೆಚ್ಚಿನ ಬಿಲ್ ಬಾಕಿ ಇರುವ ಬಗ್ಗೆ ನಾನು ಕಳೆದ ಬಾರಿ ಸದನದಲ್ಲಿ ಸರ್ಕಾರ ಗಮನ ಸೆಳೆದಿದ್ದೇನೆ. ಹೀಗಾಗಿ ಬಾಕಿ ಇರಯವ ಅನುದಾನ ಬಿಡುಗಡೆ ಸೇರಿ ಸದ್ಯ ಅಗತ್ಯವಾಗಿರುವ ಅನುದಾನದ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸೂಚಿಸಿದೆ ಎಂದರು.

ಅಧಿಕಾರಿಗಳು ಸೋಮವಾರದ ಒಳಗಾಗಿ ಈ ಎರಡೂ ತಾಲೂಕುಗಳಲ್ಲಿ ಹೊಸ ಬೋರವೆಲ್ ಕೊರೆಯಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ಬೇಸಿಗೆ ಹಿನ್ನೆಲೆಯಲ್ಲಿ ಸರ್ಕಾರ ಹಸಿ ಅಥವಾ ಒಣ ಬರಗಾಲ ಎಂದು ಘೋಷಣೆ ಮಾಡಿಲ್ಲ, ಅಲ್ಲದೆ ಟಾಸ್ಕ್ ಫೋರ್ಸ್‌ಗೂ ಯಾವುದೇ ಹಣ ಬಿಡುಗಡೆಯಾಗಿಲ್ಲ, ಆದರೆ, ಸದ್ಯ ಆರ್.ಓ.ಪ್ಲಾಂಟ್ ರಿಪೇರಿ ಸೇರಿದಂತೆ ನಿರ್ವಹಣೆಗೆಗಾಗಿ ಗುರಮಠಕಲ್ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ 35.50 ಲಕ್ಷ ಅನುದಾನ ಗ್ರಾಮೀಣ ನೀರು ಸರಬರಾಜು ವಿಭಾಗಕ್ಕೆ ಬಿಡುಗಡೆಯಾಗಿದೆ. 28 ಗ್ರಾಮಗಳಲ್ಲಿನ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಒಂದುವರೆ ಲಕ್ಷದೊಳಗೆ ರಿಪೇರಿ ಮಾಡಿಸುವಂತೆ ತಿಳಿಸಿದರು.



ದೂರು ಬರದಂತೆ ನೋಡಿಕೊಳ್ಳಿ

ತಾಪಂಗಳಿಗೆ ಸರ್ಕಾರದಿಂದ 15 ಹಣಕಾಸು ಯೋಜನೆಯಡಿ ಅನುದಾನ ಬಿಡುಗಡೆಯಾಗಿಲ್ಲ. ಹೀಗಾಗಿ ಕುಡಿಯುವ ನೀರಿನ ಪೈಪ್‌ಲೈನ್, ವಿದ್ಯುತ್ ಸಂಪರ್ಕ ಇತ್ಯಾದಿ ಸಮಸ್ಯೆಗಳಿದ್ದರೆ 50 ಸಾವಿರ ರೂ. ವರೆಗೆ ಪಂಚಾಯಿತಿ ವತಿಯಿಂದ ಖರ್ಚು ಮಾಡಬಹುದಾಗಿದೆ. ಹೀಗಾಗಿ ತಾಪಂ ಇಒಗಳು ಈ ಬಗ್ಗೆ ಗಮನ ಕೊಡಬೇಕು. ಮತಕ್ಷೇತ್ರದ ಜನರಿಂದ ವಿಶೇಷವಾಗಿ ಕುಡಿಯುವ ನೀರಿನ ವಿಷಯದ ಬಗ್ಗೆ ದೂರು ಬರದಂತೆ ಅಧಿಕಾರಿಗಳು ಗಮನ ಹರಿಸಿ. ಟಿಸಿಗಳು ಸುಟ್ಟರೆ ತಕ್ಷಣೆ ಬದಲಾಯಿಸಲು ಜೆಸ್ಕಾಂ ಅಧಿಕಾರಿಗಳು ಮುಂದಾಗಬೇಕು ಎಂದು ಖಡಕ್ ಸೂಚನೆ ನೀಡಿದರು.

> ಮತಕ್ಷೇತ್ರ ಗ್ರಾಮೀಣ ಪ್ರದೇಶಗಳಲ್ಲಿ ಹೊಸದಾಗಿ ಬೋರವೆಲ್ ಕೊರಿಸುವ ಬಗ್ಗೆ ತಹಶೀಲ್ದಾರರು ತಕ್ಷಣ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಇನ್ನೆರಡು ದಿನಗಳಲ್ಲಿ ಅಗತ್ಯವಾಗಿ ಪ್ರಸ್ತಾವನೆ ಸಲ್ಲಿಸಬೇಕು.
> ■ **ಶರಣಗೌಡ ಕಂದಕೂರ, ಗುರಮಠಕಲ್ ಶಾಸಕ**

ಕಳೆದೆರಡು ದಿನಗಳ ಹಿಂದೆ ಜಿಲ್ಲೆಯಲ್ಲಿ ಅಕಾಲಿಕ ಮಳೆ ಮತ್ತು ಬಿರುಗಾಳಿಯಿಂದ ಹಾನಿಗೊಳಗಾದ ಜೋಳ, ಭತ್ತ ಹಾಗೂ ಕಲ್ಲಂಗಡಿ ಬೆಳೆಗಳ ನಷ್ಟದ ಬಗ್ಗೆ ವರದಿ ಸಲ್ಲಿಸಬೇಕು, ಅಲ್ಲದೆ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಮಸ್ಯೆ ಇದ್ದರೆ ಅದರ ಬಗ್ಗೆಯೂ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚ್ಯವಾಗಿ ನಿರ್ದೇಶನ ನೀಡಿದ ಶಾಸಕರು, ಗುರಮಠಕಲ್ ಪಟ್ಟಣದ ಲಕ್ಷ್ಮೀ ನಗರ, ಗಡ್ಡಿ ಮೊಹೊಲ್ಲಾ ಹಾಗೂ ಮರಾಠಾ ವಾಡ ಕಾಲೋನಿಗಳಲ್ಲಿ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಿ ಎಂದರು.

ಗುರಮಠಕಲ್ ತಹಶೀಲ್ದಾರ್ ಚನ್ನಮಲ್ಲಪ್ಪ ಘಂಟಿ, ಇಒ ಅಮರೇಶ ಪಾಟೀಲ್, ಮಹಾದೇವಪ್ಪ, ಜೆಸ್ಕಾಂ ಅಧಿಕಾರಿಗಳಾದ ಅಮರೇಶ ರಾಠೋಡ್ ಮಾರ್ಕಂಡೇಶ, ಕೃಷಿ ಇಲಾಖೆ ಅಧಿಕಾರಿ ಸುರೇಶ ಇದ್ದರು.

ಬ್ಯಾಟಿ ಗಿಡ ಉತ್ಸವದಲ್ಲಿ ಬೆಲ್ಲ ಕಚ್ಚಿದ ದಾಸಪ್ಪರು

◆**ಹಗರಿಬೊಮ್ಮನಹಳ್ಳಿ:** ಯುಗಾದಿ ಹಬ್ಬದ ಅಂಗವಾಗಿ ಬ್ಯಾಟಿ ಗಿಡ ಉತ್ಸವದಲ್ಲಿ ದಾಸಪ್ಪರು ಬೆಲ್ಲ ಕಚ್ಚುವ ಮೂಲಕ ನೋಡುಗರ ಗಮನ ಸೆಳೆದರು.

ತಾಲೂಕಿನ ಮಾಲವಿ ಗ್ರಾಮದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಶ್ರೀಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಸಂಜೆ ಪ್ರತಿವರ್ಷದ ಪದ್ಧತಿಯಂತೆ ದಾಸಪ್ಪನವರಿಂದ ಬ್ಯಾಟಿ ಗಿಡ ಉತ್ಸವ ನಡೆಯಿತು.

ಈ ಉತ್ಸವದಲ್ಲಿ ಮಡಿವಾಳ ಸಮುದಾಯದವರು ಹಾಸಿದ್ದ ಮಡಿಸೀರೆಯ ಮೇಲೆ ಗುಂಪು ಗುಂಪಾಗಿ ಬೆಲ್ಲ, ಬಿಸ್ಕೆಟ್,ಗಳನ್ನು ಇಟ್ಟಿರುತ್ತಾರೆ.

ಬ್ಯಾಟಿ ಹಿಡಿದುಕೊಂಡು ಹಾಸಿದ್ದ ಸೀರೆಯ ಸುತ್ತಲೂ ದಾಸಪ್ಪರೂ ಐದು ಸುತ್ತು ಒಂಬತ್ತು ಸುತ್ತು ಸುತ್ತುವರೆಯುತ್ತಾರೆ.ಬಳಿಕ ಭಕ್ತರು ಇಟ್ಟಿರುವ ಬೆಲ್ಲ ಕಚ್ಚುವ ಪದ್ಧತಿ ಮೊದಲಿನಿಂದ ಬಂದಿರುವ ಸಂಪ್ರಾದಾಯವಾಗಿದೆ.

ಪ್ರತಿ ವರ್ಷದಂತೆ ಶ್ರೀಆಂಜನೇಯ ಸ್ವಾಮಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ವಿವಿಧ ವಾದ್ಯಮೇಳ ದೊಂದಿಗೆ ಬ್ಯಾಟಿ ಗಿಡ ಉತ್ಸವ ಅದ್ದೂರಿಯಾಗಿ ನಡೆಯಿತು. ದಾಸಪ್ಪರು ಬೆಲ್ಲ ಕಚ್ಚಿವ ಮೂಲಕ ನೋಡುಗರ ಗಮನ ಸೆಳೆದರು. ಬಳಿಕ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ನಡೆದ ಪಟಾಕ್ಷಿ ಹರಾಜಿನಲ್ಲಿ 15101 ರೂ ಗಳಿಗೆ ತಳವಾರ ಬಸವರಾಜಪ್ಪ ಎಂಬುವರು ಪಡೆದರು. ಬಳಿಕ ಆಂಜನೇಯ ಸ್ವಾಮಿ ಗುಡಿ ತುಂಬಿತು.



ರಾತ್ರಿ ಒಂಬತ್ತು ಗಂಟೆಯ ಬಳಿಕ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಬೃಹತ್ ನೀರಿನ ಹೊಂಡದ ಮೇಲ್ಭಾಗದಲ್ಲಿ ಕಟ್ಟಿದ್ದ ಚಪ್ಪರದನಡುವೆ ಕಟ್ಟಿದ್ದ ತೆಂಗಿನಕಾಯಿ ಹರಿಯುವ ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಬಣಕಾರ ಮನೆಯಿಂದ ಬಲಬುತ್ತಿ ಬರುತ್ತದೆ. ಪೂಜೆ ಸಲ್ಲಿಸಿದ ಬಳಿಕ ದಾಸಪ್ಪರು ಚಪ್ಪರಕ್ಕೆ ಕಟ್ಟಿದ್ದ ತೆಂಗಿನಕಾಯಿ ಅರಿಯುವ ಪ್ರಯತ್ನ ಸತತ ಪ್ರಯತ್ನದ ಬಳಿಕ ತೆಂಗಿನಕಾಯಿ ಹರಿಯುವ ಪ್ರಯತ್ನ ಫಲಿಸುತ್ತೆ ನೋಡುಗರನ್ನು ರಂಜಿಸುತ್ತದೆ.

ವಿಶೇಷವೆಂದರೆ ಬ್ಯಾಟಿಗಿಡ ಉತ್ಸವ ಇರುವ ಸಂದರ್ಭದಲ್ಲಿಯೇ ಮುದ್ದಿ ಬಸವೇಶ್ವರ ಸ್ವಾಮಿಯ ರಥೋತ್ಸವದ ತೇರು ಗಾಲಿ ಹೊರ ಹಾಕುವ ಕಾರ್ಯಕ್ರಮ ನಡೆಯಿತು.ಮಾಲವಿ ಗ್ರಾಮದ ಗುರು ಹಿರಿಯರು ದಾಸಪ್ಪರು ಅರ್ಚಕರು ಅರ್ಚಕರು ಮಹಿಳೆಯರು ಮಕ್ಕಳು ಯುವಕರು ಪಾಲ್ಗೊಂಡಿದ್ದರು.

ಯುಗಾದಿ: ಪಂಚಾಂಗ ಶ್ರವಣ, ವಿಶೇಷ ಪೂಜೆ

◆**ಬಳ್ಳಾರಿ:** ಯುಗಾದಿ ಹಬ್ಬವನ್ನು ಜಿಲ್ಲಾದ್ಯಂತ ನಾಗರಿಕರು ಗುರುವಾರ ವಿಜೃಂಭಣೆಯಿಂದ ಆಚರಿಸಿದರು. ಮನೆಯಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಹಿ ತಿನಿಸುಗಳನ್ನು ಸಿದ್ಧಪಡಿಸಿ, ದೇವರಿಗೆನೈವೇದ್ಯ ಮಾಡಿ, ಕುಟುಂಬದ ಸದಸ್ಯರೊಂದಿಗೆ ಸಿಹಿ ತಿನಿಸುಗಳನ್ನು ಸವಿದರು. ನಂತರ ಹೊಸಬಟ್ಟೆ ಧರಿಸಿ ವ್ಯಾಪ್ತಿಯ ವಿವಿಧ ದೇವಾಲಯಗಳಿಗೆ ತೆರಳಿ ವಿಶೇಷ ಪೂಜೆ, ಅರ್ಚನೆ ಸಲ್ಲಿಸಿ, ಭಕ್ತಿ ಸಮರ್ಪಿಸಿದರು. ಯುಗಾದಿ ಹಬ್ಬ ಹಿನ್ನೆಲೆ ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಶ್ರೀಮದುತ್ತರಾಧಿಮಠ, ಶ್ರೀರಾಘವೇಂದ್ರ ಸ್ವಾಮಿ ಶ್ರೀಮಠ, ಶ್ರೀ ವೆಂಕಟೇಶ್ವರ ದೇವಾಲಯ, ಶ್ರೀ ಕನಕ ದುರ್ಗಮ್ಮ ದೇವಾಲಯ, ಅಲ್ಲಿಪುರ ಮಹದೇವತಾತನವರ ಶ್ರೀಮಠ ಸೇರಿದಂತೆ ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ಗುರುವಾರ ವಿಶೇಷ ಪೂಜೆಗಳು ವಿಜೃಂಭಣೆಯಿಂದ ನೆರವೇರಿದವು. ವಿಶೇಷ ಅಲಂಕಾರ,ನೈವೇದ್ಯ,ಮಹಾಮಂಗಳಾರತಿ, ವಿವಿಧ ಉತ್ಸವಗಳು ಸೇರಿದಂತೆ ವಿವಿಧ ಪೂಜೆಗಳು ನಡೆದವು. ಭಕ್ತರು ದೇವರ ದರ್ಶನ ಪಡೆದು, ಭಕ್ತಿ ಸಮರ್ಪಿಸಿದರು. ಪರಾಭವನಾಮ ನೂತನ ಸಂವತ್ಸರದ ಪಂಚಾಂಗ ಶ್ರವಣ ಕಾರ್ಯಕ್ರಮಗಳು ನಡೆದವು. ಪಂಡಿತರು ಪಠಿಸಿದ ಶ್ರಾವಣವನ್ನು ಭಕ್ತಿಯಿಂದ ಆಲಿಸಿ ದೇವರ ದರ್ಶನ ಪಡೆದು ಪುನೀತರಾದರು.

ಪಂಚಾಂಗ ಶ್ರವಣ: ನಗರದ ಟೇಕೂರ, ಸುಬ್ರಹ್ಮಣ್ಯ ಕಾಂಪೌಂಡ್ ನಲ್ಲಿನ ಬಿ.ಅನಂತ ಕೃಷ್ಣ ಅವರ ಮನೆಯಲ್ಲಿ ಶ್ರೀ ಗುರುರಾಜ ಸೇವಾ ಸಮಿತಿ ವತಿಯಿಂದ ಪಂಚಾಂಗ ಶ್ರವಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪಂ.ಶ್ರೀನಿವಾಸ್ ಆಚಾರ್ಯ ಕರಣಂ ಅವರು, ಪರಾಭವನಾಮ ನೂತನ ಸಂವತ್ಸರದ ಪಂಚಾಂಗವನ್ನು ಶ್ರವಣ ಮಾಡಿದರು.

ಈ ಸಂದರ್ಭದಲ್ಲಿ ಕೆ.ಸತ್ಯನಾರಾಯಣ ರಾವ್, ಬಿ.ಅನಂತ ಕೃಷ್ಣ ರಾಜೇಂದ್ರಾಚಾರ್ಯ ಆಲೂರು, ವಿಜಯ್ ದೇಸಾಯಿ, ಗುಂಡಾಚಾರ್ಯ ಅಗಸನೂರು, ಬಿ.ಪುರುಷೋತ್ತಮ, ಎಚ್.ರಾಮಚಂದ್ರ ಸೇರಿದಂತೆ ವಿವಿಧ ಗಣ್ಯರು, ಭಕ್ತರು ಉಪಸ್ಥಿತರಿದ್ದರು.



ಸಂಸ್ಕಾರ ಕಲಿತ ವ್ಯಕ್ತಿ ಭ್ರಷ್ಟನಾಗಲಾರ: ಶಿಕ್ಷಕ ಮಂಜುನಾಥ

◆**ಹೂವಿನಹಡಗಲಿ:** ವಿದ್ಯೆ ಕಲಿತ ವ್ಯಕ್ತಿ ಒಂದು ವೇಳೆ ಭ್ರಷ್ಟನಾಗಬಹುದು. ಆದರೆ ಸಂಸ್ಕಾರ ಕಲಿತ ವ್ಯಕ್ತಿ ಎಂದಿಗೂ ಭ್ರಷ್ಟನಾಗಲಾರ ಎಂದು ಶಿಕ್ಷಕ ಎನ್.ಜೆ ಮಂಜುನಾಥ ಹೇಳಿದರು.

ಬುಧವಾರ ರಾತ್ರಿ ಇಲ್ಲಿನ ಶ್ರೀಮಲ್ಲಿಕಾರ್ಜುನ ವಿರಕ್ತ ಮಠದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಾಸಿಕ ಅನುಭವ ಸಂಗಮ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು ನಾಗರೀಕತೆಯ ನಾಗಲೋಟದಲ್ಲಿ ನಶಿಸಿ ಹೋಗುತ್ತಿರುವ ನಮ್ಮ ಆಚಾರ ವಿಚಾರ ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವುದೆ ಶ್ರೀಮಠದ ಉದ್ದೇಶವಾಗಿದೆ ಎಂದರು.

ಮುಂದುವರೆದ ಇಂದಿನ ದಿನಮಾನಗಳಲ್ಲಿ ಶಿಕ್ಷಣಕ್ಕೆ ಕೊರತೆ ಇಲ್ಲಾ ಆದರೆ ಸಂಸ್ಕಾರಕ್ಕೆ ಕೊರತೆ ಎದ್ದು ಕಾಣುತ್ತಿದೆ. ನಮ್ಮ ಪೂರ್ವಜರು ತಮ್ಮ ನಿತ್ಯ ಬದುಕಿನ ಕೆಲಸಗಳ ಜೊತೆಯಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತರಿಸುವ ಅನೇಕ ಕಥೆ, ಕವನ ಗಾದೆ, ಒಗಟುಗಳನ್ನು ರಚಿಸಿ ಕುಟುಂಬಗಳು ಸಹ ಬಾಳ್ವೆಯಿಂದ ಬಾಳಲು ಅನುಕೂಲ ಮಾಡಿ ಕೊಟ್ಟಿದ್ದಾರೆ. ಆದರೆ ಇಂದು ನಾವು ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳದೆ ನೀರಸ ಜೀವನವನ್ನು ನಡೆಸುತ್ತಿದ್ದೇವೆ, ಈ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ನಮ್ಮ ಮುಂದಿರುವ ಜವಾಬ್ದಾರಿಯಾಗಿದೆ ಎಂದು ಹೇಳಿದರು.



ಸಾನಿಧ್ಯ ವಹಿಸಿದ್ದ ಶ್ರೀಮಠದ ಉತ್ತರಾಧಿಕಾರಿ ಶ್ರೀಚನ್ನಬಸವ ಶ್ರೀಗಳು ಮಾತನಾಡಿ, ಬರೆದ ಅಕ್ಷರ ತಪ್ಪಾದರೆ ತಿದ್ದಿಕೊಳ್ಳಬಹುದು ಆದರೆ ಬದುಕು ತಪ್ಪಾದರೆ ತಿದ್ದಿಕೊಳ್ಳುವುದು ಬಹಳ ಕಷ್ಟ ಅದಕ್ಕಾಗಿ ಬದುಕು ತಪ್ಪಾಗದಂತೆ ನಡೆದುಕೊಳ್ಳಬೇಕು ಎಂದರು.

ಕು.ಭಾವನ ಹಾವೇರಿ ಬಸವಣ್ಣನವರ ವಚನದ ಬಗ್ಗೆ ಮಾತನಾಡಿದರು.

ರೇಣುಕಾ ಹಾವೇರಿ ಹಾಗೂ ಬಸವರಾಜಪ್ಪ ಉತ್ತಂಗಿ, ಎಚ್.ಎಂ.ವಾಮದೇವಯ್ಯ ಹಾಗೂ ಅಕ್ಕನ ಬಳಗದರು ಭಕ್ತಿಗೀತೆಗಳನ್ನು ಹಾಡಿದರು. ಗ್ರಾಮದ ಹಿರಿಯರು ಹಾಗೂ ಅಕ್ಕನಬಳಗದ ಮಹಿಳೆಯರು ಸೇರಿದಂತೆ ಶ್ರೀಮಠದ ಅಧ್ಯಕ್ಷ ಮಂಜುನಾಥ ಹೊಟ್ಟಿಗೌಡ್ರ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು. ಶಿಕ್ಷಕ ಕೊಟ್ರೇಶ ಜವಳಿ ನಿರೂಪಿಸಿದರು.

ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯಲಿ: ಗಾದಿಲಿಂಗಪ್ಪ

◆**ಗಾದಿಗನೂರು:** ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಪಡೆದುಕೊಂಡು ಕಲಿಕಾ ಕೇಂದ್ರಕ್ಕೆ ಒಳ್ಳೆಯ ಹೆಸರು ತರಬೇಕು ಎಂದು ಗಾದಿಲಿಂಗಪ್ಪ ಪೂಜಾರಿ ತಿಳಿಸಿದರು.

ದೇವಸ್ಥಾನದ ಸಮುದಾಯ ಭವನದಲ್ಲಿ ಮಂಗಳವಾರ ಶ್ರೀಗಾದಿಲಿಂಗೇಶ್ವರ ಕಲಿಕಾ ಕೇಂದ್ರದಲ್ಲಿ ನಡೆದ ಸರಸ್ವತಿ ಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಕರಾದ ಸಿದ್ದಪ್ಪನವರು ಮಾತನಾಡಿ, ಮಕ್ಕಳು ಓದುವುದರ ಜೊತೆಗೆ ಒಳ್ಳೆಯ ಸಂಸ್ಕಾರ ಕಲಿಯಬೇಕು ಗುರುಹಿರಿಯರಿಗೆ ಒಳ್ಳೆಯ ವಿದ್ಯಾರ್ಥಿಯಾಗಿ ಮತ್ತು ತಂದೆ, ತಾಯಂದಿರಿಗೆ ಒಳ್ಳೆಯ ಮಕ್ಕಳಾಗಿ ಸಮಾಜದಲ್ಲೇ ಕೀರ್ತಿಯನ್ನು ತರಬೇಕೆಂದು ತಿಳಿಸಿದರು.



ಮಕ್ಕಳಿಗೆ ಪ್ರತಿನಿತ್ಯ ಪಾಠ ಮಾಡುವುದರ ಜೊತೆಗೆ ದೇಶಭಕ್ತಿ ಗೀತೆಗಳನ್ನು ಹೇಳಿಕೊಡುವುದು ಮಹಾಭಾರತ ಭಗವದ್ಗೀತೆ ರಾಮಾಯಣ ಶ್ಲೋಕಗಳನ್ನು ಕಲಿಸುವುದರ ಮುಖಾಂತರ ಮಕ್ಕಳಲ್ಲಿ ದೇಶಪ್ರೇಮ ಬೆಳೆಸುವುದುಮುಖಾಂತರಸಮಾಜದಲ್ಲಿ ಒಳ್ಳೆಯ ವಿದ್ಯಾರ್ಥಿಯಾಗಿ ರೂಪಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಪೋಷಕರು ಭಾಗವಹಿಸಿದರು.

ಶಿವಶರಣೆಯರು ಸ್ವಾಭಿಮಾನದ ಸಂಕೇತ

◆**ವಿಜಯನಗರ:** ಹೊಸಪೇಟೆ ನಗರದ ಷಾ ಭವರಲಾಲ್ ಬಾಬುಲಾಲ್ ನಾಹರ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ಹೊಸಪೇಟೆ ಹಾಗೂ ಎಸ್‌ಬಿಎನ್ ಶಿಕ್ಷಣ ಮಹಾವಿದ್ಯಾಲಯ, ಐಕ್ಯುಎಸಿ ಕನ್ನಡ ವಿಭಾಗದ ಸಹಯೋಗದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಹಿಟ್ನಾಳ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ಟಿ.ಎಚ್. ಬಸವರಾಜ್ ಅವರು ಶರಣ ಸಾಹಿತ್ಯದಲ್ಲಿ ವಚನಗಾರ್ತಿಯರು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ 12ನೇ ಶತಮಾನದ ಶರಣ ಚಳವಳಿ ಒಂದು ಮಹತ್ವದ ಸಂಗತಿಯಾಗಿದ್ದು, ಚಳವಳಿಯಲ್ಲಿ ಪುರುಷ ಶರಣರ ಜೊತೆಗೆ ಮಹಿಳಾ ವಚನಕಾರ್ತಿಯರೂ ವಿಶ್ವದ ಮೊದಲ ಸಂಸತ್ತು ಅನುಭವ ಮಂಟಪದ ಚರ್ಚೆಯಲ್ಲಿ ಅಕ್ಕಮಹಾದೇವಿ, ಹಡಪದ ಲಿಂಗಮ್ಮ, ಮುಕ್ತಾಯಕ್ಕ, ದೂಪದಗೊಗ್ಗವ್ವೆ, ಅನೇಕ ಮಹಿಳಾ ವಚನಕಾರ್ತಿಯರು ಭಾಗವಹಿಸಿ, ಜಾತಿ-ಪಂಗಡ, ಲಿಂಗ ಭೇದ, ಆಚಾರ-ವಿಚಾರಗಳ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನು ತೀವ್ರವಾಗಿ ವಿರೋಧಿಸಿದರು.



ಮುಖ್ಯ ಅತಿಥಿ ಡಾ.ಮಹಾಬಲೇಶ್ವರ ರೆಡ್ಡಿ ಮಾತನಾಡಿ, 12ನೇ ಶತಮಾನದ ಮಹಿಳಾ ವಚನಕಾರ್ತಿಯರ ವಚನಗಳು ಮನುಕುಲಕ್ಕೆ ದಾರಿದೀಪ ಎಂದು ಮಾತನಾಡಿದರು..

ಉಪನ್ಯಾಸ ನೀಡಿದ ಡಾ.ಟಿ.ಎಚ್. ಬಸವರಾಜ್ ಅವರಿಗೆ ಹಾಗೂ ಮೊನ್ನೆ ತಾನೆ ಕನ್ನಡ ವಿವಿಯಿಂದ ಪಿಎಚ್ಡಿ ಪಡೆದ ಶಿಕ್ಷಕರಾದ ಡಾ.ಬಸವರಾಜ್ ಕೆ. ಅವರಿಗೆ ಸನ್ಮಾನಿಸಲಾಯಿತು.

ಸಮಾಜ ಸೇವಕರಾದ ಅಕ್ಕಿ ಬಸವರಾಜ್ ರವರು ಕಾರ್ಯಕ್ರಮದಲ್ಲಿ ಉಪಸ್ಥಿತಿ ಇದ್ದರು.

ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಶಿವನಗೌಡ ಸಾತ್ಮಾರ್, ಕಾಲೇಜಿನ ಐಕ್ಯುಎಸಿ ಸಂಚಾಲಕ ಡಾ.ಜಗದೀಶ್ ಹಿರೇಮಠ್, ಕನ್ನಡ ವಿಭಾಗದ ಉಪನ್ಯಾಸಕರಾದ ಡಾ.ಶೋಭಾ ಪಾಟೀಲ, ಡಾ.ಮಲ್ಲಿಕಾ, ಮಹಾವಿದ್ಯಾಲಯದ ಬೋಧಕ ಬೋಧಕೇತರಸಿಬ್ಬಂದಿ, ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು. ಜ್ಯೋತಿ ಪ್ರಾರ್ಥಿಸಿದರು. ವಿಠಲ್ ಸ್ವಾಗತಿಸಿದರು. ರೇಖಾ ನಿರೂಪಿಸಿದರು.

ಪೌರಕಾರ್ಮಿಕರು ಆರೋಗ್ಯದ ಕಾಳಜಿ ವಹಿಸಲಿ: ಮರಿರಾಮಣ್ಣ

◆**ಹಗರಿಬೊಮ್ಮನಹಳ್ಳಿ:** ನಗರದ ಸ್ವಚ್ಚತೆಗಾಗಿ ನಿತ್ಯ ನಿರಂತರ ಹಗಲಿರುಳು ಶ್ರಮಿಸುವ ಪೌರಕಾರ್ಮಿಕರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯವಹಿಸದೆ ಕಾಳಜಿಯಿಂದ ಇರಬೇಕು ಎಂದು ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ತಿಳಿಸಿದರು. ಶುಕ್ರವಾರ ಪುರಸಭೆ ಸಭಾಂಗಣದಲ್ಲಿ ಪೌರಕಾರ್ಮಿಕರಿಗೆ ಏರ್ಪಡಿಸಲಾಗಿದ್ದ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಪೌರಕಾರ್ಮಿಕರು ನಿಮ್ಮ ಕಾಯಕದ ಜೊತೆ ಆರೋಗ್ಯದ ಹಿತವು ಅಷ್ಟೆ ಮುಖ್ಯವಾಗಿರುತ್ತದೆ. ನಿಮ್ಮನ್ನೇ ನಂಬಿಕೊಂಡು ನಿಮ್ಮ ಕುಟುಂಬ ಇರುತ್ತೆ ಕೆಲಸದ ಜೊತೆ ನಿಮ್ಮ ವೈಯಕ್ತಿಕ ಆರೋಗ್ಯದ ಬಗ್ಗೆ ಗಮನ ಹರಿಸಿರಿ ಎಂದರು. ಮುಖಂಡರಾದ ಸರೇಗಾರ್ ಹುಚ್ಚಪ್ಪ, ಸಿಕಂದರ್ ತಾಲೂಕು ವೈದ್ಯಾಧಿಕಾರಿ ಡಾ.ಪ್ರವೀಣ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಎಂ.ಕೆ.ಮುಗಳಿ, ಆರೋಗ್ಯ ಕಾರ್ಯಕರ್ತರು ಪುರಸಭೆ ಸಿಬ್ಬಂದಿ ಪೌರಕಾರ್ಮಿಕರು ಪಾಲ್ಗೊಂಡಿದ್ದರು.



ಕಟ್ಟಡ ಕಾರ್ಮಿಕರ ಕಾನೂನುಗಳ ಕಾಯ್ದೆ ಮರು ಸ್ಥಾಪಿಸಿ

◆**ಕೂಡ್ಲಿಗಿ:** ಕಟ್ಟಡ ಕಾರ್ಮಿಕ ಕಾನೂನು 1996 ಹಾಗೂ ಸೆಸ್ ಕಾನೂನುಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರ ಮರು ಸ್ಥಾಪಿಸಲು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ತಾಲೂಕು ಸಮಿತಿಯಿಂದ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ರವರ ಮುಖಾಂತರ ಸಿಎಂಗೆ ಮನವಿ ಸಲ್ಲಿಸಲಾಯಿತು.

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಉದ್ಯೋಗ ನಿಯಂತ್ರಣ ಮತ್ತು ಸೇವಾ ಷರತ್ತುಗಳು ಕಾಯ್ದೆ 1996 ಮತ್ತು ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಕಾಯ್ದೆ 1996 ಅನ್ನು ಪುನಃ ಸ್ಥಾಪಿಸಿ ಸಪೂರ್ಣವಾಗಿ ಜಾರಿಗೆ ತರಬೇಕು. ರಾಜ್ಯ ಮತ್ತು ಕೇಂದ್ರಾಳಿತ ಪ್ರದೇಶಗಳು ಪ್ರಾದೇಶಿಕ ಪರಿಸ್ಥಿತಿಗಳಿಗೆ ಸೂಕ್ತವಾದ ಪ್ರತ್ಯೇಕ ಕಾರ್ಮಿಕ ಕಾನೂನುಗಳನ್ನು ರೂಪಿಸುವ ಹಕ್ಕನ್ನು ಉಳಿಸಿಕೊಳ್ಳಲು ಅವಕಾಶ ನೀಡಬೇಕು. ದೇಶದ್ಯಂತ ಎಲ್ಲ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರು ಪ್ರಯೋಜನೆಗಳನ್ನು ಪಡೆಯಲು ಇಎಸ್‌ಐ, ಪಿಎಫ್ ಮತ್ತು ಇತರ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಎಲ್ಲ ನಿರ್ಮಾಣ ಕಾರ್ಮಿಕರಿಗೆ ಕನಿಷ್ಠ ರೂ. 36 ಸಾವಿರ ಮಾಸಿಕ ವೇತನ ನಿಗಧಿಪಡಿಸಬೇಕು. ಸಮಾನ ಕೆಲಸಕ್ಕೆ ಸಮಾನವೇತನ ಖಾತರಿಪಡಿಸಬೇಕು. 60ವರ್ಷ ತುಂಬಿದ ನಂತರ ತಿಂಗಳಿಗೆ ರೂ. 6 ಸಾವಿರ ಕನಿಷ್ಠ ಪಿಂಚಣಿ ನೀಡಬೇಕು ಎಂದು ಮನವಿ ಮಾಡಿದರು. ದೇಶದ್ಯಾಂತ ನಿರ್ಮಾಣ ಕಾರ್ಮಿಕರಿಗೆ ವರ್ಷಕ್ಕೆ ಕನಿಷ್ಠ 250 ದಿನಗಳ ಉದ್ಯೋಗದ ಖಾತರಿಯನ್ನು ಖಚಿತಪಡಿಸಿಕೊಳ್ಳಬೇಕೆಂದು ಒತ್ತಾಯಿಸಿದರು.



ಸಿಐಟಿಯು ಜಿಲ್ಲಾ ಮುಖಂಡ ಗುನ್ನಳಿ ರಾಘವೇಂದ್ರ, ಕಾರ್ಮಿಕರಾದ ಬಿ.ಶ್ರೀಧರ ಚಾರಿ, ವಿ ಸುರೇಶ್, ವಿ ಹನುಮಂತಪ್ಪ ಸೇರಿದಂತೆ ಕಟ್ಟಡ ಕಾರ್ಮಿಕರ ಸಂಘದ ಪದಾಧಿಕಾರಿಗಳು, ಕಾರ್ಮಿಕರು ಇತರರು ಇದ್ದರು.